ವಿರಚಿತವಾದು

ಪ್ರಥಮ ಮುದ್ರಣ ೨೦೦೦ ಪ್ರತಿ

ಮೈಸೂರು

ಶ್ರೀನಿವಾಸ ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟಿದೆ.

೧೯೧೯

ಶ್ರೀರಸ್ತು

ಕರ್ಣಾಟ

ರಾಮಾಯಣ ಸಂಗ್ರಹ.

ಮೈಸೂರು ಶ್ರೀಮನ್ಮಹಾರಾಜರವರ ಅರಮನೆಯ
ಮುಜರಾಯ್ ಬಕ್ಷಿ

ಎಚ್. ಲಿಂಗರಾಜ ಅರಸಿನವರಿಂದ
ವಿರಚಿತವಾದುದು

ಪ್ರಥಮ ಮುದ್ರಣ ೨೦೦೦ ಪ್ರತಿ

ಮೈಸೂರು
ಶ್ರೀನಿವಾಸ ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟಿದೆ
೧೯೧೯

ಈ ಗ್ರಂಥದ ೧೬ ನೆಯ ಪುಟದಿಂದ ೨೦೧ ರ ವರಿವಿಗೆ ಮಾತ್ರ ರಾಯಲ್
ಪ್ರೆಸ್ಸಿನಲ್ಲಿ ಮುದ್ರಿತವಾಗಿದೆ; ಮಿಕ್ಕ ಭಾಗವೆಲ್ಲವೂ
ಶ್ರೀನಿವಾಸ ಮುದ್ರಾಕ್ಷರಶಾಲೆಯಲ್ಲಿ
ಮುದ್ರಿಸಲ್ಪಟ್ಟಿದೆ.

DEDICATED BY KIND PERMISSION

TO

HIS HIGHNESS NALMADI

Sri Krishnarajendra Wadiyar Bahadur, G.C.S.I., G.C.B.,

MAHARAJA OF MYSORE.

MAY IT PLEASE YOUR HIGHNESS,

Though I am quite aware of the extreme aversion that Your Highness feels towards attracting public attention and praise to Your exalted self, I yet beg to take advantage of Your Highness' winning condescension and generous disposition for dedicating this, my first and humble attempt at authorship, to Your Highness.

One of my excuses for taking this liberty is, that I cannot think of any other human being, in whom we find such a happy blending of the great qualities, that make us love the hero of the great Ramayana, which poem I have here attempted to render into simple Verse in Kanarese, capable of being understood even by boys with the most elementary knowledge of Kanarese.

Such an admirable living embodiment of all that was great and noble in the Epic Hero cannot fail to form the character of any young readers. And in thus giving expresssion to this conviction, I feel I am only doing my duty, humble as it may be.

I also beg to acknowledge here, that Your kind acceptance of this humble dedication is but one of the many acts of benevolence that have been conferred on me and mine by Your Highness' to express my humble gratitude for which, I cannot find words.

I beg to remain,

Your Highness,

Your Highness' most obliged & obedient servant,

H. LINGARAJ URS,

Muzroy Bakshi.

ಪೀಠಿಕೆ.

ಶ್ರೀಮನ್ಮಹಾರಾಜಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರರವರ ಇಪ್ಪತ್ತೆಂಟನೆಯ ವರ್ಷವರ್ಧಂತಿಯ ಜ್ಞಾಪನಾರ್ಥವಾಗಿ ೧೯೧೨ ನೆಯ ಇಸ್ವಿಯಲ್ಲಿ ಈ ರಾಮಾಯಣಸಂಗ್ರಹದ ಬಾಲಕಾಂಡವನ್ನು ಮಾತ್ರ ಪದ್ಯರೂಪವಾಗಿ ಬರೆದು ಒಪ್ಪಿಸಿದೆನು. ಇದನ್ನು ಶ್ರೀಮನ್ಮಹಾರಾಜರವರು ಪರಾಮರ್ಶಿಸಿ ಇದು ಸಾಮಾನ್ಯಜನರಿಗೂ, ಬಾಲಕರಿಗೂ ಓದುವುದಕ್ಕೆ ಸುಲಭವಾಗಿಯೂ, ಲಲಿತವಾಗಿಯೂ ಇರುವುದರಿಂದ ಇದೇ ಶೈಲಿಯನ್ನನುಸರಿಸಿ ರಾಮಾಯಣವನ್ನೆಲ್ಲಾ ಪೂರ್ತಿಯಾಗಿ ಬರೆದು ಅಚ್ಚುಹಾಕಿಸಿದರೆ ಬಹುಪ್ರಯೋಜನಕಾರಿಯಾಗುವುದೆಂದು ಅಪ್ಪಣೆಯನ್ನು ಕೊಡಿಸಿದುದರಿಂದ ಅಲ್ಪಜ್ಞನಾದ ನಾನು ಇವರ ಪ್ರೋತ್ಸಾಹಬಲದಿಂದಲೇ ಈ ಮಹಾಕಾರ್ಯವನ್ನು ಮಾಡಲು ಯತ್ನಿಸಿದೆನು. ಇತರಕಾರ್ಯಗಳ ಗಲಭೆಯಲ್ಲಿ ಅವಕಾಶ ಸಿಕ್ಕದೆ ಈ ಗ್ರಂಥವನ್ನು ಮುಗಿಯಿಸುವುದಕ್ಕೆ ಇಷ್ಟು ದೀರ್ಘಕಾಲ ಬೇಕಾಯಿತು. ಆದರೂ ಮೊದಲ ಮೂರು ಕಾಂಡಗಳನ್ನು ಮಾತ್ರ ಆಗಲೇ ರಚಿಸಿ ಅಚ್ಚುಹಾಕಿಸಿದೆನು. ಇವುಗಳಲ್ಲಿ ಮೊದಲಿನ ಎರಡು ಕಾಂಡಗಳನ್ನು ಮೈಸೂರು ಗೌವರ್ನಮೆಂಟ್ ಎಜುಕೇಷನ್ ಡಿಪಾರ್ಟಮೆಂಟಿನವರು ಹೈಸ್ಕೂಲಿನ ನಾಲ್ಕನೆಯ ಮತ್ತು ಐದನೆಯ ಫಾರಂಗಳಿಗೆ ಎರಡು ಮೂರಾವೃತ್ತಿ ಟೆಕ್ಸ್ಟ ಬುಕ್ಕನ್ನಾಗಿ ಉಪಯೋಗಿಸಿದುದಲ್ಲದೆ ಮದರಾಸು ಗೌವರ್ನಮೆಂಟಿನವರೂ ಪ್ರಕೃತದಲ್ಲಿ ಬಾಲಕಾಂಡವನ್ನು ಮಾತ್ರ ಪಾಠಕ್ಕೆ ಉಪಯೋಗಿಸಿಧಾರೆ. ಮುಂಬೈ ಗೌವರ್ನಮೆಂಟಿನವರೂ ಇದೇ ಬಾಲಕಾಂಡವನ್ನು ಲೈಬ್ರರಿಯ ಉಪಯೋಗಕ್ಕೂ ಬಹುಮಾನಕ್ಕೂ ಏರ್ಪಡಿಸಿಕೊಂಡಿಧಾರೆ. ಇವರ ಉದಾರಸ್ವಭಾವಕ್ಕಾಗಿ ನಾನು ವಂದಿಸುತ್ತೇನೆ. ಈ ರಾಮಾಯಣವನ್ನೆಲ್ಲಾ ಪೂರ್ತಿಮಾಡಿದುದು ನನ್ನ ಯೋಗ್ಯತೆಗೆ ಮೀರಿದ ಪ್ರಯತ್ನವೇ ಆದರೂ ಮ|| ಆಸ್ಥಾನ ಮಹಾವಿದ್ವಾಂಸರಾದ ಕರ್ಣಾಟಕಭಾಷಾರತ್ನ ಪಿ. ಆರ್. ಕರಿಬಸವಶಾಸ್ತ್ರಿಗಳು, ಆಸ್ಥಾನ ವಿದ್ವಾನ್ ಮೈಸೂರುಸೀತಾರಾಮಶಾಸ್ತ್ರಿಗಳು, ಮತ್ತು ಆಸ್ಥಾನವಿದ್ವಾಂಸರಾಗಿದ್ದು ದುರ್ದೈವದ ದೆಸೆಯಿಂದ ಕಾಲಾಧೀನರಾದ ತಿಮ್ಮಪ್ಪಯ್ಯಶಾಸ್ತ್ರಿಗಳೂ ಮಾಡಿದ ಸಾಹಾಯ್ಯದಿಂದ ನೆರವೇರಿದುದಾಗಿದೆ. ಹೀಗೆ ಸಾಹಾಯ್ಯಮಾಡಿದುದೂ ಅಲ್ಲದೆ ಮ|| ಸೀತಾರಾಮಶಾಸ್ತ್ರಿಗಳು

ಇದರ ಮುದ್ರಣದ ವಿಷಯದಲ್ಲಿ ದೇಹಶ್ರಮವನ್ನೂ ನೋಡದೆ ಬಹುವಾದ ಆಸಕ್ತಿಯಿಂದ ಕೆಲಸವನ್ನು ಮಾಡಿಧಾರೆ. ಇವರುಗಳು ಮಾಡಿದ ಸಾಹಾಯ್ಯಕ್ಕಾಗಿ ನಾನು ತುಂಬಾ ಕೃತಜ್ಞನಾಗಿಧೇನೆ. ಆಬಾಲವೃದ್ಧರೂ ಈ ಪುಸ್ತಕವನ್ನುಪಯೋಗಿಸಿ ಸಂತೋಷಪಡಬೇಕೆಂಬ ನನ್ನ ಮನೋರಥವು ಸಾಫಲ್ಯವನ್ನು ಹೊಂದಿದುದಾದರೆ ನಾನು ಪಟ್ಟ ಪ್ರಯಾಸವು ಸಾರ್ಥಕವಾಯಿತೆಂದು ಸಂತೋಷಪಡುವೆನು. ನಾನು ಛಂದೋಲಂಕಾರಾದಿಶಾಸ್ತ್ರಗಳನ್ನೋದಿ ಪಾಂಡಿತ್ಯವನ್ನು ಸಂಪಾದಿಸಿದವನಲ್ಲ. ಈ ನನ್ನ ಬರೆವಣಿಗೆಯು ಕರ್ಣಾಟಕ ಭಾರತ ಮುಂತಾದ ಷಟ್ಪದೀಗ್ರಂಥಗಳನ್ನು ವಿಶೇಷವಾಗಿ ಓದಿದ ಬಲದಿಂದ ಹೊರಟಿರುವುದು. ಆದುದರಿಂದ ಇದನ್ನೋದಿದ ಕರ್ಣಾಟ ಭಾಷಾಭಿಮಾನಿಗಳು ಭಾಷೆಯಲ್ಲಾಗಲಿ, ಶೈಲಿಯಲ್ಲಾಗಲಿ ಮತ್ತು ಅಭಿಪ್ರಾಯದಲ್ಲಾಗಲಿ, ನ್ಯೂನಾತಿರಿಕ್ತಗಳೇನಿದ್ದರೂ ಅವುಗಳನ್ನು ಮನ್ನಿಸಿ ದಯೆಯಿಟ್ಟು ತಿಳುಹಿಸಿದರೆ ಅವುಗಳನ್ನು ಅತ್ಯಾದರದಿಂದ ಅಂಗೀಕರಿಸುವೆನು.

೨೨—೯—೧೯೧೯.
ಮೈಸೂರು.

ವಿಧೇಯ,
ಹೆಚ್. ಲಿಂಗರಾಜ ಅರಸ್.

FOREWORD.

The great epics—Ramayana and Mahabharatha—of India are quite unique in the whole range of the world's literature, as regards their influence in developing the best possible practical education, not only to the vast Hindu population of India but to all who happen to come under their influence. This is so, for both are vast repositories of varied human experience of long centuries in the domain of thoughts, emotions and actions of mankind whether relating to individuals, families, societies and political institutions. These are depicted in true, simple, forceful, pleasing and instructive fashion and when read either in the original or in spirited and faithful renderings or translations, they serve this purpose equally well. Of these, the Ramayana deals with the more essential facts and events necessary for securing perfection in family life in its various aspects—while in the Mahabharatha the subject is of a more complex nature connected with all aspects of individual, family, civic and political life. The Ramayana has therefore very deservedly become the one favourite epic of the country and there is no Hindu, high or low, who is not acquainted with the essentials of the story; and none who is not more or less influenced by a study or recitation of this great work.

The several characters delineated in the epic are eminently human—while, they are placed on a divine platform, somewhat above the human range, with a view to secure high intensity of delineation; and the charm of the story has become all the more effective on this account. The divine portion holds up the ideal of perfection before the minds eye, while the human

characteristics lend all the personal and universal interest to the story. The latter is calculated to influence the conscious mind which can only realise the incidents of the story by means of the senses and the intellect; and the former to produce a far more lasting effect on the reader by awakening the subconscious or the preconscious innate fundamental ideas associated with the very life and existence of every human being. Such a permanent psychological influence could not be posssible without great intensity in the delineation of the characters and such intensity in merely human characters would have verged on the grotesque.

It is in this respect that the divine portion of the story lends a peculiar charm to the work and produces the best mental as well as psychological or sub-concious influence on the reader. Modern European psychology has only recently begun to realise that the education by influencing the sub-concious mind towards the performance of desirable actions is of supreme importance in developing human character. The ancient science of literature so fully developed in India, and known as the *Sahitya Sastra*, deals thoroughly with this sub-concious influence of high class literature, produced by what is called *Rasa Nishpathi* secured by awakening and influencing the fundamental and innate ideas in the reader. Even when judged purely from such a technical literary point of view, the Ramayana easily stands on the highest plane of excellence, as indeed it is very deservedly designated as the *Adi Kavya* of India, if not of the whole world.

But the Ramayana is not considered as a mere story in India. Every true Hindu believes in the divine incarnation of Sri Rama, brought about for the purpose of teaching and helping man in his distress and particularly to justify the ways of God to man. The high class poetical perfection combined with the divine characteristics of the hero tends to produce the highest esteem and intense popularity for this immortal

epic of India. The triple object of securing virtue, wisdom and learning, so essential in any system of education worth the name, is thus pre-eminently fulfilled in the Ramayana; and the most important of these, *viz.*, virtue, human virtue in all its bearings and stages of life or what is popularly called "Dharma" in India, forms the most essential feature of this great epic.

The reader or even the illiterate hearer of this story realises at each stage how the high characters and the higher ideals therein delineated, can be made applicable to his own life; and the thirst for reading or hearing such a good story over and over again is never quenched. Any literature that secures such a high moral effect is really of greater value to society than that which deals with less ideal or more realistic heroes, such as is current in modern Europe, whose influence on the reader, is to plunge him into a greater and greater struggle for life, mainly in its physical and material aspects. Life indeed is not all body; mind in all its intellectual, emotional and spiritual phases which make up life as such, plays quite a prominent part leaving the physical part in the back ground. The so-called struggle for life then really becomes a struggle to secure the best equilibrium of the complex mind, rather than the best external conditions conducive to the development of the mere body. Our great epic prepares one to face this higher mental struggle, while the bodily aspect is by no means neglected.

It is on account of this special feature that this popular story of the Ramayana or particular portions of the epic have been over and over taken up for their themes, by innumerable authors and poets in India, and it is also in this account that every such new production embodying the essentials of the originals but varied and embellished by the style, the ideas, fancies, imagination, genius and power of instructing the readers on the part of each particular author, is warmly welcomed by all classes of readers. Of course, the

main incidents of the story remain the same in the hands of every new author; but no new anthor ever succeeds unless he produces a fresh relish in the high ideals held up, by imparting his own individual specialities which become all the more interesting and instructive. The simple articles of uncooked food capable of giving the best nourishment to the body, for instance, are the same from time immemorial; but each skilful cook, in every age and country, adopts his own method to produce the best relish he can, out of these old articles; and the public too are ever ready to appreciate such fresh food, as they really find it congenial to their tastes and conducive to develop their physical body. Similarly also while the main incidents of the Ramayana story remain the same as the food articles, each new preparation or poem if it is really good, is warmly welcomed and appreciated by the reading public.

Our author, fully realising these principles has, succeeded in giving us a beautiful version of this immortal story and in writing it over again, giving the colour of his own individual ideas and ideals for the general benifit of the modern Kannada readers in all parts of the great Karnataka country. The composition is in very sweet Kannada in the Bhamini Shatpadi Meter and the language is quite simple and homely; so that with very little effort even children of 7 or 8 years can be taught this excellent poem.

In the large and influencial gathering of the Karnataka Sahitya Parishat, consisting of well known pandits and scholars from all parts of the Karnatak, held in May last, this elegent and simple poem was carefully examined and several selected passages were loudly read in the meeting. It was unanimously agreed that the author of this modern Kannada epic, Mr. Lingaraja Urs, richly deserves to be ranked with the great authors of the country and that this new poem deserves to be read and studied in every Kannada School and household.

True to the spirit of the story and the high ideal held up by the great Valmiki in almost every one of the characters figuring in the story, our author too has very successfully represented the Divine Sri Rama as the incarnation of Dharma and Satya, the two essential sustaining principles necessary for the maintenance of human society as such in this mortal world. He is also shown as an ideal son, an ideal chivalrous hero, an ideal fighter in the battle field and above all as an ideal ruler of mankind looking to the best interests of each individual subject, high or low, and ready to sacrifice his all to please his subjects. Similarly, the ideal brother in Lakshmana, the ideal renunciation even when surrounded by all the inducements for luxury and ease, and the ideal devotion to God in Bharata, the ideal servant and helpmate in Hanuman the ideal woman and wife in the Great Sita the ideal mother in Kousalya, and the ideal self-willed and obstinate tyrant depending on his own resources and defying even God in Ravana, are all equally successfully depicted by our author.

The literary and poetical excellence of this new poem can be observed even by a casual reader and while the whole poem deserves to be carefully read and appreciated it would be invideous to refer to selections here and there. It will be observed that the poem is teeming with excellent and simple figures of speech or *alankaras* and the comparisons made are quite homely and convincing; also all the technique necessary for a high class epic have been attended to regarding its style and composition.

Some of the special features which the author has brought out in the incidents of the story may now be noticed. The struggle for high class supremacy that was raging in India between Brahmins and Kshatrias is well known when the latter were vanquished by the great *Parasuram*, and when his successors were not so capable, in maintaining order by suppressing Ra-

kshasas or powerful disturbers of human peace, it was natural that the self same Brahmins should invoke God for a further incarnation; and our author is happy in connecting this incident with the revival of Kshatria acendency again by the incarnation of Sri Rama as a pre-eminent Kshatria who so effectively and so easily over-powered the old Brahmin Parasurama and so successfully suppressed the *Rakshasas* who were obstructing human progress and A r y a n civilisation. Kaikeyi, ill-advised and rendered envious, and prompted by motives of ambition and aggrandisement, deprives Rama of his rightful throne in favour of her son Bharata; but our author to justfy the incarnation of Rama as noted above makes her plead in vindication of her action, that Rama alone by his devine power is able to suppress the Rakshasas. Also our author lends a peculiar charm to Ravana's obstinacy and disobedience of God in making him confess to his wife Mandodari in his last moment, that his object to bring away Sita was merely to wreak his vengeance as a warrior on Rama for the harm done by him to Surpanakha and not out of any carnal desire for Sita; Rama too is made to appreciate the chivalrous and heroic character of Ravana at the time the last fatal arrow was darted at him.

The dialogues between Sita and Hanuman in Sudarakanda, between Angada and Ravana in the Yuddakanda, between Tara, Wali's wife, and Rama in the Kishkindakanda and many others contain original ideas of the author. In fact, the whole poem should be read carefully to fully appreciate the special features, and charm imparted to the story by the author.

The foreword would be incomplete without a few remarks as regards the personality of the author of this valuable production. He has himself given an account of it in the opening verses of his poem. He was born and brought up in a village called Haginavalu near

Mysore up to his seventh year, when he had already been taught to read and enjoy Kannada poetry; and then he was selected as a home companion by no less a personage than His Highness the late Maharaja Sri Chamarajendra Wadiyar, whose mother was a worthy daughter of the family of our author. He was thus brought up amidst princely luxury and it is very creditable to Mr. Lingaraja Urs that he should have so assiduously applied himself to his studies of which the present poem is a fit and wortny memorial. He is held in very high esteem by His Highness our beloved Maharaja and it is natural that he should have dedicated his work to such an exemplary and just ruler, who with his two immediate predecessors has done so much to advance Mysore in every way specially in the cause of education in the Province.

There is every reason to hope that this popular poem will be widely read and appreciated in the whole of the Karnataka for long long years and will influence the people to act up to the path of Dharma as delineated in the life of Sri Rama. The spirit of the fervent hope of our author that his poem may continue till the sun and the moon last, would then be fully realised redounding to the credit, in ages to come, of the author who composed this excellent poem, as well as of the Royal patronage so graciously extended to him by His Highness Sri Krishnaraja Wadiyar, Maharaja of Mysore.

Karpur Shrinivasa Rao, B.Sc.; L.C.E.; M.R.A.S.,
Retired Chief Engineer of Mysore,
AND
Vice President,
Karnataka Sahitya Parishat.

BANGALORE,
20th November 1919.

ಕರ್ನಾಟಕ ಸಾಹಿತ್ಯಪರಿಷತ್ತಿನ ಅಭಿಪ್ರಾಯ.

ಈ ಕಾವ್ಯವು 20ನೆಯ ಶತಮಾನದಲ್ಲಿ ಹುಟ್ಟಿರುವ ಕನ್ನಡ ಷಟ್ಪದೀಕಾವ್ಯಗಳಲ್ಲಿ ಅಗ್ರಸ್ಥಾನವನ್ನು ವಹಿಸಲರ್ಹವಾಗಿರುತ್ತದೆ. ಇದರ ಪೀಠಿಕಾಸಂಧಿಯಲ್ಲಿ ಮೊದಲು ‘ ಗೋಪೆಯಲಿಂಗ ’ ಎಂದು ಸ್ತುತಿಮಾಡಿರುವುದರಿಂದ ಕವಿಯ ಕುಲದೇವರು ಗೋವೆಯುಲಿಂಗವೆಂದು ಹೇಳಬಹುದು.

ಷಟ್ಪದೀಕಾವ್ಯಗಳಲ್ಲಿ ಭಾರತಭಾಗವತಾದಿಗಳನೇಕವಿದ್ದರೂ ಜಯನೃಪಕಾವ್ಯವು ಮಾತ್ರ ಅತಿಮೃದುಮಧುರವಾಗಿಯೂ ಸರಸವಾಗಿಯೂ ನಿರ್ದುಷ್ಟವಾಗಿಯೂ ಇರುವುದೆಂದು ಕರ್ನಾಟಕಪಂಡಿತರೆಲ್ಲರೂ ಏಕಕಂಠ್ಯದಿಂದ ಹೇಳುತ್ತಾರೆ. ಇದನ್ನು ಬಿಟ್ಟು ಮತ್ತಾವ ಷಟ್ಪದೀ ಗ್ರಂಥದಲ್ಲಿಯೂ ದೋಷಗಳಿಲ್ಲವೆಂದು ಹೇಳಲಾಗುವುದಿಲ್ಲ. ಆದರೆ ಈ ಅಪಪ್ರಥೆಯನ್ನು ಸಂಪೂರ್ಣವಾಗಿ ಅಳಿಸಲು ಪ್ರಕೃತ ಗ್ರಂಥವು ಹುಟ್ಟಿರುತ್ತದೆ. ಉಪೋದ್ಘಾತದಲ್ಲಿ ಈ ಗ್ರಂಥರಚನೆಯು ಕರ್ನಾಟಕ ಪಂಡಿತರ ಸಾಹಾಯ್ಯದಿಂದ ನೆರವೇರಿದುದೆಂದು ಹೇಳಿರುವುದರಿಂದ ನಿರ್ದುಷ್ಟವಾಗಿದೆಯೆಂದು ಊಹಿಸಬಹುದಾದರೂ, ಪರೀಕ್ಷೆಗಾಗಿ ಬಹುಭಾಗವನ್ನು ಓದಿ ನೋಡಿದ್ದಾಯಿತು; ದೋಷಗಳು ಕಾಣಬರುವುದಿಲ್ಲ. ಇದರ ವಸ್ತು, ಕಥಾನಾಯಕ—ಇವು ಜಗತ್ಪಾವನಕರಗಳಾದುದರಿಂದ ಆ ವಿಷಯದಲ್ಲಿ ನಾವು ಏನೂ ಹೇಳಬೇಕಾಗಿರುವುದಿಲ್ಲ. ಗ್ರಂಥದ ಶೈಲಿ, ರೀತಿ, ವೃತ್ತಿ’ ಪಾಕ—ಇವೇ ಮೊದಲಾದ ಕಾವ್ಯಾಂಗಗಳು ಬಹಳ ಸಮಂಜಸವಾಗಿರುತ್ತವೆ.

ಅಯೋಧ್ಯಾ ಕಾಂಡದಲ್ಲಿ ಮೊದಲನೆಯ ಸಂಧಿಯ ೭೩ ರಿಂದ ೭೮ರ ವರೆಗಿನ ಪದ್ಯಗಳಲ್ಲಿ ಕೈಕೆಯು ತನ್ನ ಸ್ವಸ್ವಾರ್ಥ ಕಾಠಿಣ್ಯಗಳು ಲೋಕಕ್ಕೆ ತೋರಿದರೂ’ ರಾಮನಿಗೆ ಅಸಾಧಾರಣವಾದ ಖ್ಯಾತಿಯು ಬರಲೆಂದೇ ಹೀಗೆ ಅರಣ್ಯವಾಸವನ್ನು ಬಯಸಿದೆನೆಂದು ಸಂದರ್ಭವನ್ನು ತಿದ್ದಿ, ಕಡೆಗೆ “ ಚದುರ ಬೀರಿದಳು ” ಎಂದು ಸೂಚಿಸಿರುವುದು ಶ್ಲಾಘ್ಯವಾಗಿರುತ್ತದೆ:—

ನೀತಿಯುತನಾಗಿರ್ಪ ತನುಜನೊ |
ಳೀತಕೀ ಕಾಠಿನ್ಯಮೆನುತುಂ |
ಭೀತನಾಗದಿರಣುಗ ಪೇಳುವೆನಿದರ ಮರ್ಮವನು ||
ಪಾತಕಿನಿ ತಾನೆಂಬ ನಿಟ್ಟುರ |
ವಾತು ನನ್ನನು ಪೊರ್ದಲಂಜೆಂ |
ಖ್ಯಾತನಾಗಲು ನೀನು ಲೋಕದೊಳದುವೆ ಹಿತವೆನಗೆ ||೭೩||

ಕ್ರೂರರಾಕ್ಷಸರಿಳೆಯನೆಲ್ಲವ |
ಸೂರೆಗೈಯುತ್ತಿರುವರವರೊಳ |
ಸಾರಪೌರುಷಶಾಲಿಗಳು ದಕ್ಷಿಣದ ನೆಲೆಗೊಂಡು |
ಸಾರಿ ಸುರಲೋಕವನು ನಿರ್ಜರ |
ನಾರಿಯರ ಸೆರೆವಿಡಿದು ಸುರರನು |
ಕೇರಗುಡದೆಯೆ ಸಕಲಸಂಪದಕೊಡೆಯರಾಗಿಹರು ||೭೪||

ಭರತನೀರಾಜ್ಯವನು ನೀನ್ನೈ |
ತರುವ ಪರಿಯಂತರವು ಪೊರೆಯಲಿ |
ನುರಳಿ ನೀಂ ಬರಲೊಡನೆ ನಿನ್ನಯ ಚರಣಕರ್ಪಿಸಲಿ ||

ತರಣಿವಂಶದ ಕೀರ್ತಿಲತೆಗೀ |
ಗಿಡದಿ ನಿನ್ನಯ ಶೌರ್ಯಜಲವನು |
ಸೂರೆಗುಗುಡದೆಂದು ಹರ್ಷಿಸನ್ನುತಿ ಜಡುರ ಬೀರಿದಳು ||೭೮||

ಮುಖ್ಯವಾಗಿ, ಇದರಶೈಲಿಯು ಅತಿಸ್ಪಷ್ಟವಾಗಿಯೂ, ಬಹಳ ಲಲಿತವಾಗಿಯೂ ಇರುವುದರಿಂದ ಇದನ್ನು ಬಾಲಕರು ಸ್ತ್ರೀಯರು ಸಹ ಓದಿ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಮುದ್ರಣವು ಅಂದವಾಗಿಯೂ, ಹೆಚ್ಚು ತಪ್ಪುಗಳಿಲ್ಲದೆಯೂ ಇರುವುದು ಕನ್ನಡ ಗ್ರಂಥಗಳಲ್ಲಿ ಹೊಸಮಾರ್ಗವೆಂದೇ ಹೇಳಬೇಕು.

ಕೀರ್ತಿಶೇಷರಾದ ಅಳಿಯ ಲಿಂಗರಾಜ ಅರಸಿನವರು ಸರಸಕವಿತ್ವದಲ್ಲಿ ನಿಪುಣರಾಗಿದ್ದರೆಂದು ಇವರ 'ನರಪತಿಚರಿತ್ರೆ' ಎಂಬ ಗ್ರಂಥದಿಂದ ತಿಳಿದುಬಂದಿದೆ. ಅವರಂತೆಯೇ ಪ್ರಕೃತಗ್ರಂಥದಲ್ಲಿ ಚಿಕ್ಕ ಲಿಂಗರಾಜ ಅರಸಿನವರು ತಮ್ಮ ಕವಿತಾಸಾಮರ್ಥ್ಯವನ್ನು ಪ್ರಕಟಿಸಿ ಯಶಸ್ಸಿಗೆ ಪಾತ್ರರಾಗಿರುತ್ತಾರೆ.

ಹಿಂದೆ ಭೋಜರಾಜ, ಶ್ರೀಹರ್ಷ—ಈ ರಾಜರುಗಳು ತಮ್ಮ ಅಸಾಧಾರಣವಾದ ಕವಿತ್ವದಿಂದ ರಾಜರಿಗಿರುವುದು ಬರೀ ಶೌರ್ಯವೇ ಹೊರತು ಪಾಂಡಿತ್ಯವು ಕಡಿಮೆಯೆಂಬ ಅಪಖ್ಯಾತಿಯನ್ನು ಹೋಗಲಾಡಿಸಿದರು. ನಮ್ಮ ಮೈಸೂರಿನಲ್ಲಿಯೂ ಕಳಲೆ ನಂಜರಾಜ ಅರಸಿನವರು ಸ್ವತಃ ಕವಿಗಳಾಗಿದ್ದರು ; ಚಿಕ್ಕದೇವರಾಜ ಒಡೆಯರ ಆಸ್ಥಾನವು ಕರ್ಣಾಟಕಕವಿಗಳಿಂದ ಅಲಂಕೃತವಾಗಿದ್ದಿತು. ಈಚೆಗೆ, ನಮ್ಮ ದೊರೆಗಳಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರವರು ತಮ್ಮ ಆಸ್ಥಾನದಲ್ಲಿ ಪಸೇ ಪಟೇ ವಿದ್ವತ್ಸಭೆಗಳನ್ನು ಸೇರಿಸಿ, ಸಮಸ್ತಶಾಸ್ತ್ರಗಳಲ್ಲಿಯೂ ಪ್ರಸಂಗಗಳನ್ನು ನಡೆಯಿಸುತ್ತಿದ್ದರೆಂದು, ಅಂತಹ ಸಭೆಗಳನ್ನು ಕಣ್ಣಾರೆ ನೋಡಿದವರು ಹೇಳಿದುದನ್ನು ಕೇಳಿದ್ದೇನೆ. ಅಲ್ಲದೆ ತಾವೂ ಸ್ವತಃ ಅನೇಕಗ್ರಂಥಗಳನ್ನು ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ರಚಿಸಿರುವರು

ರಾಜಕುಲಕ್ಕೆ ಸೇರಿದ ನಮ್ಮ ಲಿಂಗರಾಜ ಅರಸಿನವರು ಈ ಗ್ರಂಥವನ್ನು, ತಮ್ಮ ಇತರ ಕೆಲಸಗಳ ಮಧ್ಯದಲ್ಲಿ ಅವಕಾಶಮಾಡಿಕೊಂಡು, ಇಷ್ಟು ಅಂದವಾಗಿ ರಚಿಸಿರುವುದು ರಾಜಕುಲದವರಿಗೆ ಮಾತ್ರವಲ್ಲದೆ ಮೈಸೂರು ದೇಶೀಯರೆಲ್ಲರಿಗೂ ಗರ್ವಾವಹವಾಗಿದೆ. ಗ್ರಂಥದ ಕೊನೆಯ ಪದ್ಯದಲ್ಲಿ—

ಭೂಮಿಪಾಲಕ ಕೃಷ್ಣಭೂಪನ |
ಸೇಮದಿಂ ತಿಳಿಗನ್ನಡದೊಳೀ |
ರಾಮಕಥೆಯನು ಲಿಂಗರಾಜನು ಮುದದೆ ರಚಿಸಿದನು ||
ಸೋಮಭಾನುಗಳಿರ್ಪವರೆಗಂ |
ಭೂಮಿಯೊಳಗಿದು ಮೆರೆಗೆ ಪಂಡಿತ |
ಪಾಮರರ ಮೆಚ್ಚಿಸುತೆ ಹರ್ಷಿಸಿ ರಾಮಭಕ್ತಿಯನು ||

ಎಂದು ಹೇಳಿರುವುದರಿಂದ ನಮ್ಮ ಮಹಾರಾಜರವರಿಗೆ ಕರ್ಣಾಟಕ ಭಾಷಾಭಿಮಾನವು ಸಂಪೂರ್ಣವಾಗಿರುವುದೆಂದು ಸ್ಪಷ್ಟವಾಗುತ್ತದೆಯಾಗಿ ಕನ್ನಡಿಗರೆಲ್ಲರೂ ನಮ್ಮ ಮಹಾರಾಜರವರಿಗೆ ಆಯುರಾರೋಗ್ಯಭಾಗ್ಯಗಳನ್ನು ಹಾರೈಸುವುದರಲ್ಲಿ ಸಂಶಯವಿಲ್ಲ.

ಶ್ರೀರಸ್ತು.

ಶ್ರೀಗುರುದಕ್ಷಿಣಾಮೂರ್ತಯೇ ನಮಃ

ಕರ್ಣಾಟಕ

ರಾಮಾಯಣ ಸಂಗ್ರಹ.

ಬಾಲಕಾಂಡವು.

॥ ಭಾಮಿನೀ ಷಟ್ಪದಿ ॥

ಶ್ರೀಮದನುಪಮಮಹಿಮ ಗೌರೀ |
ಪ್ರೇಮಧಾಮ ವಿರಂಚಿಮುಖಸುರ |
ರಾಮಣೀಯಕಮಕುಟಮಣಿನೀರಾಜಿತಾಂಘ್ರಿಯುಗ ||
ಸಾಮಗಾನವಿಲೋಲ ನಿರ್ಜಿತ |
ಕಾಮ ಸುಗುಣೋದ್ದಾಮ ಸಲಹೈ |
ಕಾಮಿತವನೊಲಿದಿತ್ತು ಗೋವೆಯಲಿಂಗ ಸುಖಸಂಗ ||೧||

ಭಾಳಲೋಚನದುರಿಯ ತಾಪವ |
ತಾಳಲಾರದನೆಂಬವೋಲ್ ಹಿಮ |
ಶೈಲತಟವನು ಸಾರ್ದು ಮಂಜಿನ ನಡುವೆ ವಾಸಿಸುತೆ ||
ಮೌಳಿಯೊಳು ಶಶಿಸುರನದಿಗಳಂ |
ಮೇಳವಿಸಿ ತಳೆದೆಸೆವ ಪರಮಕೃ |
ಪಾಳು ಗೋವೆಯಲಿಂಗ ಪೊರೆ ಧವಳಾಂಗ ಭವಭಂಗ ||೨||

ಸಿಂಗರದ ಸಿರದರಮನೆಯೊಳು |
ತ್ತುಂಗವಾಸವು ಗಂಗೆವೆಣ್ಗುರೆ |
ಸಂಗಡಿಸಿತೆನಗಾವಗಂ ಕೇಳ್ದೊಡೆಯೊಳೀಯಿರವು ||
ಭಂಗಮಲ್ಲವೆ ಎನುತೆ ಮುಳಿದುಂ |
ಪೊಂಗಿ ಗಿರಿಶನೊಳೆರಕಗೊಳುತುಂ |
ಪಿಂಗದೊಪ್ಪುವ ಸರ್ವಮಂಗಳೆ ನೀಡೆಮಗೆ ಶುಭವ ||೩||

ಹಿಂದಣವತಾರದೊಳು ಪಾರ್ಥಿವ |
ವೃಂದವನು ಸಲೆ ಕೊಂದಕತದಿಂ |
ದಿಂದು ಸಂದಿಸಿತಿಳೆಗೆ ದನುಜರ ಕಾಟವೆಂಬುದನು ||
ತಂದು ಚಿತ್ತಕೆ ರಾಮನಾಮದೆ |
ಬಂದು ಧರಣಿಯ ಪೊರೆದ ಪರಮಾ |
ನಂದನಿಧಿ ಹರಿ ನಮ್ಮ ಸಲಹಲಿ ವಿಮಲಗುಣಲಹರಿ ||೪||

ಆವಳೆಲ್ಲಾ ಜಗದ ಮಾತೆಯೊ |
ಆವಳಾಪಾಲ್ಗಡಲ ಕುವರಿಯೊ |
ಆವಳಖಿಲಕೆ ಚೇತನವನೊಲಿದಿತ್ತು ಕುಣಿಯಿಪಳೊ ||
ಆವಳುತ್ತಮಕಂಠಸೂತ್ರವು |
ಭಾವಿಸಲ್ ಶ್ರೀಹರಿಯ ಭಾಗ್ಯವೊ |
ಪಾವನೆಯೆನಿಪ್ಪಾಲಕುಮಿ ತಾಂ ಕುಡುಗೆ ಸಂಪದವ ||೫||

ಅಜಮುಖರಿನೋಲಗಿಸಿಕೊಳುತುರೆ |
ಭಜಕನಿರ್ವಿಘ್ನತೆಯನೆಸಗುತೆ |
ತ್ರಿಜಗದೀಡಿತನಾಗಿ ಸಿದ್ಧಿಗೆ ನೆಲೆವನೆಯೆನಿಪ್ಪ ||
ಗಜಮುಖನೆ ನೀನೀಕೃತಿಯನುರೆ |
ಸುಜನರೊಪ್ಪುವ ತೆರದಿನಾಗಿಸಿ |
ಭುಜಗಭೂಷಣಸುತನೆ ಮಾಡೆನಗಿಂದು ಮಂಗಳವ ||೬||

ಸರಸಿಜೋದ್ಭವನರಸಿ ಸರಸತಿ |
ಸಿರವಬಾಗುತೆ ನಿನ್ನನರ್ಥಿಪೆ |
ಸುರುವ ಕೃತಿಯಿದನೊಲಿದು ನುಡಿಸಲ್ಕೆನ್ನನಾಲಗೆಯ ||
ಮೆರೆವ ರಂಗದೆ ಸಲಿದು ನಟಿಸುತೆ |
ಯೊರೆಯಿಸೌ ಶ್ರೀರಾಮಚರಿತವ |
ನರಿಯಲಾರೌ ವಾಕ್ಪ್ರಪಂಚಕೆ ದೇವಿ ನೀನುಳಿಯೆ ||೭||

ಮೆರೆವ ಯದುವಂಶದೊಳು ಹರಿಯವ |
ತರಿಸಿ ಕೃಷ್ಣಾಂಕಿತದೆ ಲೋಕೋ |
ತ್ತರದ ಗೀತಾಮೃತದೆ ಸನ್ಮಾರ್ಗವನು ಸೆಲೆಗೊಳಿಸಿ ||
ಧರೆಯ ರಕ್ಷಿಸಿ ಜಸವನಾಂತವೊ |
ಲರಸ ಚಾಮಕ್ಷಿತಿಪನಾಯದು |
ವರರೊಳುದ್ಭವಗೊಂಡು ಮೈಸೂರ್ನಾಡನಾಳಿದನು ||೮||

ಭರತಖಂಡದೊಳಿವನ ತೂಕದ |
ದೊರೆಗಳಿಲ್ಲೆಂದೆನಿಸುತಿಳೆಗ |
ಚ್ಚರಿಯಿದೆನಿಪಾ ಪ್ರಜೆಯ ಪ್ರತಿನಿಧಿಸಭೆಯನೇರ್ಪಡಿಸಿ ||
ಅರಿಯುತದರಿಷ್ಟವನು ಮಂತ್ರೀ |
ಶ್ವರರರುಹಲುಚಿತಾನುಚಿತಗಳ |
ಪರಿಯನೊರೆಯಿಕ್ಕುಚಿತದಾಣತಿಯಿತ್ತು ಸಲಹಿದನು ||೯||

ಭೂಪಗೀತಂಗೋಪಳಂತನು |
ರೂಪೆ ವರವಾಣೀವಿಳಾಸದ |
ದೀಪಿಕೆಯು ಸತಿ ಕೆಂಪನಂಜಾಂಬಿಕೆಯು ಗುಣಯುತೆಯು ||
ಭಾವುಭಾಪೀ ಕ್ಷತ್ರಿಯಾಣಿಗೆ ||
ಭೂಪರಾರ್ಸರಿ ನೀತಿಯೊಳಗೆಂ |
ಬೀಪರಿಯೊಳಾಳಿದಳು ಕಾಂತನನಂತರದೊಳಿಳೆಯ ||೧೦||

ಖ್ಯಾತರಿವರಿಂದೊಗೆದನೆಮ್ಮಯ |
ಭೂತಳೇಶನು ಕೃಷ್ಣಭೂವರ |
ನೀತ ಸುಜನವ್ರಾತಕಾಶ್ರಯದಾತ ವಿಖ್ಯಾತ ||
ಪೂತಯೌವನವೊದವೆ ಮಾತೆಯಿ |
ನಾಂತುಕೊಂಡನು ರಾಜ್ಯಭಾರವ |
ನೀತನಾಳಿಕೆಯಾಯ್ತು ಮಾದರಿಯಿತರಭೂಪರಿಗೆ ||೧೧||

ಬಲ್ಲವಿಕೆಯನು ತನ್ನ ದೇಶದೊ |
ಳೆಲ್ಲರುಂ ಸಂಗ್ರಹಿಸಲೆಂದಧಿ |
ಕೋಲ್ಲಸದೆ ವರವಿಶ್ವವಿದ್ಯಾಲಯವನೇರ್ಪಡಿಸಿ ||
ಅಲ್ಲಿಗೊಪ್ಪುವ ಸಕಲಶಾಸ್ತ್ರವ |
ಬಲ್ಲ ವಿದ್ವಜ್ಜನವ ನೇಮಿಸು |
ತೆಲ್ಲಿಯುಂ ಪಡಿಯಿಲ್ಲಮಿದಕೆಂಬಂತೆ ಪೋಷಿಪನು ||೧೨||

ಪೊಳೆಗಳಿರ್ದೊಡಮಮಿತಕಾಲದೆ |
ಬೆಳಸನವುಗಳ ಜಲದೆ ಬೆಳೆಯು |
ತ್ತುಳಿದ ಫಲಗಳನೊಂದಲವುಗಳಿನರಿಯದಿರೆ ಜನವು ||
ತಿಳಿದು ಶಾಸ್ತ್ರಜ್ಞರೊಳು ತಜ್ಜಲ |
ಬಲದೆ ಸಾಧ್ಯವು ಕಲೆಯ ಸಾಧನ |
ಮಿಳೆಯೊಳೆಂಬುದಸದರಿಸದ್ಭುತಕಾರ್ಯವೆಸಗಿಹನು ||೧೩||

ಅರಸಚಾಮಕ್ಷಿತಿಪಗೈದುಂ |
ಬರಿಸಮೊದವಲ್ಕೆನ್ನ ಕರೆಯಿಸಿ |
ಯಿರಿಸಿಕೊಂಡನು ಬಳಿಯ ಮೆರೆವ ರಮಾವಿಲಾಸದೊಳು ||
ಅರಸನೊಡನೆನಗಾಟಪಾಟಗ |
ಳರಸನೊಡನೆಯೆ ಊಟನೋಟಗ |
ಳರಸನಲ್ಲದೆ ಪೆರತನರಿಯೆನು ಶೈಶಪದೊಳಾನು ||೧೪||

ಇಂತು ಬಳೆಯಿಸುತೆನ್ನನವನೀ |
ಕಾಂತನೆಡೆವಿಡಲಾರನೆಂದೆಂ |
ಬಂತೆ ಸನಿಹದೆ ಮರಹಮತ್ತಧಿಕಾರಪದವೀಯೆ ||
ಸಂತಸದೊಳಾಭೂಪನೊಲ್ಪವೊ |
ಲಂತರಂಗವಿಶುದ್ಧನಾಗಿಯೆ |
ನಾಂ ತಳುವದೆಸಗಿದೆನು ನೃಪಕುಲಮೌಳಿಯೂಳಿಗವ ||೧೫||

ಪಿರಿಯರಸನೊಡನಾಡಿಯಿವನೆಂ |
ದುರೆ ಮಹತ್ತ್ವವ ನೆನಗೆ ಕಲ್ಪಿಸಿ |
ಪರಿಕಿಸದೆ ದಕ್ಷತೆಯ ಮುಜರಾಯ್ಬಕ್ಷಿಪದವಿತ್ತು ||
ಧರಣಿಪಾಲಕ ಕೃಷ್ಣಭೂಪನು |
ಮುರುಯಶೋನ್ವಿತೆಯಿವನಮಾತೆಯು |
ಮಿರಿಸಿ ಕೃಪೆಯನು ಪೊರೆವರೆನ್ನನದೆನಿತು ಸುಹೃದಯರೊ ||೧೬||

ಒಪ್ಪುವಿವರುಪಕೃತಿಗೆ ನಾಂ ಮನ |
ಮೊಪ್ಪಲೇಂ ಪ್ರತಿಗೈವೆನೆನ್ನೊಳ |
ಗಿಪ್ಪುದೇನೆರಡಕ್ಕರವನುಳಿದಾವುದೆನಗಿಹುದು ||
ಒಪ್ಪಿಸುವೆನೊಡೆಯಗ್ಗೆ ಷಟ್ಪದಿ |
ಯೊಪ್ಪುವೀ ಶ್ರೀರಾಮಚರಿತವೆ |
ನಿಪ್ಪಕಮಲವನೊಪ್ಪುಗೀತನೊಳಿಪ್ಪುದಿನಿತೆಂದು ||೧೭||

ಪೀಠಿಕಾಸಂಧಿ ಸಮಾಪ್ತಂ,

ಎರಡನೆಯ ಸಂಧಿ.

ಸೂಚನೆ || ಪುತ್ರಕಾಮೇಷ್ಟಿಯೊಳು ಪಡೆದು ಸು |
ಪುತ್ರರನು ದಶರಥನು ವಿಶ್ವಾ |
ಮಿತ್ರನೆಳಸಲು ಕಳುಹಿದಂ ಶ್ರೀರಾಮಲಕ್ಷ್ಮಣರ ||

ಜಗದೊಳಗೆ ಮನುವಿಂದೆ ಪಿಂತಣ |
ಯುಗದೊಳೊಗೆದರು ಸೂರ್ಯಚಂದ್ರರು |
ಮಿಗೆಯವರಿನುದಯಿಸಿದುವಿನಶಶಿವಂಶಗಳು ನೋಡೆ ||
ಸಗರಮಾಂಧಾತ್ರಾದಿಭೂಧವ |
ರಗಣಿತಗುಣೋಜ್ಜ್ವಲರು ಪಡೆದರು |
ಬಗೆಗೊಳಿಪ ಕೀರ್ತಿಯನು ಸೂರ್ಯಾನ್ವಯದೊಳಿಳೆ ಪೊಗಳೆ ||೧||

ಅವರ ಪಾರಂಪರ್ಯದೊಳು ಭೂ |
ಧವಶಿರೋಮಣಿ ದಶರಥನು ಸಂ |
ಭವಿಸಿ ಕೌಸಲ್ಯೆಯು ಸುಮಿತ್ರೆಯು ಕೈಕೆಯೆಂದೆನಿಪ ||
ಯುವತಿಯರ ಕೈವಿಡಿದು ನಲವಿಂ |
ವಿವಿಧಭೋಗವನನವರತಮನು |
ಭವಿಸುತಾತ್ಮಜರಿಲ್ಲದಿರಲುಮ್ಮಳಿಸಿದನು ಮನದೆ ||೨||

ಮಕ್ಕಳಿಲ್ಲದಸಿರಿಯದೇತಕೆ |
ತಕ್ಕುದೆನಗೀಜರೆ ಯಡಸಿದ |
ತ್ರಕ್ಕಟಾ ಸದ್ಗತಿಗೆ ಬಾಹಿರನಾದೆ ನಾನೆನುತೆ ||
ಉಕ್ಕುವತಿದುಃಖದೊಳು ಕರೆಯಿಸಿ |
ಯೊಕ್ಕಣಿಸಿದನು ಗುರುವಸಿಷ್ಠನೊ |
ಳಿಕ್ಕುವೀಕೊರಗಣೆಗೆ ಪರಿಹಾರವನು ಬೆಸಸೆಂದು ||೩||

ಆಳಿದರು ನಮ್ಮನ್ವಯದ ನೃಪ |
ಮೌಳಿಗಳು ಮೇದಿನಿಯನಿದ ಸಮ |
ಪಾಳಿ ತಮಗಿಲ್ಲೆನಿಸಿ ಸಂತತಿಯೈಸಿರಿಯ ಪಡೆದು ||
ಪೇಳಲೇನೆನ್ನಲ್ಲಿ ಪೀಳಿಗೆ |
ಪಾಳುಗೆಡೆದುದು ಮುಂದೆ ತನಗಿ |
ನ್ನೂಳಿಗವದೇನೆಂದು ಬಿದ್ದನು ಧೊಪ್ಪಸಂಭ್ರಮೆಯೊಳು ||೪||

ಉತ್ತಮಾಂಗವ ಪಿಡಿದು ಭೂಪನ |
ನೆತ್ತಿ ನುಡಿದನು ಮುನಿವರನು ಬಿಡು |
ಚಿತ್ತದಸುತಾಪವನು ಬರಿದೇ ಗಾರುಗೊಳವೇಡ ||
ಹೊತ್ತುಗಳೆಯದೆ ಸಕಲವಸ್ತುವ |
ನಿತ್ತಸೇರಿಸು ತಾಳು ದೀಕ್ಷೆಯ |
ನುತ್ತಮೋತ್ತಮಪುತ್ರಕಾಮೇಷ್ಟಿಯ ಮಖಕ್ಕೆನುತೆ ||೫||

ಒರೆಯಲೀಪರಿಯರಸನಾಗಳೆ |
ಪರಿಕರಂಗಳನೆಲ್ಲಮೊದವಿಸಿ |
ಗುರುವಸಿಷ್ಠನನುಜ್ಞೆಯಿಂದಾ ಸತಿಯರೊಡಗೂಡಿ ||
ಧರಿಸಿದನು ದೀಕ್ಷೆಯನು ಯಾಗಕೆ |
ನೆರಹಿದನು ಋತ್ವಿಜರ ವರ್ಗವ |
ನಿರದೆ ಮುದದಿಂ ಪೊಕ್ಕನಂದಧ್ವರದ ಮಂಟಪವ ||೬||

ಕ್ರತುವನಾರಂಭಿಸುತೆ ಹೋಮವ |
ನತುಳಗುಣನಾಚರಿಪ ಸಮಯಕೆ |
ಹುತವಹನು ಮೈದೋರಿ ರಂಜಿಪ ಕನಕಪಾತ್ರೆಯೊಳು ||
ಅತಿಮಧುರಪಾಯಸವ ತಂದಾ |
ಕ್ಷಿತಿಪತಿಯ ಕೈಗಿತ್ತು ನಿನ್ನಯ |
ಸತಿಯರಿಗೆ ಕುಡು ಗರ್ಭವಾನುವರೆನುತೆ ಮರೆಗೊಂಡ ||೭||

ಅರಸನತಿಸಂತೋಷದಾಳುತೆ |
ಕರೆದು ಸತಿಯರಿಗೀಯಲದನವ |
ರಿರದೆ ಸವಿಯಲು ಬಸಿರನೊಂದಿದರೇನಿದಚ್ಚರಿಯೊ ||
ಮೆರೆವ ಸತಿಯರ ನೋಡಿ ನಲಿಯು |
ತ್ತಿರಿದು ಬಯಕೆಯನೆಲ್ಲ ಸಲಿಸುತೆ |
ತರಳರುದಯವನಿದಿರುನೋಡುತ್ತಿರ್ದನಾ ಭೂಪ ||೮||

ದಿನದಿನಕೆ ಬಳೆಯುತಿರೆ ಗರ್ಭವ |
ದನುವಿನಿಂ ನವಮಾಸದಂತ್ಯದೆ |
ಜನಿಸಿದರು ಸುಕುಮಾರರಂದಾಮೂವರುದರದೊಳು ||
ಜನನಿಯೆಂಬಾನುಡಿಗೆ ಸಂದೆವು |
ಜನುಮವೆತ್ತಿದುದಕ್ಕಿದುವೆ ಫಲ |
ವಿನಿಯನಿಷ್ಟವ ಪಡೆದನೆಂದರು ಹಿಗ್ಗುತರಸಿಯರು ||೯||

ಕೋಸಲಾತ್ಮಜೆಯೊಡಲ ಪುಣ್ಯವ |
ನೇಸು ಪೊಗಳಲು ಸಾಲದಾಜಗ |
ದೀಶನನು ನವಮಾಸದನ್ನೆಗ ಮಾಂತು ಸಲಹಿದುದು ||
ಲೇಶಮಾತ್ರವು ಸೋಂಕೆ ಪಾಪವ |
ನಾಶಪಡಿಸುವ ಹರಿಯ ಚರಣವು |
ಬೇಸರಿಸದೊದೆಯುತಿರೆ ಜಠರದ ಭಾಗ್ಯವಿನ್ನೇಸೊ ||೧೦||

ಚೈತ್ರಶುದ್ಧದ ನವಮಿಯೊಳು ನ |
ಕ್ಷತ್ರಮೆಸೆಯೆ ಪುನರ್ವಸುವಸುರ |
ಜೈತ್ರಯಾತ್ರೆಗೆ ಪಾಲ್ಗಡಲಿನಿಂದೆಳ್ದನೆಂಬವೊಲು ||
ಧಾತ್ರಿಗತಿಮುದಮೊದವೆ ಸುರರು ವಿ |
ಚಿತ್ರಮೆನೆ ಪೊಗಳುತಿರೆ ಹರಿಯು ಪ |
ವಿತ್ರಕೌಸಲೆಯೊಡಲಿನೊಗೆದನು ರಾಮನಾಮದೊಳು ||೧೧||

ಭರತನಾ ಕೇಕಯತನೂಜೆಯೊ |
ಳಿರದೊಗೆದನಾ ಬಳಿಕ ಲಕ್ಷ್ಮಣ |
ನುರುತರದ ಶತ್ರುಘ್ನನಿವರು ಸುಮಿತ್ರೆಯುದರದೊಳು ||
ಪುರದೊಳಗೆ ಪುತ್ರೋತ್ಸವಕ್ಕುರೆ |
ಮೊರೆವಮಂಗಳವಾದ್ಯತತಿಯ |
ಬ್ಬರಣೆ ದೆಸೆಯಾನೆಗಳ ಕಿವಿಯನು ಕಿವುಡುಗೊಳಿಸಿದುದು ||೧೨||

ಧರಣಿಪನ ಸಂತೋಷಜಲನಿಧಿ |
ಕರೆಯ ಮಿಾರಿರೆ ಜಾತಕರ್ಮವು |
ಪರಮಸಂಭ್ರಮದಿಂದೆ ನಡೆದುದು ದಾನಧರ್ಮದೊಳು ||
ತರಳರಿಗೆ ಸಲೆ ಯೋಗ್ಯಕಾಲವ |
ನರಿಯುತನ್ನಪ್ರಾಶನವನಾ |
ದರದೆ ಚೌಲೋಪನಯಸಂಗಳನಾಗಿಸಿದನರಸ ||೧೩||

ಇಂತು ದಶರಥನೃಪತಿ ಸಂಭ್ರಮ |
ವಾಂತು ಮಕ್ಕಳ ಬಾಲಲೀಲೆಯ |
ಸಂತಸದ ಸೊದೆಗಡಲೊಳೋಲಾಡುತ್ತೆ ಸುಖಮಿರಲು ||
ಪಂತದಿಂದಾ ಬ್ರಾಹ್ಮಣತ್ವವ |
ನಾಂತ ಸವಸಿರ್ಮಾಣವಿಧಿ ದಿ |
ಗ್ದಂತಿ ಮುನಿಗಳೊಳೆನಿಪ ವಿಶ್ವಾಮಿತ್ರನೈತಂದ ||೧೪||

ಬಂದ ಮುನಿಪನ ಕಂಡು ಜನಪನು |
ವಂದಿಸುತ್ತರ್ಘ್ಯಾದಿಪೂಜೆಗ |
ಳಿಂದ ಸತ್ಕರಿಸುತೆ ಕೈಗಳ ಕಟ್ಟಿ ಯಿದಿರಿನೊಳು ||
ನಿಂದು ನಿಮ್ಮಯ ಚರಣದರ್ಶನ |
ಮೊಂದಿದುದರಿಂ ಧನ್ಯನೆನಿಸಿದೆ |
ನಿಂದು ತನ್ನಿಂದಾವಕಾರ್ಯವು ನಡೆಯಬೇಕೆಂದ ||೧೫||

ತಮ್ಮ ಪುಣ್ಯಾಶ್ರಮದೆ ಸಕಲರು |
ಧರ್ಮವನು ಬಿಡದಾವಗಂ ಸ |
ತ್ಕರ್ಮಗಳ ನಾಚರಿಸುತಿರುವರೆ ವಿಹಿತಮಾರ್ಗದೊಳು ||
ಸುಮ್ಮನಿರ್ಪುವೆ ದುಷ್ಟಮೃಗಗಳು |
ನಿಮ್ಮ ಪರತಪಕಾವಲೋಪವು |
ಮೊಮ್ಮೆಯುಂ ಸಂಭವಿಸದಿಹುದೇ ಬೆಸಸಿಮೆನಗೆಂದ ||೧೬||

ರಾಯನಾಡಿದ ವಾಣಿಯನು ಕೇ |
ಳ್ದಾಯಮಿಯು ಪೇಳಿದನು ನೃಪ ನಿ |
ನ್ನಾಯತದ ಸಾಯಕದ ಬಲಮಿರೆ ಭಯಕೆ ತೆರವುಂಟೇ ||
ನ್ಯಾಯರೀತಿಯ ವಿಾರಿ ನಡೆಯದೆ |
ರಾಯಗದ್ದುಗೆಯಲ್ಲಿ ನೀನಿರೆ |
ತಾಯ ಗರ್ಭದ ಶಿಶುವಿನಂದದೆ ಸುಖದೊಳಿರುತಿಹೆವು ||೧೭||

ವಿನಯಶೌರ್ಯೌದಾರ್ಯಮುಖಸ |
ದ್ಗುಣಗಳಿಂ ಮಾಂಧಾತ ಮೊದಲಾ |
ದಿನಕುಲದ ಭೂಭುಜರಿಗಿಮ್ಮಡಿಯೆನಲು ಜಸವಾಂತೆ ||
ದನುಜರುಬ್ಬಟೆಗಂಜುತಿಂದ್ರನು |
ಘನಮಹಿಮನರ್ಥಿಸಲು ನಿನ್ನನು |
ರಣದೊಳವರನು ತರಿದು ಸಲಹಿದೆ ದೇವಸಂಕುಲವ ||೧೮||

ಮೆಚ್ಚಿ ನಿನ್ನಯ ಸಾಹಸಕೆ ತ |
ನ್ನಚ್ಚ ಪೀಠದೊಳರ್ಧವನು ಕೊ |
ಟ್ಟಚ್ಚರಸಿಯರ ನಿರುಪಮಾನದ ನರ್ತನವ ತೋರಿ ||
ಮೆಚ್ಚಿಕೆಯ ಗಂಧರ್ವರಿಂ ತವ |
ಸಚ್ಚರಿತಗಾನವನು ಗೈಯಿಸಿ |
ನಿಚ್ಚಟದ ಸಂತಸವನೆಸಗನೆ ನಿನಗೆ ಸುರಪತಿಯು ||೧೯||

ಇಂತು ಸದ್ಗುಣವನಧಿ ನೀನಿರ |
ಲೆಂತು ಘಟಿಸುವುದೆಡರು ತಪಗಳಿ |
ಗಂತರಾತ್ಮಧ್ಯಾನಪರರಾಗಿರುತೆ ವರ್ಧಿಪೆವು ||
ಕ್ಲಾಂತಿಯೊಂದಿದ ಮಾಧವನು ವಿ |
ಶ್ರಾಂತಿಯಾಸೆಯಿನಿಳೆಯ ಭಾರವ |
ಚಿಂತೆಯಾನದೆ ನಿನ್ನೊಳಿರಿಸಿದನೆಂಬುದೀ ಲೋಕ ||೨೦||

ಮುನಿಪನಿಂತೆನಲಾಗ ಭೂಪನು |
ವಿನಯನತನಾಗುತ್ತೆ ವಚಿಸಿದ |
ನಿನಿತಕರುಹನೆ ನಾನು ಸಕಲವು ತಮ್ಮನುಗ್ರಹವು ||
ಇನಕುಲೋದಯಕಲ್ಪೆ ನಿಮ್ಮಾ |
ಘನಪದಾಂಬುಜವಿತ್ತ ಬಂದುದು |
ಮನದ ಕಾಮಿತವೇನು ನುಡಿದೊಡೆ ಶಿರದೊಳಾನುವೆನು ||೨೧||

ಕೇಳು ರಘುಕುಲಭೂಮಿಪಾಲಕ |
ಮೌಳಿ ಯೋಗಿವಸಿಷ್ಠಶಿಷ್ಯನೆ |
ಪೇಳುವೆನು ನಾನಿಲ್ಲಿಗೈದಿದ ಕಾರ್ಯಗೌರವವ ||
ಮೇಲಣಮರರ ತಣಿವುದಕ್ಕನು |
ಕೂಲಯಾಗವನೊಂದನೆನ್ನ ವಿ |
ಶಾಲಸಿದ್ಧಾಶ್ರಮದೆ ಗೈಯಲುಪಕ್ರಮಿಸಲದಕೆ ||೨೨||

ಖೂಳರಕ್ಕಸರೆಡರನೆಸಗುತೆ |
ಪಾಳುಗೈದಪರೆಮ್ಮ ವಸವನು |
ತಾಳಲಾರದೆ ನಿನ್ನೊಳುಸಿರಲು ಬಂದೆ ನಾನಿಂದು ||
ಭಾಳನಯನಸಂಗೆಣೆಯೆನಿಪ ಗುಣ |
ಶಾಲಿ ರಾಮನನೆನ್ನೊಡನೆ ಬಲು |
ದೋಳನಹ ಲಕ್ಷ್ಮಣನ ಜತೆಯೊಳು ಕಳುಹಿಸಿವರಿಂದೆ ||೨೩||

ಖಳರಘುವ ತೆಗೆಯಿಪೆನು ತವಸಿಗ |
ಳುಳಿವು ನಿನ್ನಿಂದಪ್ಪುದಿನ್ನಾಂ |
ತಳುವಲಾಗದು ಮಿತ್ರನಿಳಿವನು ಪಶ್ಚಿಮಾಂಬುಧಿಗೆ ||
ಎಳೆಯರಿವರನು ಮುದುಪನೊಂದಿಗೆ |
ಕಳುಹಲೇನೋ ಎಂಬ ಚಿಂತೆಯ |
ನುಳಿದು ಕಳುಪೈ ನಿನ್ನ ತನುಜರನೆಂದು ಮುನಿ ನುಡಿದ ||೨೪||

ವರಮುನೀಂದ್ರನ ನುಡಿಯ ಕೇಳಲು |
ಧರಣಿಪನ ಬಗೆ ಸೂರೆವೋದುದು |
ಮರೆದನಂಗೋಪಾಂಗವನು ಬಲುಕಳವಳಂಗೊಂಡು ||
ಮರಳಿ ಚೇತನವಡೆಯುತಾಕ್ಷಣ |
ಹರಹರಾ ಸಾನೇನ ಕೇಳ್ದೆನು |
ಮರವೆಯೋ ಮೇಣೆಚ್ಚರವೊ ತನಗೆನುತೆ ಚಿಂತಿಸಿದ ||೨೫||

ಕರಗಿ ಕೊರಗುತೆ ಮುಗಿದು ಕರಗಳ |
ನೊರೆದನಂದಾ ನೃಪತಿ ಋಷಿಗಳೆ |
ತರಳರಿವರಸದೇಕೆ ಬಯಸುವಿರಾನು ಜೀವಿಸಿರೆ ||
ಮರೆದಿರೇ ನೀಂ ಜರೆಯಿದಡಸುವ |
ವರೆಗಮೀಕ್ಷಿಸಿ ಬಳಿಕ ನಿಮ್ಮಯ |
ವರದೆ ನಾಲ್ವರು ಮಕ್ಕಳನು ನಾಂ ಪಡೆದ ಸಂಗತಿಯ ||೨೬||

ಕಾಲವೊದವಿತೆ ರಘುಕುಲಾಬ್ಧಿಯ|
ಕಾಲುವೆಯ ಜಲಮಿಂಗಿಪೋವುದೆ|
ಕೋಲಗಿಪೆನಿನ್ನಾವದೈವವನೆಂಬ ಬೇಗುದಿಯ ||
ಬೀಳುಕೊಟ್ಟೆಸು ಮುನಿವರೇಣ್ಯರೆ |
ಮೇಲುನೋಂಪಿಯ ಗೈದು ಮುನ್ನಾಂ |
ಬಾಲಕರ ವಯವೀಗನೋಡಲು ವರುಷ ಹದಿನಾಲ್ಕು ||೨೭||

ಕ್ರೂರದಾನವರೊಡನೆ ರಣದೊಳು |
ಹೋರುವುದಕಾನೆಂತು ಕಳುಹಲಿ |
ಶೂರತನವೆಡೆಗೊಳ್ಳದಣುಗರ ರಾಮಲಕ್ಷ್ಮಣರ ||
ಬೀರಲಾಜ್ಞೆಯನೆನಗೆ ನಾನೇ |
ಸಾರಿಯಲ್ಲಿಗೆ ನಿಮ್ಮ ಯಾಗವು |
ಪೂರಯಿಪ ಪರಿಯಂತಮಿರ್ದಾಬಳಿಕ ಮರಳುವೆನು ||೨೮||

ದೀನನಾದೀನೃಪನ ಮೇಲಭಿ |
ಮಾನವೇತಕೆ ನಿಮ್ಮೊಳುದಯಿಸ |
ದೇನ ಕೇಳಿದೊಡದನು ಕುಡುವೆನು ಪುತ್ರರುಳಿಯಲ್ಕೆ ||
ಹೀನಭಾಗ್ಯಂಗೀಸುಪುತ್ರರ |
ದಾನವಿತ್ತೀಜಗದೆ ಕೀರ್ತಿಯ |
ನಾನುವೊಡೆ ನಿಮಗಿದುವೆ ಸಮಯವು ಜೀಯ ಗಾಧೇಯ ||೨೯||

ನೃಪತಿಯಾಡಿದ ನುಡಿಯನಾಲಿಸಿ |
ಕುಪಿತನಾಗುತೆ ಯಮಿಶಿರೋಮಣಿ |
ಶಪಿಸುವನು ತಾನೆಂಬವೊಲು ಪಲುಗಳನು ಕಡಿಯುತ್ತೆ ||
ತಪನಕುಲದೊಳು ನಿನ್ನ ಜನನವು |
ವಿಫಲವಾದುದು ನಿನ್ನದೆಸೆಯಿಂ |
ದಪಯಶವು ಕಾಲೂರಿ ನಿಂದುದು ವಿಪುಲವಂಶದೊಳು ||೩೦||

ದಾನಶೀಲಾಗ್ರಣಿಯೆ ಭಳಿರೇ |
ಏನಕೇಳಿದೊಡದನು ಕುಡುವೈ |
ಸೂನುಗಳ ಕಳುಹೆಂಬ ಯಾಚನೆಗಾಯ್ತು ನುಂಗಳವು ||
ದೀನಯಾಚಕರಿಷ್ಟಸಿದ್ಧಿಗೆ |
ಹಾನಿಯೊದವಿತ್ತೆಂದೊಡದರಿಂ |
ಮಾನಬಹುದೇ ನಿನಗೆ ನಿನ್ನಯ ಪೂರ್ವದರಸರಿಗೆ ||೩೧||

ರಾಮನೆಲೆನೃಪ ನಿನ್ನ ಮಗನೇ |
ರಾಮನಿಗೆ ನೀಂ ದಿಟದೆ ಜನಕನೆ |
ಭ್ರಾಮಕವನಿದನಿನ್ನು ಬಿಡಿಸನೆ ಗುರುವಸಿಷ್ಠಮುನಿ ||
ಕಾಮದಿಂ ತುಂಬಿರುವ ನಿನ್ನೀ |
ತಾಮಸದ ಬುದ್ಧಿಯನು ತಿದ್ದದೊ |
ಡಾ ಮಹಾಮುನಿಗೆಂತು ಲಭಿಪುದು ಕೀರ್ತಿ ಲೋಕದೊಳು ||೩೨||

ನಮ್ಮ ಮಹಿಮೆಯನರಿಯದಗ್ಗದ |
ಹೆಮ್ಮೆನುಡಿಗಳನಾಡುತಿರ್ದಪೆ |
ನಿಮ್ಮ ಗುರುವನು ಕೇಳು ಬಲ್ಲನು ನಮ್ಮ ಶಕ್ತಿಯನು ||
ಒಮ್ಮೆ ವಿಶ್ವಾಮಿತ್ರ ಮುನಿದೊಡೆ |
ಬೊಮ್ಮನೇನನು ಮಾಡಬಲ್ಲನು |
ಸುಮ್ಮನೀಗಳೆ ಸುತರ ಕಳುಹಿಸಿ ಪದುಳವಡೆಯೆಂದ ||೩೩||

ಮಟ್ಟುಮೀರಿತು ಮುನಿಯ ಮುನಿಸುರೆ |
ಕೆಟ್ಟಿತಕಟಾ ಕಾರ್ಯವೆನ್ನುತೆ |
ತಟ್ಟನಾಗಳೆ ಗುರುವಸಿಷ್ಠನು ಬಂದನಾಯೆಡೆಗೆ||
ಗಟ್ಟಿಗರು ಕೌಶಿಕರು ನಿಮ್ಮೊಳ |
ಗಿಟ್ಟಿಹರು ಘನಕೃಪೆಯನದರಿಂ |
ದಟ್ಟಿ ಚರರನು ಬೇಗ ಕರೆಯಿಸು ರಾಮಲಕ್ಷ್ಮಣರ ||೩೪||

ಹರುಷವಾನುತ್ತಿವರ ಜತೆಯೊಳು |
ವರಕುಮಾರರ ಕಳುಹಿದೊಡೆ ನಿನ |
ಗುರುತರಶ್ರೀಯೊಳಭಿವೃದ್ಧಿಯು ಸನುನಿಪುದು ಮುಂದೆ ||
ಹರಿಯು ದುಷ್ಟರನಿರಿಯಲೋಸುಗ |
ನರರ ರೂಪಿಂ ರಾಮನಾಮವ |
ಧರಿಸಿ ಧರೆಗವತರಿಸಿ ಮೆರೆವನು ಮಗನೆನಿಸಿ ನಿನಗೆ ||೩೫||

ಉರಗರಾಜನೆ ಲಕ್ಷ್ಮಣನು ದಿಟ |
ಮರಿತಿರುವರಿದನೀಮಹಿತರೆನ |
ಅರಸನಾಗಳೆ ಕಳುಹಿ ಬರಿಸಿದನಾಕುಮಾರಕರ ||
ಬರಲು ಮಕ್ಕಳ ಕಂಡು ಭೋಂಕನೆ |
ಕರಗಳಿಂ ಬಾಚುತ್ತೆ ತೊಡೆಯೊಳ |
ಗಿರದೆ ತಾಂ ಕುಳ್ಳಿರಿಸಿ ನುಡಿದನು ಕಾರ್ಯದವಸರವ ||೩೬||

ನಂದನರೆ ಕೇಳ್ವುದು ಋಷೀಶ್ವರ |
ರೊಂದು ಯಾಗಕುಪಕ್ರಮಿಸಲೈ |
ತಂದು ರಕ್ಕಸರದಕೆ ವಿಘ್ನವನೆಸಗುತಿಹರು ಗಡ ||
ಇಂದು ನಿಮ್ಮನು ರಕ್ಷಣೆಗೆ ಕಳು |
ಹೆಂದು ಕೇಳುವರೆನ್ನನದರಿಂ |
ಕುಂದದಿವರೊಡನೈದಿ ಬಿಡಿಸುವುದಸುರಭೀತಿಯನು ||೩೭||

ಮೆಚ್ಚಿಸುತೆ ಮುನಿವರರನಾವಗ |
ಮೆಚ್ಚರಿಕೆಗೂಡಿಹುದು ಮಕ್ಕಳೆ |
ಕೆಚ್ಚೆದೆಯ ಕೇಡಿಗರು ಮಾಯಾವಿಗಳು ರಾಕ್ಷಸರು ||
ಮುಚ್ಚುಮರೆಯಿಂದೈದೆ ಜೀಳುವ |
ರಚ್ಚುಮಚ್ಚೆನೆ ವೇಷದಾಳ್ವರು |
ನಚ್ಚಲಾಗದು ಖಳರ ತರಿವುದು ಜಾಣತನದಿಂದೆ ||೩೮||

ಎನುತೆ ವಿಶ್ವಾಮಿತ್ರಮುನಿಗಳ |
ಘನಪದಾಂಬುಜಕವರನೆರಗಿಸಿ |
ಮುನಿಸನುಳಿದಿನ್ನೊಲಿದು ಮಕ್ಕಳ ಕಾಯಬೇಕೆಂದು ||
ತನಯರಿರ್ವರನವರ ಹಸ್ತಕೆ |
ಜನಪನರ್ಪಿಸಿ ನಮಿಸಲಾಗಳ್ |
ಮುನಿಕುಲಾಗ್ರಣಿ ಹರಸಿ ಪಡೆದು ವಸಿಷ್ಠನನುಮತಿಯ ||೩೯||

ತೆರಳುತಿರಲಾ ರಾಮಲಕ್ಷ್ಮಣ |
ರೆರಗಿದರು ಗುರುಜನದ ಚರಣಕೆ |
ಮರಳಿ ತಕ್ಕೈಸುತ್ತೆ ದಶರಥನಾತ್ಮಜರನೊಲಿದು ||
ತರಣಿವಂಶಲಲಾಮ ರಾಮನೆ |
ತರಳಲಕ್ಷ್ಮಣನೊಡನೆ ಸೌಖ್ಯದೆ |
ಪೊರೆದು ಮಖವನು ಪುರಕೆ ಮರಳುವುದೆಂದು ಕಳುಹಿದನು ||೪೦||

ಎರಡನೆಯ ಸಂಧಿ ಸಂಪೂರ್ಣಂ.

ಮೂರನೆಯ ಸಂಧಿ.

ಸೂ|| ವರಮುನಿಪನಿಂದಸ್ತ್ರವಿದ್ಯಾ |
ಪರಿಣತಿಯನಾ ರಾಮಲಕ್ಷ್ಮಣ |
ರರಿದು ದನುಜರ ಮುರಿದು ಕಾದರು ಮುನಿಯ ಯಾಗವನು ||

ಬಲಗಡೆಯೊಳಾ ರಾಮನೆಡದ
ಲ್ಲಲಘುಮತಿ ಲಕ್ಷ್ಮಣನು ಮಧ್ಯದೆ |
ಚಲದ ಗರುಡಿಯ ಜಟ್ಟಿವಿಶ್ವಾಮಿತ್ರನೈದಿದನು ||
ಹಲವುದೂರವ ನಡೆದು ಹೋಗುತೆ |
ಜಲಜಮಿತ್ರನು ಪಶ್ಚಿಮಾಂಬುಧಿ |
ಗಿಳಿವಸಮಯಕೆ ಕಂಡರವರಾಜಾಹ್ನವೀನದಿಯ ||೧||

ಜಲದೆ ಸಂಧ್ಯಾವಂದನೆಯ ಬಲು |
ನಲವಿನಿಂ ಗೆಯ್ಯುತ್ತುಮಾಗಳೆ |
ಬಲಿದರಾತ್ರಿಯನಲ್ಲಿ ಕಳೆಯಲು ಗುರುವಿನಾಜ್ಞೆಯೊಳು ||
ಬಲಯುತರು ತಿರಿತಂದು ತಳಿರನು |
ನೆಲದೆ ಮೃದುವೆನೆಪಾಸಿಯಲ್ಲಿಯೆ |
ಮಲಗಿ ಸುಖದಿಂ ನಿದ್ರೆಗೈದರು ಮುನಿಪನೊಡನಂದು ||೨||

ನಿದ್ದೆ ಮುಗಿಯಲು ಮಧ್ಯರಾತ್ರಿಯೊ |
ಳೆದ್ದು ರಾಮನು ಮುನಿವರೇಣ್ಯರೆ |
ಬುದ್ಧಿಬೋಧಪ್ರದರೆ ನದಿಯಿದರಿರವ ನಿರವಿಪುದು ||
ಬದ್ಧಮೆಂತೀಗಂಗೆ ತನ್ನೊಳ |
ಗದ್ದಿದರ ದುರಿತವನು ಕಳೆವುದು |
ಹೊದ್ದಿತಿವಳಿಗದೆಂತು ಭಾಗೀರಥಿಯೆನಿಪ ಪೆಸರು ||೩||

ಕೇಳಲೀಪರಿಯಿಂದೆ ಮುನಿಪತಿ |
ಹೇಳತೊಡಗಿದನಾಗ ರಾಮಗೆ |
ಕೇಳು ಹೇಳುವೆನಿದರ ಮಹಿಮೆಯ ಪೂರ್ವಚರಿತವನು ||
ತೋಳ ಬಲದಿಂ ದ್ವೀಪಸಪ್ತಕ |
ವಾಳುತಿರ್ದನು ಸಗರಧರಣೀ |
ಪಾಲಕನು ನಿಮ್ಮನ್ವಯದ ನೃಪಸಾರ್ವಭೌಮನಲಾ ||೪||

ಈತ ಪತ್ನೀದ್ವಯಸಮೇತನು |
ನೀತಿಯುತ ಬಹುಧರ್ಮನಿಷ್ಠನ |
ಭೀತನೀತನ ಮೊದಲ ಪತ್ನಿಯೊಳೊಗೆದನಸಮಂಜ ||
ಮಾತೆಯೆಂದೆನಿಸಿದಳು ಕಿರಿಯಳ್ |
ಖ್ಯಾತಿವೆತ್ತರುವತ್ತುಸಾಸಿರ |
ಜಾತರಿಗೆ ಬಹುಪುತ್ರನೆನಿಸಿದನಂದು ಭೂಪತಿಯು ||೫||

ಅರಸನಾಗ ಶತಾಶ್ವಮೇಧವ |
ವಿರಚಿಸಲು ನಿಶ್ಚೈಸಿಯೆಲ್ಲವ |
ಪರಮವೈಭವದಿಂದೆ ಮಾಡಿದನೊಂದು ಮಖವುಳಿಯೆ ||
ಧರಿಸಿ ದೀಕ್ಷೆಯನದಕೆ ಪುತ್ರರ |
ಕರೆದು ಕಳುಹಿದನಶ್ವರಕ್ಷಣ |
ಕಿರದೆ ತನ್ನಿಚ್ಛೆಯೊಳು ತಿರುಗುತ್ತಿರ್ದುದಾ ಹಯವು ||೬||

ತನ್ನ ಪದವಿಗೆ ಲೋಪಮುಪ್ಪುದು |
ಮನ್ನಿಸುವೊಡಿದನೆನುತೆ ಸುರಪತಿ |
ಸನ್ನುತಾಶ್ವವನೆಳೆದು ಮಾಯೆಯಿನರಿಯದಂದದೊಳು ||
ಪನ್ನಗೇಂದ್ರನ ಲೋಕದೊಳು ಸಂ |
ಪನ್ನತಪದೊಳಗಿಪ್ಪ ಕಪಿಲನ |
ಬೆನ್ನ ದೆಸೆಯೊಳು ಕಟ್ಟಿ ಜಾರಿದನಾಗ ಸುರಪುರಿಗೆ ||೭||

ಸಗರಪುತ್ರರು ಕಾಣದಶ್ವವ |
ನೊಗುಮಿಗೆಯ ಕೋಪವನು ತಾಳುತೆ |
ಜಗವನೆಲ್ಲವ ಸುತ್ತಿ ಕಾಣದೆ ತೊಳಲಿ ಬಳಲುತ್ತೆ ||
ಬಗೆಬಗೆಯಸಾಹಸದೆ ಭೂಮಿಯ |
ನಗೆದು ಪಾತಾಳದೊಳು ಕಂಡರು |
ವಿಗಡತವಸಿಯ ಬೆಂಗಡೆಯೊಳಿಹ ಯಜ್ಞತುರಗವನು ||೮||

ಏನಿದೆಲವೋ ಕಪಟಿ ನಿನ್ನೀ |
ಮೌನದಾಡಂಬರವ ಸುಡುಸುಡು |
ಮಾನಹೀನನೆ ತುರಗಚೋರನೆ ಯೆನುತುಮುಬ್ಬರಿಸೆ ||
ಧ್ಯಾನವಾರಿತು ಮೌನಮೋಡಿತು |
ಮೌನಿಮಣಿ ಕಂಗಳನು ಬಿಡಲಾ |
ಮಾನವೇಂದ್ರಾತ್ಮಜರು ಬೆಂದುರೆ ಭಸ್ಮವೆನಿಸಿದರು ||೯||

ಅರಿಯುತಿದನಾ ಅಂಶುಮಂತನು |
ಹಿರಿಯಪುತ್ರನ ಸುತನು ಹೊಕ್ಕನು |
ಮೆರೆವ ಪಾತಾಳವನು ಕಂಡನು ಕಪಿಲಮುನಿವರನ ||
ಪರಿಪರಿಯ ನುತಿಯಿಂದೆ ಮೆಚ್ಚಿಸಿ |
ತುರಗವನು ಪಡೆದಂದು ತಾತನ |
ವರಮಖವ ಪೂರೈಸಿ ಕೀರ್ತಿಯನೊಂದಿದನು ಜಗದೆ ||೧೦||

ಸುತಪರಂಪರೆಯಿಂದಮೊಗೆದ |
ಪ್ರತಿಮನೆನಿಪ ಭಗೀರಥಾವನಿ |
ಪತಿಯು ಪಿತೃದುರ್ಗತಿಯ ನಾಲಿಸಿ ಕಾಳಿ ದುಗುಡವನು ||
ಗತಿವಿಹೀನರೆ ತನ್ನವರು ಸ |
ದ್ಗತಿಗೆ ಕಳುಹುವೆನವರನೆನುತು |
ನ್ನತವಿಮಲಮತಿ ಪೊಕ್ಕನಾಪಾತಾಳಲೋಕವನು ||೧೧||

ಯತಿಯ ಸೇವಿಸುತವನನುಗ್ರಹ |
ದತಿಶಯವನುರೆ ಪಡೆದು ಪಿತೃಸ |
ದ್ಗತಿಗೆ ಹಾದಿಯ ತೋರಿಸೆನುತುಂ ಬಿದ್ದನಂಘ್ರಿಯೊಳು ||
ಕ್ಷಿತಿಪ ಲಾಲಿಸು ಪೋಗಿ ಸಗ್ಗಕೆ |
ಪತಿತಪಾವನೆಯೆನಿಪ ಗಂಗೆಯ |
ನುತಿಸಿ ಕರೆತಂದಿವರ ಬೂದಿಯ ಮೇಲೆ ಹರಿಸುವುದು ||೧೨||

ಇಂತು ಗೈಯಲು ನಿನ್ನ ಪಿತೃಗಳ |
ನಂತರದೆ ಸದ್ಗತಿಯ ಪಡೆವರ |
ನಂತವೆನಿಸುವಜಸವನೊಂದುವೆ ನೀನು ಲೋಕದೊಳು ||
ಚಿಂತೆಬೇಡೆಲೆನೃಪತಿ ನೀನ |
ಶ್ರಾಂತಸಾಹಸಯುತನು ವಿಕ್ಕರಿ |
ಗೆಂತು ಸಾಧ್ಯವು ಕಜ್ಜವಿದು ತಾನೆಂದು ಮುನಿ ನುಡಿಯೆ ||೧೩||

ಐಸಲೇ ಯೋಗೀಶ ತಮ್ಮಮ |
ದಾಸನೆನಿಪೆನಗೇನು ದೊಡ್ಡಿತು |
ಸಾಸದಿಂ ಗಂಗೆಯನು ತರುವೆನೆನುತ್ತುಮಾನೃಪನು ||
ಆ ಸುರೇಂದ್ರನ ನಗರಿಗೈದಿ ವಿ |
ಭಾಸಿಗಂಗೆಯನರ್ಥಿಸಲು ನಿ |
ನ್ನಾಸೆಯರಿತೆನು ಮಗನೆ ಯ್ಯೆತಹೆನೆಂದಳಾಗಂಗೆ ||೧೪||

ಮೊರೆದು ಘೂರ್ಣಿಸುತವಳು ಲೋಕವ |
ನರರೆ ಮುಳುಗಿಪಳೆಂಬತೆರದೊಳು |
ವರಭಗೀರಥನೊಡನೆ ಬರುತಿರೆ ಧರಣಿಗನಿತರೊಳು ||
ಮೆರೆವಕೈಲಾಸದೊಳು ಗೌರೀ |
ವರನು ಕೇಳ್ದಬ್ಬರವ ಜಡೆಯೊಳು |
ಧರಿಸಲವಳನು ಕಂಡು ನರಪತಿಯದನು ಚಿಂತಿಸಿದ ||೧೫||

ಹರನೆ ಗೌರೀವರನೆ ಪಾಲಿಸು |
ಪುರಹರನೆ ಶಂಕರನೆ ರಕ್ಷಿಸು |
ತರಳೆಯರಿಯದೆ ಗೈದತಪ್ಪನು ಕರುಣೆ ನೀಂ ಕ್ಷಮಿಸು ||
ಉರಿದು ಬಿದ್ದಿಹನಮ್ಮ ಪಿತೃಗಳ |
ಪರಮಸದ್ಗತಿಗಾಗಿ ಬೇಡಲು |
ಪರರನೋವನು ತನ್ನದೆನುತನೆ ತೀಡು ಬಂದಿಹಳು ||೧೬||

ಲೋಕಮಾತೆಯು ಧರೆಯ ಜೀವರ |
ಸಾಕುವಾಸೆಯೊಳಿಂದು ಬಂದಿಹ |
ಳೀಕೆಯಿಂ ಮತ್ಪಿತೃಗಳೆಲ್ಲರು ಧನ್ಯರಾಗುವರು ||
ಲೋಕನಾಯಕ ಶಿಕ್ಷೆರಕ್ಷೆಯ |
ಚಾಕಚಕ್ಯದೊಳಾರು ನೀನುಳಿ |
ದೇಕೆ ಸೆರೆವಿಡಿದಿರ್ಪೆ ಗಂಗೆಯ ಕಳುಹಿ ಸಲಹೆಂದ ||೧೭||

ಘನಮಹಿಮನಾ ಜಹ್ನುಮುನಿ ಮ |
ತ್ತಿನ ಮುನಿಗಳನು ನೆರಹಿ ಯಾಗವ |
ನನುವಿನಿಂ ಗೈಯುತ್ತುಮಿರ್ಪಾಸಮಯಕಾಬಳಿಗೆ ||
ವಿನುತೆ ಗಂಗೆಯು ಬರಲು ಮುಳಿಸಿಂ |
ಮುನಿಪನಾಪೋಶನವನೆಸಗಲು |
ಜನಪನೊದವಿತೆ ಮರಳಿ ವಿಘ್ನಮೆನುತ್ತೆ ಚಿಂತಿಸಿದ ||೧೯||

ಹಲವುದಿನಮಾತನನು ಸೇವಿಸಿ |
ಯಲಘುತರಭಕ್ತಿಯೊಳು ನುತಿಸ |
ಲ್ಕೊಲಿದು ತನ್ನಯ ಕರ್ಣಬಿಲದಿಂ ಬಿಟ್ಟನೀಕೆಯನು ||
ಬಳಿಕ ಜಾಹ್ನವಿಯೆಂಬ ಪೆಸರಾ |
ಯ್ತಿಳೆಯೊಳೀಕೆಗೆ ಮುಂದೆ ನಡೆಯು |
ತ್ತಿಳಿದು ಪಾತಾಳಕ್ಕೆ ಬೂದಿಯನಾಗ ನನೆಸಿದಳು ||೨೦||

ಗತಿಗೆ ಸಂದರು ಸಗರಪುತ್ರರು |
ಮತಿಯುತಭಗೀರಥನು ಗಂಗೆಯ |
ಪೃಥಿವಿಗಿಳಿಪಲು ಬಂದುದಾ ಭಾಗೀರಥೀನಾಮ ||
ಕ್ಷಿತಿಯೊಳೀಕಥೆಗೇಳ್ವವರು ದು |
ಷ್ಕೃತವಳಿದು ಪರಮುಕ್ತಿಯೈದುವ |
ರತಿದರಿದ್ರರು ಭಾಗ್ಯಶಾಲಿಗಳಾಗಿ ಬಾಳುವರು ||೨೧||

ಸಗರಭೂಮೀಶ್ವರನ ತನುಭವ |
ರಗೆದಕತದಿಂ ಕಡಲಿಗಾದುದು |
ಬಗೆಯೆ ಸಾಗರಮೆಂಬ ಪೆಸರೆಂದೆನುತೆ ಮುನಿ ನುಡಿಯೆ ||
ಒಗುಮಿಗೆಯ ಸಂತಸದೆ ರಾಮನು |
ಮುಗಿಸಿ ರಾತ್ರಿಯ ಮರುದಿವಸದೊಳ |
ಗೊಗೆಯೆ ದಿನಮಣಿ ಮಿಂದು ಸಂಧ್ಯಾಕರ್ಮವೆಸಗಿದನು ||೨೨||

ಕರೆದು ಮುನಿಯುಪದೇಶಿಸಿದನುರೆ |
ನೆರೆವ ಬಲೆಯತಿಬಲೆಯೆನಿಪ್ಪಾ |
ಯೆರಡು ವಿದ್ಯೆಗಳನು ನೃಪಾತ್ಮಜರಿರ್ವರಿಗೆ ಮುದದೆ ||
ತರತರದಿನಾ ಬ್ರಾಹ್ಮಮೊದಲಾ |
ದುರುತರಾಸ್ತ್ರಂಗಳ ಸುಮಂತ್ರೋ |
ಚ್ಚರಣೆಯನು ಕಲಿಯಿಸಿದನಿತ್ತನಮೂಲ್ಯವಹ ಧನುವ ||೨೩||

ಬಳಿಕ ಬಾಲಕರೊಡನೆ ನಡೆಯುತೆ |
ನಲಿದು ಹಿಗ್ಗುತೆ ಹಜ್ಜೆಹಜ್ಜೆಗೆ |
ಚೆಲುವರನು ನೋಡುತ್ತೆ ಮೆಚ್ಚುತುಮಂತರಂಗದೊಳು ||
ಸಲೆ ಕೃತಾರ್ಥನು ನಾನು ಮಿಕ್ಕರಿ |
ಗಳವೆ ರಾಮನಮಾಗಮವು ಸಲೆ |
ಫಲವನೊಂದಿತು ಮನದಭೀಷ್ಟವೆನುತ್ತೆ ಮುನಿ ನಡೆದ ||೨೪||

ಪೋಗುತಿರಲಿಂತವರು ವನದೊಳು |
ಬೇಗ ಬಂದಳದೊರ್ವ ದಾನವಿ |
ಕೂಗುವಾರಿಯ ತೆರಗಿಸರುಚುತೆ ಬಹುವಿಕಾರದೊಳು ||
ಆಗ ವಿಶ್ವಾಮಿತ್ರನೆಂದನು |
ರಾಘವನೆ ನೋಡಿವಳೆ ತಾಟಕೆ |
ತಾಗೆ ಶಾಪವು ಘೋರರಾಕ್ಷಸಿಯಾಗಿ ಚರಿಸುವಳು ||೨೫||

ಈಕೆ ಮಾರೀಚಂಗೆ ಮಾತೆ ಮ |
ಹಾಕರಾಳಶರೀರೆ ಸಜ್ಜನ |
ಶೋಕದಾಯಿನಿ ಲೋಕಭಂಜಿನಿ ಘೋರಪಾತಕಿನಿ ||
ಜೋಕೆಯಿಂದಿಡು ಸರಲನೆನೆ ಲೋ |
ಕೈಕವೀರನಲಾ ರಘುಜನಾ |
ಭೀಕರಾಕಾರೆಯನು ಯಮಪುರಿವ್ರಗಿಸಿದನು ಜವದೆ ||೨೬||

ನೋಡಿದನು ಬಗೆ ಮೆಚ್ಚಿ ಮುನಿ ಕೊಂ |
ಡಾಡಿದನು ರಘುವರನ ಶೌರ್ಯವ |
ನಾಡಿಗಚ್ಚರಿಯೆನುತೆ ನಡೆದನು ಮುಂದೆ ದಾರಿಯನು ||
ನಾಡೆ ಹರುಷದೆ ರಘುಜರಿಂದೊಡ |
ಗೂಡುತೀಪರಿ ಕೆಲವುದಿನಕೆ ಸ |
ಗಾಢಮಾನಸನಮಲಸಿದ್ಧಾಶ್ರಮವ ಸೇರಿದನು ||೨೭||

ಬಂದು ಕಂಡುದು ನಿಖಿಳತಾಪಸ |
ವೃಂದವಾಮುನಿಪುಂಗವನನಾ |
ನಂದಗೊಂಡಿತು ಭಯನಿವಾರಣವಾಯ್ತು ತಮಗೆನುತೆ ||
ಅಂದು ಕೌಶಿಕಮುನಿಯು ಋತ್ವಿಜ |
ರಿಂದೆ ಕೂಡಿ ಸಮಂತು ದೀಕ್ಷೆಯ |
ನಂದದಿಂ ಕೈಕೊಂಡು ಯಜ್ಞಾರಂಭಕನುವಾದ ||೨೮||

ಇಂತು ಯಾಗವನೊಲವಿಸಿಂ ನಿ |
ಶ್ಚಿಂತನಾಮುನಿಯೆಸಗುತಿರಲು ದು |
ರಂತಮಾರೀಚನು ಸುಬಾಹುಸಮೇತನಾಗೈದಿ ||
ಪಿಂತೆ ಮಾತೆಯು ಕೊಲಿಸಿದೀತನ |
ದೆಂತು ಯಾಗವ ಪೂರ್ತಿಗೊಳಿಪನು |
ಕಂತುಹರನಾದಕ್ಷಯಾಗವನಾಗಗೊಳಿಸಿದನೆ ||೨೯||

ಇಂದು ಯಾಗವ ಕಿಡಿಸುತಿವನನು |
ತಿಂದುತೇಗುವೆನೆಂದು ಖಳನೈ |
ತಂದು ಕುಂಡದ ಬಳಿಯನೈದಲು ಮುನಿಪನಾಜ್ಞೆಯೊಳು ||
ಅಂದು ರಾಮನು ಸರಲನೊಂದಿಡೆ |
ಕುಂದಿ ಕೆಡೆದು ಸುಬಾಹು ಮಡಿದನ |
ದೊಂದುಬಾಣದೆ ಬಿದ್ದನಬುದಿಗೆ ನೀಚಮಾರೀಚ ||೩೦||

ಹರಿಸರಸಮಾಶ್ರಮದೆ ಪಸರಿಸಿ |
ತಿರದೆ ಬಂದರು ಸಕಲಮುನಿಗಳು |
ಹರಸಿದರು ರಘುರಾಮ ಶುಭತತಿಯೊಂದಿ ಬಾಳೆನುತೆ ||
ಜರಗಿದುದು ವರಮುಖವು ಸುರರಿಗೆ |
ಪರಮಸಂತುದವಾಯ್ತು ನಿನ್ನಯ |
ಬರವು ಘನಶುಭಕರವು ನಮಗಿಂದೆಂದು ಮುನಿ ನುಡಿದ ||೩೧||

ಮೂರನೆಯ ಸಂಧಿ ಸಂಪೂರ್ಣಂ

ನಾಲ್ಕನೆಯ ಸಂಧಿ.

ಸೂ || ಅತಿಮಹಿಮರಾಘವನು ಗೌತಮ |
ಸತಿಯ ಶಾಪವ ಕಳೆದು ಶಂಕರ |
ಸಕುಳಚಾಪವ ಮುರಿದು ವರಿಸಿದನಂದು ಭೂಮಿಜೆಯ ||

ಫಲಿಸಿದುದು ತನ್ನೀಪ್ಸಿತಾರ್ಥವು |
ಸುಲಭವಾಗಿಯೆ ಶಿವನ ಕೃಪೆಯಿಂ |
ತೊಲಗಿದರು ಮುಖಕಂಟಕರು ರಾಕ್ಷಸರು ತಾವೆನುತೆ ||
ಕೆಲವುದಿನಗಳನಲ್ಲಿ ಸುಖದಿಂ |
ಕಳೆಯುತಿರಲಾಮುನಿಯು ಮಾರ್ಗದೆ |
ಕಲಕಲಧ್ವನಿಗೈವ ಜನವನು ಕಂಡನೊಂದುದಿನ ||೧||

ಅರಿದನವರಿಂ ಮಿಥಿಲೆಯಾಣ್ಮನು |
ವರಕುಮಾರಿಗೆ ತಕ್ಕ ವರನನು |
ಮೆರೆವ ಭೂಮಿಪರಲ್ಲಿ ನೋಡಲ್ಕಾಸ್ವಯಂವರನ ||
ವಿರಚಿಸುತ್ತಿಹನದರಿನೆಲ್ಲರು |
ನಿರುಕಿಸಲು ತಾವಲ್ಲಿಗೈದು |
ತ್ತಿರುವರೆಂಬುದನಾಗ ನಿಶ್ಚೈಸಿದನು ಮನದೊಳಗೆ ||೨||

ಮೆರೆವಲಕ್ಷ್ಮಿಯೆ ಸೀತೆಯಾಗವ |
ತರಿಸಿಹಳು ಮೋಕ್ಷಾದಿಪುರುಷನೆ |
ಧರಣಪತಿಸುತರಾಮನೆನಿಸುತ್ತಿಲ್ಲಿ ತಾನಿಹನು ||
ವರನ ಮೊದಲೇ ವರಿಸಿಹಳು ಮಗ |
ಳರಿಯನಿದನಾ ಜನಕನಲ್ಲಿಗೆ |
ತೆರಳುವೆನು ನಾಂ ರಾಮಲಕ್ಷ್ಮಣರೊಡನೆನುತೆ ಬಗೆದು ||೩||

*ತಳರ್ದು ಮಿಥಿಲಾಪಟ್ಟಣದ ದೆಸೆ |
ಗೆಳಸಿ ಪೋಗುತ್ತಿರಲು ರಾಮನ |
ಪೊಳೆವಲೋಚನಕೊಂದುಶಿಲೆ ಗೋಚರಿಸಿತಿದಿರಿನೊಳು ||
ಘಳಿಲನಲ್ಲಿಯೆ ನಿಂದು ಪೆಣ್ಣುವೊ |
ಲಿಳೆಯ ಪೊರ್ದಿಹ ಶಿಲೆಯಿದೇನೆನೆ |
ತಳುವನಾಡದೆ ಮುನಿಪನದರ ರಹಸ್ಯವನು ನುಡಿದ ||೪||

ಆಲಿಸಾದೊಡೆ ರಾಮ ಪೂರ್ವದೆ |
ಮೇಲೆನಿಪ ಗೌತಮಮುನೀಶನು |
ಶೀಲವತಿಯೆಂದೆನಿಪಹಲ್ಯೆಯ ವರಿಸಿ ತಾನಿರೇಬ ||
ಆಲಲನೆಯಾಚೆಲುವಿಗಿಂದ್ರನು |
ಸೋಲುತುಂ ಮತಿಗೆಟ್ಟು ಕಪಟದ |
ಲೀಲೆಯಿಂದವಳಮಳಸುವ್ರತಕೆಡರನೊದವಿಸಿದ ||೫||

ಮೋಸಕಿವಳೆಡೆಯಾದಳಾದೊಡ |
ಮಾಸುಶೀಲತೆ ಕೆಟ್ಟುದೆನುತತಿ |
ರೋಷದಿಂದಾಮುನಿಯು ಶಾಪವನಿತ್ತನಿರ್ವರಿಗೆ ||
ವಾಸವನೆ ನೀನರಿದುಮೆನ್ನ ವಿ |
ಳಾಸಿನಿಯೊಳೊಡಗೂಡಿದುದರಿಂ |
ಹೇಸಿಕೆಗೆ ಪಕ್ಕಾದ ಷಂಡತೆ ಸಮನಿಸುಗೆ ನಿನಗೆ ||೬||

ಎಂದು ಶಾಪಿಸಿ ವನಿತೆ ನಿನ್ನಯ |
ಸಂದ ಪಾತಿವ್ರತ್ಯಕಳಿವಾ |
ಯ್ತಿಂದು ಮೊದಲದರಿಂದೆ ಘನಶಿಲೆಯಾಗು ನೀನೆನಲು ||
ಸುಂದರೀಮಣಿಯಳುಕಿ ಗತಿಯೇಂ |
ಮುಂದೆ ತನಗೆನೆ ರಾಮಚಂದ್ರನು |
ಬಂದು ಮೆಟ್ಟಲು ಮರಳಿ ಬದುಕುವೆಯೆಂದನಾಮುನಿಪ ||೭||

ಅದರಿಸಿಂದೀಶಿಲೆಗೆ ನಿನ್ನಯ |
ಪದಸರೋಜವ ಸೋಂಕಿಸೆಂದೆನೆ |
ಪದುಳದಿಂ ಶ್ರೀರಾಮಸಂಘ್ರಿಯನಿಟ್ಟೊಡಾ ಶಿಲೆಯು ||
ಪದುಮನಾಭ ಮುರಾರಿ ಜಯಜಯ |
ಸದಮಲಾತ್ಮ ಬ್ರಹ್ಮ ಜಯಜಯ |
ಬದುಕಿದೆನು ತಾನೆಂದು ನುತಿಸಿತಹಲ್ಯೆರೂವಿನೊಳು ||೮||

ರಾಮನತಿವಿಸ್ಮಯಮನಾಂತಿರೆ |
ಪ್ರೇಮದಿಂದಭಿನಮಿಸಿ ಸತಿಯು |
ದ್ದಾಮಮುನಿಪತಿಗೆರಗಿ ತನ್ನಾಶ್ರಮಕೆ ತೆರಳಿದಳು ||
ರಾಮಲಕ್ಷ್ಮಣರೊಡನೆ ಮುನಿಯಭಿ |
ರಾಮಗಿರಿನದಿಗಳನು ದಾಂಟು |
ತ್ತಾಮಹೀಪತಿಜನಕರಾಜನ ಪೊಳಲ ಸೇರಿದನು ||೯||

ಜನಕಭೂಪತಿಯಾ ಸ್ವಯಂವರ |
ದಿನದೊಳತಿಸಂಭ್ರಮವನಾನು |
ತ್ತನಿಮಿಷೇಂದ್ರನ ಪುರಕೆ ಮಿಗಿಲೆನಿಸಿಪಂತೆ ಮಿಥಿಲೆಯನು ||
ಮನದಣಿಯೆ ಸಿಂಗರಿಸಿ ನಾನಾ |
ಜನಕೆ ತಕ್ಕಂದದೊಳು ಪೊಸತಹ |
ಮನೆಗಳನು ಪರುಠವಿಸಿ ಮೆರೆದನು ರಾಮಣೀಯಕವ ||೧೦||

ಹಿಂದೆ ವರುಣನು ನಿಮಿಯ ವಂಶದ |
ಸಂದಭೂಪತಿದೇವರಾತಂ |
ಗೆಂದು ಕೊಟ್ಟಿಹ ಹರನ ಧನುವನು ತರ್ಪುದೆಂದೊರೆಯೆ ||
ಮಂದರಾದ್ರಿಯ ಪಳಿವ ಬಿಲ್ಲದ |
ತಂದರಾಳುಗಳಧಿಕಸಾಹಸ |
ದಿಂದಮಿಳುಹಿದರಾ ಸ್ವಯಂವರಮಂಟಪದ ನಡುವೆ ||೧೧||

ಅರಸನಾಗಳ್ ಬಂಧುಜನವನು |
ನೆರಹಿ ಕರೆಯಿಸಿ ರಾಜತತಿಯನು |
ಬರಿಸಿ ಮಂತ್ರಿಪುರೋಹಿತಾಶ್ರಿತಪೌರವರ್ಗವನು ||
ಮೆರೆವ ಮದನನ ಪಟ್ಟದಾನೆಯ |
ಸರಸವಹ ಸಿಂಗರದ ಸೋನೆಯ ||
ವರವಸಂತದ ಮಂತ್ರದೇವಿಯು ಕರೆವುದೆಂದೆನಲು ||೧೨||

ತ್ವರಿತದಿಂ ಚರರೈದಿ ವಾರ್ತೆಯ |
ನರುಹೆ ಸಖಿಯರು ಪರಮಸಂಭ್ರಮ |
ವೆರಸಿ ಸೀತಾದೇವಿಯನು ವಿಧವಿಧದೆ ಸಿಂಗರಿಸಿ ||
ಬೆರಗುವಡೆದಿರುತಿರಲು ನೃಪಸಭೆ |
ಕರೆದುತಂದಳು ನಲವಿನಿಂ ಭೂ |
ವರನು ಕುಳ್ಳಿರಿಸಿದನು ಕೆಲದೊಳು ತನ್ನ ನಂದನೆಯ ||೧೩||

ಸಿಂದು ಸಭೆಯೊಳು ಜನಕಭೂಪತಿ |
ಯಂದು ಸಾರಿದನೀಕ್ಷಿತೀಶ್ವರ |
ವೃಂದಮಧ್ಯದೆ ತೋಳ ಬಲುಹಿಂದಾವನೀಧನುವ ||
ಇಂದುವಾಯದೊಳೆತ್ತಿ ಸರಲನು |
ಸಂಧಿಸುವನಾವೀರನೆನ್ನಯ |
ನಂದನೆಗೆ ಪತಿಯಹನು ತಾನೆಂದಂಜಲಿಯನೆಸಗಿ ||೧೪||

ಕೇಳಿದರು ನೃಪತಿಗಳು ಜನಕನ |
ಪೇಳಿದಾದುರ್ಧರದ ಪಂತವ |
ತಾಳಿದರು ಮೌನವನು ತಮಗಿದು ಸಾಧ್ಯವೇ ಎನುತೆ
ಭಾಳನಯನನ ಚಾಪವಿದು ತಮ |
ಗೇಳುವುದೆ ಬೇರೊಂದುಪಂತವ |
ಪೇಳು ಭೂಪನೆಯೆನಲು ಚಿಂತೆಯನಾಂತನಾಜನಕ ||೧೫||

ಅವರ ಮಧ್ಯದಿನಾಗಳೆದ್ದನು |
ಶಿವಗಿರಿಯನಲುಗಿಸಿದ ಸುಭಟನು |
ಭುವನಕಂಟಕತಿಲಕಲಂಕಾಧೀಶರಾವಣನು ||
ತವೆ ಜಯಾಂಗನೆ ಮದ್ಭುಜದೊಳಿರ |
ಲವರಿಗಿವರಿಗೆ ಧನುವಿದೊಲಿವುದೆ |
ಅವನಿಸಂಭವೆಯುದಿಸಿಹಳು ತನಗೋಸುಗವೆ ಎನುತೆ ||೧೬||

ಸಾರಲಾಧನುವೆಡೆಗೆ ಧರಣಿಕು |
ಮಾರಿ ಬೆದರಿದಳಕಟ ಕೆಟ್ಟೆನು |
ಘೋರದಾನವನಾಳುತನಕೀಚಾಪವೇಸರದು ||
ಮಾರರಮಣ ನೀನಲ್ಲದೆನ್ನ ವಿ |
ಚಾರಿಸುವವಿಭುವಿಲ್ಲ ಭಕ್ತೋ |
ದ್ಧಾರ ಸಲಹೈ ಸನ್ನನೆಂದಳು ನೆನೆಯುತಚ್ಯುತನ ||೧೭||

ಸುದತಿಯನು ಕಂಡೊಡನೆ ಚಿತ್ತವು |
ಚದರದಲ್ಲಿಯೆ ನೆಲಸೆ ಖಲಪತಿ |
ಬೆದಗತನದಿಂಪೌಂಕಿ ಧನುವಿಗೆ ಹೆದೆಯನೇರಿಸುವ ||
ಹದನನರಿಯದೆ ಮುಗ್ಗಿಯದು ತ |
ನ್ನೆದೆಯಮೇಲಿರದಾಗ ಬೀಳಲು |
ಮುದವಡಗೆ ಜಾರಿದನು ಘೊಳ್ಳೆಸೆ ನೆರೆದ ಸಂದಣಿಯು ||೧೮||

ಆಗ ವಿಶ್ವಾಮಿತ್ರಮುನಿಪತಿ |
ಬಾಗಿಲೊಳು ಬಂದಿರುವನೆಂದತಿ |
ವೇಗದಿಂ ಚರರೈದಿ ಪೇಳಲು ಬಂದೆಸಿನೊ ಎನುತೆ ||
ನೀಗಿ ಚಿಂತೆಯನಿದಿರುಗೊಂಡೆಲೆ |
ಯೋಗಿವರ ನಿನ್ನೀಬರವು ಮ |
ಹಾಭಾಗಧೇಯವೆನುತ್ತೆ ಪೀಠವನಿತ್ತು ಮನ್ನಿಸಿದ ||೧೯||

ಇಂದು ತಮ್ಮಾಗಮನವೆನಗಾ |
ನಂದವಿತ್ತುದು ತಮ್ಮಡಿಯ ದೂ |
ಳಿಂದೆ ಗೇಹವು ಶುದ್ಧವಾದುದೆನುತ್ತ ಮಾನೃಪತಿ ||
ಬಂದಮುನಿವರನೊಡನೆ ವಿಭ್ರಮ |
ದಿಂದೆ ಕುಳಿತಿಹ ರಾಮಲಕ್ಷ್ಮಣ |
ರಂದವನು ನೋಡುತ್ತೆ ಮನದೊಳು ಭಾವಿಸಿದನಾಗ ||೨೦||

ಆರ ತನುಜರೊ ಇವರು ಮದನಾ |
ಕಾರರಾಗಿರುತಿಹರು ಮುನಿಪನ |
ಸೇರಿ ಬಂದಿಹರೀಸ್ವಯಂವರಕಾಲದೊಳು ತಾವು ||
ಧೀರರಿವರೊಳಗೊರ್ವನಿಗೆ ಸುಕು |
ಮಾರಿ ಸೇರಿದೊಡೆನ್ನ ಪುಣ್ಯವು |
ದಾರಿಯೇನಿದಕಿನ್ನು ಪಂತವನೆನಗೆ ಕಿಡಿಸಿದೆನು ||೨೧||

ವಿಾರಿನಡೆದನು ತನ್ನ ಪೂರ್ವಕೆಯ |
ಧಾರಿಣೀಪತಿ ಜನಕನೆಂಬೀ |
ದೂರು ಹೊದ್ದದೆ ಮಾಣವೆನ್ನನು ತಪ್ಪಿದೊಡೆ ತಾನು ||
ಸಾರವಿದರಿವರಿಂದಿವರ ಕುಲ |
ತಾರತಮ್ಯವನರಿವೆನೆಂದುರೆ |
ಬೀರಿ ವಿನಯವನೀಕುಮಾರರದಾರು ಬೆಸಸುವುದು ||೨೨||

ಇವರ ನೋಡಿದ ಮಾತ್ರದಿಂ ಬಗೆ |
ತವಕವಡುತಿಹುದೀಗಳೆನ್ನಯ |
ಕುವರಿ ಸೀತೆಯನಿವರೊಳೊರ್ವಂಗೀಯಬೇಕೆನುತೆ ||
ಜವಳಿನುಡಿಗಂಜುವೆನು ಘನಚಾ |
ಪವನು ಪೂಡಿದವಂಗೆ ಮಗಳನು |
ಜವದೆ ಕುಡುವಾ ಭಾಷೆ ತನ್ನದು ಧನುವಸಾಧ್ಯವಲಾ ||೨೩||

ಜನಪನಿಂತೆನೆ ನುಡಿದನಾಮುನಿ |
ಮನದೊಳಿನ್ನಿದಕೇಕೆ ಚಿಂತಿಪೆ |
ಯಿನಕುಲೋದ್ಭವದಶರಥೇಂದ್ರನ ಪುತ್ರರಿವರುಕಣಾ ||
ದನುಜರುಬ್ಬಟೆ ಪಿರಿದು ಯಾಗಕೆ |
ತನುಜರನು ಕಳುಹೆಂದು ಬೇಡಲು |
ಜನಪನಟ್ಟಿದನಿವರನೆನ್ನಯ ಮಖವ ರಕ್ಷಿಸಲು ||೨೪||

ಘನಪರಾಕ್ರಮಿಯಹ ಸುಬಾಹುವ |
ಹಸನಗೈದತಿದುಷ್ಟಮಾರೀ |
ಚನನು ಸೇರಿಸಿ ಕಡಲ ಬಳಿಕುಳಿದವರನುರೆ ಸವರಿ ||
ಅನುಪಮಮಹಾಮುಹಿಮ ರಾಘವ |
ನಿನಕುಲದ ಪೆಸರುಳಿಸಿ ಮಖವನು |
ಮುನಿಗಳೊಪ್ಪಲು ಸಲಹಿ ನೋಡಲ್ಕೀಸ್ವಯಂವರವ ||೧೫||

ಬಂದನೀಲಕ್ಷ್ಮಣನೊಡನೆ ಯೆನ |
ಲಂದು ಹಿಗ್ಗುತೆ ನೃಪನು ರೂಪಿಂ |
ಗಿಂದು ಕೂಡಿತು ಕುಲವು ರನ್ನಕೆ ಚಿನ್ನವೆರೆದಂತೆ ||
ಮುಂದೆ ಚಾಪವಸೆತ್ತಿಯಿವನದ |
ಟಿಂದೆ ಮತ್ತನುಜಾತೆಯನು ಪೂ |
ರ್ಣೇಂದುಮುಖಿಯನು ಸೇರೆ ನಾಂ ಕೃತಕೃತ್ಯನಾಗುವೆನು ||೧೬||

ವೀರರೊಳಗಗ್ಗಳನು ರಾಮನು |
ಭೂರಿಭಾರದ ಶೈವಧನುವಿದು |
ಏರಿಹುದು ಶಕ್ತಿಯನು ನೆರೆದೀ ಭೂಮಿಪಾಲಕರ ||
ಕ್ರೂರವಿಧಿ ತಾನೇನಗೆಯ್ವುದೊ |
ತೋರದೇನುಂ ಹೃದಯಕೀಸುಕು |
ಮಾರಿಸೀತೆಯ ಭಾಗ್ಯವೆಂತೋ ಎಂದು ಚಿಂತಿಸಿದ ||೧೭||

ಧರಣಿಪಾಲನ ಮನದ ಚಿಂತೆಯ |
ನರಿದು ಮುನಿಪತಿಯಿಾತ ಸಂಶಯ |
ಶರಧಿಯಲಿ ತಾಂ ಸಿಲುಕಿ ರಾಮನ ಭುಜಬಲೋನ್ನತಿಯ ||
ಅರಿಯದೀಪರಿ ಗಾಸಿವಡುವನು |
ಒರಿದೆ ನಾನೀಕ್ಷಣದೆ ತೋರ್ಪೆನು |
ವರಕುಮಾರನ ಪರಿಯನೆಂದಾ ರಾಮನನು ನೋಡಿ ||೧೮||

ರಾಮ ಬಾರೈ ರವಿಕುಲಾಂಬುಧಿ |
ಸೋಮ ಬಾರೈ ದೈತ್ಯಸಂಕುಲ |
ಭೀಮ ಬಾರೈ ಸುಗುಣಮುಕ್ತಾದಾಮ ನೀಂ ಬಾರ ||
ಈಮಹಾಧನುವಿಲ್ಲಿ ನೆರೆದಿಹ |
ಭೂಮಿಪಾಲರ ಸೋಲಿಸಿತು ನಿ |
ಸ್ಸೀಮ ತೋರೈ ಕೈಗುಣವ ನೀನೆಂದು ಮುನಿ ನುಡಿದ ||೧೯||

ಆಗಳೆದ್ದನು ರಾಮಚಂದ್ರನು |
ಯೋಗಿವರ್ಯನ ಚರಣಕಮಲಕೆ |
ಬಾಗಿ ವಂದಿಸಿ ವಿನಯದಿಂದೊಡಗೂಡಿ ಮುನಿವರನೆ ||
ಸಾಗುವುದೆ ಘನಕಾರ್ಯವೆನ್ನಿಂ |
ಬೇಗ ಗೆಲವನು ಕರುಣಿಸೈ ನೀಂ |
ವಾಗುರುವಲಾ ಎನುತೆ ನೋಡಿದ ನೆಸೆವ ಶಿವಧನುವ ||೩೦||

ನೋಡಿ ಪಲತೆರದಿಂದೆ ಸಲೆ ಕೊಂ|
ಡಾಡಿ ತನ್ಮಹಿಮೆಯನು ಕೈಗಳ |
ಜೋಡಿಸುತೆ ಭಕ್ತಿಯಲಿ ಶಂಕರನಡಿಯ ಚಾಪಿಸುತೆ |
ನಾಡಿನರಸರು ನಿನ್ನನೊಲಿಸುವ |
ಜಾಡನರಿಯದೆ ಭಗ್ನರಾದರು |
ರೂಢವಾಗಿಹ ನಿನ್ನ ಕರುಣವ ಬೀರು ನನ್ನೊಳಗೆ ||೩೧||

ವೀರರಗ್ಗದ ಹಮ್ಮು ಮುರಿದೀ |
ಘೋರಧನುವನು ಗೆಲಿಸಿ ನನ್ನನು |
ಪಾರುಗಾಣಿಸು ಪುರಹರನೆ ಯೆಂದೆನುತೆ ಕೈನೀಡಿ ||
ಭಾರಿಧನುವನು ಪಿಡಿದು ಬಾಗಿಸೆ |
ಭೂರಿರವದಿಂ ಮುರಿದು ಬಿದ್ದುದು |
ಧಾರಿಣಿಯ ಮೇಲಾಗ ಬೆದರಿತು ನಿಖಿಲಜನನಿವಹ ||೩೨||

ಅಲಿದನು ಮುನಿ ಕುಣಿಯುತರಸನು |
ತೇಲಿದನು ಹರ್ಷಾಂಬುನಿಧಿಯೊಳು |
ಮೇಲೆ ಸುರರುಲಿಯುತ್ತೆ ಕರೆದರು ಪುಷ್ಪವೃಷ್ಟಿಯನು ||
ಲೋಲಲೋಚನೆ ಪರಿಮಳದ ಪೂ ||
ಮಾಲೆಯನು ಕರದಿಂದೆ ಪಿಡಿದಾ |
ನೀಲಮೇಘಶ್ಯಾಮನಿಗೆ ಧರಿಸಿದಳು ಭೂಜಾತೆ ||೩೩||

ಹರುಷವಾಂತುದು ನಿಖಿಲಜನಮುಪ |
ಚರಿಸಿ ಜನಕನು ತನ್ನ ಪುಣ್ಯದೆ |
ವರನು ಮಗಳಿಗೆ ರಾಮಚಂದ್ರನು ದೊರೆದನೆಂದೆನುತೆ ||
ಪರಮಸಂತೋಷದಲಿ ಮುನಿಪತಿ |
ವೆರಸಿ ಸುರುಚಿರರಾಮಲಕ್ಷ್ಮಣ |
ರಿರುವರನು ಕೂಡುತ್ತೆ ತೆರಳಿದನರಮನೆಗೆ ತಾನು ||೩೪||

ಆಗ ನೋಡಿ ವಿವಾಹಕನುಗುಣ |
ವಾಗಿರುವ ದಿವಸವನು ತಿಳುಹಿಸೆ |
ಯೋಗಿ ವಿಶ್ವಾಮಿತ್ರನದಕನುಮತಿಸಲಾ ನೃಪತಿ ||
ಬೇಗ ಬರೆಯಿಸಿ ಲಗ್ನಪತ್ರವ |
ನೀಗಳೀ ಲೇಖವನಯೋಧ್ಯೆಗೆ |
ಪೋಗಿ ದಶರಥನೃಪತಿಗೀಯೆಂದೊರ್ವ ವಿಪ್ರನನು ||೨೫||

ಕರೆದು ನೇಮಿಸಲವನು ಕೊಂಡಾ |
ದರದಿನಲ್ಲಿಂ ತೆಳರ್ದಯೋಧ್ಯಾ |
ಪುರವ ಸೇರ್ದನು ಕಂಡನಾದರಮನೆಯ ಬಾಗಿಲನು ||
ಅರುಹಿದನು ತಾಂ ಬಂದಕಜ್ಜವ |
ಚರರಿಗವರೊಳಪೊಕ್ಕು ಸಭೆಯೊಳು |
ಮೆರೆವ ದಶರಥನೃಪಗೆ ವಿಪ್ರನ ಬರವನರಿಪಿದರು ||೨೬||

ಬರುತಮಿರ್ಪರನೇಕರಿಲ್ಲಿಗೆ |
ತರುತಿಹರು ತರತರದ ಸುದ್ದಿಯ |
ಕರಳರಿರವನು ಕಂಡುಕೇಳಿದ ಜನನ ನಾನರಿಯೆ ||
ಕರೆದುತರುವೆನು ಬೇಗ ಬೆದರದಿ |
ರರಸ ನೀನೆಂದಾ ತಪೋನಿಧಿ |
ತೆರಳಿದನು ತಾನವನ ಸುಳಿವಿಲ್ಲಿನ್ನು ಮೇನಾಯ್ತೊ ||೨೭||

ರಕ್ಕಸರು ಮಾಯಾವಿಗಳು ಹಸು |
ಮಕ್ಕಳಿಂದಾಗುವುದೆ ಬೇಡೆನೆ |
ಕಕ್ಕಸದ ಮಾತಾಡುತವರನು ಬಿಡದೆ ಕರೆದೊಯ್ದ ||
ಅಕ್ಕಟೇನಾಗಿಹರೊ ಬಾಲರು |
ದಿಕ್ಕುತೋರದು ತನಗೆ ಭೂಸುರ |
ಸಿಕ್ಕುವನೊ ಕಿವಿಗಮೃತವನು ಕರೆಯೆಂದನಾ ಭೂಪ ||೨೮||

ಬಂದ ವಿಪ್ರನನರಸ ಮನ್ನಿಸಿ |
ಯಿಂದದೇನತಿಶಯವು ಪೇಳೆನೆ |
ಮುಂದಹಾಸದೆ ಕರದೊಳಿತ್ತನು ಲಗ್ನಪತ್ರಿಕೆಯ ||
ಚಂದದಿಂದದನೋದಿಕೊಂಡಾ |
ನಂದಬಾಷ್ಪವು ತುಳುಕೆ ಭೂಪತಿ |
ಯಂದು ವಿಪ್ರಂಗಿತ್ತು ಧನಕನಕಾದಿವಸ್ತುಗಳ ||೨೯||

ಒರೆದೊರೆದು ಲಿಖಿತವನು ಸಭೆಯೊಳ |
ಗಿರುವ ಜನರಿಗೆ ಗುರುವಸಿಷ್ಠಂ |
ಗರುಹಿ ಮಂತ್ರಿಸುಮಂತ್ರಮುಖ್ಯರಿಗದನು ತಿಳುಹಿದನು ||
ನೆರಹಿದನು ನಿಜಬಂಧುಮಿತ್ರರ |
ಸರಕುಸಂಭಾರವನು ಹವಣಿಸಿ |
ಸರಭಸದೆ ಪೊರಮಟ್ಟು ಸೇರ್ದನು ಮಿಥಿಲೆಯುಪವನವ ||೪೦||

ಕೇಳಿದನು ಶುಭವಾರ್ತೆಯನು ಮಿಗೆ |
ತಾಳಿದನು ಹರುಷವನು ಜನಕನು |
ಮೇಳವಿಸಿ ಪರಿವಾರವನು ತಾನಲ್ಲಿಗೈತಂದು ||
ಕೇಳಿ ಕುಶಲವನಖಿಳರನು ಬರ |
ಹೇಳಿ ನಗರಿಗೆ ನಲವಿನಿಂ ನೃಪ |
ಮೌಳಿದಶರಥನೊಡನೆ ತನ್ನರಮನೆಯನೆಯ್ದಿದನು ||೪೧||

ಬಂದು ವಿನಯದೆ ರಾಮಲಕ್ಷ್ಮಣ |
ರಂದು ತಂದೆಯ ಚರಣಕೆರಗಲು |
ನಂದನರ ಕಂಡೊಡನೆ ಪುಳಕಿತಗಾತ್ರನಾಗುತ್ತೆ ||
ಕಂದ ಬಾರೈ ರಾಮ ಮನದು |
ಕ್ಕಂದ ಬಾರೈ ಲಕ್ಷ್ಮಣನೆ ತರು |
ಣೇಂದುಸದೃಶರೆ ಬನ್ನಿ ನೀವೆಂದಪ್ಪಿದನು ಸುತರ ||೪೨||

ಶಿರವನಾಘ್ರಾಣಿಸುತೆ ನಲವಿಂ |
ಕರದೆ ಮೈದಡಹುತ್ತೆ ತಾಂ ನಿಧಿ |
ದೊರೆತ ನಿರ್ಧನನಂತಮುಂದಾನಂದವಶನಾಗಿ ||
ತರಳರೇ ಕ್ರತುಪೂರ್ತಿಯಾದುದೆ |
ದುರುಳರಕ್ಕಸರುರ್ಕ್ಕು ಮುರಿದುದೆ |
ಹರನ ಕೃಪೆಯಿಂದುಳಿದು ಬಂದಿರೆ ಎಂದು ಬೆಸಗೊಂಡ ||೪೩||

ತಾತ ರಘುಕುಲದಾಣ್ಮರೊಳು ವಿ |
ಖ್ಯಾತಿಗೊಂಡಿಹ ನಿನ್ನ ಬಸಿರೊಳು |
ಜಾತರಾಗೆಸೆದಿರ್ಪ ಸಮಗೆ ವಿಪಕ್ಷಭಯವಿಹುದೆ ||
ಘಾತುಕರ ರಕ್ಕಸರ ಭಂಗಿಸಿ |
ಪೂತಯಾಗವ ಪೂರಣಂಗೈ |
ದೀ ತಪೋಧನರೊಡನೆ ಬಂದಿಹೆವೆಂದನಾ ರಾಮ ||೪೪||

ಅಂದು ದಶರಥಜನಕರಿರ್ವರು ||
ಮೊಂದುಮಣಿಮಯಪೀಠದೊಳು ಬಗೆ |
ದಂದು ಕುಳ್ಳಿರಲಾ ಶತಾನಂದರ್ಷಿಯೈದಿದನು ||
ಬಂದನಾಗಳೆ ಗುರುವಸಿಷ್ಠನು |
ಸಂದಿಸಿತ್ತಿದು ಸಮಯವೆಂದನು |
ಬಂಧವನು ಮುದದಿಂದೆ ಹೊಗಳಿದರಾ ಮುನೀಶ್ವರರು ||೪೫||

ಜನಕಭೂಪನೆ ಸಫಲಮಾದುದು |
ಮನದ ಬಯಕೆಯು ಪುಣ್ಯವಶದಿಂ |
ದಿನಕುಲೇಂದ್ರನ ಬಿಯಗತನವಿದು ಸುತ್ಯಮೆನಿಪುದಲಾ
ವಿನತ ನಿನಗಾಂ ಕುಲಪುರೋಹಿತ |
ನೆನಿಸಿಪರಮಕೃತಾರ್ಥನಾದೆನು |
ಮುನಿವಸಿಷ್ಠರ ಬರವು ನಮಗಾಯ್ತಖಿಳಶುಭಕರವು ||೪೬||

ಎಲೆ ನೃಪತಿ ಕೇಳಿಮ್ಮ ಪುಣ್ಯದ |
ಬೆಳಸು ತಾನೀ ರಾಘವನು ಮೇ |
ಣಿಳೆಯ ಭಾರವ ಕಳೆಯಲೈದಿಹ ಲೋಕನಾಯಕನು ||
ಕುಲಶಿರೋಮಣಿ ನಮ್ಮ ಸೀತಾ |
ಲಲನೆಯನು ಕೈವಿಡಿದು ತಾಂ ಮನೆ |
ಯಳಿಯನಾದುದು ನಿಮ್ಮ ಪಿರಿಯರ ತಪದ ಮಹಿಮೆ ಕಣಾ ||೪೭||

ಎನುತೆ ಜನಕಗೆ ಮುನಿಶತಾನಂ |
ದನು ನಿರೂಪಿಸೆ ವರದಶರಥಾ |
ವನಿಪನೊಡನೆ ವಸಿಷ್ಠನೊರೆದನು ಜನಕನನ್ವಯವ ||
ಜನಪ ನಿಮಿಯಿಂದಾಯ್ತು ವಂಶವು |
ಜನಿಸಿದಾನೃಪರೆಲ್ಲ ಸತ್ಯವ |
ನಿನಿತುಮುಳಿಯದೆ ರಾಜ್ಯವಾಳಿದರೆಂದನಾ ಮುನಿಪ ||೪೮||

ಇಂತು ಸಂಭ್ರಮದಿಂದೆ ದಿನದಾ |
ದ್ಯಂತವನು ತಾಂ ಕಳೆದು ಮರುದಿನ |
ಶಾಂತಿಮೊದಲಾದಖಿಳಮಂಗಳಕಾರ್ಯಗಳ ಗೈಸಿ ||
ಅಂತರಾತ್ಮಪ್ರೀತಿಗಾಗಿಯ |
ನಂತಗೋಭೂಮ್ಯಾದಿದಾನವ |
ನಂತರಿಸದೊಸೆದೀಯುತೆಸೆದನು ಜನಕಭೂಪತಿಯು ||೪೯||

ಬಂದೊದವಿದುದು ಲಗ್ನವಾವಿದ |
ರಿಂದು ಸಾಧಿಸಬೇಕು ಬರಹೇ |
ಳೆಂದ ಮುನಿಯನು ಪತಿಯ ಜಗುಲಿಗೆಯೆಂದು ಪೇಳಿದೊಡೆ ||
ಅಂದುಗೆಯ ದನಿ ಘುಲಿರುಘುಲಿರೆನೆ |
ಮಂದಯಾನದೆ ರಾಜಹಂಸಿಯ |
ಚಂದವನು ನಿಂದಿಸುತೆ ಬಂದಳು ಸೀತೆ ಮಂಟಪಕೆ ||೫೦||

ಎಡದ ಕರದಿಂ ನಿರಿಯ ಕುಚ್ಚನು |
ಪಿಡಿದು ಸೆರಗನು ಬಲದ ಕರದಿಂ |
ದಡಿಗಡಿಗೆ ಸಾವರಿಸುತೆಡಬಲಕಿಡದೆ ದಿಟ್ಟಿಯನು ||
ಅಡಿಯನೀಕ್ಷಿಪಳೆಸಲು ಶಿರವನು |
ಬಿಡದೆ ಬಾಗಿಸಿ ತೂಗುತೈದುವ |
ಬೆಡಗಿನಾನೆಯ ತೆರದೆ ಬಂದಳು ಸೀತೆಯೊಲಪಿಸಲಿ ||೫೧||

ಈಕೆ ಮದನಪತಾಕೆ ಜಾನಕಿ |
ನಾಕಿಜನನುತೆ ಯಾಗಭೂಮಿಯೊ |
ಳೀಕೆ ದೊರೆತಳು ಜನಕಭೂಪನ ಪೂರ್ವಸುಕೃತದಲಿ ||
ಜೋಕೆಯಿಂದಿರಿ ಸಿರವ ಬಾಗಿರಿ |
ಲೋಕನಾಯಕನರಸಿ ಬರುವಳು |
ಸಾಕು ತೊಲಗಿಮೆನುತ್ತುಮುಗ್ಘಡಿಸಿದರು ವಂದಿಗಳು ||೫೨||

ಒಂದಕುವರಿಯು ನೋಡಿಯನುನಯ |
ದಿಂದೆ ತನ್ನಯ ತೊಡೆಯನೇರಿಸಿ |
ಯಂದುಜನಕಾವನಿಪನಾ ಶ್ರೀರಾಮಚಂದ್ರಂಗೆ ||
ಇಂದುಪರಿಯಂತೀಕೆಯನು ಸಲ |
ವಿಂದೆ ಸಾಕಿದೆ ನೀಗಳಾಗೋ |
ವಿಂದನಹ ನಿನಗೊಪ್ಪಿಸಿದೆನೆಂದೆರೆದ ಧಾರೆಯನು ||೫೩||

ಒಂದುಕಡೆ ಜನರುಲಿವ ಜಯರವ |
ಮೊಂದುಕಡೆಯೊಳ್ ಸ್ವಸ್ತಿವಾಚನ |
ವೊಂದುಕಡೆ ಭೋರೆಂಬ ಮಂಗಳವಾದ್ಯದಬ್ಬರಣೆ ||
ಒಂದುಕಡೆಯೊಳ್ ವೇದಘೋಷವ |
ದೊಂದುಕಡೆ ಮಾಗಧರ ನುತಿರವ |
ಮೊಂದುಗೂಡುತೆ ಶಬ್ದಮಯಮೆನೆ ತೋರಿತಾಸ್ಥಾನ ||೫೪||

ಧರಣಿಪತಿ ಯೂರ್ವಿಳೆವೆಸರ ಬಂ |
ಧುರತನೂಜೆಯ ಲಕ್ಷ್ಮಣಂಗಿ |
ತ್ತೆರೆದು ಧಾರೆಯನಂತು ಸೋದರನಹಕುಶಧ್ವಜನ ||
ವರತನುಜೆಯರ ಭರತಶತ್ರು |
ಘ್ನರಿಗೆ ಕೊಟ್ಟೆಸಗಿದನು ಮದುವೆಯ |
ನುರುತರದ ವೈಭವದೆ ಸುರಭೂಸುರರು ನಲಿದಾಡೆ ||೪೪||

ನಾಲ್ಕನೆಯ ಸಂಧಿ ಸಂಪೂರ್ಣಂ.

ಐದನೆಯ ಸಂಧಿ

ಸೂ || ರಾಮನನುಪಮಬಲನು ಭಾರ್ಗವ |
ರಾಮಮದವನು ಮುರಿಯೆ ದಶರಥ |
ಭೂಮಿಪತಿ ನಲವಿಂದಯೋಧ್ಯಾಪುರವನೈದಿದನು ||

ಜನಕನನುಮತಿವಡೆದು ದಶರಥ |
ಜನಪನಲ್ಲಿಂ ಪಯಣಲಗುನದೊ |
ಳನುವಿನಿಂ ಪೊರಮಟ್ಟನಾ ಸಾಕೇತಪುರಕಂದು ||
ತನುಜರೊಡನೈದುತ್ತುಮಿದಿರೊ |
ಳ್ಮಿನುಗುತಿಹ ಪರಶುವನು ಪಿಡಿದಿ |
ರ್ಪನುಪಮದ ಜಮದಗ್ನಿಸುತನನು ಕಂಡನಾಭೂಪ ||೧||

ಕಾಣಲೊಡನೆಯೆ ನಡುಕಗೊಳುತುಂ |
ತ್ರಾಣಗೆಟ್ಟನು ನಿಖಿಲರಾಜ |
ಪ್ರಾಣಹಾರಕನಿವನ ಕೈಗಾನಿಂದು ಸಿಲುಕಿದೆನೆ ||
ಜಾಣತನವಿವನಲ್ಲಿ ಸಾಗದು |
ಕೇಣದಿಂ ಮತ್ಸುತರನಿಕ್ಕದೆ |
ಮಾಣನಿದಕೇಗೈವೆನೆಂದೆಳಗಳಲಿದನು ನೃಪತಿ ||೨||

ಕಂಡನಿವನನು ಮುನಿಪನಂತ್ಸದ |
ಖಂಡಪರುಶುವೊ_ಎನಲು ನೇತ್ರದೆ |
ಕೆಂಡಮುಗುಳುತೆ ನಿಂದು ನುಡಿಸಿದನಂದು ದಶರಥನ ||
ಕಂಡಕಂಡಾ ಕ್ಷತ್ರಿಯರ್ಕಳ |
ದಿಂಡುದರಿವ ಭುಜೋರುಬಲದಿಂ |
ಚಂಡನೆನಿಪೀಪರಶುರಾಮಂಗಿಂದು ಸಿಕ್ಕಿದೆಯಾ ||೩||

ಹಿಂದೆ ರಾಜನ್ಯರನು ಸವರು |
ತ್ತೊಂದುದಿನ ನಿನ್ನರಮನೆಗೆ ಬರ |
ಲಂದು ತಲೆಯನು ಮರೆಸಿಕೊಂಡ್ಯೆ ರಾಣಿವಾಸದಲಿ ||
ಇಂದುಪಾಯವನೇನಮಾಡುವೆ |
ಬಂದು ಬಿಡಿಸುವರಾರು ನಿನ್ನನು |
ಹಂದೆ ನೋಡೀಪರಶುಮಹಿಮೆಯನಿನ್ನು ತೋರಿಪೆನು ||೪||

ತರಳರಿವರನು ಕೂಡಿ ಜನಕನ |
ಪುರವನೈದಿ ಮದೀಯಗುರುಶಂ |
ಕರನಧನುವನು ಮುರಿಯಿಸಿದೆ ನಾನೆಂಬಗರ್ವದಲಿ |
ಸರಿಯೆನಿಪ್ಪವರಾರುಮೆನಗೀ |
ಧರಣಿಯೊಳಗಿಲ್ಲೆಂದು ಬಗೆದ್ಯೆ |
ಪರಶುವಿಲ್ಲವೆ ಜಾಮದಗ್ನ್ಯನ ಕರದೆ ನೀನರಿಯಾ ||೫||

ಅರಸುಮಕ್ಕಳ ಸಿರವನರಿಯುತೆ |
ಪರಿವರಕುತದೆ ಪಿತರರಿಗೆ ನೆರೆ |
ತೆರಪಣಂ ಗೈದುರುಕಪಾಲವೆ ನಾಕಮಾರ್ಗಕ್ಕೆ ||
ಮೆರೆವ ಸೋಪಾನವನು ರಚಿಸಿದ |
ಪರಶುರಾಮನ ಕರಕೆ ಸಿಲುಕಿರ |
ಲಿರವು ನಿಮಗಿನ್ನೆಂತು ಲಭಿಪುದು ಕಟ್ಟೆರಕಟೆಂದ ||೬||

ಕೇಳುತಿರ್ದನು ಮುನಿಯವಚನವ |
ನೇಳಿಸದೆ ಗಂಭೀರತನದಿಂ |
ಪೇಳಿ ನೋಡುವೆ ಬುದ್ಧಿವಾದವನೆಂದು ರಾಘವನು ||
ಕೇಳುನುಡಿಗಳನೇಕೆ ನುಡಿವಿರಿ |
ಚಾಳಿಯೇನಿದು ವಿಪ್ರಜಾತಿಗೆ |
ಮೇಲೆ ವೃದ್ಧರು ಹೇಳಲಮ್ಮೆನು ಬಾಲನಾನೆಂದ ||೭||

ಮುನಿಯೆ ಬೆಸಸುವುದೆನಗೆ ತವಿಶ್ಮಾ |
ಘನಪದಾಂಬುಜವಿಲ್ಲಗೈತಂ |
ದನುವನಿನಿನಿಸುಂ ಮರೆಯುವೂಂಜದೆ ಶಾಂತಿಯನು ವಹಿಸಿ ||
ಇನಕುಲೋದ್ಭವರರ್ಥಿವಾಂಛಿತ |
ಮೆನಿತು ಘನವೂದೊಡೆಯುಮೆಸಗುವ |
ರನಿಶಮೆಂಬೀನುಡಿಗೆ ಲೋಪವೆ ನಿಮ್ಮ ವಿಷಯದಲಿ ||೮||

ಮನದಭೀಷ್ಟವ ಪಡೆದು ತೆರಳದೆ |
ಜನಕನನು ಜಗದೀಡ್ಯಗುಣನನು |
ಮನದ ಮೈಲಿಗೆಯಿಂದೆ ನಿಂದಿಪುದುಚಿತವೇ ನಿಮಗೆ ||
ದಿನಪವಂಶದ ಸಾರ್ವಭೌಮರು |
ಬಿನುಗುಪಾರ್ವನದೊರ್ವನಿದಿರಿಸೆ |
ಘನಪರಾಕ್ರಮಿಯೆನುತುಮುವನೊಡನೆಂತು ಸೆಣಸುವರು ||೯||

ಪೋಗಲೊಳ್ಳಿತು ನೋಳ್ಪೆವೆನುತುಂ |
ತೂಗಿ ಬಿಡಲೊಂದಂಬನದು ಬಿರಿ |
ಸಾಗಿ ನಿಮ್ಮೊಳು ತಪ್ಪನೆಸಗಲು ಕೀರ್ತಿಯೇನೆಮಗೆ ||
ತಾಗುವುದು ತಾಂ ಬ್ರಹ್ಮಹತ್ಯೆಯ |
ರೋಗವೆಮ್ಮನು ಬಿಡದೆ ನೆಲದೊಳು |
ಕೂಗಿಗಾಕರವಹೆವು ದುಷ್ಟರು ರವಿಕುಲಜರೆಂದು ||೧೦||

ಇದರ ಮರ್ಮವ ನರಿಯದಕಟಾ |
ಸದಮಲಾನ್ವಯತಿಲಕನನು ಪೊ |
ಳ್ಳಿದೆಯನೆನುತಿಂದಣಕವಾಡಿದ ನಿಮ್ಮ ನಾಲಗೆಯ ||
ತುದಿಯನರಿಯಲು ಮನವು ತವಕಿಪು |
ದಿದನು ಮಾಹ್ಮಾಣ್ ಬ್ರಹ್ಮಹತ್ಯಾ |
ಸ್ಪದತೆ ಲೇಸಲ್ಲೆಂದು ತಡೆವುದು ಶಾಸ್ತ್ರದೋಕ್ಕಣೆಯು ||೧೧||

ಅದರಿನಿಲ್ಲಿರದೀಗ ಬೇಗನೆ |
ಚದರಿಪೋಗೆಂದೆನಲು ಭಾರ್ಗವ |
ನುದುರಿಸುತೆ ಕಿಡಿಗಳನು ನೇತ್ರದೊಳಿಂತು ಪೇಳಿದನು ||
ಸದರವಾದನೆ ಬಾಲ ನಿನಗಾ |
ವಿಧಿಯನಂಜಿಪ ಪರಶುರಾಮನು |
ಮೆದೆಯ ಮುಟ್ಟೇನಿಮ್ಮ ತಂದೆಯದೆಂತಿಹುದು ನೋಡ ||೧೨||

ಮಂಜರನ ಮರಿಗಕಟ ಸರಸವೆ |
ಕುಂಜರೇಂದ್ರನೊಳಾಡಲೇಂ ಮೃ |
ತ್ಯುಂಜಯನ ಶಿಷ್ಯಂಗೆ ತನಗೆಲೆ ಸಾಟಿಯೇ ನೀನು ||
ನಂಜನುಂಬರೆ ಪಸಿವಿಗರಿತವ ||
ರಂಜದಬಲಾವಧೆಗೆ ತಾಟಕೆ |
ಯಂ ಜಯಿಸಿದಬ್ಬರದ ಕೊಬ್ಬಂದುಬ್ಬಿ ನುಡಿದಪೆಯ ||೧೩||

ಪರೆಯತೆರದಿಂದೊಳಗೆ ಪೊಳ್ಳಹ |
ಹರನ ಧನುವನು ಮುರಿದೆನೆಂಬಾ |
ಗರುವಗರಮೆಡೆಗೊಂಡು ಒರುಚುವೆ ಯೆಮ್ಮೊಳಿಂತಕಟಾ ||
ತರಣಿವಂಶಜನೆಂದು ಬೆರೆತಿಹೆ |
ಧರಣಿಯಮರರನಣಕವಾಡುವೆ |
ವರವಸಿಷ್ಠನ ವರ್ಣವಾವುದು ಗುರುವಲ್ಲೈ ನಿನಗೆ ||೧೪||

ಎನುತೆ ನುಡಿಯಲು ಪರಶುರಾಮನು |
ದಿನಪಕುಲಮಣಿಯಿಂತು ನುಡಿದನು |
ಮುನಿಯೆ ನಿಮಗೇಕವರ ಗೊಡವೆಯು ದೈವವವರೆಮಗೆ ||
ತನುಮನಂಗಳೊಳೆಮ್ಮ ಕುಶಲವ |
ನನುದಿನದಿನರ್ಥಿಸುತೆ ಬೊಮ್ಮವ |
ಮನದೊಳೆಡೆಬಿಡದಿಹರ ಪೂಜಿಪುದೆಮ್ಮ ಕುಲಧರ್ಮ ||೧೫||

ಪದುಳಮಿರದನವರತಪಾನೇ |
ಚದುರನಾನೇ ಶ್ರೇಷ್ಠನೆಂಬಾ |
ಮದದೆ ನಿಜಕುಲಜಾತಿಧರ್ಮವ ಬಿಸುಟು ದೂರದಲಿ ||
ಬುಧರ ಚರ್ಯೆಯು ಇಲ್ಲದಪರಸು |
ಸದೆದು ಬುದ್ಧಿಯನೊರೆವುದೆಮ್ಮಯ |
ಸದಮಲಾನ್ವಯಧರ್ಮವಾಬಿದನುಳಿಯಲೆಂತಹುದು ||೧೬||

ಶಾಪಕೀಡಾಗುತ್ತೆ ವನದಲಿ |
ತಾಪಸರನುರೆ ವಧಿಸುತಿರ್ದಾ |
ಪಾಪೆತಾಟಕೆಯೆಂಬಳನು ನಾನಂತು ಮಡಿಪಿದೆನು ||
ಚಾಪಲದೆ ನಿನ್ನವೊಲು ಮಾತೆಯ |
ನಾಪರಿಯಿನುರೆ ಮುದುಪರಸು ಕಡು |
ಗೋಪದಿಂ ಪಸುಳೆಗಳನಾನೇಂ ಕೊಂದಿಹೆನೆ ಮುನಿಯೆ ||೧೭||

ಕಡುಗಿಡುಕತನದಿಂದೆ ಧರ್ಮ |
ಕ್ಕೆಡರನೆಸಗುವ ಖಳರ ತರಿವುದು |
ಪೊಡವಿಯಾಣ್ಮರ ಕರದ ಕಂಕಣದತುಳಮರ್ಮವಿದು ||
ಪಿಡಿದಮಾತ್ರದೆ ಪರಶುವನು ನೀಂ |
ನಡೆಸಬಲ್ಲೈ ಕ್ಷಾತ್ರಧರ್ಮವ |
ಬಡಿಗೆಗಡಿಯುವ ಕೊಡಲಿಯಾದುದು ಸೇರಿ ನಿನ್ನನದು ||೧೮||

ಒಳ್ಳಿತಾಗಲಿ ಹರನ ಧನುವದು |
ಜಳ್ಳು ಮುರಿದೆನು ಹೋಗಲದು ಬಲ |
ವುಳ್ಳ ಪಂತವನೊಂದನೊಡ್ಡುತ್ತೈನ್ನ ಪರಿಕಿಸನೆ ||
ಬಲ್ಲಿದನು ನೀನಾದೊಡೀಗೀ |
ಬಿಲ್ಲಿಗೇರಿಸಿ ಹೆದೆಯನಂಬನು |
ಬುಲ್ಲವಿಸಿ ಪೂಡೆನುತೆ ವೈಷ್ಣವಚಾಪವನು ನೀಡೆ ||೧೯||

ಲೀಲೆಯಿಂದದನಾಂತು ಕರದೊಳು |
ಮೇಲೆ ಸೇರಿಸಿ ಹೆದೆಯ ಹೂಡುತೆ |
ಕೋಲನೊರೆದನು ತೋರು ಭಾರ್ಗವ ಗುರಿಯನಿದಕೆಂದು ||
ಜೋಳುಕೊಂಡುದು ಮುನಿಯ ಧೈರ್ಯವು |
ತಾಳಿದನು ವಿಸ್ಮಯವ ಕಂಡನು |
ನೀಲಮೇಘಶ್ಯಾಮನವತಾರವನು ಬಾಲನಲಿ ||೨೦||

ಈತ ಸಾಕ್ಷಾತ್ಪರಮಪುರುಷನು |
ಭೂತಳದೆ ನರನಾಗಿ ದನುಜ |
ವ್ರಾತವನು ನಿರ್ಶೇಷಗೈಯಲು ರಾಮನಾಮದಲಿ ||
ಪೂತವಾಗಿಹ ರಘುಕುಲದೆ ವಿ |
ಖ್ಯಾತರಾಮಾಯಣವ ಬೆಳಸಲು |
ಜಾತನಾಗಿಪೆದಪನು ನಮಗಿನ್ನಾಯ್ತು ಪರಿಣಾಮು ||೨೧||

ಇಂತು ಚಿಂತಿಸಿ ಮನದೆ ಮುನಿಪತಿ |
ಯಂತರಾತ್ಮನನೊಲಿದು ನೋಡುತ |
ನಂತಹರ್ಷಿತನಾಗಿ ನುಡಿದನು ದೇವ ಚಿತ್ತೈಸು ||
ಶಾಂತಮಾದುದು ಕೋಪಶಿಖಿ ತ |
ನ್ನಂತರಂಗದೊಳುರುವಿರಕ್ತಿಯು |
ದಂತೊ ಪರ್ಚಿತು ನಿನ್ನ ದರ್ಶನಮಾತ್ರದಿಂದೆನಗೆ ||೨೨||

ಆದರಿಸೊಲಿದೀಗೆನ್ನ ಬೀಳ್ಕೊಡು |
ಬದರಿಕಾಶ್ರಮದತ್ತ ನಡೆವೆನು |
ಸದಮಲಾತ್ಮಧ್ಯಾನದಲಿ ಕಾಲವನು ಕಳೆಯುವೆನು ||
ಹೆದೆಯೊಳಳವಡಿಸಿರ್ಪ ಬಾಣದಿ |
ನೊದೆದು ಸಗ್ಗದ ಮೆಟ್ಟಿಲನು ಕಳೆ |
ಮುದದೆ ನೀನೆಂದೆನುತು ಮಾಶೀರ್ವದಿಸಿ ಪೊರಮಟ್ಟ ||೨೩||

ಉಬ್ಬಿದನು ದಶರಥನು ಮಗನನು |
ತಬ್ಬಿ ಮುಂಡಾಡಿದನು ಲೋಕದೆ |
ಹಬ್ಬವಾದುದು ಕಂದ ಬಾಹುಜಕುಲಕೆ ನಿನ್ನಿಂದ ||
ಸಬ್ಬರೀಜಮದಗ್ನಿ ಸುತನಿಂ |
ಮಬ್ಬು ಮುಸುಕಿದತೆರದೊಳಿರ್ದರು |
ದೆಬ್ಬೆಯವನನು ಸಲಹಿದೈ ವಸುಧಾಧಿಪತಿಗಳನು ||೨೪||

ಪೊಗಳುತಿಂತವನಿಪನು ತನಯನ |
ನೊಗುಮಿಗೆಯ ಹರ್ಷದಿನಯೋಧ್ಯಾ |
ನಗರಿಯನು ಸೇರಿದನು ಕಂಡುದು ಬಂದು ನಿಖಿಲಜನ ||
ಮುಗಿದು ಕರಗಳ ಶಿರವ ಬಾಗಿಸಿ |
ರಘುವರನ ಚರಿತವನು ಕೇಳುತೆ |
ಬಗೆಯೊಳಾನಂದಿಸುತುಮಿರ್ದರು ಬಗೆಯದಿತರವನು ||೨೫||

ವಿದಿತಘನಕರ್ಣಾಟರಾಜ್ಯದ |
ಪದಕೊಡೆಯನಹ ಕೃಷ್ಣಭೂಪನ |
ಪದದ ಸೇವಕನೆನಿಪ ಚಿಕಲಿಂಗಾಖ್ಯಪಾರ್ಥಿವನು ||
ಪದೆದು ನುಡಿದನು ಬಾಲಕಾಂಡವ |
ನಿದನು ಸುಲಲಿತಭಾಮಿನೀಷ |
ಟ್ಪದಿಯೊಳಿದು ರಾಜಿಸುಗೆ ಸುಜನರ್ಗೊಲವನೊಡರಿಸುತೆ ||೨೬||

ಬಾಲಕಾಂಡಂ ಸಮಾಪ್ತಂ.

ಅಯೋಧ್ಯಾಕಾಂಡವು.

ಸೂಚನೆ || ಅರಸಿಯಾಗಿಹಕೈಕೆ ರಾಮಂ |
ಗಿರದೆ ವನವಾಸವನು ಭರತಂ |
ಗುರುತರದ ರಾಜ್ಯವನು ಕೇಳಿದಳೊಲಿದು **ದಶರಥನ** ||

ಧರೆಯ ಮೇಲಣ ಸಕಲಸಂಪದ |
ಕೆರೆಯನೆನಿಸುತೆ ಚಾರುಯೌವನ |
ಭರದ ಸುತರಭ್ಯುದಯಸಾಮ್ರಾಜ್ಯಾಭಿಷೇಚನದ ||
ನಿರುಪಮಾನಂದಾನುಭವದಿಂ |
ಮೆರೆಯುತಿಹ ದಶರಥಮಹೀಪತಿ |
ಯರಸುತನದಾಡಳಿತಮೆಳೆದುದು ನಿಖಿಲಜನಮನವ ||೧||

ಒಂದುದಿನದೆ ಯುಧಾಜಿತನು ಮನ |
ದಂದು ನಿಜಸೋದರಿಯ ತನುಜನ |
ನಂದು ಭರತನ ನೋಡಲೆಂದೈತಂದನೊಲವಿನೊಳು ||
ಬಂದಕೇಕಯರಾಜಸುತನನು |
ಮಂದಿರದೊಳುಪಚರಿಸೆ ಭೂಪತಿ |
ಕುಂದದೊಲವಿಂದವನು ಕಳೆಯುತೆ ಕೆಲದಿನವನಲ್ಲಿ ||೨||

ಭರತಶತ್ರುಘ್ನರಿಗೆ ಚಾಪದ |
ಪರಮವಿದ್ಯೆಯನರಿಪಲೋಸುಗ |
ವರಗಿರಿವ್ರಜಪುರಕೆ ಕಳುಹೆಂದರಸನನು ಬೇಡಿ ||
ತರಳರಿರ್ವರನೊಲಿದು ತನ್ನೊಡ |
ನಿರದೆ ಕರೆದೊಯ್ಯಲ್ಕೆ ಬಳಿಕಿಳೆ |
ಯರಸ ತನ್ನಯ ಮನದೊಳಿಂತಾಲೋಚಿಸಿದನಾಗ ||೩||

ವರುಷ ಹನ್ನೆರಡಾಯ್ತು ಮಕ್ಕಳ |
ಪರಿಣಯೋತ್ಸವಮಾಗಿ ತನಗಿ |
ನ್ನರಸುಗೈವ ವಯಸ್ಸು ಜಾರಿತು ಶಕ್ತಿಯುಡುಗಿದುದು ||
ಹರೆಯದಾ ನಿಜತನುಜರೊಳಗಾ |
ರರುಹನೀ ಸಾಮ್ರಾಜ್ಯಲಕ್ಷ್ಮೀ |
ಕರಪರಿಗ್ರಹಕವನೊಳಿಡುವೆನು ಧರೆಯ ಭಾರವನು ||೪||

ಮಕ್ಕಳೊಳು ಮಾಣಿಕವು ರಾಮನು ।
ಮಿಕ್ಕಶೂರನು ಜನಮನೋಹರಾ ।
ಗಕ್ಕೆ ಪಾತ್ರನು ಮೇಣು ಹಿರಿಯನು ನಾಲ್ವರಣುಗರೊಳು ॥
ತಕ್ಕನಿವ ಯುವರಾಜಪದವಿಗೆ ।
ಸಿಕ್ಕವಮಿದೆಂದರಿದು ಮನದೊಳ ।
ಗಕ್ಕರಿಂದಾ ಪದವಿಯಿತ್ತನು ರಾಮಭದ್ರಂಗೆ ॥೫॥

ರಾಮನಾ ಯುವರಾಜಪಟ್ಟವ ।
ನೇಮದಿಂ ಕೈಕೊಳಲು ನೆಲದೊಳು ।
ತಾಮಸದ ಪೆಸರಡಗಿತೆಲ್ಲಿಯುಮಖಿಳಮಾನವರಾ ॥
ಪ್ರೇಮವಿಮ್ಮಡಿಸಿದುದು ಸುಜನರು ।
ಕಾಮಿತಾರ್ಥವ ಪಡೆದು ತಣಿದರು ।
ರಾಮರಾಜ್ಯಕ್ಕೆಣೆಯದೆಲ್ಲಿಹುದೆಂದುದಖಿಳಜನ ॥೬॥

ಎಲ್ಲಿ ನೋಡಿದೊಡಲ್ಲಿ ತೃಣಮಯ ।
ಮೆಲ್ಲಿ ನೋಡಿದೊಡಲಿ ಜಲಮಯ ।
ಮೆಲ್ಲಿ ಬಯಸಿದೊಡಲ್ಲಿ ಫಲಮಯವಾದಭೂರುಹವು ॥
ಖುಲ್ಲರುಪಟಳವಿಲ್ಲವೆಲ್ಲುಂ ।
ಬಲ್ಲಿದರು ಬಡವರನು ಬಾಧಿಪ ।
ಸೊಲ್ಲಡಗಿತಾರಾಮಚಂದ್ರನ ಯೌವರಾಜ್ಯದೊಳು ॥೭॥

ಜಾರಚೋರರ ಸುಳಿವು ನಿಂದುದು ।
ಜಾರಿಪೋದುದು ಕಪಟವೃತ್ತಿಯು ।
ದೂರದಲ್ಲಿಯೆ ನಿಂದುವಾ ಪರನಿಂದೆ ವುಸಿವಾತು ॥
ಬಾರಿಬಾರಿಗು ಮಿರದೆ ಪೀಡಿಪ ।
ಮಾರಿಮುಸಣಿಗಳುರುಬೆ ತಗ್ಗಿತು ।
ಸಾರವೀಸಂಸಾರವೆನಿಸಿತು ರಘುಜನಾಜ್ಞೆಯೊಳು ॥೮॥

ನೋಡಿದನು ಭೂಪತಿಯು ಕುವರನ ।
ನಾಡಿಗಚ್ಚರಿಯೆನಿಪ ನಡೆಗಳ ।
ಮಾಡಿದನು ನಿಶ್ಚಯವನಿವನೊಳು ರಾಜ್ಯಭಾರವನು ॥
ರೂಢಿವೆಚ್ಚಲು ವಹಿಸಿ ಕಳೆವೆನು ।
ನಾಡೆ ಕಾಲವನಿಂದುಮಾಳಿಯ ।
ರೂಢಪದವನು ಪಿಡಿದು ವಾನಪ್ರಸ್ಥವೃತ್ತಿಯೊಳು ॥೯॥

ಎನುತೆ ನರಪತಿ ನೆರಹಿ ಸಭೆಯನು |
ವನಜಭವಸುತಮುಖ್ಯರಿಗೆ ನಿಜ |
ಮನದ ಸಂಕಲ್ಪವನು ಪೇಳಿದನುಚಿತವಚನದೊಳು ||
ಎನಗೆ ಬಂದಡಸಿದುದು ಮುಪ್ಪಿದು |
ತನುಬಲವು ಕುಂದುತ್ತೆ ಬಂದುದು |
ಮನುಕುಲೇಂದ್ರರ ಧರ್ಮವನು ನಿಮಗೊರೆವುದೇನಿಹುದು ||೧೦||

ಬಾಲತನವನು ವಿದ್ಯೆಯಿಂ ಜನ |
ಪಾಲನೆಯಿನಾ ಯೌವನವನುರು |
ಶೈಲಜೇಶನ ಸೇವೆಯಿಂ ವಾರ್ಧಕವನುರೆ ಕಳೆದು ||
ಮೇಲೆ ತಾನಸುವಿಡುವನಮಯದೆ |
ಮೇಲುಮುಕುತಿಯ ಸೂರೆಗೊಳುವುದೆ |
ಶೀಲವೆಮ್ಮಯ ವಂಶಭವರಿಗೆ ಯೋಗಮಾರ್ಗದೊಳು ||೧೧||

ನಿಮ್ಮ ನಾನಿದನೊಂದನರ್ಥಿಪೆ |
ನೊಮ್ಮನದೆ ಗುಣಿರಾಮಚಂದ್ರನ |
ಸೊಮ್ಮು ನಮ್ಮಯ ರಾಜ್ಯವಿದು ಮೇಣ್ಮಕ್ಕಳೊಳು ಪಿರಿಯಂ ||
ಸಮ್ಮತಿಯ ನೀವಿತ್ತೊಡೀಗಳೆ |
ನೆಮ್ಮದಿಯನಾನುತ್ತುಮಾತಂ |
ಗುಮ್ಮಹದೆ ಪಟ್ಟವನು ಕಟ್ಟುವೆನೆಂದನವನೀಶ ||೧೨||

ಕೇಳಿದೊಡನೆಯೆ ಭೂಪನಗಲಿಕೆ |
ಗಾಲಿನೀರ್ದುಂಬಿದರು ಸಭಿಕರು |
ಕಾಲವಾರನು ಕೀಳುಗೈಯದೆನುತ್ತೆ ಮರುಗಿದರು ||
ಮೇಲೆ ರಾಮಂನಿಗಪ್ಪುದಿಳೆಯೆನೆ |
ತಾಳಿದರು ಹರುಷವನು ಸದ್ಗುಣ |
ಶಾಲಿಗಾತಗೆ ರಾಜ್ಯವೀವುದು ನಮಗೆ ಸಂಮತವು ||೧೩||

ದೇವ ನಿನ್ನಾಜ್ಞೆಯನು ಶಿರದೊಳ |
ಗಾವು ಧರಿಸುತೆ ಸಿದ್ಧರಪ್ಪೆವ |
ದಾವಕಾಲದೊಳೆಂಬುದನು ಬೆಸಸುವುದು ನೀನೆನಲು ||
ಕೋವಿದರೆ ಸುಕುಮಾರರಾಮಂ |
ಗೀವೆನಾಂ ರಾಜ್ಯವನು ನಾಳೆಯೆ |
ನೀವು ಸಕಲವ ಸಜ್ಜುಗೊಳಿಸುವುದೆಂದನಾ ನೃಪತಿ ||೧೪||

ಕೇರಿಕೇರಿಯೊಳನುಪಮಧ್ವಜ |
ತೋರಣಂಗಳ ಸಾಲು ಚಿತ್ರಾ |
ಕಾರಮೆನಿಪಾ ಮೇಲುಕಟ್ಟುಗಳೆಸೆದುವಲ್ಲಲ್ಲಿ ||
ತೋರಮುತ್ತಿನ ಗುದಿಗಳೊಪ್ಪಿರೆ |
ಚಾರುಸಿಂಹಾಸನದ ಬಳಿಯೊಳು |
ಭೂರಮೆಯು ಶ್ರೀರಾಮಚಂದ್ರನ ಸೇರಲೆಳಸಿದಳು ||೧೫||

*

ಅರಸನನುಮತದಿಂದೆ ತೆರಳ್ದಾ |
ಗುರುವಸಿಷ್ಠನು ರಾಮಭದ್ರಂ |
ಗರುಹಲಾತನುಮಾರಸೆಯದಿನ ಮಜ್ಜನದಬಳಿಕ ||
ಮೆರೆವ ಮಣಿಮಯಭೂಷಣವನುರೆ |
ಧರಿಸಿ ಶುಭತಾರೆಯೊಳು ನಿಜಸತಿ |
ವೆರಸಿ ಮುದದಿಂ ಪಟ್ಟದಾನೆಯನೇರಿ ತಳರಿದನು ||೧೬||

ಪೇಳಲೇನದ ಮೊರೆವ ವಾದ್ಯಾವಿ |
ಶಾಲಸಿನದಕೆ ಜಗವು ಕಿವುಡಿಡೆ |
ಮೇಲೆಮೇಲೈತಪ್ಪ ಜನಗಳ ಭರಕೆ ನೆಲನದಿರೆ ||
ಬಾಲೆಯರು ಬೆಳಗುತಿರೆ ತಂದು ನಿ |
ವಾಳಿಯನು ಪೊಂದಟ್ಟೆಗಳೊಳಾ |
ನೀಲಮೇಘಶ್ಯಾಮನೈತರುತಿರ್ದನರಮನೆಗೆ ||೧೭||

ತಿಳಿದಳೀಯುತ್ಸವವ ಕೈಕೆಯ |
ಬಳಿಯ ಮಂಥರೆಯೆಂಬ ದಾಸಿಯು |
ಮುಳಿದಸೂಯೆಯನಾಂತು ಮನದೊಳು ಪಿಸುಣೆ ಕುದಿಯುತ್ತೆ ||
ಗಳಿಲನೊಡತಿಯ ಸನಿಹಕೈತಂ |
ದಳಿದುಪೋದುದು ನಿಮ್ಮ ವೈಭವ |
ಮಿಳೆಯೊಳಾವಿನ್ನಾರನೈದುವೆವೆನುತೆ ಹಲುಬಿದಳು ||೧೮||

ಏನಿದೇನೆಲೆ ತನಗಪಾಯವ |
ದೇನು ಬೇಗದೆ ವಿವರಿಸೆನುತಾ |
ಮಾನವೇಶನ ಮಡದಿ ತವಕದೆ ಕೇಳಲದಕವಳು ||
ಮಾನನಿಧಿ ಕೇಳ್ತಾಯೆ ನಿಮಗಹ |
ಹಾನಿಯನು ನಾನೇನನುಸಿರಲಿ |
ಸಾನುರಾಗದೆ ರಾಜ್ಯವೀವನು ನೃಪತಿ ರಾಮಂಗೆ ||೧೯||

ರಾಮನರಸಾಗಲ್ಕೆ ಬಳಿಕು |
ದ್ದಾಮನಹ ನಿನ್ನಯ ಕುಮಾರನು |
ಗೋಮಹಿಷಿಗಳ ಕಾವ ಗೋಪಾಲಕನು ತಾನಹನು ||
ಕಾಮಿನೀಜನಕೆಲ್ಲ ಸುಲಭವೆ |
ಭೂಮಿಯಾಳುವ ಸುತರ ಪಡೆವುದು |
ಭಾಮಿನೀಮಣಿ ಕೋಸಲಾತ್ಮಜೆಯೇನನೋಂತಿಹಳೋ ||೨೦||

ಎನಲು ಮಂಥರೆ ಕೇಳಿ ಕೇಕಯ |
ತನುಜೆ ಕನಲಿಕೆಯಾಂತು ನುಡಿದಳು |
ಮನುಕುಲಾಗ್ರಣಿ ರಾಮಭದ್ರಂಗಾಗೆ ರಾಜ್ಯವಿದು ||
ನಿನಗೆ ಸಂಕಟವೇನು ಕಿಲುಬಿನ |
ಮನದ ತೊತ್ತೇ ಸಾಕುಸಾಕೀ |
ಬಿನುಗುವಾತಿನ ಬವಣೆ ಕಲಹವನೆಮ್ಮೊಳಿಕ್ಕುವೆಯ ||೨೧||

ತನ್ನಜನನಿಯು ಬೇರೆ ನಾಂ ಬೇ |
ರೆನ್ನುವಾ ಕವಡಿಲ್ಲ ಮನದೊಳ |
ಗೆನ್ನ ಮಗನೊಳು ಸಲವು ಬಲ್ಲಿತು ಜಾನಕೀಪತಿಗೆ ||
ಸನ್ನುತಾಂಗಿಯು ಕೌಸಲೆಯು ತಾಂ |
ಭಿನ್ನಭೇದವನೆನ್ನೊಳೆಣಿಸಳು |
ಕುನ್ನಿ ನಿನಗೇಕೆಮ್ಮ ಚಿಂತೆಯು ಸುಮ್ಮನಿಹುದೆನಲು ||೨೨||

ಅಕ್ಕಟೇನೀರೀತಿಯಾಯಿ |
ತ್ತಕ್ಕರಿಂ ನಾನ್ಯೈದಿ ಪೇಳ್ವುದು |
ಟಕ್ಕುಟೌಳಿಗೆ ಕಾಲವಿದನಾನರಿಯದಾದೆನಲಾ ||
ಇಕ್ಕಿದೆನು ನಾಂ ನಿಮಗೆ ವಿಷವನು |
ಸಕ್ಕರೆಯನುಣಿಸವರ ನುಡಿ ಸವಿ |
ಯಕ್ಕೆ ನನ್ನಯ ನುಡಿಯ ಮನ್ನಿಪುದೆನುತೆ ತಿರುಗಿದಳು ||೨೩||

ಕರೆಕರೆವುದಾ ಪಾಪೆಯನು ನ |
ಮ್ಮರಸುತನವನು ಸರಕುಗೈವಳೆ |
ಪಿರಿದುಸಲುಗೆಯು ನಮ್ಮೊಳಿವಳಿಗೆ ಮೇಣು ಬಹುವೃದ್ಧೆ ||
ತಿರುಗಿಪುದು ನೀವೆನಲು ದೂತಿಯ |
ರಿರವೆ ತಡೆದೊಡಗೊಂಡು ಕರೆತರೆ |
ಕರುಬುಗಾರ್ತಿಯನೇಕೆ ಬರಿಸಿದಿರೆಂದಳಾಕುಬುಜೆ ||೨೪||

ಎಲೆಗೆಮಂಥರೆ ನಿನ್ನ ನುಡಿಗಳು |
ಕಲಹಬೀಜಗಳಲ್ಲವೇನೆನೆ |
ಕಲಹಕಂಜಿದವರ್ಗೆ ಸುಖಮೊದವುವುದೆ ಪೇಳೊಡತಿ ||
ಇಳೆಯು ರಾಮಂಗಾಗೆ ಕೌಸಲೆ |
ತಳಕೆ ತುಳಿಯಳೆ ನಿಮ್ಮವೊದಲಿನ |
ಸಲಿಗೆ ಬರ್ಪುದೆ ರಾಣಿವಾಸದ ಕಾರ್ಯಭಾರದೊಳು ||೨೫||

ಸರಿಬರಿಯ ಪದವಿಯನು ತಾಳುತೆ |
ಧರಣಿಪನ ಮನದಣ್ಪನಾಳುತೆ |
ಪಿರಿಯಸುಖದಿಂ ಬೆಳೆದಿರೌ ನೀವಿಲ್ಲಿಪರಿಯಂತ ||
ಅರಸಮಾತೆಯೆನಿಪ್ಪಮಿಗಿಲಹ |
ಗರವಿಡಿಯೆ ಕೌಸಲ್ಯೆ ನಿಮ್ಮನು |
ತರಗೆಲೆಗೆ ಕಡೆಯಾಗಿ ಕಾಣದೆ ಬಿಡುವಳೇ ತಾಯೆ ||೨೬||

ನಿಮ್ಮ ಹವಣೀತೆರನೊಳಾಗಲು |
ನಮ್ಮ ಪಾಡನು ಪೇಳಲಳವೇ |
ಕೆಮ್ಮುಕೇಕರಕಿನಿಸುಮೂದಲೆಗಳನು ತೋರಿಸುತೆ ||
ಸುಮ್ಮನೆಮ್ಮನು ತಿರುಗಲೀವರೆ |
ಹಮ್ಮುಗಾತಿಯರವರ ಕಡೆಯವ |
ರಮ್ಮೆವಿನ್ನಿಲ್ಲಿರಲು ದೇವಿಯೆ ನಮ್ಮ ಕಳುಹುವುದು ||೨೭||

ಧರಣಿಪಾಲನ ಮನವ ತಿದ್ದುತೆ |
ಭರತಶತ್ರುಘ್ನರನು ದೇಶಾಂ |
ತರಕೆ ದಾಟಿಸಿ ವಿಹಿತವಿದ್ಯಾಭ್ಯಾಸಕೆಂದೆನುತೆ ||
ಭರದಿನೆಲ್ಲವ ಸಜ್ಜುಗೊಳಿಸುತೆ |
ಕುರುಹುದೋರದತೆರದೆ ತನಯಂ |
ಗರಸುಪಟ್ಟವ ಜಗಿಸುತಿಹಳಾಚದುರೆ ಕೌಸಲ್ಯೆ ||೨೮||

ಜನನಿಯಲ್ಲವೆ ನೀವು ಮೆಚ್ಚಿನ |
ತನಯನಲ್ಲಾ ರಾಮನವನೀ |
ದಿನದೆ ತನಗಹ ವೈಭವವನುಸಿರಿದನೆ ನಿಮ್ಮೊಡನೆ ||
ಘನಮೆನಗೆ ನಿನ್ನಲ್ಲಿ ಕೂರ್ಪಿಂ |
ದೆನುತೆ ನುಡಿಯುತ್ತಿರ್ದ ಸೋದರಿ |
ಯನುವು ಚಿತ್ತಕೆ ಬಂದುದೇ ಮೇಣಿನ್ನು ಸಂಶಯವೆ ||೨೯||

ಬರೆಯಿಸೋಲೆಯು ಸೀಮೆಸೀಮೆಯ |
ಧರಣಿಪಾಲರ ನೆರಹಿ ಮೆಲ್ಲನೆ |
ವರಮಹೋತ್ಸವವಿಂದಸು ಬೆಳಸುವರೂಢಿ ರಘುಕುಲದೆ ||
ತೊರೆದು ಘನವೀಮಾರ್ಗವನು ತ |
ನ್ನರಮನೆಯ ಮಕ್ಕಳುಮನುಳಿದೀ |
ತುರಿಪದಿಂದಾಗಿಸುವ ವಿಭವವ ದೇವಿಯವಧರಿಸು ||೩೦||

ಪೇಳಲೀಕಥೆ ಮುಗಿವುದೇನೌ |
ಕೇಳುತಿದೆ ಭೇರೀನಿನಾದವ |
ದೇಳಿಮೊಯ್ಯನೆ ತಕ್ಕುಪಾಯವನೆಸಗಿಮಿನ್ನೆಸಲು ||
ಆಳಿಯಾ ಚತುರೋಕ್ತಿಗಾಸತಿ |
ಮೌಳಿದೂಗುತೆ ಮನವ ಸೋತಳು |
ಜೋಲುಬೀಳದ ಕಿವಿಗಳುಂಟೇ ಪಿಸುಣೆಗರ ನುಡಿಗೆ ||೩೧||

ಎಲವೊ ಮಂಥರೆ ನಿನ್ನ ನುಡಿಗಳು |
ನಲವಬಯಸುವುವೆನ್ನ ಮಗನಿಗೆ |
ಹಲವು ಕೆಳದಿಯರಿದ್ದು ಫಲವೇನೆನ್ನ ನಿಳಯದೊಳು ||
ಒಲುಮೆಮಾತುಗಳಾಡುತೆಮ್ಮನು |
ಸುಲಿದು ತಿಂಬವರಲ್ಲದೀಪರಿ |
ಸಲಹಿದೊಡೆಯಗೊಳ್ಳಿತೆಸಗುವರುಂಟೆ ನಿನ್ನವೊಲು ||೩೨||

ಪರಮಹಿತಚಿಂತಿನಿಯೆ ನೀನೀ |
ಗೊರೆವುದೆನ್ನೊಳು ಮುಂದೆಯೆನ್ನಯ |
ತನಯನಿಗೆ ಶುಭವಪ್ಪುಪಾಯವದಾವುದಿರ್ದಪುದು ||
ಅರಿಯೆನಾನಿದನೆನಲು ಮಂಥರೆ |
ಯರಸಿಗುಸಿರಿದಳಮಮ ಕಿವಿಯೊಳು |
ಸುರರುಘೋಯೆನೆ ಸರರು ಛೀಯೆನೆ ಬೀಜಮಂತ್ರವನು ||೩೩||

ಅರಸಿ ದೇವಾಸುರರ ಯುದ್ಧದೊ |
ಳರಸನಿತ್ತಿಹನೆರಡುವರಗಳ |
ವರಕದೊಂದಕೆ ರಾಮ ಜಡೆನಾರುಡೆಗಳನು ಧರಿಸಿ ||
ತೆರಳಿ ಪದಿನಾಲ್ಕಬುದ ವನದೊಳು |
ಚರಿಸುವುದು ಮತ್ತೆರಡನೆಯವರ |
ಕಿರದೆ ಜೇಡುವುದರಸುಪಟ್ಟವನಿಂದು ಭರತಂಗೆ ||೩೪||

ವೃದ್ಧರಾಯನ ಬುದ್ಧಿ ಚಪಲವು |
ಮುದ್ದುಬೀರುವರತ್ತಲೊಲಿವುದು |
ಹೊದ್ದುವುದು ನೀನವನನೀಗಳೆ ಸದ್ದುಗುಡದಂತೆ ||
ಬಿದ್ದು ಪಾದಕೆ ಬಿಡದೆ ಕಲಿತಿಹ |
ಬುದ್ಧಿಯೆಲ್ಲವ ತೋರಿಯೊಲುಮೆಯ |
ಮದ್ದನೂಡಿಸಿ ಗೆದ್ದುಕೊಂಬುದು ನಿಮ್ಮ ಕಾರ್ಯವನು ||೩೫||

ಎನುತೆ ಮಂಥರೆ ಕೈಕೆಯಾ ಮನ |
ಪೆಣಿಕೆಯನು ಪರಿಹರಿಸಲಾಕ್ಷಣ |
ವನಿತೆ ಪೊಂದೊಡವುಗಳನೆಲ್ಲವ ಬಿಸುಟು ನೆಲಕೊರಗಿ ||
೩ನಿಯನ್ನೈತಹಸಮಯವರಿದುರೆ |
ನನೆದು ಲೋಚನಜಲದೆ ತನ್ನಯ |
ಮನದ ಬಯಕೆಯ ಪಡೆಯೆ ನಾನಾನಟನೆದೋರಿದಳು ||೩೬||

ಅರಸ ದಶರಥನಾಗ ತನ್ನಯ |
ವರಕುಮಾರನ ರಾಜ್ಯಲಾಭದ |
ಪಿರಿಯಸುದ್ದಿಯನಾಕೆಗರುಹುವ ಕುತುಕದಿಂ ಬಂದು ||
ಅರಸಿಯಿರವನು ಕಂಡು ಜಗ್ಗನೆ |
ಬೆರಗನಾನುತೆ ನಿಂದಿದೇನೀ |
ತೆರದ ದುಗುಡವು ತೊಡರಿಕೊಂಡುದು ನಿನಗೆ ಮನದನ್ನೆ ||೩೭||

ಇದಕೆ ಕಾರಣವೇನು ನುಡಿನುಡಿ |
ಕೆದರಿತೇಕೀಕೇಶಪಾಶವು |
ವದನ ಕಳೆಗುಂದಿಹುದು ರನ್ನದ ತೊಡವು ಚದರಿಹುದು ||
ಸುದತಿ ನಿನಗೀಪರಿ ಮನೋವ್ಯಥೆ |
ಯೊದವಿತಾರಿಂದೆನುತೆ ಗಲ್ಲವ |
ಮುದದೆ ಪಿಡಿಯುತೆ ಮುದ್ದಿಸಿದನಾಕಪಟಹೃದಯೆಯನು ||೩೮||

ಕಾಂತ ನಿನ್ನೊಳಗಲ್ಲದೆನ್ನೀ |
ಯಂತರಂಗವನಾರೊಳುಸಿರಲಿ |
ಚಿಂತೆಯಡಸಿದೊಡಾರು ಪರಿಹರಿಸುವರು ನೀನುಳಿಯೆ ||
ಪಿಂತೆ ದೇವಾಸುರರ ಯುದ್ಧದೆ |
ಸಂತಸದೆ ನೀನೆರಡುವರಗಳ |
ಕಾಂತೆ ನೀಂ ಕೇಳ್ದಂದು ಕುಡುವೆನೆನುತ್ತೆ ವಚಿಸಿರುವೆ ||೩೯||

ಜನಪತಿಯನರ್ಥಿಸಲು ತಕ್ಕುವೆ |
ಧನಕನಕವಸ್ತುಗಳು ಲೋಕದ |
ಜನಕೆ ದುರ್ಲಭವೆನಿಸಿಪವರವನು ಬೇಡಬೇಕೆನುತೆ ||
ಇನಿತುದಿನ ಕಾದಿರ್ದೆಸದು ತಾ |
ನೆನಗೆಗೋಚರವಾದುದೀಗಳು |
ಘನಮನೋರಥವಿದನು ಬೇಡುವೆನಭಯವೀಯೆನಲು ||೪೦||

ಅರಸಿ ನಿನ್ನುಪಕಾರವನು ನಾಂ |
ಮರೆಯಲಾರ್ಪೆನೆ ದೇಹಮುಳ್ಳ |
ನ್ನೊರೆವುದೇನಾ ವರಗಳೆಂಬವನೀಗಳಿತ್ತಪೆನು ||
ತಿರುಗುವರೆ ಸತ್ಪಥವನುಳಿದಾ |
ಧರಣಿಪಾಲರು ಕೋಮಲಾಂಗಿಯೆ |
ಭರವಸವ ಕೊಳ್ಳೆನುತೆ ಬಡಿದನು ಸತಿಯ ಕರತಲವ ||೪೧||

ವರಕದೊಂದಕೆ ಜನಪ ಬಳೆಯಿಸು |
ಭರತನಿಗೆ ಪಟ್ಟಾಭಿಷೇಕವ |
ನೆರಡನೆಯ ವರಕಿಂದು ಕಳುಹಿಸು ರಾಮನನು ವನಕೆ ||
ಧರಿಸಿ ಜಟೆಯನು ತವಸಿನಾರುಡೆ |
ವೆರಸಿ ತಾಂ ಪದಿನಾಲ್ಕುವರಿಸವು |
ಚರಿಸುತಿರಬೇಕಡವಿಯೊಳಗಿವನೆಂದಳಾಕೈಕೆ ||೪೨||

ಕಾದಲೋಹದ ಸರಳು ಕಿವಿಯೊ |
ಳ್ಕೋದವೋಲ್ಪರಿತಪಿಸಿ ಭೂಪತಿ |
ಹಾ ದುರಾತ್ಮಕೆ ಯೆನುತೆ ಬಿದ್ದನು ಮೂರ್ಛೆ ತಲೆದೋರೆ ||
ಆ ಧರಾಧಿಪನಿರದೆ ಯೆಚ್ಚ
ತ್ತಾದುದೇನಿದು ತನಗೆ ಚಿತ್ತವಿ |
ಷಾದಮಿಂದೇಕೆನುತೆ ನೆನೆದನು ಸತಿಯ ಸಂಗತಿಯ ||೪೩||

ಎಲೆಲೆಘಾತುಕೆ ಘೋರಪಾತಕೆ |
ಕುಲವಿದೂಷಕೆ ನೆನೆದೆಯೇನನು |
ಕಲುಷಮಾನಸೆ ನಿನಗೆ ರಾಮನದೇನಗೈದಿಹನು ||
ಕಲಿತೆಯೆಲ್ಲಿದನಾವಳೀಪರಿ |
ಯೊಲಿಸೆ ನಿನ್ನನು ಬೋಧಿಸಿದಳಿಂ |
ತುಲಿಯಬಹುದೇ ನೀಚವಾಕ್ಯವನೆನ್ನ ಸಂಮುಖದೆ ||೪೪||

ಪೆತ್ತವನಾಕೆಯೊಳಿರ್ಪ ಮಮತೆಗೆ |
ಪತ್ತುಪಾಲಧಿಕವಲೆ ನಿನ್ನೊಳ |
ಗುತ್ತಮೋತ್ತಮರಾಮಭದ್ರಂಗಿದನು ಪೇಳಿದು ||
ಸತ್ಯವಂತನು ನಿಮ್ಮ ಬಾಲಕ |
ನತ್ಯಧಿಕಗುಣಶಾಲಿಯೆಂಬಾ |
ಚಿತ್ತ ಪಾಳಾಗೆತ್ತಲಡಗಿತೆ ಪತ್ಯದೇವತೆಯೆ ||೪೫||

ಅರಿಯದಾದೆನು ಮುನ್ನ ನಿನ್ನನು |
ಕೊರಲಮುರಿಯುವ ಮಾರಿಯೆಂಬುದ |
ಸರಳಹೃದಯೆಯೆನುತ್ತೆ ನಂಬಿದುದಕ್ಕೆ ಫಲವಾಯ್ತು ||
ಮೆರೆವ ಕೇಕಯವಂಶದಿಂ ಬಂ |
ದುರುವ ರವಿಕುಲದಾಣ್ಮನನು ಸೇ |
ರ್ದೆರಡುಮನೆಗಳ ಪೆಸರನಳಿಸಿದೆ ಕಷ್ಟವನು ಬಗೆದೆ ||೪೬||

ತಿಲಕಮಿಲ್ಲದವದನಮಿಂದುವ |
ಕಳೆಯಿನೆಸೆಯದ ಗಗನಮಾತ್ಮಜ |
ರುಳಿಯದಿರಿಯದ ಸದನ ರಾಮನ ಚೆಲುವಮೂರುತಿಯ ||
ಸುಳಿವಕಾಣದಯೋಧ್ಯೆಯಿದ್ದುಂ |
ನೆಲದೆ ಫಲವೇನಕಟ ಶೂನ್ಯವು |
ಲಲನೆ ಜಲವಿದನುಳಿದು ರಾಮನ ಸಲಹು ನೀನೆನಲು ||೪೭||

ರಾಯ ನಿನ್ನನು ಕಾಡುತೀನ |
ನ್ಯಾಯದಿಂದೀವರವ ಸೆಳೆದೆನೆ |
ಕಾಯಸಾಕ್ಷ್ಯದೊಳಿದನು ನೀಡದನಲ್ಲ ಮನದೊಳಗೆ ||
ತೋಯಜಾಕ್ಷಿಯೆ ನಿನಗೆ ಮೆಚ್ಚಿದೆ |
ನೀಯುವೆನು ವರವೆರಡ ಬೇಡೆಂ |
ದಾಯುಧವ ಪಿಡಿಯುತ್ತೆ ನುಡಿಯೆಯು ಸುರರ ಸಾಕ್ಷ್ಯದೊಳು ||೪೮||

ಹೇಯವಾಗಿಹ ಸುತನ ಮೇಲಣ |
ಮಾಯೆ ಬೀಸಿದ ಮೋಹಭರದಿಂ |
ನ್ಯಾಯವೆಂಬುದ ಜರಿದು ನಿನ್ನನು ದೂರುವುದು ತರವೇ ||
ಗಾಯವಡೆದುದು ಕುಲವು ನಿನ್ನಿಂ |
ಮಾಯಿಸುವ ಮದ್ದಿಲ್ಲವಾ ಹೋ |
ಗಾಯಿತಿನ್ನಿದಕೀಗ ಚಿಂತಿಸೆ ಫಲವದೇನಹುದು ||೪೯||

ಒಂದೆಸರನರಾಷ್ಟ್ರವನು ಸುತನಾ |
ಗಂದು ಭಾಗಿಸಿಯಿತ್ತು ಪ್ರಕೃತಿಯ |
ಳಿಂದು ಭೇದವನೆಣಿಸದೆ ಮನದಲು ಚಿಂತಿಸದೆ ||
ಮಂದಮತಿಯಿಂ ಗೈದನೋಹದ |
ತಂದದಾರೊಳು ಹೊರಿಸಲೆಳಸುವೆ |
ಚಂದವಲ್ಲಿದು ರಮಣ ನಿನಗೀಪರಿಯ ಚಾರಿಕೆಯು ||೫೦||

ಪುಟ್ಟಿಸಿದಮಾತ್ರದೊಳು ಮಗನೊಳ |
ಗಿಟ್ಟಿರುವೆ ನೀನಿನಿತುಮಮತೆಯ |
ಹೊಟ್ಟೆಯಲಿ ನವಮಾಸವಾಸುತ್ತೆ ಪೆತ್ತಸುತನೊಳಗೆ ||
ಎಷ್ಟುಮಮತೆಯೊ ಈಕೆಗೆಂಬುದ |
ಮುಟ್ಟಿಮನದೊಳಗರಿದು ನೋಡದೆ |
ಕೆಟ್ಟು ನುಡಿವರೆ ನನ್ನೊಳೇನಪರಾಧಮವನಿಪನೆ ||೫೧||

ರಾಮನಿಗೆ ಸಾಮ್ರಾಜ್ಯಪದವಂ |
ಪ್ರೇಮದಿಂದೀಗಿತ್ತು ಕೌಸ |
ಲ್ಯಾಮನವನನುಸರಿಸಿ ಸುಖದಿಂದಿರ್ದು ನೀಂ ಬದುಕು ||
ನೇಮವೀಯೆನಗಿನ್ನು ಕಾಂತನೆ |
ತಾಮಸವನಾಂ ಗೈಯದೀಗಳೆ |
ಆಮಹೋಗ್ರದ ವಿಷವ ಸೇವಿಸಿಯಸುವ ನೀಗುವೆನು ||೫೨||

ಎಂದುನುಡಿದೊಡನೆದ್ದು ಮಡದಿಯ |
ನಂದು ಪಿಡಿದಾರಾಯನೆಂದನು |
ಸುಂದರಾಂಗಿಯೆ ನಿನ್ನ ಮಾತಿನೊಳಿಲ್ಲ ಕವಲುಗಳು ||
ಮುಂದನರಿಯದೆ ನುಡಿದು ನಾನೀ |
ದಂದುಗಕ್ಕೊಳಗಾದೆನೀಗಳು |
ವಂದಿಪೆನು ನಿನಗಕಟ ಕರುಣವ ಬೀರಿ ನೀನುಳುಹು ||೫೩||

ಮೆರೆಯುತಿರ್ಪಿಕ್ಷ್ವಾಕುಕುಲದೊಳು |
ನೆರೆ ಪರಂಪರೆಯಾಗಿ ಬಂದಿಹ |
ಪಿರಿಯ ಮಗನಿಗೆ ರಾಜ್ಯವೆಂಬಾಪದ್ಧತಿಯನುಳಿಯೆ ||
ಕಿರಿಯ ಹೆಂಡತಿಯೆನಿಸಲನಗೋಸುಗ |
ಮರಸನೀಪರಿಗೈದಡೆಮ್ಮಯ |
ಧರೆಯೊಳೆನಗಪಕೀರ್ತಿ ಬಪ್ಪುದು ಕಾಂತೆ ನೀನರಿಯೆ ||೫೪||

ಸವತಿಯಾತ್ಮಜನಿರವ ಸೈಸದೆ |
ಯುವತಿಯಟ್ಟಿದಳವಮ ಕಾಡಿಗೆ |
ಕವಡೆಗಿಂ ಕಡೆಯಾಗಿ ಕಾಣುತೆ ಮುಪ್ಪಿನಿನಿಯನನು ||
ಬುವಿಯೊಳವತರಿಸಿರ್ಪ ಮಾರಿಯೆ |
ಇವಳು ಮಾನವಿಯಲ್ಲಮಿವಳಿಂ |
ಶಿವಶಿವಿಂತಾಯ್ತೆೀನಯೋಧ್ಯೆಯಿದೆಂಬುದೀಲೋಕ ||೫೫||

ತರಣಿಹಿಮಕರರಿರ್ಪವರೆಗಂ |
ಧರಣಿತಲದೊಳ್ ನಿನಗಮೆನಗಂ |
ದುರುಯಶವನೊಂದಿಸುವಕಾರ್ಯವನಿಂತು ಬಳಸುವರೆ ||
ಸುರರ ಸುದತಿಯರಿರದನು-ತಾಂ ಕಂ |
ಡಿರದೆ ಕೈಗಳ ಹೊಯ್ದು ನಗರೇ |
ಸರಸಿ ಸೀನಿದನುಳಿದು ಬೇಡಿನ್ನಿತರವರಗಳನು ||೫೬||

ಕಂದರಾಮನನುಳಿದು ಹರಣವ |
ನೊಂದುನಿಮಿಷವು ಧರಿಸಲಾರೆನು |
ಕೊಂದಳೈ ನಿಜಪತಿಯನಿವಳೆಂಬೊಂದು ಪೊಸಪಳಿವು |
ಒಂದುವುದು ತಾಂ ನಿನ್ನುಮಂ ಒಳಿ |
ಕೊಂದಿ ವೈಧವ್ಯವನು ಬಾಳುವು |
ದುದವಲ್ಲಿದು ರಮಣಿ ಬಿಡು ನಿನ್ನಲ್ಪಬುದ್ಧಿಯನು ||೫೭||

ಅರಸನೀಪರಿ ಬೆಸನಮೊಂದಿರೆ |
ಪಿರಿಯಸಚಿವನು ವರಸುಮಂತ್ರನು |
ಹೊರಗೆ ಸಮಯವನೀಕ್ಷಿಸುತ್ತಿಹನೆಂಬಸಂಗತಿಯ ||
ಅರಿಪೆ ಚೇಟಿಯು ಕರೆದುತರುದೆನ |
ಲಿರದೆ ಬಂದನು ಕಂಡನವನಿಪ |
ನಿರವನುರೆ ಬೆಸಗೊಂಡನಿದಕೆ ನಿಮಿತ್ತಮೇನೆನುತೆ ||೫೮||

ಪೇಳು ಮಂತ್ರಿಯೆ ಮೊದಲು ನೀಂ ಬಂ |
ದೂಳಿಗವ ಬಳಿಕಾನೊರೆವೆನಿ |
ಮ್ಮಾಳಿದನ ಚರಿತವನೆನುತ್ತಾತ್ಕೈಕೆ ನಿರವಿಸಲು ||
ಕಾಳಿ ದುಗುಡವನರಿದನೀಕೇ
ಡಾಳಿಯಿಂ ಭೂಮಿಪನ ಬಗೆ ತಾಂ |
ಕೋಳುಹೋಗಿಹುದೆನ್ನುತೊರೆದನು ಬಂದಸಂಗತಿಯ ||೫೯||

ತಾಯೆ ಬಿನ್ನಹ ಬಂದು ನೆರದಿದೆ |
ರಾಯಸಭೆ ಮೇಣ್ಸಕಲವರ್ಣದ |
ನಾಯಕರು ವರಸಚಿವರಾಪ್ತನಿಯೋಗಿಜನದೊಡನೆ ||
ಕಾಯಜೋಪಮರಾಮಚಂದ್ರನು |
ಚಾಯೆಯಂತಿಹ ಸೀತೆಯೊಡನಾ |
ರಾಯವಾಗಿಲ ಬಳಿಯೊಳೆಸೆವನು ಭದ್ರಗಜಮಿಳಿದು ||೬೦||

ರಾಮನೆಂಬೀಮಾತು ಬೀಳ |
ಲ್ಕಾಮಹೀಶನ ಕರ್ಣಕಾಗಳೆ |
ರಾಮ ಜಗದಭಿರಾಮ ನಿರ್ಮಲನಾಮನೈದಿದನೆ ||
ಆಮನೋರಮನೇಕೆ ಬಂದಪ |
ನೀಮಹೋರಗಿಯವನ ಬಿಡುವಳೆ |
ಹಾ ಮಹಾಮತಿ ಶಿಕ್ಷಿಸೈ ಯೆನುತರಸ ಮೈಮರೆದ ||೬೧||

ಒರೆಯಲೇನನು ಮಂತ್ರಿ ಭೂಪನ |
ಚರಿಯವನು ಕಣ್ಣಾರೆ ಕಂಡೆಯ |
ಹರಹರೇನಿದೊ ಕಾಣೆ ಮೂರ್ಛೆಗೆ ಮೂರನೆಯ ಬಾರಿ ||
ಅರಿಯದಿಂದಾನಹಹ ಪೂರ್ವದ |
ವರಗಳೆರಡನು ಬೇಡಿದುದರಿಂ |
ದರಸನೀಪರಿಯಾದನೆಂಬೆನೆ ವರಗಳಲ್ಪವಲಾ ||೬೨||

ಅರಿವೆನಿದರ ನಿಜಾಂಶವನು ನೀ |
ನಿರದೆ ಬೇಗನೆ ಪೋಗಿ ರಾಮನ |
ಕರೆದು ತರ್ಪುದೆನಲಾ ಸುಮಂತ್ರನು ತೆರಳುತಲ್ಲಿಂದೆ ||
ಧರಣಿ ತನ್ನಯ ಮಗಳ ಗಂಡನ |
ವರಿಪುದನುಚಿತಮೆಂದು ಭರತಗೆ |
ಕರವ ನೀಡುವ ತೆರನು ಕಾಣ್ಬುದೆನುತ್ತೆ ಚಿಂತಿಸಿದ ||೬೩||

ಬರುತ ಮೆಲ್ಲವ ವರವಸಿಷ್ಠಂ |
ಗೊರೆದನಾ ಬಳಿಕಿರ್ವರುಂ ಬೇ |
ಗರದಿನೈತಂದಿದಿರುಗೊಂಡರು ರಾಘವೇಶ್ವರನ ||
ಗುರುಸಚಿವರಾನನವನೀಕ್ಷಿಸಿ |
ಮೊರೆವದುಗುಡವ ಕಂಡು ರಾಘವ |
ನೊರೆಯಬೇಹುದು ಕಾರಣವನಿದಕೆನುತೆ ಬೆಸಗೊಳಲು ||೬೪||

ಧರಣಿಪಾಲಂಗಿರವು ಕೈಕೆಯು |
ಸುರುಚಿರದ ಮಂದಿರದೆ ನಿಮ್ಮನು |
ಕರೆದುತಹುದೆಂದರಸಿಯಾಣತಿ ಬಿಜಯಗೈವುದೆನೆ ||
ವಿರಸವಾಗಿದೆ ನಿಮ್ಮ ನುಡಿಯೆನೆ |
ಧರಣಿಪತಿಯಾಕುಲನು ಚಿಂತಿಸು |
ತಿರುವಸೀಗಳು ನಿನ್ನನೇ ಎಂದವರು ತಿಳುಹಿದರು ||೬೫||

ವಂದಿಮಾಗಧರುಲಿಪ ನಿಲ್ಲಿಸಿ |
ಚಂದದಾರತಿಗಳ ನಿರೋಧಿಸಿ |
ಹಿಂದೆ ಬರುತಿಹ ಜನವ ಗದರಿಸಿ ರಾಮನೈತಂದು ||
ತಂದೆಯಡಿಗಳಿಗೆರಗಿಯವನಿ |
ಪಂದವನು ತಾಂ ಕಂಡು ಮರುಗುತೆ |
ಬಂದುದೀವ್ಯಥೆ ನಿನಗದೆಂತೆಲೆ ತಾತ ನುಡಿಯೆನಲು ||೬೬||

ಮಗನೆ ಬಂದ್ಯೆ ರಘುಕುಲಾಂಬರ |
ಗಗನಮಣಿ ಬಂದ್ಯೆ ಜಗನ್ನುತ |
ಸುಗುಣ ಬಂದ್ಯೆ ಬಂದೆಯಾ ಬಾ ಕಂದ ಬಾರೆನುತೆ ||
ಉಗುವ ಕಣ್ಣೀರಿಂದೆ ಸುತನನು |
ತೆಗೆದು ಬಿಗಿಯಪ್ಪುತ್ತೆ ತನಗೀ |
ಬಗೆಯ ಸುಖ ಮುಂದಿನ್ನು ದೊರೆವುದಸಾಧ್ಯಮೆಂದಳಲಿ ||೬೭||

ಮರೆದು ದೇಹವನಿಳೆಯೊಳೊರಗಲು |
ಕೊರಗುತುಪಚರಿಸುತ್ತೆ ರಾಮನು |
ಕಿರಿಯಮಾತೆಯ ಚರಣಕೆರಗುತ್ತಿಂತು ಕೇಳಿದನು ||
ಕರುಣಿಸಿನ್ನೆಲೆ ತಾಯೆ ನೃಪಕೀ |
ಪರಿಗೆ ತಾತಂಗೀಸುಕಾರಣ |
ಪರಮದಾರುಣ ದುಃಖಮಿಂತಾವರಿಸಿತೆಂಬುದನು ||೬೮||

ಕಂದ ನಿನಗಿದನೊರೆಯಲೆಂದಾ |
ನಿಂದು ಕರೆಸಿದೆನಯ್ಯ ಪೆರರೊಡ |
ನೆಂದೊಡೆನ್ನಂ ಸ್ವಾರ್ಥಪರೆಯೆಂದಿರದೆ ದೂಷಿಪರು ||
ಇಂದಿರಂಗಿದಿರಾಂತ ದಾನವ |
ವೃಂದವನು ತರಿವಂದು ನಿಮ್ಮಯ |
ತಂದೆಗಾಪತ್ತಡಸೆ ಪರಿಹರಿಸಿದೆನು ಸುರರರಿಯೆ ||೬೯||

ಮೆಚ್ಚಿ ನನ್ನಯ ಸಾಹಸಕೆ ನೃಪ |
ನಚ್ಚರಿವಡುತ್ತಂದು ವಲ್ಲಭೆ |
ನಚ್ಚಿಕೆಯ ನುಡಿ ನಂಬು ವರಗಳನೆರಡನಿತ್ತಪನು ||
ಎಚ್ಚರದೆ ನೀನಿರ್ದು ಮನಕಂ |
ದಿಚ್ಛೆಯಪ್ಪುದೊ ಕೇಳಲದನಾ |
ನಚ್ಚಳಿಯದಂದದೊಳು ಸಲಿಸುವೆನೆಂದನವನಿಪನು ||೨೦||

ಪಲವುಕಾಲದಿನಿದಿರುನೋಡುತೆ |
ನಲವಿನಿಂದದನಿಂದು ಬೇಡಲು |
ಸಲಿಸಲಾರನೆ ನಿನ್ನ ಮೇಲಣ ಮೋಹದಿಂದದನು ||
ಹಲುಬುತೀಪರಿದುಃಖದಿಂ ಬಲು |
ಬಳಲುತಿರ್ದಪನೆನಲು ಜನನಿಯೆ |
ಸಲಿಪೆನದ ನೀಂ ಬೆಸಸಿನೆಂದನು ರಾಮ ಕೈಮುಗಿದು ||೨೧||

ಎನುತೆ ನುಡಿದಾ ಮಗನ ಮಾತಿಗೆ |
ವನಿತೆಯೊಲೆದಳು ಶಿರವನಹುದೋ |
ತನಯ ನಿನ್ನನು ಪೆತ್ತಮಾತೆಯೆ ಧನ್ಯೆಯಿಳೆಯೊಳಗೆ ||
ಮನದಭೀಷ್ಟವನುಸಿರುವೆನು ಭವ |
ದನುಜ ಭರತಂಗಿತ್ತು ರಾಜ್ಯವ |
ವನದೆ ಹದಿನಾಲ್ಕಬ್ದ ಚರಿಪುದು ನೀನು ಜಡೆವೆರಸಿ ||೨೨||

ನೀತಿಯುತನಾಗಿರ್ಪ ತನುಜನೊ |
ಳೀತಕೀಕಾರಿನ್ಯಮೆನುತುಂ |
ಭೀತನಾಗದಿರಣುಗ ಪೇಳುವೆನಿದರ ಮರ್ಮವನು ||
ಪಾತಕಿನಿ ತಾನೆಂಬ ನಿಟ್ಟುರ |
ವಾತು ನನ್ನನು ಪೊರ್ದಲಂಜೆಂ |
ಖ್ಯಾತನಾಗಲು ನೀನು ಲೋಕದೊಳದುವೆ ಹಿತವೆನಗೆ ||೨೩||

ಕ್ರೂರರಾಕ್ಷಸರಿಳೆಯನೆಲ್ಲವ |
ಸೂರೆಗೈಯುತ್ತಿರುವರವರೊಳ |
ಪಾರಪೌರುಷಶಾಲಿಗಳು ದಕ್ಷಿಣದೆ ನೆಲೆಗೊಂಡು ||
ಸಾರಿ ಸುರಲೋಕವನು ನಿರ್ಜರ |
ನಾರಿಯರ ಸೆರೆವಿಡಿದು ಸುರರನು |
ಸೇರಗುಡದೆಯೆ ಸಕಲಸಂಪದಕೊಡೆಯರಾಗಿಹರು ||೨೪||

ಕಪಟಿಗಳಸಿರದಿರಿಯಲೋಸುಗ |
ವಿಪಿನಚರರೆಂಳು ಸೇರಿ ನೀನಾ |
ತಪಸಿಯಂದದೊಳಿಹುದು ನಿನಗದು ಕಾರ್ಯಸಾಧನವು ||
ವಿಪುಲಮಂತ್ರಾಸ್ತ್ರಗಳನೆಲ್ಲವ |
ಗುಪಿತದಿಂ ನಿನಗಿತ್ತನಲ್ಲವೆ |
ನೃಪಋಷಿಯು ಕೌಶಿಕನದೇಕೆಂದರಿವೆ ನೀನದನು ||೭೫||

ಕೆಲವರಾಡುವರಣುಗ ನಿನ್ನನು |
ಜಲಜಭವಪಿತನೀತನೆನುತುಂ |
ನೆಲದೆ ನೀನೆಸಗಿರ್ಪ ಕೃತ್ಯಗಳಿದಕೆ ಸಾಕ್ಷಿಕಣಾ ||
ಹಲವುಬಗೆಯಿಂ ರಕ್ಕಸರ ಹು |
ಯ್ಯಲನು ಮುರಿಯುತೆ ಜಗವ ರಕ್ಷಿಸಿ |
ಕುಲಶಿರೋಮಣಿ ಜಸವನೊಂದ್ಯೆ ಮೂರುಲೋಕದೊಳು ||೭೬||

ಪೊರೆದೆ ಕೌಶಿಕಮುಖಪ ತಾಟಕೆ |
ಯಿರಿದೆ ಮಿಥಿಲೆಗೆ ಸರಿದೆ ಶಂಕರ |
ನುರುವಧನುವನು ಮುರಿದೆ ಶಿಲೆಗುಸಿರೆರೆದೆ ನೀನಿರದೆ ||
ಪರಶುರಾಮನ ದರ್ಪತರುವನು |
ತರಿದೆ ನಿನಗೇನರಿದೆ ವಿಜಯವು |
ತೆರಳು ನೀನೆಲೆ ತರಳ ಬೇಗದೊಳಿರಿ ಪಿಶಾಚರರ ||೭೭||

ಭರತನೀರಾಜ್ಯವನು ನೀನ್ಯೆ |
ತರುವಪರಿಯಂತರವು ಪೊರೆಯಲಿ |
ಮರಳಿ ನೀಂ ಬರಲೊಡನೆ ನಿನ್ನಯ ಚರಣಕರ್ಪಿಸಲಿ ||
ತರಣಿವಂಶದ ಕೀರ್ತಿಲತೆಗೀ |
ಗೆರೆದು ನಿನ್ನಯ ಶೌರ್ಯಜಲವನು |
ಸೊರಗುಗುಡದೆಯೆ ಪರ್ಬಿಸೆನ್ನುತೆ ಚದುರ ಬೀರಿದಳು ||೭೮||

ಮಾತೆ ನೀನಿದಕೇಕೆ ಚಿಂತಿಪು |
ದೇತರತಿಶಯಕಾರ್ಯಮಿದು ನಿಜ |
ತಾತನಾಡಿದ ಮಾತ ಪಾಲಿಸದಾತನೇಂ ಸುತನೇ ||
ಖ್ಯಾತರಘುವಂಶಜರು ಸತಿ ತನು |
ಜಾತರಿಳೆಯೆಂಬುರುವ ಮಾಯೆಗೆ |
ಸೋತು ಮನವನು ಧರ್ಮಸಂರಕ್ಷಣೆಯನುಳಿದಪರೆ ||೭೯||

ಜನನಿ ಜನಕನು ಸಕಲಕಂ ಮಿಗಿ |
ಲೆನುತೆ ನುಡಿವುದು ಪೊಸತೆ ಲೋಕದೆ |
ತನುವಸಿದ ಪಡೆದಪರು ಲಾಲನೆಗೈದು ಪಾಲಿಪರು ||
ಕೊನೆಯ ಲಯವಂ ಕನಸಿನೊಳಗಂ |
ನೆನೆಯರವರೀಮೂರುಮಂ ತಾ |
ನೆಣಿಕೆಗೈಯದೆ ದೈವಮೆಸಗುವುದಲ್ತೆ ಪರಿಕಿಸಲು ||೮೦||

ಪೇಳಿಯಿಂತಪರಿ ಪಿತನ ಚರಣಕೆ |
ಬೀಳುತೆಂದನು ಜನನಿ ನಲವಿಂ |
ಕೇಳುವೀವರಗಳನು ಕರುಣಿಸಿ ನಿನ್ನ ನುಡಿಗಳನು ||
ಕೋಳುಹೋಗದತೆರದೊಳುದ್ಧರಿ |
ಸೇಳು ಚಿತ್ತದ ದುಗುಡವನು ನೀಂ
ಬೀಳುಕೊಟ್ಟಿಂದೆನ್ನ ಕಳುಹೈ ಬೊಪ್ಪ ಕಾನನಕೆ ||೮೧||

ಚರಣವನು ಪಿಡಿದಿರ್ಪ ತನಯನ |
ಧರಣಿಪತಿ ನೋಡುತ್ತೆ ಮರುಗು |
ತ್ತಿರದೆ ಬಿಸುಸುಯ್ದು ಕಟ ಮಗನೇ ಕಾಣೆ ನೀನಿದನು ||
ಕರುಣಮುಳಿದಿಪ್ಪೀಪಿಶಾಚಿಗೆ |
ವರಗಳಿತ್ತೆನು ನಿಜದೆ ನಾನಿ |
ನ್ನೊರೆಯಲಾರೆನು ಮುಂದಕೆಂದವನಿಪನು ಮೈಮರೆದ ||೮೨||

ಪರಿಪರಿಯೊಳುಪಚರಿಸಿ ಮೂರ್ಛೆಯ |
ಪರಿಹರಿಸಿ ನಿಜತಾತನಂಘ್ರಿಗೆ |
ಶಿರವ ಬಾಗಿಸಿ ಕೈಕೆಗಭಿನಮಿಸುತ್ತೆ ರಾಘವನು ||
ಅರಸನಾ ಕೈಕೆಯನು ನಿಮಗಾ |
ದರದೆ ವಹಿಸಿದೆನಿಂದು ಜನನಿಯೆ |
ಮರೆಯಲಾಗದು ತನ್ನ ನೆನುತಲ್ಲಿಂದೆ ಹೊರವಡಲು ||೮೩||

ಪುರದೆ ಹಬ್ಬಿತು ವಾರ್ತೆ ಕೇಳಿದ |
ರರಸಿಯುರು ಬಾಯ್ಬಿಡುತುಮೈದಿದ |
ರುರುತರದ ಶೋಕದೊಳು ಕೌಸಲ್ಯಾದಿದೇವಿಯರು ||
ಹರಿವ ನೆನೆದಳೆ ಮಗನೆ ಸವತಿಯು |
ಧರಣಿಪಾಲನ ಕಿವಿಯನುಲಿದಳೆ |
ಕೊರೆದಳೇ ಅವನಂತರಂಗವನೆನುತೆ ಕೌಸಲೆಯು ||೮೪||

ಭರದೊಳವ್ವುತೆ ಸುತನ ಭೂಪನ |
ತಿರುಗಿ ನೋಡಿದಳಿನಿತಕೋಸುಗ |
ಮುರುವ ಯಾಗವ ಗೈದು ಪಡೆದಿರೆ ನೀವು ನಂದನನ ||
ಧರಿಸಿತೆನ್ನೀಪೊಡೆಯು ಕಂಧನ |
ಧರಿಸಲಾರವೆ ದೊಡ್ಡಿತರಮನೆ |
ಪಿರಿದು ಪುರವಿದು ಹರಹರಾ ನಿಷ್ಕರುಣರಾದಿರಲಾ ||೮೫||

ಕಂದನನು ಕಾಂತಾರಕಟ್ಟೀ |
ಬೆಂದೊಡಲ ನಾನೆಂತು ಹೊರವೆನ |
ಮಂದಭಾಗ್ಯೆಯನೇಕೆ ಸೆಲಸಿದು ಸುಂಗದಿರ್ದಪುದೊ ||
ಕುಂದಣವ ನಗುವೆನ್ನ ಕಂದನ |
ಸುಂದರಾಂಗದ ಕಾಂತಿ ವಿಪಿನದೊ |
ಳಿಂದು ಕಂದವೆ ಮಾಣದೇಗುವೆನೆಂದು ಹಲುಬಿದಳು ||೮೬||

ಏನ ನೆನೆದೆಯೊ ಮಗನೆ ನೀನೀ |
ಮಾನವೇಶ್ವರಪದವಿಗೊಪ್ಪದೆ |
ಕಾನನದ ಕಡುಕಷ್ಟಕೆಳಸುವುದುಚಿತವೇ ನಿನಗೆ ||
ಮಾನು ಧೀವರನೆಸವಗಾಣವ |
ತಾನೆ ನುಂಗಿ ಸರಲ್ವರೀತಿಯೊ |
ಳೀನರೆಂದ್ರನು ಪಾಪೆ ಕೈಕೆಯ ಮೇಲಣಾಸೆಯೊಳು ||೮೭||

ಜ್ಞಾನವಿಲ್ಲದೆ ನುಡಿದು ಹಲುಬಿದೊ |
ಡೇನು ಸತ್ಯಚ್ಯುತಿಯ ದೋಷವು |
ತಾನದಪ್ಪುದು ಮಾರಲಿಂದದನೆಂದು ಗರ್ಜಿಸುತೆ ||
ನೀನು ತಳುವಲ್ಕಾಗದೇಳ್ವೈ |
ನೂನು ಸಿಂಹಾಸನವನೇರ್ವೈ |
ಸಾನುಮತವೀವಿಷಯದೊಳು ಜನವೆಂದಳಿಂದುಮುಖಿ ||೮೮||

ಅರಿಯೆ ನೀನೆಲೆ ಕಂದ ನಿಮ್ಮಯ |
ಕಿರಿಯ ಮಾತೆಯು ಮೊದಲೆ ನನ್ನನು |
ಸರಕುಗೈಯಳು ಮೇಣು ನೀನಿಂತೆನ್ನನಗಲಿದೊಡೆ ||
ನೆರವೆಇಲ್ಲದನಾಥೆಯೆನ್ನುತೆ |
ಪಿರಿದು ಕಷ್ಟವನೀವಳೆನಗಾ |
ರಿರುವರೈ ಹಿತರೆನಿಪರಾನಿನ್ನೆಂತು ಜೀವಿಪೆನು ||೮೯||

ಕೇಳಿದನು ನಿಜಮಾತೃವಾಕ್ಯವ |
ತಾಳಿದನು ದುಗುಡವನು ಮನದೊಳು |
ಮೇಲಸರಿಯುವೆ ನುಡಿದತಂದೆಯ ಭಾಷೆಯನು ನೆನೆದು ||
ಪಾಲಿಪೆವು ಸತ್ಯವನು ತಾವೆಂ |
ಬಾಳುಗಳ ಕುಲದೈವ ರಾಮನು |
ಲೋಲಲೋಚನೆಗೆರಗಿ ಬಿನ್ನೈಸಿದನು ಬಕುತಿಯೊಳು ||೯೦||

ತಾಯೆ ಬಿನ್ನಹವಿಂದು ನಿಮ್ಮಯ |
ರಾಯನಾಡಿದ ಸತ್ಯಭಾಷೆಗ |
ಪಾಯಬಾರದತೆರದೆ ರಕ್ಷಿಪರಾರು ನೀವುಳಿಯೆ ||
ಕಾಯವಸ್ಥಿರ ಸತ್ಯವೇ ಸ್ಥಿರ |
ಕಾಯವೆಂಬಾ ನಮ್ಮ ಕುಲಮುಹ |
ನೀಯಚಂತವನರಿಯದವರೇನಕಟ ನೀವಿಂದು ||೯೧||

ಪತಿಪರಾಯಣೆ ಸತಿಯದೇಂ ನಿಜ |
ಪತಿಗೆ ಮಾರುತ್ತರವನೀಯುತೆ |
ಪತಿತೆಯೆನಿಸುತೆಯೇಳುಜನುಮದೆ ನರಕಕೂಪದೊಳು ||
ಅತಿಶಯದ ಯಾತನೆಯನನುಭವಿ |
ಸುತುರುದುರ್ಗತಿವಡೆವಳೇಳ್ಳೈ ಅಭಿ |
ಮತವೆ ಸಾಧ್ವಿಯರೆನಿಪನಿಮಗಿದು ತಾಯೆ ಚಿತ್ತೈಸಿ ||೯೨||

ಕೇಳಿ ಲಕ್ಷ್ಮಣನಣ್ಣದೇವನ |
ಕಾಲವಾನಪ್ರಸ್ಥವಾರ್ತೆಯ |
ತಾಳಿ ರೌದ್ರಾವೇಷವನು ತಾನಲ್ಲಿಗೈತಂದು ||
ಜೋಳುಕೊಟ್ಟನೆ ನಿಮ್ಮನಡವಿಗೆ |
ಕಾಳರಕ್ಕಸಿಯೆನಿಪ ಕೈಕೆಗೆ |
ಜೋಲುಗೊಟ್ಟನೆ ಕಿವಿಯ ತಂದೆಯೆನುತ್ತೆ ಹಲುಬೊರೆದ ||೯೩||

ದೇವ ನಿಮಗಾವಿಪಿನವಾಸವೆ |
ಭಾವಿಸಲು ಭರತಂಗೆ ರಾಜ್ಯವೆ |
ಕೋವಿದರು ಸನ್ಮತಿಯನಿತ್ತರೆ ನಮ್ಮ ಮಂತ್ರಿಗಳು ||
ಆವದೇಶದ ಧರ್ಮವಿದು ತಾ |
ನಾವನಿದನುಸಿರಿದನು ಶಿವಶಿವ |
ನೀವದೇತಕೆ ಮರುಳರಾದಿರಿ ಸಕಲವನು ತಿಳಿದು ||೯೪||

ಹಿರಿಯಮಗನಿಗೆ ರಾಜ್ಯವೆಂಬುದು |
ಧರೆಯಮೇಲಿದು ಸುಪ್ರಸಿದ್ಧವು |
ಮೆರೆವರಘುವಂಶದೊಳು ಕಿರಿಯಂಗೆಂಬುದಿದು ಚೋದ್ಯ ||
ಅರಸುಪಟ್ಟವ ನಿನಗೆ ಕಟ್ಟುವೆ |
ನರಸ ತಡವಿನ್ನೇತಕೇಳೈ |
ಹರಿವಿರಂಚಾದಿಗಳು ತಡೆದೊಡೆ ತೊಡೆವೆನವರುಗಳ ||೧೫||

ತಮ್ಮನಾಡಿದನುಡಿಯನದ ಕೇ |
ಳ್ದುಮ್ಮಳಿಸಿದನು ರಾಮನೇತಕೆ |
ಹಮ್ಮು ಸೀನೀಗೆಂದನುಡಿಗಳು ಸರ್ವಸಮ್ಮತವು |
ಒಮ್ಮೆ ತಾತನ ವದನದಿಂ ಹೊರ |
ಹೊಮ್ಮಲೊರ್ನುಡಿ ವೇದವೆಂದದ |
ನೆಮ್ಮ ಸಲಿಸಲೆಬೇಕು ನಾಂ ಸತ್ಪುತ್ರರಾದುದಕೆ ||೧೬||

ಹರಣವುಳಿಸಿದಳೆಂಬ ಸಂತಸ |
ಕಿರದೆ ಬೆಲೆಯಾಗೆರಡುವರಗಳ |
ನರಸನಿತ್ತನು ಮಾತೆ ತಾನದನಿಂದು ಬೇಡಿದಳು ||
ಧರಣಿಯಧಿಕವೊ ನಮಗೆ ತಾತನ |
ಹರಣವಧಿಕವೊ ತಿಳಿದು ನೋಡೈ |
ಸರಿಯೆ ಲೋಕತ್ರಯವುಮೊರ್ವಂಗಮಮ ತಾತಂಗೆ ||೧೭||

ಅನುಜ ಕೇಳಿದರಿಂದೆ ಜನಕನ |
ಘನವೆನಿಪವಾಗ್ದಾನವೆಮ್ಮದು |
ವಿನಯದಿಂದದನಾಂತು ಮುಂಡೆಯೊಳೀಗ ಕಾನನದೆ ||
ಮುನಿಯ ವೃತ್ತಿಯೊಳಾನು ವಸಿಪೆನು |
ಮನದ ದುಗುಡವನೀಗಿ ನೀನೀ |
ಜನನಿಯನು ಸಂತೈಸು ಸನ್ನಯ ಕಾರ್ಯಕನುವತಿಸು ||೧೮||

ಎಂದು ರಾಮನು ನುಡಿಯೆ ಲಕ್ಷ್ಮಣ |
ನೆಂದನಗ್ರಜ ನಿನ್ನನುಜ್ಞೆಯ |
ನೆಂದು ಮುಲ್ಲಂಘಿಸದೆನಗೆ ಬೇರೇನು ಮಾತಿಹುದು ||
ಎಂದು ಜನಿಸಿದೆನಂದುಮೊದಲಾ |
ಗಿಂದುವರೆಗಂ ನಿನ್ನನೆನ್ನಯ |
ತಂದೆಯೆನುತುಮೆ ಭಾವಿಸಿರ್ಪುದ ನರಿಯೆಯಾ ನೀನು ||೧೯||

ಪಿತನ ಸತ್ಯವ್ರತವ ಪೊರೆಯಲು |
ಕುತುಕವಡುತಿಹ ನಿನ್ನ ಮನವನು |
ಪತಿತನೆನಿಸನೆ ತಿದ್ದಲಿಂದಾ ಸುಜ್ಜ ಗಿ ಸಲಕಟಾ ||
ಮತಿಗೆ ತೋರಿಹುದೊಂದಭೀಷ್ಟವು |
ಹಿತದೆ ನೀನಿದ ಸಲಿಸಲಪ್ಪೊಡೆ |
ಜತೆಯೊಳಡವಿಗೆ ನನ್ನನುಯ್ವುದು ದೇವ ನೀಂ ಬಿಡದೆ ||೧೦೦||

ನಿನ್ನನೇ ನೆರೆನಂಬಿ ಸತತವು |
ನಿನ್ನ ಸೇವಾನಿರತನಾಗಿ |
ರ್ಪೆನ್ನ ವರ್ಜಿಸಿ ಪೋಗಲೆನಗಿನ್ನೇನು ಗತಿ ಮುಂದೆ ||
ಬೆನ್ನ ಕಾಪಿಂಗೆನ್ನ ನೇಮಿಸಿ |
ಯಣ್ಣ ನೀನರಮನೆಯೊಳಿರ್ಪಂ |
ತಿನ್ನು ಸುಖದಿಂ ಕಳೆಯ ಕಾಲವ ಘೋರಕಾನನದೆ ||೧೦೧||

ಹೊರೆಯಿದೇಕೆಂದೆನ್ನುತೆನ್ನನು |
ತೊರೆದು ನೀನ್ನೈದಿದೊಡೆ ಪೂಜ್ಯನೆ |
ಹರಣವಿದನಾಕ್ಷಣವೆ ಬಿಡುವೆನು ಸತ್ಯವೆಂದೆನಲು |
ಪರಮಕರುಣಾರ್ಣವನು ಲಕ್ಷ್ಮಣ |
ನುರುವಭಕ್ತಿಗೆ ಮೆಚ್ಚಿ ವತ್ಸನೆ |
ತೆರಳಲನುವಾಗೆಂದನುಜ್ಞೆಯನಿತ್ತನತಿಮುದದೆ ||೧೦೨||

ಮೊದಲನೆಯ ಸಂಧಿ ಸಂಪೂರ್ಣಂ.

ಎರಡನೆಯ ಸಂಧಿ

ಸೂಚನೆ|| ಪಿತನ ಭಾಷೆಯ ಪಾಲಿಸಲು ಭೂ |
ಸುತೆಯು ಮೇಣ್ ಲಕ್ಷ್ಮಣನು ತನ್ನಯ |
ಜತೆಯೊಳೈತರೆ ರಾಮನಡವಿಗೆ ಮುದದೆ ಗಮಿಸಿದನು ||

ಸತಿಯರಗ್ರಣಿ ನೋಡುತಿರ್ದಳ್ |
ಕ್ಷಿತಿಜೆ ತನ್ನಯ ಹರಣದೊಡೆಯಂ |
ಗತಿವಿಷಾದದ ವಿಪಿನವಾಸಕ್ಲೇಶಮೊದವಿದುದ ||
ಪತಿಯ ಬಳಿಗೈತಂದು ದುಃಖಿಸು |
ತತುಳವೈಭವದಾಶೆ ನೆಗ್ಗಿತು |
ಮತಿಯ ಕರುಣಿಸು ನಾಥ ನೀನೆನಗೆಂದಳಿಂದುಮುಖಿ ||೧||

ಅರಸಿ ವಿಧಿ ತಾಂ ಬರೆದ ಲಿಖಿತವ |
ನೊರೆಸಲಾರಿಂದಳವು ವಿಪಿನಾಂ |
ತರಕೆ ತೆರಳುವೆನಾನು ದುಃಖಿಸಬೇಡ ನೀನಿದಕೆ ||
ಬರುವೆನವಧಿಯು ಮುಗಿಯಲೊಡನೆಯೆ |
ತರುಣಿ ಭಕ್ತಿಯೊಳತ್ತೆಮಾವಂ |
ದಿರ ಪದಾಂಬುಜಯುಗವ ಸಂಸೇವಿಸುತೆ ನೀನಿಹುದು ||೨||

ಭರತನನು ಗೌರವಿಸು ಮೇಣವ |
ನರಸಿಯರ ಮನಮೆಚ್ಚೆ ನಡೆ ನೆರೆ |
ಗುರುಜನವನಾದರಿಸು ಸೇವಕತತಿಯ ಪೊರೆ ಹಿತದೆ ||
ಪರಮಮಂತ್ರವೆನುತ್ತೆ ನೀನಿದ |
ನರಿತು ನಡೆದೊಡೆ ಮುಂದೆ ಸೌಖ್ಯವು |
ದೊರೆದಪ್ಪುದು ಮದಿರಾಕ್ಷಿ ನಿನಗಿನ್ನೆಂದನಾ ರಾಮ ||೩||

ಏನಿದೇನಿದು ಪತಿಯೆ ನೀನಿಂ |
ದೀನವೀನಾರ್ಥವನು ಪೇಳುವೆ |
ಮಾನಿನಿಗೆ ಪತಿಸೇವೆಯೇ ವ್ರತವಲ್ಲದಿನ್ನುಂಟೆ ||
ನೀನೆ ಮೊದಲಿದನೆನಗೆ ಬೋಧಿಸಿ |
ಮಾನನಿಧಿ ನೀನೀಗಳೀಪರಿ |
ಜಾಣತನದಿಂ ನುಡಿಯುತಿರ್ಪುದು ತಕ್ಕುದೇ ನಿನಗೆ ||೪||

ಮುನಿಜನಂಗಳು ಧರ್ಮಸೂಕ್ಷ್ಮವ |
ಜನಕಭೂಪನಮುಖದಿನರಿವರು |
ತನುಜೆಯಾ ತಂಗೆನಿಸಿಕೊಂಡಿದನರಿಯೆನೇ ನಾಸು ||
ಇನಿಯ ನಾ ನಿನ್ನಿಲ್ಲಿ ತಳುವದೆ |
ಬನಕೆ ನಿನ್ನೊಡನೀಗಳೈತಹೆ |
ನನುಮತಿಯನೊಲಿದಿತ್ತು ರಕ್ಷಿಪುದೆನ್ನ ಮನದನ್ನ ||೫||

ತಂದೆತಾಯ್ಗಳು ಸೋದರರು ಸುತ |
ರೊಂದುವರು ತಾಂ ಗೈದಕರ್ಮ |
ಕ್ಕಂದವಾದಾ ಫಲವ ನಿಜಸತಿಗಾತ್ಮವಲ್ಲಭನು ||
ಒಂದುತಿಹ ಕರ್ಮಾನುಗುಣಸಂ |
ಬಂಧಫಲದೊಳಗರ್ಧವೈತಹು |
ದೆಂದು ನುಡಿಯವೆ ವೇದಶಾಸ್ತ್ರಪುರಾಣವಚನಗಳು ||೬||

ಸತಿಯೆ ನಿನಗರ್ಧಾಂಗಿಯಾಗಿಹ |
ಸತಿಯ ನೀನಿಲ್ಲುಳಿದು ಪೋಗಲು |
ಪಿತನ ಸತ್ಯದ ಪಾಲನೆಯು ತಾನೆಂತು ಫಲಿಸುವುದು ||
ಕ್ಷಿತಿಪನಾಣತಿ ನಿನಗೆ ಮಾತ್ರವೆ |
ಸತಿಯೆನಿಸಿದೆನಗರ್ಧವಿಲ್ಲವೆ |
ಮತಿಯುತನೆ ನೀನಿದರ ಮರ್ಮವ ಮರೆಯುವುದು ತರವೆ ||೭||

ನಿನ್ನ ಬಳಿಯಿರಲದುವೆ ಸಗ್ಗವು |
ನಿನ್ನ ಬಳಿ ತಪ್ಪಿದೊಡೆ ನರಕವು |
ನಿನ್ನ ಸೇವೆಯೆ ನಿತ್ಯಕರ್ಮವು ದೇವಪೂಜೆಯದು ||
ನಿನ್ನ ನುಡಿಗಳೆ ವೇದವಾಕ್ಯವು |
ನಿನ್ನ ದರ್ಶನವೀಶದರ್ಶನ |
ನಿನ್ನನುಳಿದೀಯಖಿಲಲೋಕವು ಶೂನ್ಯಮಂದಿರವು ||೮||

ಧರಣಿಜೆಯ ನಿಜಭಾವಶುದ್ಧಿಗೆ |
ಪರಮಧಾರ್ಮಿಕರಾಘವೇಶನ |
ವರಹೃದಯವಾನಂದವಾಂತುದು ಹೊರಗೆ ತೋರಿಸದೆ ||
ತರುಣಿಯರಿಗುಪವನವೆ ವಿಪಿನವು |
ತರಳೆ ನೀನಿದನೇಕೆ ಬಯಸುವೆ |
ಹರಿಗಜಾದಿಕದುಷ್ಟಜಂತುಗಳಿಂದೆ ನಿಬಿಡವದು ||೯||

ಕಲ್ಲುಮುಳ್ಳುಗಳಿಂದೆ ಕೂಡಿದ |
ಹಳ್ಳಕೊಳ್ಳಗಳುಳ್ಳನೆಲದೊಳು |
ಪಲ್ಲಟಿಸಿ ಪದಪಲ್ಲವಂಗಳು ನೋಯವೇ ನಿನ್ನ ||
ಎಲ್ಲಿ ನೋಡಿದೊಡಲ್ಲಿ ಕತ್ತಲೆ |
ಖುಲ್ಲಮಿಗಗಳ ಪೆರ್ಚಿದಾರ್ಭಟ |
ವಲ್ಲಿ ಚರಿಸುವುದೆಮಗಮುಸದಳ ಸುಲಭವೇ ನಿನಗೆ ||೧೦||

ಲಲನೆ ನೀನದರಿಂದಮಿಲ್ಲಿಯೆ |
ಕೆಲವುಕಾಲವ ಕಳೆಯುತಿರ್ದೊಡೆ |
ಹಳುವದಿಂ ಮಗುಳ್ಗೈದಿ ನಿನ್ನಯ ಮನಕೆ ಸಂತಸವ |
ಕಳುವದಾನಿತ್ತಪೆನು ಸುದತಿಯೆ |
ಕಳವಳವ ನೀಗುತ್ತೆ ಪಿತೃಪದ |
ಜಲಜಸೇವಾನಿರತೆಯಾಗಿಹುದೆಂದನಾರಾಮ ||೧೧||

ಶಾಂತವಾಗಲಿ ಪಾಪ ಶಿವಶಿವ |
ಕಾಂತ ನೀನೀಪರಿಯೊಳೆಂಬರೆ |
ಕಾಂತೆ ಬೆನ್ನಂಟಿರದೆ ಪತಿಯನು ಸಾಧ್ವಿಯೆಂತಹಳು ||
ಕಾಂತಿವಿರಹಿತಶಶಿಯವೊಲು ದೇ |
ಶಾಂತರಕೆ ನಿಜಪತಿಯ ಕಳುಹು |
ತ್ತೆಂತು ಶೋಭಿಪಳಕಟ ಕುಲವತಿ ಯುವತಿ ಜಗದೊಳಗೆ ||೧೨||

ಜನಕಭೂಪನ ವಿನುತಶಿಕ್ಷೆಯು |
ತನಗೆ ಕಾಂತನ ಪದಸರೋಜವ |
ನನುದಿನವು ಸೇವಿಪುದು ನೀನೆಂದದನು ತಪ್ಪಿಸಲು ||
ಮನುಕುಲಾಧಿಪ ನಿನ್ನ ಚರಣಕೆ |
ತನುವನಿದ ಬಲಿಯಾಗಿ ಸಲಿಸುವ |
ಘನಮನೋರಥವಲ್ಲದಿತರವನೆಳಸೆನಾ ನಿನ್ನು ||೧೩||

ವಲ್ಲಭನೆ ನಿನ್ನವಳನೀಕ್ಷಿಸಿ |
ಖುಲ್ಲಮಿಗಗಳು ಶಾಂತವಾಗವೆ |
ಮಲ್ಲಿಗೆಯವೋಲ್ಮೆಲ್ಲಿತೆನಿಸವೆ ಕಲ್ಲುಮುಳ್ಳುಗಳು ||
ಎಲ್ಲಿಯದು ಭಯ ನಿನ್ನ ಬಳಿಯಿರೆ |
ನಲ್ಲ ನೀನೀನಾಟಕವನೆ |
ನ್ನಲ್ಲಿ ತೋರ್ಪರೆ ಬಲ್ಲೆ ನಾನಿದನೆಂದಳಿಂದುಮುಖಿ ||೧೪

ಅರಸಿ ನಿನ್ನಯ ಬಗೆಯ ಭಾವವ |
ಪರಿಕಿಸಲು ಬೇಕೆನುತೆ ನಾನಿಂ |
ತೊರೆದೆನಲ್ಲದೆ ನಿನ್ನ ನುಳಿದೀಪರಣಮಿರ್ದಪುದೇ ||
ಮೆರೆವಸೀತಾರಾಮನಾಮವು |
ಬರಿದೆ ಬಂದುದೆ ತನಗೆ ನಮ್ಮಯ |
ಪರಮಮೈತ್ರಿಯ ಫಲವದಲ್ಲವೆ ಲೋಕಸಾಕ್ಷ್ಯದೊಳು ||೧೫||

ತೆರಳಲನುವಾಗೆನ್ನ ಜತೆಯುಲಿ |
ತರಳಲಕ್ಷ್ಮಣನೊಡನೆ ನಾವೀ |
ಗರಸನಾಣತಿವಡೆಯಬೇಕೆಂದೆನುತೆ ರಾಘವನು ||
ಮರಳಿ ತಂದೆಯ ಬಳಿಗೆ ನಡೆತಂ |
ದರಸಿಯೊಡನನುಜಾತಯುತನಾ |
ಗೆರಗಿ ನಮಗಿಂದಾಜ್ಞೆಯೀಯೈ ಬೊಪ್ಪ ಕಾನನಕೆ ||೧೬||

ವರುಷಹದಿನಾಲ್ಕೆಂಬುದನು ನಾ |
ವರೆಗಳಿಗೆಗೆಣೆಯಾಗಿ ಭಾವಿಸಿ |
ಸರಸದಿಂ ಕಳೆಯುತ್ತೆ ಮತ್ತೆ ಭವತ್ಪದಾಬ್ಜವನು ||
ಪರಮಸಂಭ್ರಮದಿಂದೆ ಪೂಜಿಪ |
ಪರಿಯ ಕಾಣ್ಬೈ ತಾತ ನಿನ್ನಯ |
ಹರಿಕೆಯೊಂದಿರಲಾವುದಸದಳ ನಿನ್ನ ಮಕ್ಕಳಿಗೆ ||೧೭||

ವನಕೆ ತೆರಳಲು ತವಕಗೊಳುತಿಹ |
ತನಯನೊಡನಾಲಕ್ಷ್ಮಣನನಾ |
ವನಜಮುಖಿಸೀತೆಯನು ತಾಂ ಕಂಡರಸನೆದೆಯೊಡೆಯೆ ||
ಮನದೆ ಜೋಗುದಿಗೊಂಡು ಮರುಗುತೆ |
ಜನಕರಾಜನ ತನುಜೆಯುಂ ಕಾ |
ನನಕೆ ಪೋಪವೊಲಾಯ್ತೆ ಸ್ವೈರಿಪೆನೆಂತು ನಾನಿದನು ||೧೮||

ಬರಿದೆ ನೀನಿಂದೆನ್ನ ನೀತಕೆ |
ಧರಿಸಿದಪೆ ಪಾಪಿಯನು ವಿಶ್ವಂ |
ಭರೆಯೆ ಬಿಸುಡೆನ್ನೆಂದು ಮೂರ್ಛೆಗೆ ಸಂದು ನೃಪನಂದು ||
ಮರೆದನಂಗೋಪಾಂಗವನು ಚೇ |
ತರಿಸುತೊಡನಿರದೆದ್ದು ಮಕ್ಕಳೆ |
ಪರಿಸಮಾಪ್ತಿಯದಾಯ್ತಯೋಧ್ಯೆಯ ಸಿರಿಗೆ ತಾನಿಂದು ||೧೯||

ಒಬ್ಬನಲ್ಲದೆ ಮೂವರಾದಿರಿ |
ಹಬ್ಬವಾದುದು ಪಾಪಕೈಕೆಗೆ |
ಯುಬ್ಬಿ ನಲಿದಪಳಿನ್ನು ತನ್ನಯ ಬುದ್ಧಿಕುಶಲತೆಗೆ ||
ಕೊಬ್ಬಿ ಮೆರೆವಿನಳಂದಚಂದದೆ |
ಮಬ್ಬುಗವಿಸಿದಳೆನ್ನ ಬುದ್ಧಿಗ |
ಮುಬ್ಬಸವನೆನಗಿತ್ತಳೀಪರಿ ಪುತ್ರರಗಲಿಕೆಯ ||೨೦||

ಬುದ್ಧಿಶೂನ್ಯನು ಪಿತನು ರಾಜ್ಯದ |
ವೃದ್ಧಧರ್ಮಕ್ಕೆಡರನೊದವಿಸ |
ಲುದ್ಧರಿಸಲದನವನ ಕೊಲುವಾಸುತನು ಸಿದ್ಧೋಷಿ ||
ಬದ್ಧವಾದೀಕ್ಷತ್ರಧರ್ಮವ |
ಸದ್ದುವರೆ ಕಡಲೊಳಗೆ ರಾಮನೆ
ವಧ್ಯನಾಗಿರುವೆನ್ನ ಕರಿದೀ ರಾಜ್ಯಕರಸಹಿಸು ||೨೧||

ಸುತನೆ ನೀನಿದನೆಸಗಲೆನಗತಿ |
ಹಿತವು ಕೇಳೀಲೋಕಕಿದು ಸ |
ಮ್ಮತವು ಜೇಗದೊಳೆನ್ನ ನಿರಿಯೆಂದರಸನೊರೆಯುತಿರೆ ||
ಪಿತನೆ ತನಗೀಧರಣಿ ಮೇಣ್ಸತಿ |
ಹಿತರುಮೆಂಬರೊಳಾಶೆಯಿಲ್ಲವು |
ಸತತ ನಿನ್ನಯ ಸತ್ಯವುಳಿದೊಡೆ ಸಕಲಸಂಪದವು ||೨೨||

ಸಾವಿರಾರಬುದಂಗಳಿಂ ನಿಜ |
ಭಾವಶುದ್ಧಿಯೊಳಾಳ್ದು ನೆಲವನು |
ಕೋವಿದನೆ ನಿನಗನ್ಯತವಾದಿಯೆನಿಪ್ಪ ಪಸರ್ಬದೆ ||
ನಾವು ಸತತರಾಗುದಿಸಿ ಫಲವೇ |
ನಾವಘನವೀವಿಪಿನವಾಸವು |
ದೇವ ಕೃಪೆಯಿಂ ಬೀಳ್ಕುಡೆಂದನು ರಾಮನೊಲವಿನಲಿ ||೨೩||

ಪರಮಸತ್ಯವ್ರತನೆ ರಾಮನೆ |
ತುರಿಪದಿಂದವಧಿಯನು ಮುಗಿಯಿಸಿ |
ಮರಳಿ ಬಂದೀಧರೆಯ ಭಾರವ ವಹಿಸು ನೀನೆಂದು ||
ಪರಸಿ ಮಗನನು ಒರಿಸಿ ಮಂತ್ರಿಯ |
ಸರಸನೊರೆದನು ಸುತನ ಸಂಗಡ |
ತೆರಳಲೆಮ್ಮಯಸೇನೆ ಬೇಕಾದುಚಿತಗಳಕೂಡಿ ||೨೪||

ವನದೊಳಿರುತಿಹೆನೆಂಬಶಂಕೆಯು |
ಮನಕೆ ತೋರದತೆರದಿನಖಿಲವ |
ನನುಗೊಳಿಸು ಬೊಕ್ಕಸದ ಸರ್ವಸ್ವವನು ಕಳುಹೆನಲು ||
ವನಿತೆ ಕೇಳ್ದಳು ನುಡಿಯನುರದೊಳ |
ಗನಲನುರಿದಂತಾಗೆ ಕೈಕೆಯು |
ಜನಪನನು ದುರುದುರನೆ ಸಿಟ್ಟಿಸಿ ಕೆರಳಿಯುಸಿರಿದಳು ||೨೫||

ಏನನಾಡಿದೆಯರಸ ನಿನಗಿದು |
ಮಾನವೇನೀಪರಿಯೊಳೆಂಬುದು |
ಕಾನನವನೂರಾಗಿ ಕಲ್ಪಿಸಿಯೂರಬರಿಗೈದು |
ಏನುಮಿಲ್ಲದಪಾಳುದೇಶಕೆ |
ಮಾನವಾಧಿಪನೆನಿಸಿ ಭರತನ |
ನೀನದೆಂತೈ ಸತ್ಯಸಂಧರ ಸಾಲಿನಲಿ ಮೆರೆವೆ ||೨೬||

ಸೇನೆ ಮೇಣ್ಸೈಸಿರಿಗಳೆಂಬೀ |
ಪ್ರಾಣವಾಯುಗಳಿಲ್ಲದಿಹ ನಿ |
ಶ್ರಾಣವೆನಿಪೀರಾಜ್ಯಬಿಂಬವದೇಕೆ ಭರತಂಗೆ ||
ಮಾಣಲಾವರ ಸಂದಿತೆನಗಿ |
ನ್ನೇನು ಮಗನೊಡನಡವಿವುಗುವೆನು |
ನೀನು ರಾಮಂಗಿತ್ತು ಸಕಲವನೊಲವಿನಿಂ ಬಾಳು ||೨೭||

ಇಂತು ಕೋಪದೆ ನುಡಿವ ಮಾತೆಗೆ |
ಶಾಂತನಹ ರಾಘವನು ವಂದಿಸಿ |
ಚಿಂತೆ ಬೇಡಿದಕಿನ್ನು ಜನನಿಯೆ ಮನ್ನಿಪುದು ನೀನು ||
ಸಂತಸದೆ ನಾನೆನ್ನ ತಮ್ಮಗ |
ಸಂತವಸ್ತುಗಳೊಡನೆ ಭೂಮಿಯ |
ಸಂತು ಮೊದಲಲಿ ಬಿಟ್ಟು ಮತ್ತೆಯುಮೆಳಸುವೆನೆ ನುಸದೆ ||೨೮||

ತಂದೆಯೆನ್ನೊಳಗಧಿಕಮಮತೆಯಿ |
ಸಂದಮಾತ್ರದೆ ಮೌನಿವೃತ್ತಿಯೊ |
ಳಿಂದು ಕಾಡೊಳು ಚರಿಪ ತನಗೀದುಂದು ಸಲ್ಲುವುದೆ ||
ಮಂದರಾದ್ರಿಯು ಜಲದೆ ತೇಲ್ದೊಡ |
ಮಿಂದುರವಿಗಳು ಧರಣಿಗಿಳಿದೊಡ |
ಮೆಂದಭಾಷೆಗೆ ತಪ್ಪೆ ನಡೆಯೆನು ತಾಯೆ ಕೇಳೆಂದ ||೨೯||

ಜನನಿಗಿತ್ತುತ್ತರವನೀಪರಿ |
ಜನಕನನು ನೋಡುತ್ತೆ ವಚಿಸಿದ |
ನನುಜಭರತಂಗಖಿಳರಾಜ್ಯವನಿತ್ತ ಬಳಿಕಿನ್ನು ||
ತನಗೆ ವೈಭವವೇಕೆ ಹೆರರಿಗೆ |
ತನೆಯ ಹಸುವನು ಕೊಟ್ಟು ಹಗ್ಗಕೆ |
ಮನದೆ ಜಿಸುಗುವರಂತೆ ಕಾಣ್ಬುದು ನಮ್ಮ ನಡೆವಳಿಯು ||೩೦||

ಅರಸ ನಿನ್ನನು ಮುಪ್ಪಿನಲ್ಲುಪ |
ಚರಿಸದೀಪರಿ ಪೋಪೆನೆಂಬಾ |
ಕೊರತೆಯೊಂದೇ ಕೊರೆವುದಲ್ಲದೆ ಯೆಣಿಸೆನಿತರವನು ||
ಧರಿಸಿ ಮುನಿವೇಷವನು ವಿಪಿನದೆ |
ಚರಿಸಲೋಸುಗ ವಲ್ಕಲವ ನೀಂ |
ಪರಸುತಿತ್ತೊಡೆ ಸಾಕು ಸಕಲವು ಬಂದುದೆನಗಿಂದು ||೩೧||

ಕೇಳಿನೊಡನೆಯೆ ರಾಮನೆಂದುದ |
ಖೂಳಕೈಕೆಯು ಪೋಗಿ ತಂದದ |
ನೇಳು ರಾಘವ ಧರಿಸು ಕೊಳ್ಳೆಂದೆಸೆದಳಿದಿರಿನಲಿ ||
ತಾಳಿ ಮುದವನು ಕರವ ನೀಡಿ ಕೃ |
ಪಾಳುವಂಗೀಕರಿಸಿ ಯುಡುತಿರೆ |
ಕಾಳರಕ್ಕಸಿ ನೋಡಿ ಹಿಗ್ಗಿದಳಂದು ಮನದಂದು ||೩೨||

ಜನನಿ ಯೆನಗೊಂದಿಡಲುಬೇಕೆಂ |
ದನುನಯದೆ ಲಕ್ಷ್ಮಣನು ಯಾಚಿಸು |
ವನಿತರೊಳು ಮತ್ತೊಂದು ನಾರುಡೆ ಬಿದ್ದುದಿದಿರಿನಲಿ ||
ಘನಪರಾಕ್ರಮಿಯದನು ನಡುವಿಂ |
ಗನುಸರಿಸಿ ಬಿಗಿಯುತಿರಲಾ ಪಾ |
ಪಿನಿಯು ಬಿಸುಟಳದೊಂದನಾ ಶಶಿಮುಖಿಗೆ ಜಾನಕಿಗೆ ||೩೩||

ಬನದೆ ಬಲೆಯನು ಕಂಡ ಹರಿಣಿಯು |
ಮನದೆ ಬೆದರುತೆ ಬೆಚ್ಚುವಂದದೆ |
ಮನುಕುಲೇಶನ ರಾಣಿ ಕಂಡದ ಬೆದರಿಬೆಚ್ಚಿದಳು ||
ತನಗಮುಡುಗೊರೆಯಿತ್ತರತ್ತೆಯ |
ರೆನುತೆ ಕಂಬನಿಯುಗುವ ನೇತ್ರದಿ |
ಪಿನಿಯನಾ ನೊಗನೋಡುತಿರ್ದಳು ತಿಳಿಯದುಡಲದನು ||೩೪||

ಕಂಡುದೀವ್ಯತಿಕರವ ದಶರಥ |
ಮಂಡಲೇಶನ ಮಾನಿನೀಜನ |
ದಿಂಡುದರಿವವರಿಲ್ಲಲಾ ಈ ಭಂಡಕೈಕೆಯಸು ||
ಗಂಡನಿಗೆ ಮದ್ದೊತ್ತಿ ನಮ್ಮಾ |
ಮಂಡೆತುಂಬಿದ ಬಳಗವಸು ತಾಂ |
ಕಂಡು ಸೈಸದೆ ಕಿಚ್ಚನಿಕ್ಕಿದಳಿಂದು ಪಾತಕಿನಿ ||೩೫||

ಎಳೆಯ ಕರುವಿಗೆ ಹೊರೆಯ ಹೊರಿಸ |
ಲ್ಕೆಳೆಯಲಾರದೆ ನಡುಗುತಿರಲದ |
ನೆಳೆದು ಚಾವಟಿಯಿಂದೆ ಹೊಡೆಯುವಪರಿಯೊಳಿಂದಿವಳು ||
ಲಲಿತಗಾತ್ರಿಯ ಜನಕಪುತ್ರಿಯ |
ಹಳುವಕಟ್ಟುವುದಕಟ ಸಾಲದೆ |
ವಲುಕಲವನಿತ್ತಪಳು ಛೀ ತೆಗೆಯೆನುತೆ ಹಲುಬಿದುದು ||೩೬||

ಧೀರಗುಣಗಂಭೀರ ಸತ್ವಾ |
ಚಾರನಾದುದರಿಂದೆ ರಾಮನು |
ಸೈರಿಸಿದನಲೆ ಮಿಕ್ಕರಿಗಿದೇಂ ಸಾಧ್ಯವೇ ಜಗದೆ ||
ಭೀರುವಿನ ಬಳಿಗೈದಿ ನಂಬಿಸಿ |
ನಾರಸೀರೆಯನುಡಿಸಿದನು ಸುರ |
ನಾರಿಯರು ಕಂಬನಿಯೊಳಳ್ದರು ಬೈದು ಕೈಕೆಯನು ||೩೭||

ಕಮಲಸಂಭವಸುತ ವಸಿಷ್ಠನು |
ವಿಮಲಮೂರ್ತಿಯ ಲೋಕನಟನಾ |
ಕ್ರಮವನರಿತುಂ ಸೈಸದೆಂದನು ದುಷ್ಟಮಾನಿನಿಗೆ ||
ಭ್ರಮಿಸಿದರಸನ ವಚನದಿಂದಿದು |
ಸಮವು ಮುನಿಜನವೇಷ ರಘುಜಂ |
ಗಮಮ ಕೋಮಲಗಾತ್ರಿಜನಕಸಪುತ್ರಿಗೇಂಸಮವೆ ||೩೮||

ಒಪ್ಪಿದೊಡೆ ರಾಜಾಜ್ಞೆಯೊಂದಿದ |
ನೊಪ್ಪವೆವೆ ನಿನ್ನೀ ದುರಾಕೃತ |
ಮಪ್ಪಕಾರ್ಯವನೆನುತೆ ಗದರಿಸಿ ತೆಗೆಸಿದನು ಮಡಿಯ ||
ತಪ್ಪಸಿವರಾಡುವರೆ ಬಾಲಿಕೆ |
ಯೊಪ್ಪುವಾಭರಣಾದಿವಸ್ತುಗ |
ಳಿಪ್ಪವೆಲ್ಲವ ಕಳಿಪು ಜತೆಯಲ್ಲೆಂದನಾನೃಪತಿ ||೩೯||

ಚಿತ್ತದಾಸರುಮಧಿಕಮಪ್ಪುದು ।
ಪೆತ್ತವರಿಗಿಲ್ಲಿರ್ದೊಡಾನೆನು ।
ತುತ್ತಮೋತ್ತಮರಾಮನಾಜ್ಞೆಯನೀವುದೆಮಗೆಂದು ॥
ಸುತ್ತಿ ಬಲವಂದೆರಗಿ ಜನಕರ ।
ಮತ್ತೆ ಮಲತಾಯಡಿಗೆ ವಂದಿಸಿ ।
ಹತ್ತಿರಿರ್ದರಿಗೆಂದನೀಪರಿ ಮುಗಿದು ಕರಯುಗವ ॥೪೦॥

ಚಿತ್ತವಿಪುದೀನುಡಿಯನಖಿಲರು ।
ಸತ್ಯವಂತನು ಪತಿಯಮೂಲ್ಯದ ।
ವಿತ್ತವಿತ್ತೊಡೆ ಸತಿಗೆ ತಾನದನಾರಿಗಿತ್ತಪಳು ॥
ಪೆತ್ತಕುವರಂಗೀಯೆ ಜೋದ್ಯವೆ ।
ಉತ್ತಮಸ್ತ್ರೀಧರ್ಮವಲ್ಲವೆ ।
ಮತ್ತೆ ಮಧ್ಯಮಮಾತೆಯನು ನೀವೆತ್ತಿಯಾಡದಿರಿ ॥೪೧॥

ಪೋಗಿ ಬರ್ಪೆನು ನಾನು ಕಾನನ ।
ಕೀಗ ನಿಮ್ಮನು ಬೇಡಿಕೊಳ್ವೆನು ।
ರಾಗವಿರಹಿತಚಿತ್ತ ಮೇಣತಿವೃದ್ಧ ಮಕ್ಕಾತ ॥
ಈಗಲೆನ್ನೊಳಗಿರ್ಪನಿಮ್ಮನು ।
ರಾಗವನು ಸಲೆ ಬೀರುತವನನು ।
ಜಾಗರೂಕತೆಯಿಂದೆ ನೋಡುವುದೆಂದು ಯಾಚಿಸುತೆ ॥೪೨॥

ವಿರಸವಾಗಿಹ ಮುಖದ ಕಾಂತಿಯ ।
ಧರಿಸಿದಜಿನದ ಚೀರದುಡುಗೆಯ ।
ಪರಮಪುರುಷನು ತಮ್ಮನೊಡಗೂಡುತ್ತೆ ಸತಿವೆರಸು ॥
ಧರಣಿಪಾಲನ ಬಳಿಯನುಳಿದಂ ।
ದರಮನೆಯ ಪೊರಮಟ್ಟು ಬಾಹ್ಯದೆ ।
ಪುರನಿವಾಸಿಗಳೆಲ್ಲ ನೆರೆದಿಹ ತಾಣಕೈತಂದ ॥೪೩॥

ನೆನೆದಳೇನನು ಕೈಕೆ ಮತ್ಸರ ।
ವಿನಿತು ವನಿತೆಗದೇಕೆ ದುಷ್ಕುಲ ।
ಜನಿತೆಯಹಳಿಂದೇಕೆ ಕೃತಜನಶೋಕ ನಿರ್ಭೀಕೆ ॥
ಜನಪನಿವಳನು ತಂದು ತನ್ನರ ।
ಮನೆಗೆ ವೈಶ್ವಾನರನ ತುಗಿಸಿಯೆ ।
ತನುಭವರಿಗೀ ಹಾಡಗೈದನೆ ಎಂದುದಖಿಳಜನ ॥೪೪॥

ತಪ್ಪನೇನನು ಕಂಡು ಹಿರಿಯನೆ |
ನಿಪ್ಪರಾಮನನಡವಿಗಟ್ಟಿದ |
ನಿಪ್ಪಸರದೀಕಾರ್ಯಕೆಂತೊಪ್ಪಿದರು ಮಂತ್ರಿಗಳು ||
ಕಪ್ಪವನು ನಾಂ ತೆರುವುದಿಲ್ಲವೆ |
ಒಪ್ಪುಗೊಳಿಸದೆ ನಮ್ಮನೀಗಳ್ |
ಮುಪ್ಪಿನವರಾ ನಡೆವಳಿಯನಿವನೆಂತು ಮುರಿದಪನು ||೪೫||

ಜನಪನನೆ ಕೇಳುವೆವು ನಾವೀ |
ಗೆನುತೆ ಕೆಲವರು ಮತ್ತೆ ಕೆಲವರು |
ನನುಮತವೆ ನೀವಿಂತು ಪೇಳ್ವುದು ರಾಯನಾಜ್ಞೆಯಿದು ||
ಜನಕನಲ್ಲವೆ ನಮಗೆ ಭೂಪತಿ |
ಯೆಣಿಸಬಹುದೇ ತಪ್ಪನವನೊಳು |
ಮನುವೆನಿಪ ನವಮ್ಮಾದಿಪುರುಷನ ನೇಮವಿದು ಜಗಕೆ ||೪೬||

ಅದರಿನಿಂದೀರಾಯನಾಜ್ಞೆಯು |
ಪದುಳವೀಯದಬಳಿಕ ನಮಗಿಹ |
ಹದನು ಬೇರೇನೀಯಯೋಧ್ಯೆಯನುಳಿವುದೇ ಮತವು ||
ಮುದವು ನಮಗಿದು ರಾಮಚಂದ್ರನ |
ಪದವ ಭಜಿಸುತ ಕಾಡೊಳಿರ್ಪುದು |
ಸದಮಲನ ಸಂಗಡವೆ ಪೋಗುವೆವೆಂದರವರಂದು ||೪೭||

ಪುರಜನರು ತಮತಮಗೆ ತೋರಿದ |
ಪರಿಯೊಳಾಡುತ್ತಿರಲು ರಾಮನು |
ಕರೆದು ನಸಿಹಕೆ ಸತ್ಯಸಂಧನು ತಂದೆ ನುಡಿದುದನು ||
ಅರಿತು ಪುತ್ರನು ಗೈಯದಿರಲಾ |
ನರಕಭಾಜನವೆನಿಪನದರಿಂ |
ಧರಿಸಿ ಶಿರದೊಳಗದನು ಕಾನನಕಿಂದು ತೆರಳುವೆನು ||೪೮||

ಭರತನೆನ್ನಯ ತಮ್ಮನಾಳ್ವನು |
ಧರೆಯ ಸದ್ಗುಣನಿಲಯ ಸಾತ್ವಿಕ |
ದೆರೆಯ ಧಾರ್ಮಿಕನವನ ಸೇರಿಯೆ ಸುಖವೆ ನೀವಿಹುದು ||
ಭರದೊಳೀಯವಧಿಯನು ಮುಗಿಯಿಸಿ |
ಮರಳಿ ಬಂದೀನಿಮ್ಮ ಹೃದಯಕೆ |
ಪರುಷವಿತ್ತಪೆನೆನುತೆ ನಂಬಿಸಿ ಪುರದೊಳೈತಂದ ||೪೯||

ಮೆರೆವಯೋಧ್ಯೆಯ ರಾಜವೀಧಿಯು |
ತೆರಹುಗಾಡದಂತಾಗೆ ಜನಗಳ |
ನೆರವಿ ಕೂಡಿತು ರಮಣಿಯರು ನೆಲೆವಾಡದಗ್ರದಲಿ ||
ಪರಮಕರುಣಾಸಿಂಧು ಪೋಪೆಯ |
ಚರಣನತಜನಬಂಧು ಪೋಪೆಯ |
ದುರಿತಹರ ನೀನೆಮ್ಮನುಳಿದೊಡೆ ಪೊರೆವರಾರಿಹರು ||೫೦||

ಸಿರಿಗೆ ಸರಿಯಹ ಸೀತೆಯೊಡವೆರೆ |
ದರಸ ನೀನಿಲ್ಲಿಂದೆ ತೆರಳಲು |
ನರಕವೆನಿಸದೆ ಪೊಳಲು ತಾನಿದು ದೇವ ಚಿತ್ತೈಸು ||
ದುರುಳೆ ಕೈಕೆಯ ಮಚ್ಚರದ ನುಡಿ |
ಗರಸ ನೀನಿಂತೆಮ್ಮನುಳಿವುದು |
ಸರಿಯೆ ಸರ್ವೋತ್ತಮನೆ ಯೆನ್ನುತೆ ಚೀರ್ದು ಹಲುಬಿದುದು ||೫೧||

ಪುರಜನಂಗಳ ದೀನರವದಿಂ |
ಕರಗಿತಂತಃಕರಣಮುಂತುಂ |
ಪೊರಗೆ ತೋರಿಸದದನು ನಡೆಯುತೆ ಪುರವ ಪೊರವಡಲು ||
ಅರಸನಪ್ಪಣೆವಿಡಿದು ರಥವನು |
ವರಸುಮಂತ್ರನು ತರಲು ರಾಘವ |
ನರಸಿಯೊಡನನುಜಾತನೊಡನದನೇರಿ ತೆರಳಿದನು ||೫೨||

ಎರಡನೆಯ ಸಂಧಿ ಸಂಪೂರ್ಣಂ.

ಮೂರನೆಯ ಸಂಧಿ.

ಸೂಚನೆ || ವರಸುಮಂತ್ರನು ವನದದೆಸೆಯಿಂ |
ತಿರುಗಿ ಪುರಕೈತಂದು ರಾಮನ |
ಪರಿಯ ಪೇಳಲು ಹರಣವುಳಿದನು ಕೂಡೆ ದಶರಥನು ||

ಇಂತು ಪೋಗುತೆ ಸರಯು ತಮಸೆಯು |
ಮಂತು ವೇದಾವತಿಯು ಮುಂತಾ |
ದಂತರದ ನದಿಗಳನು ದಾಂಟಿಯೆ ಮೂರನೆಯದಿನದೆ ||
ಚಿಂತೆಯೊಂದದೆ ಕಂದಮೂಲಾ |
ಸಂತಫಲಗಳನುಂಡು ಪಸಿವನು |
ಶಾಂತಭಾವವನಾಂತು ಕಳೆಯುತೆ ಮುಂದೆ ಪೋಗುತಿರೆ ||೧||

ಹರನ ಶಿರದಿಂದಿಳಿದು ಧರೆಯನು |
ಪರಮಪಾವನಗೈದು ಮುಳುಗಿದ |
ನರರ ಜನ್ಮಾಂತರದ ಪಾಪವನೆಲ್ಲ ತೊಳೆಯುತ್ತೆ ||
ವರಭಗೀರಥಸಾರ್ವಭೌಮನ |
ನಿರುಪಮಾನತಪಃಫಲಂಬೋಲ್ |
ಮೆರೆವಭಾಗೀರಥಿಯ ಕಂಡರು ರಾತ್ರಿಸಮಯದಲಿ ||೨||

ಅಂದಿನಿರುಳನು ಕಳೆದು ಭೂರುಹ |
ದೊಂದರಡಿಯಲಿ ಸೀತೆವೆರಸರ |
ವಿಂದನಯನನು ಮೂರನೆಯದಿನವೆಳ್ಳು ಬೆಳಗಿನಲಿ ||
ಚಂದದಿಂದಂ ಸ್ನಾನಸಂಧ್ಯಾ |
ವಂದನಂಗಳ ತೀರ್ಚಿ ಸಚಿವಂ |
ಗೆಂದನಂದು ಸುಮಿತ್ರನೇ ಪಿಂದಿರುಗು ನೀನಿನ್ನು ||೩||

ಅಳಲಿಗೆಡೆಯಾಗಿರ್ದ ತಂದೆಯ |
ನುಳಿದು ಬಂದೆವು ಸಂತವಿಪುದಕೆ |
ಬಳಿಯೊಳಾರಿನ್ನಿಹರು ಹಿತರಪ್ಪಾಪ್ತಮಂತ್ರಿಗಳು ||
ಕಳುಹಿ ಚರರನು ಬೇಗ ಕರೆಯಿಸಿ |
ನಲವಿನಿಂ ಭರತನನು ಭೂಮೀ |
ಲಲನೆಗರಸೆಂದೆನಿಸಿ ಮೊದಲಿನ ತೆರದೆ ನೀನಿಹುದು ||೪||

ತರಳಭರತಂ ಭ್ರಾತೃಸೌಹೃದ |
ನಿರತನಾದುದರಿಂದೆ ರಾಜ್ಯದ |
ಸಿರಿಯನೊಲ್ಲದೆ ಮಾತೆಯನು ದುಷ್ಟಾತ್ಮೆಯೆಂದೆನುತೆ ||
ಕೆರಳಿ ಕೋಪವನೆಸಗಲಾತಂ |
ಗೊರೆದು ಬುದ್ಧಿಯನಣ್ಣನಾಜ್ಞೆಯು |
ಧರಿಸಿ ಮಕುಟವನಿಳೆಯನಾಳೆಂದೆನುತೆ ಪೇಳುವುದು ||೫||

ಎನ್ನ ಮಾತೆಗೆ ಸಚ್ಚರಿತ್ರೆಗೆ |
ಖಿನ್ನವಿಸುವುದು ನಿನ್ನ ಕುವರನು |
ಮುನ್ನಿನಂದದೆ ಸುಖದೊಳಿರ್ಪನು ಬೇಗನೈದುವನು ||
ಸನ್ನುತಾತ್ಮನ ಭರತನನು ನೀ |
ನಿನ್ನ ನಿಜಸುತನಂತೆ ಕಾಣ್ಬುದು |
ಮನ್ನಿಪುದು ಬಿನ್ನಪವನಿಂತಿದನೆಂದು ಪೇಳುವುದು ||೬||

ರಾಮನೀಪರಿ ನುಡಿಯಲದನಾ |
ಸ್ವಾಮಿಭಕ್ತನು ಕೇಳ್ದು ನಿಮ್ಮನು |
ನೀಮಹಾರಣ್ಯದಲಿ ಬಿಟ್ಟಕಟೆಂತು ಪೋದಪೆನು ||
ಕಾಮಿಸೆನು ನಾನೇನುಮಂ ನೀಂ |
ನೇಮವಿತ್ತೊಡೆ ಜತೆಯೊಳಿರ್ಪೆಂ |
ಪ್ರೇಮದಿಂದಿದ ಕರುಣಿಸೆಂದನು ಮಂತ್ರಿ ಕೈಮುಗಿದು ||೭||

ತಮ್ಮನೊಡನಿಹ ತನಗೆ ಕಾಡಿದು |
ರಮ್ಯವಾಗಿಹ ಭವನದಂತಿದೆ |
ನಿಮ್ಮದಿಗೆ ಭಯವುಂಟೆ ನನಗಿನ್ನಿಲ್ಲಿ ನೀನರಿಯಾ ||
ಸಮ್ಮತವು ನನಗಿದುವೆ ನೀನಿಂ |
ದೆಮ್ಮ ತಾಯ್ತಂದೆಗಳನೋವು |
ತ್ತುಮ್ಮಳವ ಬಿಡಿಸಿದೊಡೆ ಸಾಕೆನ್ನೆಂದನಾರಾಮ ||೮||

ರಾಯಗುವರನ ಮಾತಿಗುತ್ತರ |
ವೀಯಲಾರದೆ ನಮಿಸಿ ಕೈಕೆಯು |
ಮಾಯೆಗಚ್ಚರಿವಡುತೆ ಸಚಿವನು ರಥದೆ ಮರಳಿದನು ||
ರಾಯರಾಮನ ಬರವ ಕೇಳ್ದಂ |
ದಾಯತಾತ್ಮನು ಮಿತ್ರಗುಹನೈ |
ತೀಯರಣ್ಯದ ರಾಜ್ಯಭಾರವ ವಹಿಸು ನೀನೆನಲು ||೯||

ಗುಹನೆ ನಿನಗೀಮಧುರವಚನವು |
ವಿಹಿತವೈಸಲೆ ಮುನಿಯವೃತ್ತಿಯ |
ವಹಿಸಿ ಬಂದಿಹ ತನಗೆ ನಿನ್ನೀಬಯಕೆ ಸಲ್ಲುವುದೆ ||
ಮಿಹಿರವಂಶದ ರಾಜಪುತ್ರನು |
ಮಹಿತಧರ್ಮಾಚರಣನೆನಿಸಿದ |
ನಹಹ ಮೆನುತೀಜಗವು ನಗಲಾಂ ಬದುಕಿ ಫಲವೇನು ||೧೦||

ಎಂದು ನುಡಿದೊಲವಿಂದೆ ವಟತರು |
ವಿಂದೆ ಹಾಲನು ತಂದು ಜಡೆಗಳ |
ನಂದು ವಿರಚಿಸಲಾ ಸಹೋದರನೊಡನೆ ರಘುವರನು ||
ಚಂದಿರಾನನೆ ಗಂಡಮೈದುನ |
ರಂದಿನಿರವನು ಕಂಡು ದುಃಖದೆ |
ನೊಂದು ಬೈದಳು ಶಪಿಸಿ ದುಷ್ಕೃತನಿಧಿಯ ಹತವಿಧಿಯ ||೧೧||

ಜನಕಚಕ್ರೇಶ್ವರನ ಭವನದೊ |
ಳನಿಮಿಷರ ಧಿಕ್ಕರಿಪತೇಜದೆ |
ಘನವಿವಾಹದೊಳೆಸೆದ ಸಿರಿಮೈಸೊಬಗಿಗೀವಿಧಿಯೆ ||
ಇನಕುಲಾನ್ವಯಸಾರ್ವಭೌಮರ |
ವಿನುತಮಣಿಮುಕುಟಕ್ಕೆ ಸಲ್ವೀ |
ಘನಶಿರಕೆ ಜಟೆ ಹವಣೆ ಎಂದಳು ಹಲುಬಿ ಮೃಗನಯನೆ ||೧೨||

ಅರಸಿಯನು ಸಂತವಿಸಿ ರಾಮನು |
ಮೆರೆವಯೋಧ್ಯೆಯ ಕಡೆಯನೀಕ್ಷಿಸಿ |
ಕರವ ಮುಗಿದನು ತರಣಿವಂಶದ ಶೂರರೆಡೆವಿಡದೆ ||
ವರವ ಪಡೆದರು ನಿನ್ನ ಸೇವಿಸಿ |
ಪರಮಪಿತೃಋಣವೆನ್ನ ತಡೆದಿದೆ |
ಭರದೆ ತೀರಿಸಿಯದನು ಮರಳುವುದೆಂದನುಗ್ರಹಿಸು ||೧೩||

ಎನುತೆ ಯಾಚಿಸಿ ಗುಹನನೀಕ್ಷಿಸಿ |
ವಿನಯಶೀಲನೆ ಬೇಗ ನಾವೆಯ |
ನನುಗೊಳಿಸು ನೀನೆಂದು ನುಡಿಯಲು ತರಿಸಲದನವನು ||
ಜನಕಸುತೆಯೊಡನನುಜಸಹಿತನು |
ಮನುಕುಲೋದ್ಭವನೇರಿಯದನಾ |
ತನಜನನು ಬೀಳ್ಕೊಟ್ಟು ನಿರ್ಜರಗಂಗೆಯನು ದಾಂಟಿ ||೧೪||

ತೆರಳಿಯಲ್ಲಿಂ ಮುಂದೆ ನಡೆಯಲು |
ಚರಿಸಲಸದಳಮೆನಿಪಬಟ್ಟೆಯೊ |
ಉರುವಕಲ್ಮುಳ್ಳಿಡಿದಘೋರಾರಣ್ಯಮಧ್ಯದಲಿ |
ಧರಣಿಜೆಯ ಚರಣಗಳು ಕುಂದಿದು |
ವಿರದೆ ನೊಂದುವು ಹಜ್ಜೆಹಜ್ಜೆಗೆ |
ತಿರುಗಿ ಪತಿಯನು ನೋಡಿ ನಡೆದಳು ಗದಗದಿಸಿಯಳುತೆ ||೧೫||

ನೋಡಿದನು ರಾಘವನು ಸುದತಿಯ |
ಪಾಡಸಿವಳಕಟೆಂದಳಲ್ಬಳು |
ಕಾಡಿನಾಟವು ಸದರವಲ್ಲವು ಕಷ್ಟವೆಂದೆನಲು ||
ಕೂಡೆ ನೀನಿರಲೇನು ಭಯವೆಂ |
ದಾಡಿ ನನ್ನನೆ ನಂಬಿ ಬಂದಳು |
ಮಾಡಲೇನನು ಮುಂದೆ ನಾನೆಂದಳಲಿದನು ಮರುಗಿ ||೧೬||

ಸೈರಿಸಿದನೆಲೆದೇವಿ ವಿಧಿಯನು |
ಮೀರಲಾರಿಂದಳವು ಪೂರ್ವದೊ |
ಳಾರನೀಪರಿಯಳಲಿಸಿದೆವೋ ಒದವಿತಿಂದೆಮಗೆ ||
ತೋರುತಿದೆ ನೋಡಲ್ಲಿ ಸರಸಿಯು |
ಸಾರಿ ನಾಂ ಜಲವೀಂಟಿ ದಣಿವನು |
ನೀರೆ ಕಳೆವೆವು ಬಾರೆನುತೆ ಕರವಿತ್ತು ನಡೆಸಿದನು ||೧೭||

ಸರಸಿಯಿರ್ಪೆಡೆಗೈದಿ ನೀರಿಂ |
ಕರಪದಂಗಳ ತೊಳೆದು ತಾಂ ಬಳಿ |
ಕಿರದೆ ತಡಿಯೊಳ್ಜಾನಕಿಯ ಕುಳ್ಳಿರಿಸಿ ಸೋದರರು ||
ಹರಿಣಗಳ ಬೆಂಬತ್ತಿ ಸಾರ್ದತಿ |
ಭರದೆ ಬೇಂಟೆಯನಾಡಿ ಮಾಂಸದೆ |
ಪರಿಹರಿಸಿದರು ಪಸಿವನೈದಿಯದೊಂದುಮರದೆಡೆಯ ||೧೮||

ಬಳಿಕ ಗಂಗಾಯಮುನೆಯರು ಸಂ |
ಗಳಿಸಿದಮಳಕ್ಷೇತ್ರಕೈತಂ |
ದೊಲಿದು ಭಾರದ್ವಾಜರಾತಿಥ್ಯವನು ಕೈಕೊಂಡು ||
ಕಳೆದು ರಾತ್ರಿಯನಲ್ಲಿ ಮರುದಿನ |
ತಳುವದವರಿಂ ಚಿತ್ರಕೂಟದ |
ನೆಲೆಯನರಿದಲ್ಲವರು ವಾಸಿಸಲಾಜ್ಞೆಯೊಂದಿದರು ||೧೯||

ತೆರಳುತಿರೆ ಗೋಚರಿಸಿತಿದಿರಲಿ |
ಹರಿಕರಿಪ್ರಮುಖೋಗ್ರಮೃಗಭೀ |
ಕರಮದೆನಿಪಾಚಿತ್ರಕೂಟಾಚಲದ ಕಾನನವು ||
ಮೆರೆವ ಶುಕಪಿಕಗರುಡಮೊದಲಹ |
ಪರಿಪರಿಯ ಪಕ್ಷಿಗಳನೊಳಕೊಂ |
ಡಿರದೆ ಸಭವಂ ತುಡುಕುತಿಹ ತರುನಿಚಯದಿಂ ಕೂಡಿ ||೨೦||

ಅತ್ತ ರಥವನು ವರಸುಮಂತ್ರನು |
ಪತ್ತಿ ತಿರುಗಿದನೊಡನೆ ನಗರಿಗೆ |
ಚಿತ್ತದಲಿ ನೃಪಪುತ್ರರಗಲಿಕೆಯಿಂದೆ ದುಃಖಿಸುತೆ ||
ಹತ್ತಿರೈತರೆ ಕಂಡು ಪೌರರು |
ಮುತ್ತಿಕೊಂಡರು ರಥದ ಸುತ್ತಲು |
ಬೆತ್ತಲೆಯ ತೇರೇತಕೈದಿತು ರಘುಜನೆಲ್ಲೆನುತೆ ||೨೧||

ಪರಮಪುರುಷನದೆತ್ತ ಪೋದನು |
ಪುರಕೆ ಮರಳನೆ ನಮ್ಮ ಪೊರೆಯನೆ |
ಚರಣಸೇವೆಯ ಸುಖವು ದೊರೆಯದೆ ಮುಂದೆ ನಮಗವನ ||
ಅರುಹು ನೀನಿದನೆಂದು ಮೊರೆಯಿಡು |
ವರನು ಸಂತವಿಡುತ್ತೆ ಮುಂದಕೆ |
ತೆರಳಿಯರಮನೆವೊಕ್ಕನಾತನು ರಥವ ಹೊರಗಿರಿಸಿ ||೨೨||

ಬಂದಸಚಿವನ ನೋಡಿ ಭೂಪನು |
ನಂದನರನಾವೆಡೆಯೊಳುಳಿದೈ |
ಮಂದಭಾಗ್ಯಂಗೆನಗೆ ಬುದ್ಧಿಯನೇನನೊರೆದಿಹರು ||
ಇಂದು ನೀನವರೆಂದನುಡಿಗಳ |
ನೊಂದನಾದೊಡಮುಳಿಯದರಿಪುತೆ |
ಬೆಂದುಗಂಬಡುತಿರ್ಪಮನವನು ಸಂತವಿರಿಸೆಂದ ||೨೩||

ರಾಯನಾಡಿದಮಾತಿಗುತ್ತರ |
ವೀಯಲಸದಳಮೆನಿಪದುಃಖದೆ |
ಜೀಯ ತವನಂದನರು ಮಂದಾಕಿನಿಯ ನೆರೆದಾಂಟೆ ||
ಕಾಯಬಲಶರಯುತರು ನಾವಸ |
ಹಾಯವೃದ್ಧನು ಜನಕ ನಿನಗಂ |
ನ್ಯಾಯವಾ[illegible]ನ ಸೇವೆ ಪೋಗೆಂದೆನ್ನ ಕಳುಹಿದರು ||೨೪||

ಇಂತು ನುಡಿದಾಮಂತ್ರಿ ತೆರಳೆ ದು |
ರಂತಮಾದಳಲಾವರಿಸಿ ನೃಪ |
ನಂತರಂಗವ ಸುಡುತುಮಿರೆ ಕೌಸಲ್ಯೆಯನು ಕರೆದು ||
ಪಿಂತೆ ಮುನಿಪುತ್ರಂಗದೊರ್ವಂ |
ಗಂತಕನು ನಾನಾದೆನರಿಯದೆ |
ಚಿಂತೆಯೊಂದುತ್ತವನ ಪಿತನಂದೆನ್ನ ಶಪಿಸಿದನು ||೨೫||

ಅರಸ ನೀನಿಂದೆಮ್ಮ ಕುವರನ |
ಹರಣವಳಿಯಿಸಿಯಿನಿತುದುಃಖಕೆ |
ಗುರಿಯ ಮಾಡಿದೆ ನಮ್ಮನದರಿಂ ಪುತ್ರಶೋಕದಲಿ ||
ನರಳಿ ನೀನಳಿಯೆಂದು ಶಪಿಸಿದ |
ನರಿಯಲದು ಸಂಪ್ರಾಪ್ತಮಾಯ್ತಿಂ |
ದರಸಿ ನಾನಿನ್ನುಳಿಯಲಾರೆನು ಶಕ್ತಿ ಕುಂದುತಿದೆ ||೨೬||

ಇದೆಕೊ ಬುದ್ಧಿಭ್ರಮೆಯು ತಾನಿಂ |
ತಿದೆಕೊ ಪಾರುವುದೆದೆಯು ವಿಷಯಗ |
ಳಿದೆಕೊ ಶಬ್ದಸ್ಪರ್ಶಮುಖ್ಯಗಳೆನ್ನನಗಲುತಿವೆ ||
ಪದುಮನೇತ್ರನ ಚಾರುಗಾತ್ರನ |
ಮುದವ ಬೀರುವ ಮಗನ ರಾಮನ |
ಪದುಳದಿಂ ತಕ್ಕೈಸಿ ನಲಿವಾ ಪುಣ್ಯವಿನ್ನೆಲ್ಲಿ ||೨೭||

ಪೇಳುತೀಪರಿಯೊರಗಿ ಮಂಚದೆ |
ಬೀಳುಕೊಡೆ ಹರಣವನು ನರಪತಿ |
ಗೋಳುಗುಟ್ಟುತೆ ಕೌಸಲೆಯು ಮೊದಲಾದ ರಾಣಿಯರು ||
ಆಳಿದನೆ ತೊರೆದೀಗಳೆಮ್ಮನು |
ಪಾಳುಗೈದಿಂತಕಟ ಪೋಪುದೆ |
ಮೇಲೆ ರಕ್ಷಕರಾರು ನಮಗಿನ್ನೆಂದು ಹಲುಬಿದರು ||೨೮||

ಅರಸನನು ಪೋಯ್ತೆಂಬವಾರ್ತೆಯ |
ನರಿದು ಬಂದರು ಮಂತ್ರಿವರರಾ |
ತೆರನಕಂಡರು ಮರುಗಿ ಹಮ್ಮೈಸಿದರು ನೆನೆನೆನೆದು ||
ತೆರಳಿ ಪೋದರು ರಾಮಲಕ್ಷ್ಮಣ |
ರಿರದೆ ವನಚರರಾಗಿ ಕೇಕಯ |
ಪುರಿಯೊಳಿರುವನು ಭರತ ಸೋದರಸಹಿತ ತಾನೀಗ |. ||೨೯||

ಹರಣವಳಿದೀವಾರ್ತೆ ಪುರದೊಳು |
ಹರಡದಂದದೆ ಬೇಗ ಭರತನ |
ಬರಿಸಿ ನಿಲಿಸಲುಬೇಕು ರಾಜ್ಯದೊಳೆನುತೆ ನಿಶ್ಚೈಸಿ ||
ತ್ವರಿತದಿಂದೋಲೆಯನು ಬರೆದನು |
ಚರರನಟ್ಟಿದೊಡವರು ಕೇಕಯ |
ಪುರವ ಸೇರ್ದೊಡನಿತ್ತರಾಲೇಖನವ ಭರತಂಗೆ ||೩೦||

ದೇವ ನಿನ್ನಯ ದರ್ಶನವನೆಮ |
ಗೀವುದೀಗಳೆ ರಾಜಕಾರ್ಯದ |
ಭಾವ ಕಿಡುವುದು ತಳುವಿದೊಡೆಯೆಂಬೊಕ್ಕಣೆಯನೋದಿ||
ಸಾವಕಾಶತೆಗೈಯದಲ್ಲಿಂ |
ಕೋವಿದನು ಶತ್ರುಘ್ನಸಹಿತನು |
ಮಾವನಾಣತಿಗೊಂಡಯೋಧ್ಯಾಪುರಕೆ ಮರಳಿದನು ||೩೧||

ಮೂರನೆಯ ಸಂಧಿ ಸಂಪೂರ್ಣಂ.

ನಾಲ್ಕನೆಯ ಸಂಧಿ.

ಸೂಚನೆ || ಭರತನುರುತರಕೋಪದಲಿ ಧಿ |
ಕ್ಕರಿಸಿ ನಿಜಮಾತೆಯನು ರಾಮನ |
ಕರೆತರುವೆನೆಂದರಸುತರಿದನು ಸೆಲೆಯನಗ್ರಜನಾ ||

ಬಂದುಪೊಕ್ಕರಮನೆಯ ತನ್ನಯ |
ತಂದೆಯಡಿಗಳಿಗೆರಗಲೆಂದಾ |
ನಂದಭಾವದೆ ಹುಡುಕಿ ಕಾಣದೆ ಭೂಮಿಪನ ಸುಳಿವ ||
ಸಂದೆಗಕ್ಕೆಡೆಗೊಟ್ಟು ಮನದೊಳ |
ಗಂದು ಮಾತೆಯ ನಿಳಯಕೈದಿಯ |
ಮಂದಭಕ್ತಿಯೊಳೆರಗಿಯೆನ್ನಯ ತಾತನೆಲ್ಲೆಂದು ||೧||

ಕೇಳುತಿಹ ತನಯನನು ಕೈವಿಡಿ |
ದೇಳು ನೀಸೇಳೆಂದು ಮುದ್ದಿಸಿ |
ಪೇಳಲೇನನು ಮಗನೆ ದೈವದೊಳಾರು ಸೆಣಸುವರು ||
ಕಾಲನೋಲಗಕೈದೆ ಪೋದನ |
ಕಾಲದಮೃತದ ವೃಷ್ಟಿ ನಿನ್ನಯ |
ಮೇಲೆ ಕರೆದುದು ಕಂದ ಪೆತ್ತೆನಗೊದವಿತಾನಂದ ||೨||

ಮಾತೆಯಾಡಿದ ನುಡಿಯನಾಲಿಸಿ |
ಭೂತಳದ ಮೇಲೊಡನೆ ಬೀಳುತ |
ಜಾತಶತ್ರುವೆ ತಾತ ಸುಜನವ್ರಾತಸಂಪ್ರೀತ ||
ಪಾತಕಿಯೆನುತ್ತೆನ್ನ ಕರೆಸದೆ |
ಮಾತನಾಡದೆ ಜಾರಿ ಪೋದೈ |
ಖ್ಯಾತರಘುಕುಲಜಾತ ದಶರಥ ನಾಥರಾರೆನಗೆ ||೩||

ಕಾಣದಾದೆನೆ ತಂದೆಯನು ತನ |
ಗೇನನೊರೆದನು ಮತಿಯ ತಾನವ |
ಸಾನಕಾಲದೆ ಬಳಿಯೊಳಿರ್ದುಪಚರಿಸದಾದೆನಲಾ ||
ಪ್ರಾಣವಳಿವಾಕಾಲದಲಿ ಮ |
ಲ್ಸೂನುವೆಲ್ಲೆಂದೆನ್ನ ಕರೆದನೆ |
ಮಾನವರ್ಗಧಿದೇವನೆನಿಪಾನೃಪನದೆಂತಳಿದ ||೪||

ಆಮಹಾತ್ಮನ ಕಡೆಯಕಾಲದೆ |
ಕಾಮಿಸಿದವಸ್ತುಗಳನೊದವಿಸಿ |
ನೇಮದಿಂ ವಿಧಿವಿಹಿತಮುದಪರಕ್ರಿಯೆಗಳನು ಗೈದು ||
ಭೂಮಿಯಲಿ ಸತ್ಪುತ್ರರೆನಿಸಿದ |
ರಾಮಲಕ್ಷ್ಮಣರವರೆ ಧನ್ಯರು |
ನಾಮಮಾತ್ರಕ್ಕಣುಗನೆನಿಸಿದೆನಲ್ತೆ ನಾಂ ಜನಿಸಿ ||೫||

ಆದುದಾಯಿತು ತಾಯೆ ಮುಂದಿ |
ನ್ನಾದಯಾಳುವೆನಿಪ್ಪರಾಮನ |
ಪಾದವನು ನೆರೆ ನಂಬುತವನೇ ತಂದೆಯೆಂದೆನುತೆ |
ವೇದಸಮವೆಂದವನನುಜ್ಞೆಯ |
ನಾದರದೆ ಕೈಕೊಂಡು ನಡೆವೆನು |
ಸೋದರನದೆಲ್ಲಿಹನು ಬೆಸಸೆನಗೆಂದು ಕೈಮುಗಿದ ||೬||

ನಂದನನ ನುಡಿಗೇಳ್ದು ಕೇಳಿಲೆ |
ಕಂದ ಭೂಪನ ಕೊನೆಯ ಮಾತಿದು |
ಸುಂದರರು ರಘುರಾಮಲಕ್ಷ್ಮಣರೆಂದು ಬರ್ಪರೊ ಹಾ ||
ಮುಂದೆ ಧನ್ಯರು ತಾವಲಾ ವನ |
ದಿಂದಮೈತಹ ಮಕ್ಕಳನು ಕ |
ಣ್ಣಿಂದೆ ಕಾಣ್ಬಾಜನರು ತನಗಾಪುಣ್ಯವೆಲ್ಲಿಯದು ||೭||

ಎನುತೆ ಕನವರಿಸುತ್ತೆ ತೊರೆದನು |
ಜನಪನಸುವನೆನಲ್ಕೆ ಮೊದಲೇ |
ಜನಕನಳಿವಿಂ ನೊಂದಮನಕದು ಸಿಡಿಲಿನಂತೆರಗೆ ||
ಜನನಿ ನುಡಿನುಡಿ ಯಣ್ಣದೇವನು |
ವನಕೆ ನಡೆದನೆ ಪುರದೊಳಿಲ್ಲವೆ |
ಮನುಕುಲೇಶನು ಪೋದಕಾರಣವೇನು ಬೆಸಸೆನಗೆ ||೮||

ಇಂತು ನುಡಿವಾಸುತನ ಮುದ್ದಿಸು |
ತಂತರಂಗದೆ ಹಿಗ್ಗುತಿವಸಿಗೆ |
ಸಂತಸವ ಬೀರುವೆನು ತಾನೆಂದೆಣಿಸಿಯಾಸುದತಿ ||
ಚಿಂತೆಯೇತಕೆ ಮಗನೆ ನಿನಗೆ ಸ |
ಮಂತು ಘನಸಂಪದವನೊದವಿಸಿ |
ದಂತಕಳಚಿದಸಂತತನೆನಿಸಿದೆನಿಂದು ರಾಮನನು ||೯||

ಧರಣಿಪತಿ ಪಿಂತೊಮ್ಮೆ ವರಗಳ |
ನೆರಡನಿತ್ತನು ತನಗೆ ತಾನಿಂ |
ದಿರದೆಯತ್ತಿಸಿ ಪಡೆದೆನೊಂದಕೆ ನಿನಗೆ ರಾಜ್ಯವನು ||
ಎರಡನೆಯ ವರಕಿಂದು ರಾಮನು |
ಧರಿಸಿ ಮುನಿವೇಷವನು ವಿಪಿನದೆ |
ಚರಿಸಬೇಹುದೆನುತ್ತನುಜ್ಞೆಯ ಪಡೆದು ಕಳಿಪಿದೆನು ||೧೦||

ಒಡೆಯನಿಲ್ಲದ ವಸ್ತುಗಳವೋ |
ಲೊಡನೆ ಸೀತಾಲಕ್ಷ್ಮಣರು ದೆಸೆ |
ಗಿಡುತುಮುವನನೆ ಸೆಮ್ಮ ಪೋದರು ಬಾರರಿನ್ನವರು ||
ಗಡುಬವೋ ಪದಿನಾಲ್ಕುವರುಷವು |
ಕಡೆಯಕಾಣಿಸಿಯದನು ಮರಳೀ |
ಪೊಡವಿಯಾಳ್ವಬಯಕೆ ರಾಮಂಗಿನ್ನದೆಲ್ಲಿಯದು ||೧೧||

ಮಗನೆ ಚಕ್ರಾಧೀಶನಾಗುತೆ |
ವಿಗಡಬಲನೆನಿಸುತ್ತೆ ಪೆತ್ತೆನ |
ಗೊಗುಮಿಗೆಯಸಂಕಸವನೀಯಲದೇಕೆ ತಡಗೈವೆ ||
ಬಗೆಬಗೆಯ ಭಂಡಾರವನು ನೀಂ |
ತೆಗೆಸಿ ಬಡವರ್ಗಿತ್ತು ತಣಿಸೈ |
ಸುಗುಣಿ ನೀನೇಳೆಂದು ಬೋಳೈಸಿದಳು ಪಲತೆರದೆ ||೧೨||

ಜನನಿ ತನಗತಿಹಿತವನೆಸಗುವೆ |
ನೆಸುತೆ ಮಾಡಿದ ಪಾಪಕೃತ್ಯವ |
ನೆನೆದು ಹಮ್ಮೈಸುತ್ತೆ ಬಿದ್ದನು ಬಿಗಿದಮೂರ್ಛೆಯಲಿ ||
ತನಯನನು ಶೈತ್ಯೋಪಚಾರದೆ |
ವನಿತೆ ಸಂತೈಸಲ್ಕೆ ಕಂಡದ |
ನಿನಕುಲಾಧಿಪಸೂನು ರೋಷಾವೇಶಮನನಾದ ||೧೩||

ಏನ ನೆನೆದೌ ಪಾಪೆ ರಘುಕುಲ |
ಹಾನಿ ನಿನ್ನಿಂದಾಯ್ತೆ ಶಿವಶಿವ |
ಮಾನವಾಧಿಪನಳಿದನುಳಿದನು ರಾಜ್ಯವನು ರಾಮ ||
ಮಾನಮೆಂಬುದನೊತ್ತಿ ದೂರಕೆ |
ಹೀನಕಾರ್ಯವ ಬಳಸಿ ನೀನಪ |
ಮಾನವೆಣಿಸದೆ ಯೇತಕೀ ಕಡುಕಷ್ಟಕಿಚ್ಛಿಸಿದೇ ||೧೪||

ಅಣ್ಣ ದೇವನೆ ನಿನ್ನನುಳಿದೊಡೆ |
ಚೆಣ್ಣಗೀಭರತಂಗೆ ಜೀವನ |
ವಿನ್ನು ಬೇರೆಲ್ಲಿಹುದು ಬರ್ಪನು ನಿನ್ನಬೆಂಬಿಡಿದು ||
ಕುನ್ನಿಯೀಕೆಯ ಮಾತಿಗತಿಸಂ |
ಪನ್ನನೀನಿದನುಳಿದು ನೆಲನನು |
ಬಣ್ಣಗಿಡುವುದೆ ಬನದೆ ಬಾಬಾರದುವೆ ತರವಲ್ಲ ||೧೫||

ದಿನಪತೇಜನೆ ಯೆನ್ನೊಳುಡುಗಲಿ |
ಘನವಲಾ ನಿನಗೊಲವು ಸತಿಯೊಳು |
ವನಜಮುಖಿಯಾ ಜಾನಕಿಯ ನೋವಿಂಗೆ ಮರುಗೆಯಲಾ ||
ಅನುಜಲಕ್ಷ್ಮಣ ದಣಿವನೆಂಬುದ |
ಮನಕೆ ತಾರದೆ ಚಲವಗೈವುದೆ
ಮನುಕುಲಾಂಬುಧಿಚಂದ್ರ ಬಾರೆನ್ನೊಡೆಯ ಬಾರೆಂದು ||೧೬||

ಪಲವುಬಗೆಯಿಂದಾಗಳಣ್ಣನ |
ಪಲಗುಣಂಗಳ ನೆನೆನೆನೆದು ಹಂ |
ಬಲಿಸುತಿರಲಿದನರಿದು ಬಂದಳು ದೇವಿ ಕೌಸಲ್ಯೆ ||
ಅಳಲಿದೇತಕೆ ಮಗನೆ ತನ್ನಯ |
ಚಲವ ದಕ್ಕಿಸಿಕೊಂಡಳಮ್ಮನು |
ನೆಲಸಿದೆಲ್ಲವು ನಿಮ್ಮದೈಸಲೆ ಮರುಗಲೇಕಿನ್ನು ||೧೭||

ಬರಿಯಬಯಲಾಡಂಬರವನಿದ |
ನೊರಸಿಕಳೆ ನಿನಗಿನ್ನು ಸಲ್ಲದು |
ಹಿರಿಯಮಗ ನೀನಲ್ತೆ ರಾಜ್ಯಕ್ಕೊಡೆಯರಿನ್ನಿಹರೆ ||
ಕಿರಿಯನಲ್ಲವೆ ರಾಮಭದ್ರನು |
ಹೊರಲುಬಲ್ಲನೆ ನೃಪಕಿರೀಟವ |
ನೊರೆಯೆನಸ್ಸೃತವ ಕೇಕಯಾತ್ಮಜೆಯಿದಕೆ ಸಾಕ್ಷಿಣಿಯು ||೧೮||

ಆದುದಾಯಿತು ಮಗನೆ ಭರತನೆ |
ಹೋದವಮಾರಿಯ ಮನೆಯ ಪುಗಿಪರೆ |
ಈದುರಾತ್ಮೆಯನೆನ್ನನಟ್ಟೈ ಮಗನ ಬಳಿಗಾಗಿ ||
ಕಾದುದೆನ್ನೀಯೊಡಲು ಸೈರಿಸೆ |
ನೈದಯಾನಿಧಿನೀನು ಕಂದನು |
ಹೋದಮಾರ್ಗವ ತೋರಿಸೆಂದಳಲಿದಳು ಶಶಿವದನೆ ||೧೯||

ಮೊದಲೆ ಜನಕನ ಮರಣಮದಕಿ |
ನ್ನೊದವಿತಣ್ಣನ ವಿಪಿನಗಮನವು |
ಸುದತಿಯಾನಿಷ್ಠುರದನುಡಿ ಮೇಣದಕೆ ಸಹಕಾರಿ ||
ವಿದಿತವಲ್ಲವೆ ಮೂರ್ಛೆ ಭರತಂ |
ಗದುವೆ ಜೋದ್ಯವೆ ಸುಜನರತಿಮೃದು |
ಹೃದಯರಲ್ಲವೆ ಸೈರಿಸುವರೆಂತಕಟ ಪರರೆಡರ ||೨೦||

ತಿಳಿಯೆ ಮೂರ್ಛೆಯು ಹಿರಿಯಮಾತೆಯ |
ಒಳಸಿ ವಂದಿಸಿ ತಾಯೆ ಸೈರಿಸು |
ಕುಲವಿನಾಶಕಕಾರ್ಯವಿದನಾನಕಟ ಗೈದಪೆನೆ ||
ಕುಲಶಿರೋಮಣಿರಾಮಚಂದ್ರಂ |
ಗುಲಿಯಬಾರದಕೇಡನೆಸಗುವ |
ಖಳವರಲ್ಲದೆ ರೌರವಕೆ ಬೇರೊಂದುಗತಿಯಹುದೆ ||೨೧||

ಜನನಿ ನಾನೀಪಾಪಕಾರ್ಯವ |
ಕನಸಿನಲ್ಲಿಯುಮೆಣಿಪನಾದೊಡೆ |
ಜನಪದಶರಥನುದರದೊಳಗೆಂತಕಟ ಜನಿಸಿದೆನು ||
ಜನಕ ಬೇರಾರಾಮ ಬೇರೆಂ |
ದೆನಿಪಮನಮೆನಗಿರ್ದೊಡೀಗಳೆ |
ಅನಲನೆನ್ನಸು ದಹಿಸಲೌ ನಿನ್ನಿದಿರೊಳತಿಜವದೆ ||೨೨||

ರಾಮನಿಲ್ಲದರಾಜ್ಯಮಿದು ಕು |
ಗ್ರಾಮದಂದದೆ ತೋರ್ಪುದದರಿಂ |
ಸ್ವೇಮವೀಯೌ ಜನನಿ ನಾನೀಗೈದಿ ಕಾನನಕೆ ||
ಆಮಹಾತ್ಮನ ಪಾದದರ್ಶನ |
ದಾ ಮಹಾಸುಖಮೊಂದಿ ಗುಣನಿ |
ಸ್ಸೀಮನಹ ರಘುರಾಮನಸು ಕರೆತರುವೆನೀದಿನದೆ ||೨೩||

ಬಂದೊಡೊಡನೆಯೆ ಬಹೆನು ಬಾರದೊ |
ಡಂದು ನಿಲ್ಲುತ್ತವನ ಬಳಿಯೊಳೆ |
ಕಂದಮೂಲವ ಸವಿದು ವಲ್ಕಲಜಟೆಗಳನು ಧರಿಸಿ ||
ಕುಂದಿಸುವೆನೀತನುವ ಸುರನರ |
ವೃಂದಸಾಕ್ಷ್ಯದೊಳೆಂದು ಸಡಗರ |
ದಿಂದಮೈದುವಭರತನನು ತಡೆದೆಂದಳಿಂದುಮುಖಿ ||೨೪||

ಮಗನೆ ಮನ್ನಿಪುದೊಡಲ ಬೇಗೆಯಿ |
ನೊಗೆದನುಡಿಗಳ ರಾಮಲಕ್ಷ್ಮಣ |
ರಗಲಿದೀಬಲುವೃದ್ಧಗಾರ್ಯ ಗತಿಯು ನೀನುಳಿಯೆ ||
ಬಗೆದು ತೈಲದ ಕೊಪ್ಪರಿಗೆಯಿಂ |
ತೆಗೆಸು ಪಿತನ ಕಳೇಬರವನದ |
ಪುಗಿಸಿ ಚಂದನಚಿತಿಯೊಳಗ್ನಿಯಿನೈದೆ ಸಂಸ್ಕರಿಸು ||೨೫||

ಜನನಿಯೆಂದುದಕೊಪ್ಪಿ ಭರತನು |
ಮುನಿವಸಿಷ್ಠನನುಜ್ಞೆಯನು ತಾ |
ನನುಸರಿಸಿ ವೈದಿಕವಿಧಾನದೊಳೆಸಗಿ ಕರ್ಮವನು ||
ತಣಿಪಿ ವಿಪ್ರರ ನತುಲವಹ ಭೋ
ಜನಸುದಾನಗಳಿಂದಮಣ್ಣನ |
ವನನಿವಾಸದ ಭೂರಿಚಿಂತೆಯೊಳಿದ್ದನಾಭರತ ||೨೬

ಅರಸನೈದಿದನಮರಲೋಕಕೆ |
ತೆರಳಿದನು ಬನದತ್ತ ರಾಮನು |
ಧರೆಯು ರಕ್ಷಕರಿಲ್ಲದಿದೆ ತಳುವಿದೊಡೆ ಸೊಗಡಹುದು ||
ಅರಸುಪಟ್ಟವನಾಂತು ಧರೆಯನು |
ಪೊರೆಯಲನುವಾಗೆಂದು ಮಂತ್ರಿಗ |
ಳೊರೆಯಲದಕಾ ಭರತನೆಂದನು ತಂದು ಕಂಬನಿಯ ||೨೭||

ತಂದೆ ಯೆನ್ನನು ತೊರೆದು ಸಗ್ಗಕೆ |
ಸಂದ ಬಳಿಕೆನಗಾರೊ ಗತಿ ಪೂ |
ರ್ಣೇಂದುಸದೃಶನು ರಾಮನೇ ಶರಣೆಂದು ನಂಬಿರಲು ||
ಇಂದು ತನ್ನಯ ಮನದ ಬಯಕೆಗೆ |
ಬಂಧಕವನೀದುರುಳೆ ತಂದಳು |
ಮಂದಭಾಗ್ಯಂಗೆನಗದಾರಿನ್ನಿಹರು ಪಾಲಕರು ||೨೮||

ಬಾಲನಾಗಿಹ ತನಗೆ ಧರಣಿಯ |
ಪಾಲಿಸಲು ಭುಜಶಕ್ತಿಸಾಲದು |
ಮೇಲೆ ತನಗತಿಹಿತವದೀಕೆಯ ದುರ್ಮನೋರಥವ ||
ಪಾಳುಗೈಸುವುದದರಿನೆಲ್ಲರು |
ನಾಳೆ ಪಯಣವ ಬಳೆಸಿ ಪೂರ್ಣದ |
ಯಾಳುವಹ ರಘುರಾಮಗಿಂತಿದಸರಿಪುವುದೆ ಮತವು ||೨೯||

ಕಾನನವ ಬಿಡಿಸಿಂದಯೋಧ್ಯೆಗೆ |
ಜಾಣತನದಿಂದವನ ತಿರುಗಿಸೆ |
ಸೇನೆಯೊಡನೈದುವುದು ನೀವೆಂದೆನುತೆ ನುಡಿದೊಡನೆ ||
ದಾನವಾರಿಯ ದಿವ್ಯಮೂರ್ತಿಯ |
ಕಾಣುವಾಸಂಭ್ರಮಕೆ ವೈಗೊ |
ಟ್ಟಾನರಾಧಿಪಸೂನು ಮಾತೆಯರೊಡನೆ ಹೊರವಂಟ ||೩೦||

ಬರುತೆ ಸರಯುವ ದಾಂಟಿ ಗುಹನಾ |
ದರಣೆಯನು ಪತಿಕರಿಸಿ ಜಟೆಯನು |
ಧರಿಸಿ ಮಾರ್ಗದೆ ಪರಿವಭಾಗೀರಥಿಯನುತ್ತರಿಸಿ ||
ಮೆರೆವಭಾರದ್ವಾಜರಾಶ್ರಮ |
ಕಿರದೆ ನಡೆತಂದೆರಗಲಾಮುನಿ |
ವರರು ಪರಸಿ ವಿಶೇಷಸತ್ಕಾರವನು ಮಿಗೆ ರಚಿಸಿ ||೩೧||

ರಾಮಚಂದ್ರನು ನಮ್ಮ ವನದಲಿ |
ಕೋಮಲಾಂಗಿಯು ಜಾನಕಿಯುವೆರ |
ಸಾಮಹಾಬಲಲಕ್ಷ್ಮಣನ ಕೂಡಿಲ್ಲಿಗೈತಂದು ||
ಭೂಮಿಸುರರುಬ್ಬಟೆಯು ಮಿಗಿಲೆಂ |
ದಾಮನೋಹರಮಾಗಿ ರಂಜಿಪ |
ಕಾಮಿತದಫಲಪುಷ್ಪವೀಯುವ ಚಿತ್ರಕೂಟದಲಿ ||೩೨||

ತಿರಿದು ತಳಿರನು ಲಕ್ಷ್ಮಣನು ತಾಂ |
ವಿರಚಿಸಿದ ನವಪರ್ಣಶಾಲೆಯೊ |
ಳಿರುತಿಹನು ನೀನಲ್ಲಿಗೈದಿದೊಡವನ ಕಾಣ್ಬೆಯೆನೆ ||
ಹರುಷವಾನುತೆ ಮನದೆ ಮುನಿಪಂ |
ಗೆರಗಿ ಬೀಳ್ಕೊಂಡಾತನನು ಮುಂ |
ಬರಿಯುತಣ್ಣನ ನೋಳ್ಪ ಭರದಿಂ ತೆರಳಿದನು ಭರತ ||೩೩||

ಇತ್ತಲಿವನಿಂತೈದುತಿರೆ ಬಳಿ |
ಕತ್ತ ರಾಮನು ಜನಕಪುತ್ರಿಯ |
ಚಿತ್ತದಾಸರ ಕಳೆವೆನೆನ್ನುತೆ ಚರಿಸುತಲ್ಲಲ್ಲಿ ||
ಮತ್ತಕಾಶಿನಿ ನಿಟ್ಟಿಸೀಗಿರಿ |
ಯೊತ್ತಿನಲಿ ಮಂದಾಕಿನೀನದಿ |
ಸುತ್ತಿ ಪರಿಯುವಸೊಬಗು ಮೀರಿಹುದಲ್ತೆ ಸರಯುವನು ||೩೪||

ಇದರ ತೀರದ ವೃಕ್ಷಗಳೊಳಿಹ |
ವಿಧವಿಧದ ಸುಮತತಿಯ ನುದಿರಿಸು |
ತದರಕಂಪಿಂದೊಗೆವ ಮರುತನು ಸೊಂಪಬೀರುತ್ತೆ ||
ಸುದತಿ ಮಿಗೆ ಸಂತಸವ ತೋರುತೆ |
ಸದಯಭಾವದೆ ಚರಿಸುತಿರ್ದಪ |
ನೊದವಲಹುದೇ ಬಯಸಲೀಬಗೆ ನಮಗೆ ನಗರಿಯಲಿ ||೩೫||

ಮೃಗಸಮೂಹಗಳುದಕಪಾನದಿ |
ನೊಗೆದ ತೃಷೆಯನು ಕಳೆಯುತಿರ್ಪವು |
ಸುಗತಿರಾಜ್ಯವ ಸೂರೆಗೊಳುವಾಮುನಿಗಳಿದರೊಳಗೆ ||
ಬೊಗಸೆಯಲಿ ನೀರ್ಮೊಗೆದು ಮೇಲಿಹ |
ಗಗನಮಣಿಗರ್ಘ್ಯಗಳನೀಯುತೆ |
ಸೊಗಸಿನಿಂ ಸಲೆ ಮೀಯುವಂದವ ನೋಡು ನೀನರಸಿ ||೩೬||

ಇನಿಯಳೊಡನೀಪರಿಯೊಳಾಡು |
ತ್ತಿನಕುಲಾಂಬರದಿನಮಣಿಯು ತ |
ನ್ನನುಜನೊಡನೊಲವಿಂದವಾಶ್ರಮದಲ್ಲಿ ಕುಳಿತಿರಲು ||
ವನದ ಮಧ್ಯದೊಳಿರದೆ ಕೆಂದೂ |
ಳಿನನ ಮರೆಗೈದೇಳೆ ಕಂಡದ |
ರನುವದೇನದ ತಿಳಿದು ಬಂದೆನಗರುಹು ನೀನೆಂದು ||೩೭||

ಅಗ್ರಜನು ನುಡಿಯಲ್ಕೆ ಕೇಳ್ದು ಸ |
ಮಗ್ರಬಲಸೌಮಿತ್ರಿ ಭೂರುಹ |
ದಗ್ರಭಾಗವನೇರಿ ಬರುತಿಹಸೇನೆಯನು ನೋಡಿ ||
ವ್ಯಗ್ರಮಾನಸನಾಗಿ ನಮ್ಮನು |
ನಿಗ್ರಹಿಸಲೆಂದೆನುತೆ ಭರತನು |
ವಿಗ್ರಹಕ್ಕೆಳಸುತ್ತೆ ಬರುತಿಹಪರಿಯಿದೆಂದರಿದು ||೩೮||

ದೇವಿಯನು ಜೋಪನವಗೈದೆಲೆ |
ದೇವ ಬಿಲುದುಡುಕೇಳು ಭರತನ |
ಭಾವ ಬೆಟ್ಟಿತು ಸೇನೆಯೊಡವೆರಸಿದೆಕೊ ಬರುತಿಹನು ||
ನಾವು ಮೈಮರೆತಿದ್ದೆವಾದೊಡೆ |
ನೋವನೆಸಗದೆ ಬಿಡನು ತನಗಿ |
ನ್ನೀವುದಾಜ್ಞೆಯನವನನಟ್ಟುವೆ ಜವನ ಬಳಿಗೆನಲು ||೩೯||

ತಮ್ಮ ದುಡುಕದಿರಿತ್ತ ಬಾರೈ |
ನಮ್ಮ ಮಾತನು ಕೇಳು ಭರತನ |
ದೊಮ್ಮೆಯಾದೊಡಮೆಮ್ಮನೆಂದುಂ ಮೀರಿ ನಡೆದಿಹನೇ ||
ದುರ್ಮತಿಯೆ ದುರ್ನೀತಿಯೇಯೆಂ |
ದಮ್ಮನನು ಧಿಕ್ಕರಿಸಿ ನಮ್ಮನೆ |
ನೆಮ್ಮಿ ಬಂದಿಹನಲ್ಲದನ್ಯವ ಬಳಸುವನೆ ಮನದೆ ||೪೦||

ತಪ್ಪನೆಣಿಸುವತಮ್ಮನಲ್ಲವ |
ನೊಪ್ಪುವನೆ ದುಷ್ಕಾರ್ಯಲವವನು |
ಬೊಪ್ಪನಲ್ಲಿರಿಸಿರ್ಪ ಭಕ್ತಿಯನೆನ್ನೊಳಿರಿಸಿಹನು ||
ನಿಪ್ಪಸರದಲಿ ನಡೆದಕೀರ್ತಿಯ |
ನಪ್ಪಲಾಗದು ಲಕ್ಷ್ಮಣನೆ ನಿನ |
ಗಿಪ್ಪ ಪೌರುಷಕಕಟ ಸೋದರವಧೆಯೆ ತಾಂ ಫಲವೆ ||೪೧||

ತಂದೆಯಾಡಿದನುಡಿಯ ಪಾಲಿಸ |
ಲೆಂದು ಬಂದಿಹ ತನಗೆ ಭರತನ |
ಕೊಂದು ಗಳಿಸುವ ರಾಜ್ಯಮೇಕೇಗೈವೆನಾನದನು ||
ಕಂದಭರತನು ನೀನುಮಿಲ್ಲದೊ |
ಡೆಂದು ಸುರಪನ ಪದವದೇಕೆನ |
ಗಿಂದು ನೀವೇ ಸಕಲಸಂಪದವೆಂದನಾರಘುಜ ||೪೨||

ಕೇಳುತಿರ್ದನು ಲಕ್ಷ್ಮಣನು ಕ |
ಣ್ಣಾಲಿನೀರೇರಿದುವು ಶಿರವನು |
ಜೋಲುಗೊಟ್ಟು ಹಸಾದವೆಂದನು ಮುಗಿದು ಕರಯುಗವ ||
ಮೇಲುವಾದ್ಯದ ರವಣೆ ನಿಂದ |
ತ್ತಾಳಿನಬ್ಬರ ಕೊನೆಗೆ ಸಂದುದು |
ಪಾಳೆಯವು ಹೊರಬನಕೆ ಒಂದುದು ಕುಂದಿತಾರ್ಭಟವು ||೪೩||

ಸೀಸೆಯಾಶ್ರಮದತ್ತ ಪೋದೊಡೆ |
ಮಾನವೇಶನು ತನ್ನಮನದೊಳ |
ಗೇನನೆಣಿಪನೊ ಎಂದು ದೂರದೊಳದನು ನಿಲ್ಲಿಸಿಯೆ |
ಜ್ಞಾನಿಗಳ ಸಮಜೋಳಿ ಭರತನ |
ನೂನಬಲಶತ್ರುಘ್ನನೊಡನೆ ನಿ |
ದಾನದಿಂ ಪದಚಾರಿಯಾಗೈದಿದನು ದರುಶನಕೆ ||೪೪||

ಇಂದು ತನ್ನನು ಮನ್ನಿಪನೊ ಮುದ |
ದಿಂದವಿಲ್ಲದೆ ದುರ್ಜನನು ನೀ |
ನೆಂದು ದೂಷಿಸಿ ನೂಂಕಿ ಕಳೆವನೊ ಕಾಣೆನಾಹದನ ||
ಮಂದಮತಿ ನಿಜಜನನಿ ಬೇಗೆಯ |
ನಿಂದು ತಂದಿಕ್ಕಿದಳು ನಮ್ಮೊಳು |
ಹಿಂದುಮುಂದದು ತೋರದೇನುಮೆನುತ್ತ ನಡೆತರುತೆ ||೪೫||

ಅಂದು ಕಂಡನು ವಿವಿಧಪರ್ಣಗ |
ಳಿಂದೆ ರಚಿಸಿದಶಾಲೆಯೊಳು ನಲ |
ವಿಂದೆ ದರ್ಭಾಸನದೆ ಸೀತಾಲಕ್ಷ್ಮಣರವೆರಸಿ ||
ಅಂದಮಾದಾದೇಹಕಾಂತಿಯಿ |
ನಿಂದುವನು ಸಲೆ ಜರಿವ ವೈಖರಿ |
ಯಿಂದೆ ಮಂಡಿಸಿ ಮೆರೆವ ದೇವನ ಪರಮಪಾವನನ ||೪೬||

ಕಂಡಸವನಾಧೂರ್ಜಟಿಯವೋಲ್ |
ಮಂಡೆಯೊಳು ಜಡೆಗಳನು ಧರಿಸುತ |
ಖಂಡಕೃಷ್ಣಮೃಗಾಜಿನವನುರೆ ಪೊದೆದು ರಾಜಿಪನ ||
ಕಂಡಜನದಘಮಂಡಲವನುರೆ |
ದಿಂಡುದರಿವಾನಿರ್ಮಲಾಂಗನ |
ಚಂಡಭುಜಬಲರಾದಿದೇವನ ಕಂಡನಾಭರತ ||೪೭||

ನೋಡಿದೊಡನೆಯೆ ಶೋಕಜಲಧಿಯೊ |
ಳಾಡಿ ರೋದನಮಾಡಿ ಮಾತುಗ |
ಳಾಡಲರಿಯದೆ ಬಿಕ್ಕಿ ಚೇತನಗುಂದಿ ದನಿಯುಡುಗಿ ||
ಕೂಡಿ ಮಂತ್ರಿಗಳಿಂದಯೋಧ್ಯೆಯ ||
ನಾಡಿನಾಜನವೆಲ್ಲ ನಲಿಯಲು |
ಗಾಡಿಯಿಂ ವರಸಿಂಹಪೀಠದೊಳೆಸೆವಗೀವಿಧಿಯೆ ||೪೮||

ಸುರುಚಿರಾಂಬರಮುಡುತೆ ಮೌಳಿಯ |
ಪರಿಮಳದ ಪೂಸರದೊಳೊಪ್ಪುವ |
ದೊರೆಗೆ ಚರ್ಮಾಂಬರವು ಜತಿಗಳ ಜಡೆಯು ತಾಂ ಸೊಗಸೆ ||
ಅರಸನುರುದುರ್ದಶೆಯನೀಕ್ಷಿಪ |
ಭರತನೇಂ ಸಪ್ರಾಣನೇ ಬಿದಿ |
ಬರೆಹಮೀತೆರನಾಯ್ತೆ ಶಿವಶಿವಯೆನುತೆ ಹಲುಬಿದನು ||೪೯||

ಕೆಟ್ಟಸಾಪಿಯು ಮಿಹಿರವಂಶದೆ |
ಪುಟ್ಟಿ ನಿಜಪೂರ್ವಜಗೆ ಸಲ್ಲುವ |
ಪಟ್ಟಕಾಶಿಸಿಯಡವಿಗಟ್ಟಿದನೆಂಬುದೀಲೋಕ ||
ಮಟ್ಟುಮೀರಿದ ಪಳಿವಿಗಂಗವ |
ಕೊಟ್ಟು ಜೀವಿಸಬೇಕೆ ತೆಗೆತೆಗೆ |
ಸುಟ್ಟು ಪೋಗದೆ ನಿಂದುದೇಕೀತನುವು ಭರತಂಗೆ ||೫೦||

ಎಂದು ರಾಮನ ಸನ್ನಿಧಿಗೆ ನಡೆ |
ತಂದು ಕರಗಳ ಮುಗಿದು ವಿನಯವ |
ನೊಂದಿಯಣ್ಣಾಯೆಂದು ನುಡಿಯುತ್ತೊಡನೆ ಹರವಸದೆ ||
ವಂದಿಪನ ತೆರದಿಂದೆ ಬಿಳ್ದಾ |
ಸುಂದರನ ಕರುಣಾಳು ತಬ್ಬುತೆ |
ಕಂದ ನಿನಗೇಕಿಂತು ಚಿಂತೆಯು ಬೇಡಬೇಡೆನುತೆ ||೫೧||

ತಂದುಕಂಬನಿಗಳನು ಬೇಗುದಿ |
ಯಿಂದಮೆಂದನು ಸೋದರನೆ ನಿಸ |
ಗಂದಮುಪ್ಪುದೆ ಜಡೆಯು ಮೇಣೀವಲ್ಕಲವು ಸೊಗಸೆ ||
ಇಂದಯೋಧ್ಯೆಯನುಳಿದು ನೀನೈ |
ತಂದಕಾರಣವೇನು ಪೇಳೆಂ |
ದಂದುಕೈಗಳಿನೆತ್ತುತೊಲವಿಂ ಮಂಡೆಯನು ಸವರಿ ||೫೨||

ತಮ್ಮ ನೀನೇಕಿಂತುವರ್ತಿಪೆ |
ಯುಮ್ಮಹದೊಳೇನಿಹರೆ ಪೌರರು |
ನಮ್ಮವರು ಸುಕ್ಷೇಮಿಗಳೆ ಭೂಪತಿಯ ತೆರನೇನು ||
ಎಮ್ಮ ಹಂಬಲನುಳಿದು ಜನನಿಯು |
ರೊಮ್ಮನದೊಳೇನಿಹರೆ ಬರವಿದು |
ಸುಮ್ಮನಲ್ಲವು ಮಾಜದುಸಿರೈ ತಮ್ಮ ನೀನೆಂದ ||೫೩||

ನಾಲ್ಕನೆಯ ಸಂಧಿ ಸಂಪೂರ್ಣಂ.

ಐದನೆಯ ಸಂಧಿ

ಸೂಚನೆ || ಭರತಮುಖದಿಂ ದಶರಥಾವನಿ |
ವರನ ಮರಣವ ಕೇಳಿ ರಾಮನು |
ಮರುಗಿ ಹೊರಟನು ಚಿತ್ರಕೂಟದಿನೆಸಗಿ ಪೈತೃಕವ ||

ಏನನೆಂಬೆನು ದೇವ ನಿಮ್ಮನು |
ಕಾನನದ ಕಡೆಗಂದು ಬೀಳ್ಕೊ |
ಟ್ಟಾನರಾಧಿಪನಳಲಿ ಕಂಗೆಟ್ಟಸುವ ನೀಗಿದನು ||
ಜ್ಞಾನವಿರಹಿತೆಯಾದ ತನ್ನಯ |
ಮಾನಿನಿಗೆ ಮನಸೋತು ನಮ್ಮನು |
ಹೀನಭಾಗ್ಯರನೆಸಗಿ ತಾತನು ಸಗ್ಗಕಡರಿದನು ||೧||

ಪಾಪಕೃತ್ಯಕೆ ಹೇಸದೆಯೆ ತಾ |
ನೋಪನನು ಕೈಯಾರೆ ತೀರಿಸಿ |
ದೀಪವಿಲ್ಲದಪಾಳುಮನೆಯೆನಿಸುತ್ತಯೋಧ್ಯೆಯನು ||
ಚಾಪಲತೆಗೀಡಾಗಿ ನರಕದ |
ಕೂಪದೊಳಗೋಲಾಡಲೆಳಸಿದ |
ಪಾಪಿನಿಯಬಸಿರೊಳಗೆ ಪುಟ್ಟಲುಬಹುದೆ ನಾನಕಟ ||೨||

ಅಣ್ಣ ಮರಳೈ ಪುರಕೆ ಗುಣಸಂ |
ಪನ್ನ ನಿನಗಿದು ಸರಿಯೆ ಭೃತ್ಯನ |
ನಿನ್ನು ಪಾಲಿಪರಾರು ತನಗೀಗೊಡೆಯರಾರಿಹರು ||
ಮನ್ನಿಪುದು ದುರ್ಮಾರ್ಗದರ್ಶಿನಿ |
ಕುನ್ನಿ ಜನನಿಯು ಗೈದತಪ್ಪನು |
ಸನ್ನುತಾಂಗನೆ ತನ್ನನೀಕ್ಷಿಸಿ ಮರೆವುದಿಂದದನು ||೩||

ಒಡೆಯನಿಲ್ಲದೆ ರಾಜ್ಯ ಸಲೆ ಕಂ |
ಗಿಡುತಿಹುದು ಸನ್ಮಂತ್ರಿವರ್ಯರು |
ದಡವ ಕಾಣದ ನಾವೆಯಂದದೊಳಿಹರು ಮಬ್ಬಡಸಿ ||
ಪಡೆಯು ನಾಯಕರಿಲ್ಲದೆಯೆ ಎದೆ|
ಗಿಡುತಿಹುದು ನೀನಿಲ್ಲದುದರಿಂ |
ಬಡವನಂದದೆ ಮೆರೆಯದಾ ಸಾಕೇತಪುರವರವು ||೪||

ಬಂದಿಹರು ಗುರುಸಚಿವಮುಖ್ಯರು |
ಬಂದಿಹರು ಮಾತೆಯರು ಸೇನಾ |
ವೃಂದವೀಕ್ಷಿಸುತಿಹುದು ಪದದರ್ಶನದ ಸಮಯವನು ||
ಇಂದು ಸಕಲವು ಸಿದ್ಧವಾಗಿಹು |
ದಿಂದಿರನು ನಾಕಾಧಿಪತ್ಯವ |
ನೊಂದುವಂದದೆ ವಹಿಸು ರಾಜ್ಯವನೆಂದನಾ ಭರತ ||೫||

ಭರತನಾಡಿದನುಡಿಯನಾಲಿಸಿ |
ಯೊರಗಿದನು ಮೂರ್ಛೆಯಲಿ ರಾಘವ |
ನರೆಗಳಿಗೆಯಲಿ ತಿಳಿವುಸಮನಿಸೆ ನೆನೆದು ಜನಕನನು ||
ಸುರರಿಗುಪಕೃತಿಗೈದುದನು ತಾಂ |
ಸ್ಮರಿಸಿ ಶಕ್ರನು ತನ್ನ ಗದ್ದುಗೆ |
ಗರುಹ ನೀನೆಂದಹಹ ನಿನ್ನನು ಕರೆಸಿದನೆ ಪಿತನೆ ||೬||

ವೃದ್ಧದಶೆಯಲಿ ಸಾಂಗಸಾಧ್ಯ |
ಶ್ರದ್ಧೆಯಿಂ ನಿಯಮಗಳನೆಸಗುತೆ |
ಮುದ್ದಿಸುತೆ ಬಳೆಯಿಸಿದಮಕ್ಕಳೊಳೊರ್ವದುರ್ಮತಿಯು ||
ಹೊದ್ದುತೆನ್ನನು ಸೇರಿರದೆ ತಾ |
ನೆದ್ದನೆಲ್ಲಿಯೊ ಸತಿಯ ಕೂಡಿ |
ನ್ನಿದ್ದು ಫಲವೇನೆಂದು ಸರಿದೈ ಖ್ಯಾತ ಮತ್ತಾತ ||೭||

ತಂದೆ ತನ್ನಯ ರಾಜ್ಯಭಾರವ |
ನಿಂದು ರಕ್ಷಿಪ ಶಕ್ತಿ ನಿನಗುಂ |
ಟೆಂದೆ ಭಾವಿಸಿ ಕಾರ್ಯಕಾರಣಗಳನು ಮನದೊಳಗೆ ||
ಅಂದು ಕಟ್ಟಳೆಗೈದು ವಿಪಿನವ |
ನೊಂದು ನೀನೆಂದೆನ್ನ ಕಳುಹಿಸಿ |
ಸಂದು ಪೋದನು ತಮ್ಮ ವೀರುವುದೆಂತು ನಾವದನು ||೮

ಅನುಜನೀನದರಿಂದೆ ಚಿಂತೆಗೆ |
ಮನವ ಮಾರದಿರೆಂದು ಬೋಧಿಸಿ |
ಜನನಿಯರ ಗುರುಮುಖ್ಯರೆಲ್ಲರ ಕರೆಯಿಸಾದರಿಸಿ ||
ಘನಮಹಿಮನಾ ದಿವಸವನು ಕಳೆ |
ದಿನನುದಯಕಿರದೆದ್ದು ಮರುದಿನ |
ಮುನಿವರನನೊಡಗೊಂಡು ಸೀತಾಲಕ್ಷ್ಮಣರ ಕೂಡಿ ||೯||

ಸೇರಿ ಮಂದಾಕಿನಿಯ ನಿರ್ಮಲ |
ವಾರಿಯಲಿ ಮುಳುಗುತ್ತೆ ಜನಕನೆ |
ಭೂರಿತೋಷವ ಪಡೆವುದೆಂದುದಕಾಂಜಲಿಯನಿತ್ತು ||
ಸಾರಿ ದಡವನು ಬಳಿಕ ವನದೊಳ |
ಗಾರಯಿದು ತಂದೆಲಚಿಹಣ್ಣನು |
ಸೇರಿಸುತ್ತಿಂಗುದಿಯ ಪಿಣ್ಯಾಕವನು ಜತೆಗದರಾ ||೧೦||

ಪಿಂಡಗಳ ರಚಿಸಿರಿಸಿ ಕರಗಳ |
ಮುಂಡೆಗೇರಿಸಿ ಬೊಪ್ಪನೀನಿದ |
ನುಂಡು ಸುಖಿಸೈ ಸ್ವರ್ಗಲೋಕದೊಳೆನ್ನುತರ್ಪಿಸಲು ||
ಚಂಡಕರಕುಲಮಣಿಯ ವಿಲಸದ |
ಖಂಡಭಕ್ತಿಗೆ ಮೆಚ್ಚಿ ಮುನಿಜನ |
ಪುಂಡರೀಕನು ವರವಸಿಷ್ಠನು ಮನದೊಳುಬ್ಬಿದನು ||೧೧||

ಜಲಧಿಮಧ್ಯದ ಸಕಲಧರಣೀ |
ತಳವನಾಳಿದವಾವ ನಿನಗಿಂ |
ದೆಲಚಿಯಾಫಲ ದಿವ್ಯಭೋಜ್ಯಪದಾರ್ಥವೆನಿಸಿದುದೆ ||
ಫಳುವದಲಿ ತನಗಿಹಪದಾರ್ಥವ |
ಸಲಿಸಿಹನು ಮತ್ಪತಿಯು ನೀನಿದ |
ನೊಲಿದು ಕೊಳ್ವುದು ದೋಷವೆಣಿಸದೆ ತವಕುಮಾರನಲಿ ||೧೨||

ಎನುತೆ ಜಾನಕಿ ಪಿಂಡಕಭಿವಂ |
ದನೆಯ ಗೈಯಲು ಲಕ್ಷ್ಮಣನುಮೆಲೆ |
ಜನಕ ನೀನಿಂದೆಮ್ಮ ಹವಣನು ಕಂಡು ಕೇಳಿರುವೆ ||
ವನದೊಳೇನನು ತಿಂಬೆವದ ನಿನ |
ಗಿನಿತುಮೀಗಳ್ ವಂಚಿಸದೆ ನಾಂ |
ವಿನಯದಿಂದಿತ್ತಿಹೆವು ಕೈಕೊಳ್ಳೆನುತೆ ನಮಿಸದನು ||೧೩||

ಇಂತುಪೈತೃಕಕರ್ಮವೆಸಗಿ ನಿ |
ರಂತರದ ಪರಲೋಕಸೌಖ್ಯ |
ದ್ಯಂತವನು ಪಿತೃಗಿತ್ತು ಪರ್ಣಾಗಾರಕೈತಂದು ||
ಚಿಂತೆಯಿಂದಿಹ ಭರತನನುಪನು |
ದಂತರಂಗವ ತಿದ್ದಿ ರಾಮನು |
ಪಿಂತಣಂದದೆ ಪುರದೊಳಿಹುದೆಂದಿತ್ತನಾಜ್ಞೆಯನು ||೧೪||

ಅಣ್ಣನಾಣತಿ ಮೀರಲಳವ |
ಲ್ಲಣ್ಣಬಾರದಕಿಚ್ಛು ತಾನಿದ |
ಕಿನ್ನದೇನನು ಗೈದು ನಿಯಮುವ ಸಾಧಿಸುವೆನೆಂದು ||
ತನ್ನ ಮನಕಾಗರಿಕೆಯಾಗಲು |
ಬಿನ್ನವಿಸಿದನು ಲೋಕಮೆಚ್ಚುವ |
ಸನ್ನುತದ ಬಯಕೆಯನು ರಾಮಂಗೆರಗುತಾಭರತ ||೧೫||

ದೇವ ವಿಶ್ವಾಮಿತ್ರರಾಶ್ರಮ |
ವಾವುದರದೆಸೆಯಿಂ ಪವಿತ್ರವೊ |
ಭಾವಿಸಲು ಶಿಲೆಯಾದಹಲ್ಯಾದೇವಿಗಾವುದು ತಾಂ ||
ಜೀವವಿತ್ತುರೆ ಜನನ ಪಡೆದುದೊ |
ಪಾವನವದೆನಿಸಿರ್ಪ ನಿನ್ನೊಲ |
ವೀವ ಪದಪಾದುಕೆಯ ಕರುಣಿಸಿ ಕಾವುದಿಂದೆನ್ನ ||೧೬||

ಕರುಣಿಸೈಯಿದನಣ್ಣಾ ನೀನೈ |
ತರುಪಪರಿಯಂತರವುಯೋಧ್ಯಾ |
ಪುರವ ಹುಗದೆಯೆ ಬಳಿಯ ನಂದಿಗ್ರಾಮದಲ್ಲಿರುತೆ ||
ಮೆರೆವ ಸಿಂಹಾಸನದೊಳಿದಸಾ |
ನಿರಿಸಿ ವಂದಿಸಿ ರಾಜ್ಯಭಾರವ |
ಜರುಗಿಸುವೆ ನೀನವಧಿಯಂ ಪೂರೈಸಿ ಮರಳುವುದು ||೧೭||

ವರುಷ ಪದಿನಾಲ್ಕೆಣಿಕೆಯಾದಾ |
ಮರುದಿನವೆ ನೀನೈದದಿರಲಾ |
ನುರಿಪನೀದೇಹವನು ವೈಶ್ವಾನರನೊಳಿಂದೆನಲು ||
ಭರತನುರುತರಭಕ್ತಿಗಾರಘು |
ವರನು ಮೆಚ್ಚುತ್ತಾ ಗಳಿತ್ತನು |
ಮೆರೆವ ರತ್ನಾಂಬರದ ಹೊದಿಕೆಯ ವಿನುತಪಾದುಕೆಯ ||೧೮||

ಸಹಜ ನೀಂ ನುಡಿದಂತೆ ಬರ್ಪೆನು |
ವಹಿಸು ತತ್ಪರಿಯಂತಮಿಳೆಯನು |
ಮಿಹಿರವಂಶದ ಕೀರ್ತಿ ನಿನ್ನಿಂದುಳಿದುದಿಂದಿನಲಿ ||
ವಿಹಿತಮಾದಾತಂದೆಯಾಜ್ಞೆಯ |
ಕುಹಕಗೈಯದೆ ಸತ್ಯವೆನಿಸಿದೆ |
ಯಹಹ ನಿನ್ನೀಪರಿಯ ಚರಿಯವು ಒದುಕಿಸಿತು ಕುಲವ ||೧೯||

ಜಾನಕಿಯ ಮೇಗೆನ್ನ ಮೇಲಿಂ |
ದಾಣೆಯಿದೆ ನೀಂ ನಿನ್ನ ತಾಯನು |
ಹೀನವಚನಗಳಿಂದೆ ಕರೆಯದೆ ಕಾಣು ಬಕುತಿಯಲಿ ||
ಸಾನುರಾಗದಿನರಸ ತನ್ನಯ |
ಮಾನಿನಿಗೆ ವರವಿತ್ತುದಲ್ಲದ |
ನೂನಭಾಷೆಯನೊಂದ ಬೇರಿತ್ತಿಹನು ನೀನರಿಯೆ ||೨೦||

ಮಾನನೇತ್ರೆಯ ನಿನ್ನ ಪುತ್ರಿಯ
ರಾಣಿಯಾಗೆನಗಿತ್ತೆಯಾದೊಡೆ |
ನಾನು ರಾಜ್ಯವನೀವೆನಿವಳೊಳು ಜನಿಸಿದಾತಂಗೆ ||
ನೀನು ನಂಬುವುದೆಂದು ಕೇಕಯ |
ಮಾನವೇಶಂಗಿತ್ತು ಭಾಷೆಯ |
ನಾನಿರೋಧದೊಳಂದು ವರಿಸಿದನಿವಳ ಮತ್ಪಿತನು ||೨೧||

ಮರೆಯಬೇಡಿದನೆಂದು ತಮ್ಮಂ |
ಗೊರೆದು ಬುದ್ಧಿಯ ಜನನಿಯರ್ಕಳಿ |
ಗೆರಗಿಯುಳಿದರನ್ನೈದೆ ಮನ್ನಿಸಿಯೆಲ್ಲರಸು ಕಳುಹಿ |
ಭರತನಾ ಪರಿವಾರದಿಂ ಬನ |
ಸಿರಿಗೆ ಬಡತನವಡಸೆ ತಾಂ ಕಂ |
ಡರಸನಿಳಿದನು ಚಿತ್ರಕೂಟಾಖ್ಯಯದ ಪರ್ವತವ ||೨೨||

ವಿದಿತಘನಕರ್ಣಾಟರಾಜ್ಯದ |
ಪದಕೊಡೆಯನಹ ಕೃಷ್ಣಭೂಪನ |
ಪದದ ಸೇವಕನೆನಿಪ ಚಿಕಲಿಂಗಾಖ್ಯಪಾರ್ಥಿವನು ||
ಪದೆದಯೋಧ್ಯಾಕಾಂಡವೆಂಬುದ |
ನಿದನು ನುಡಿದನು ಭಾಮಿನೀಷ |
ಟ್ಪದಿಯೊಳಿದು ರಾಜಿಸುಗೆ ಸುಜನರ್ಗೊಲವನೊಡರಿಸುತೆ ||೨೩||

ಐದನೆಯ ಸಂಧಿ ಸಮಾಪ್ತಂ.

ಅಯೋಧ್ಯಾಕಾಂಡಂ ಸಂಪೂರ್ಣಂ.

ಅ ರ ಣ್ಯ ಕಾ ೦ ಡ.

ಸೂಚನೆ || ತೆರಳುವೆಡೆಯೊಳಗರಿವಿರಾಧನ |
ತರಿದು ನೇಹದೊಳಾಜಟಾಯುವ |
ಬೆರೆದು ರಾಮನು ಪಂಚವಟಿಯನು ಸಾರ್ದನೊಲವಿನಲಿ ||

ತೆರಳಿದರು ವರಚಿತ್ರಕೂಟದ |
ಗಿರಿಯಿನಾ ರಾಘವರು ಜತೆಯಲಿ |
ಧರಣಿಜಾತೆಯುಮೈದೆ ಮೆರೆವಾ ದಂಡಕಾವನಕೆ ||
ಪರಿಪರಿಯ ತರುಗುಲ್ಮಲತೆಗಳ |
ನೆರವಿಯಿಂ ನಾನಾವಿನೋದದೆ |
ಚರಿಸುತಿಹ ಮೃಗಪಕ್ಷಿನಿಕರದಿನೆಸೆದುದಾಬನವು ||೧||

ಅಂದು ಭಗವನ್ನಾಮಕೀರ್ತನ |
ದಿಂದೆ ಕಾಲವ ಕಳೆವ ಮುನಿಜನ |
ವೃಂದ ಕಂಡುದು ಬಂದುದಿವರಾರೆನುತೆ ಮುಸುಕಿದುದು ||
ಸುಂದರಾಂಗರ ನೋಡೆ ಬಾಹುಜ |
ರಂದದಿಂ ತೋರುವರು ಕೇಳುವೆ |
ವೆಂದು ಕೈಗಳ ಮುಗಿದು ನುಡಿಸಿದರಂದು ರಾಘವನ ||೨||

ರಾಯ ನೀನಾರಡವಿಪರಿಯಂ |
ತಾಯಸವು ನಿನಗೇಕೆ ತಾನೀ
ತೋಯಜಾಕ್ಷಿಯದಾರು ನಿನಗೀ ಸುಮುಖನೇನಹನು ||
ಆಯಿತಿಲ್ಲಿಗೆ ಬರವದೇಕಿದ |
ರಾಯತವ ನಮಗರುಹಬೇಕೆನು |
ತಾಯಮೀಂದ್ರರು ನುಡಿಸಲೆಂದನು ರಾಮನನುನಯದೆ ||೩||

ಕೇಳಿರೈ ಋಷಿಗಳಿರ ನೃಪಜನ |
ಮೌಳಿ ದಶರಥನೆನ್ನ ಜನಕನು |
ತಾಳಿಹೆನು ನೇಮವನು ಪದಿನಾಲ್ಕಬ್ದದವಡವಿಯಲಿ ||
ಕಾಲಕಳೆಯುವೆನೆಂದು ತನಗೀ |
ಲೋಲಲೋಚನೆಯರಸಿ ತಾನತಿ |
ಶೀಲವತಿಯೆನ್ನೊಡನೆ ಬಂದಳು ಯುವತಿ ವಿಮಲಮತಿ ||೪||

ರಾಮನೆಂದಪರೆನ್ನಸೀತಂ |
ಪ್ರೇಮಸೋದರ ಲಕ್ಷ್ಮಣನು ಮೇ |
ಸ್ವಾಮಿನಿಯಸೀಕೆಯನು ಕರೆವರು ಸೀತೆಯೆಂದೆನುತೆ |
ಈಮಹಾವನದೊಳು ತಪೋಜಪ |
ಹೋಮಗಳನೆಸಗುತ್ತದೆಂದುಂ |
ಕ್ಷೇಮದಿಂದಿಹಿರೇನು ಚೆಸಸುವುದೆಂದನಾನೃಪತಿ ||೫||

ಕ್ಷಮಿಸುವುದು ಸರ್ವಾಪರಾಧವ |
ನಮಿಸುವೆವು ನಿನಗಿಂದು ರಾಘವ |
ಕುಮತಿಗಳಿಗಮಗೆಲ್ಲ ಗೋಚರಸೀಭವತ್ಪದವು ||
ಅಮಿತತೋಷಿಗಳಾದೆವೀದಿನ |
ಮಮತೆದೋರುತ್ತೆಮ್ಮ ಪುಣ್ಯಾ |
ಶ್ರಮಕೆ ಬಿಜಯಂಗೈದು ಸತ್ಕಾರವನು ಕೊಳ್ಳುವುದು ||೬||

ಎನುತೆ ಕರೆದೊಯ್ದು ವರಸೂಲವಿಂ |
ಘನಮನೋಹರಪರ್ಣಮಂದಿರ |
ಕನುವಿನಿಂದರ್ಘ್ಯಾದಿಸತ್ಕಾರಗಳನಂದೆಸಗಿ ||
ವನಗೆ ದೊರೆವಾ ಕಂದಮೂಲವ |
ವಿನಯದಿಂದಾಹಾರಮಾಗಿ |
ತ್ತನುಪಮಾನನನುಪಚರಿಸಿದರು ಭಕ್ತಿಭಾವದೊಳು ||೭||

ಕಳೆದುರಾತ್ರಿಯನದನು ತಾಪಸ |
ನಿಳಯದಲಿ ತಾವೆಳ್ದು ಮರುದಿನ |
ಜಲಜಸಖನುದಯದಲಿ ಸಂಧ್ಯಾಕರ್ಮಗಳನೆಸಗಿ ||
ತಳುವದವರನುಮತಿಯ ಕೈಕೊಂ |
ಡುಳಿಯದೈದುತ್ತಿರಲು ಮುಂಗಡೆ |
ಯೊಳಗೆ ನಿಂತನು ಖಳವಿರಾಧನೆನಿಪ್ಪ ದಾನವನು ||೮||

ಎಳೆಯರಿರ ನೀವಾರು ನಿಮಗೀ |
ಲಲನೆಯೇನಹಳೆತ್ತ ಪೋಪಿರಿ |
ಕೇಳುದಲೆ ನಿಮ್ಮಾಯುವಿಂದಿಗೆ ನಿಲ್ವುದೆಂದೆನುತೆ ||
ಪಲುಮೊರೆಯುತೌಡೊತ್ತಿ ವೇಗದಿ |
ನಿಳೆಯಣುಗಿಯೆಡೆಗೈದಿ ಪಿಡಿಯು |
ತ್ತೆಲೆಗೆ ನಿನಗಾಸೊಲಿದೆ ನಿಂದೆನ್ನಂಕವೇರೆನಲು ||೯||

ಕಂಡು ಲಕ್ಷ್ಮಣನಣ್ಣದೇವನ |
ಖಂಡವೈಭವಲಕ್ಷ್ಮಿಗಿಂತೀ |
ಭಂಡ ದೈತ್ಯಾಧಮನ ತೊಡೆ ತಾನಾಯ್ತೆ ಗತಿಯೆನುತ |
ಕೆಂಡವುಗುಳುತ ನೇತ್ರದಲಿ ಕೋ |
ದಂಡಕೇರಿಸಿ ಹೆದೆಯ ಬಾಣವ |
ಕೊಂಡು ಜೋಡಿಸುವನಿತರೊಳು ಮುಂಕೊಂಡು ಬಂದಿವರ ||೧೦||

ಪಿಡಿದು ಹೆಗಲೇರಿಸಿ ವಿರಾಧನು |
ಬಿಡುತ ತನ್ನನು ಮುಂದೆ ನಡೆಯುವ |
ಸಡಗರವ ಕಂಡಂಜಿ ಸೀತೆಯು ಬೆದರಿ ಕೂಗಿದಳು ||
ತಡವ ಗೈವುದೆ ರಮಣ ದುರುಳನ |
ಕಡಿದುಬಿಡು ನೀನಲ್ಲದಿರಲೆ |
ನ್ನೊಡೆಯ ತನ್ನನೆ ಕಡಿದು ಮುಂದಕೆ ತೆರಳು ನೀನೆಂದು ||೧೧||

ಲಲನೆ ಭಯದಿಂದುಲಿದ ನುಡಿ ತಾ |
ನಲಗಿನಂದದೊಳಿದೆಯನಿರಿಯ |
ಲ್ಕೆಲದೊಳಿಹ ಲಕ್ಷ್ಮಣನಿಗೆಚ್ಚರಿಸಿದನು ರಾಘವನು ||
ಸೆಳೆದು ಕಡುಗವನಿರ್ವರಂದಾ |
ಖಳನ ಭುಜಗಳನರಿದು ದುಮ್ಮಿ |
ಕ್ಕಳಿಗೆ ಶರಗಳನಿರದೆ ದಳಿದರು ದುರುಳನಂಗದಲಿ ||೧೨||

ಅಂದು ಭೂಮಿಯಮೇಲೆ ಬಿಳ್ದವ |
ನೆಂದನಾರ್ಯೆ ನೀವು ಸರಲುಗ |
ಳಂದವಚ್ಚರಿ ಸಹಿಸಲಸದಳವಿದಲೆ ತನಗಿನ್ನು ||
ಸುಂದರಾಂಗನು ರಾಮನೆಂಬವ |
ನಿಂದು ನಿಮ್ಮೊಳಗಾವನ್ಯೆಯರ |
ವಿಂದನಾಭನ ದಿವ್ಯಮೂರ್ತಿಯ ತೋರ್ಪುದೆನಗೆಂದ ||೧೩||

ಇಂತು ನುಡಿವ ವಿರಾಧನಿದಿರೊಳ |
ನಂತಮಹಿಮನು ನಿಂದು ಸಲೆ ನಿ |
ನ್ನಂತರಂಗವದೇನು ಪೇಳಿನ್ನಾನೆ ರಾಘವನು ||
ಚಿಂತೆಯುಳಿಯೆನಲೊಡನವನು ನಿ |
ಶ್ಚಿಂತನಾಗುತ ದಿವ್ಯತೇಜೋ |
ವಂತನಹ ಗಂಧರ್ವಪುರುಷನ ರೂಪಿನಿಂದೆಸೆದು ||೧೪||

ಕ್ಷಮಿಸುವುದು ಜಗದೀಶ ಬುದ್ಧಿ |
ಭ್ರಮಣೆಯಿಂ ನಾಂ ಗೈದ ತಪ್ಪನು |
ವಿಮಲಮತಿಯವಧರಿಸು ತನ್ನಯ ಪೂರ್ವಸಂಗತಿಯ ||
ಕಮಲಜನ ಬಳಿಗೆಂದು ರಂಭೆಯು |
ಗಮಿಸುತಿರಲೊಂದಿರುಳು ಮಾರ್ಗದೆ |
ಕುಮತಿಯಿಂ ನಾ ಸವಳ ಕೆಣಕಲು ವಿಧಿಯು ಖತಿಗೊಂಡು ||೧೫||

ಎಲವೊ ಗಂಧರ್ವಕನೆ ತುಂಬುರು |
ಬಲುಹಿನಿಂ ನೀನಿವಳ ನಿಯಮಘ |
ನಳಿದಕಾರಣ ರಾಕ್ಷಸಾಧಮನಾಗೆನುತೆ ಶಪಿಸೆ ||
ಬಳಿಕ ನಾನತಿದೀನಭಾವದಿ |
ನೊಲಿಸೆ ನುಡಿದನು ಮುಂದೆ ಭಾಸ್ಕರ |
ಕುಲದೊಳುದಯಿಪ ಪುರುಷನಿಂ ನಿನಗಪ್ಪುದಭ್ಯುದಯ ||೧೬||

ಒಂದುಕಾಲದೆ ರಾಮಲಕ್ಷ್ಮಣ |
ರಿಂದುಮುಖಿಯಹ ಸೀತೆಯೊಡನೈ |
ತಂದು ನೀನಿಹ ದಂಡಕಾವನದಲ್ಲಿ ಚರಿಸುವರು ||
ಅಂದು ನೀನಾಲಲನೆಯನು ಬ |
ಲ್ಪಿಂದೆ ಪಿಡಿಯಲು ರಾಮನಾಗ್ರಹ |
ದಿಂದೆ ಬಾಣವನೆಚ್ಚೊಡೊಂದುವೆ ಮತ್ತೆ ನಿಜತನುವ ||೧೭||

ಇಂತು ಪೇಳ್ದ ಪಿತಾಮಹನ ನುಡಿ |
ಯಂತೆ ನಿನ್ನಿಂದಿಂದು ಬದುಕಿದೆ |
ನೆಂತು ನಿನ್ನ ಪಕೃತಿಯ ಮರೆವೆನಪಾರಗುಣನಿಲಯ ||
ಮುಂತೆ ನೀಂ ತೆರಳುತ್ತೆ ಕಾಣುವೆ |
ಶಾಂತರಹ ಶರಭಂಗಮುನಿಪರ |
ನಂತರಾತ್ಮಧ್ಯಾನಪರರವರಿಂದೆ ಲೇಸಹುದು ||೧೮||

ತೆರಳಿ ನೀವೆಂದೊರೆದು ಖಚರನು |
ಮರಳಲತ್ತಲು ದಾನವಕಳೇ |
ವರವನದಸಿಳೆಯೊಳಗೆ ನಿಕ್ಷೇಪಿಸಿ ಬಳಿಕ್ಕವರು ||
ಸರಸಿಜಾಕ್ಷಿಯ ಬಳಿಯ ಸೇರ್ದ್ದೊ |
ತ್ತಿರಸಿಯಾಕೆಯ ಮನದ ಭೀತಿಯ |
ನಿರದೆ ಪಯಣವ ಬೆಳೆಸುತಾ ಶರಭಂಗನಾಶ್ರಮವ ||೧೯||

ಕಂಡು ಸಾರುವ ಸಮಯದೊಳಗಾ |
ಖಂಡಲನು ನಭದೊಳ್ವಿಮಾನದೆ |
ಮಂಡಿಸುತ್ತಾಶ್ರಮದೊಳಿಹ ಮುನಿಯೊಡನೆ ಭಾಷಿಸುತೆ ||
ಚಂಡಬಲರಿವರೈದೆ ಕಾಣು |
ತ್ತಂಡಿಸುತೆ ಮನದಲ್ಲಿ ತಾಂ ಮರೆ |
ಗೊಂಡು ಜಾರಲು ನೋಡಿ ವಿಸ್ಮಯಗೊಳುತೆ ರಾಘವನು ||೨೦||

ಮುನಿಯ ಬಳಿಯನು ಸಾರಲಾತನು |
ಘನಮಹಿಮ ಪರಮೇಶ ಪಾವನ |
ಚಿನುಮಯನೆ ನಿನ್ನಂಘ್ರಿಕಮಲದ ಬರವ ಹಾರೈಸಿ |
ಇನಿತುದಿನ ಕಾದಿರ್ದೆನಿಂದೀ |
ಜನುಮ ಸಾರ್ಥಕವಾಯ್ತು ಬೊಮ್ಮನ |
ವಿನುತಲೋಕಕ್ಕತಿಥಿಯಾಗಿಹೆನಿಂದು ತಪದಿಂದೆ ||೨೧||

ಎನ್ನನೊಯ್ಯಲ್ಕಲ್ಲಿಗಾಸಂ |
ಪನ್ನನಿಂದ್ರನು ನಿಂದು ಗಗನದೊ |
ಳಿನ್ನು ತಡವೇಕೇರು ನೀನಿಂದೀವಿಮಾನವನು ||
ಎನ್ನುತೊಲವಿಂ ಕರೆಯುತಿರ್ದನು |
ನಿನ್ನ ಬರವನು ಕಂಡು ತಳುವಿದೆ |
ನಿನ್ನನುಜ್ಞೆಯನೀಯಬೇಕೆಂದೆನಲು ಮುನಿವರನು ||೨೨||

ಮುನಿಪ ನಿನ್ನ ತಪಃಪ್ರಭಾವ |
ಕ್ಕನುಗುಣದ ಫಲವೊಂದಿದೈ ನಿಜ |
ಘನಮನೋರಥಸಿದ್ಧಿಯಾದುದು ನಿನಗೆ ಒಲುದಿನಕೆ ||
ವಿನುತ ಲೋಕಕ್ಕಿಂದು ಪಯಣವ |
ನನುಗೊಳಿಸು ನೀನೆಂದನುಜ್ಞೆಯ |
ನಿನಕುಲೋದ್ಭವನೀಯಲಾ ಯಮಿವರನು ಮುದವಡೆದು ||೨೩||

ದೇವಚಿತ್ತೈಸೇರಿನಾವೆಯ |
ನೀವು ಮಂದಾಕಿನಿಯದಾಂಟಿ ಸು |
ಪಾವನಾತ್ಮ ಸುತೀಕ್ಷ್ಣನಾಶ್ರಮಕೈದಲಾ ಮುನಿಯು ||
ತಾವಕರುಣಿಸಿ ನಿಮಗೆ ಬಹುಸಂ |
ಭಾವನೆಯನೆಸಗುವನು ತನಗಿ |
ನ್ನೀವುದಾಜ್ಞೆಯನೆನುತೆ ಬೆರೆದನು ಶ್ರೌತದಗ್ನಿಯಲಿ ||೨೪||

ಬಳಿಕವಲ್ಲಿಯತಾಪಸರ್ಕಳು ।
ಕೆಲರು ವೈಖಾನಸರು ಮತ್ತಂ ।
ಕೆಲರು ಪೂರ್ವದ ವಾಲಖಿಲ್ಯರು ಕೆಲರೆಲೆಯುಣಿಗಳು ॥
ಹಲವು ಬಗೆಯಾವ್ರತಿಗಳೆಲ್ಲರು ।
ಬೆಳಗುವರೊ ದಿಕ್ತಟವನೆಂಬಂ ।
ತಲಘುತೇಜೋಽನ್ವಿತರು ಬಂದರು ಬಳಿಗೆ ರಾಘವನ ॥೨೫॥

ಒಡೆಯನೆಂತಾವಜ್ರಿಯಮರ ।
ಗೊಡೆಯನಹೆ ನೀನಂತು ಮನುಜ ।
ಗಡವಿವೊಕ್ಕಿಹೆ ತಾತನಾಜ್ಞೆಯ ಪಾಲಿಸಲ್ಕಿಂದು ॥
ಬಡಮುನಿಗಳಾದೆಮ್ಮ ಬಿನ್ನಪ ।
ಕೆಡೆಯ ನೀಂ ಬಿಡದಿತ್ತು ಮನದಲಿ ।
ದೃಢತರೋನ್ನತಕೀರ್ತಿವಡೆಯೈ ಮೂರುಲೋಕದಲಿ ॥೨೬॥

ತಂದೆ ತನ್ನಯ ಸುತರನೊಲಿದಾ ।
ವಂದದಿಂ ಸಲಹುವನೊ ಆಪರಿ ।
ಯಿಂದೆ ರಾಜನು ಜನವ ಸಲಹುವುದಾತ್ಮಧರ್ಮವಲಾ ॥
ಇಂದು ನಿನ್ನಯ ಜನವೆನಿಪ್ಪೆವು ।
ಗೊಂದಿರುವ ಕಷ್ಟವನು ಪರಿಹರಿ ।
ಸೆಂದು ಬೇಡುವೆವದನು ಕರುಣಿಸಿ ಸಲಹು ಕರುಣಾಳು ॥೨೭॥

ಅರಸ ನಮ್ಮಯ ತಪಕೆ ರಕ್ಕಸ ।
ರಿರದೆ ವಿಘ್ನವನೆಸಗಿ ನಮ್ಮನು ।
ಮರುಕವಿಲ್ಲದೆ ಘಾತಿಸುತೆ ಬಲುಹಿಂಸೆಗೈದಪರು ॥
ಮರೆಯಹೊಕ್ಕಿಹೆವಿಂದು ನಿನ್ನನು ।
ಶರಣಜನಸಂರಕ್ಷಕನೆ ಖೂ ।
ಳರನು ನಿಗ್ರಹಗೈದು ರಕ್ಷಿಪುದೆಮ್ಮನೆನಲವರು ॥೨೮॥

ಮರುಗಿದನು ಮನದಲ್ಲಿ ಋಷಿಗಳ ।
ದರುಮಕೆಡರುಂಟಾಯ್ತೆ ಶಿವಶಿವ ।
ದುರುಳರಕ್ಕಸರುಬ್ಬಟೆಯನಿವರೆಂತು ಸೈರಿಪರು ॥
ಬರವಸವನಿತ್ತಿವರ ಭಯವನು ।
ಹರಿಸಬೇಕೆಂದಾಗ ರಾಮನು ।
ಭರದೆ ಹೆದೆಯನು ಧನುವಿಗೇರಿಸಿ ನುಡಿದನವರೊಡನೆ ॥೨೯॥

ಬೆದರದಿರಿ ಮುನಿಗಳಿರ ನಿಮ್ಮ |
ಭ್ಯುದಯಮುಂ ನಿಜಪಿತನಮೂಲ್ಯದ |
ವಿಧಿಯುಮೆನ್ನನು ವನಕೆ ತಂದುದು ಮೇಣ್ಪ್ರಯೋಜನವು ||
ಇದನು ಬಿಟ್ಟೆನಗಿಲ್ಲ ಪೆರತೊಂ |
ದದಕೆ ಬಂದವನಲ್ಲ ಭೀತಿಯ |
ನೆದೆಯೊಳಿನ್ನಿಡಸಲ್ಲ ನಂಬುವುದಿದನು ದಿಡವಾಗಿ ||೩೦||

ಇಂದು ಮೊದಲಾದುಷ್ಟರಾಕ್ಷಸ |
ವೃಂದವನು ನೆರೆಕಡಿದು ಮುನಿಜನ |
ಬಂಧುವೆನಿಪಾಪೆಸರನಾನುವೆನಿನ್ನು ತಪಗಳಿಗೆ ||
ಕುಂದುಬಾರದತೆರದೆ ನೀಂ ಸ್ವ |
ಚ್ಛಂದದಿಂದವುಗಳನು ಮಾಡುತೆ |
ಪಿಂದಣಂದದೆ ಸುಖದೊಳಿಹುದಿನ್ನೆಂದನಾರಾಮ ||೩೧||

ಇಂತು ಮುನಿಜನಕಭಯಮೊಡರಿಸಿ |
ಮುಂತೆ ನಡೆದು ಸುತೀಕ್ಷ್ಣಮುನಿಪನ |
ನಂತಸತ್ಕಾರಂಗಳಂ ಪಡೆದವನನುಜ್ಞೆಯಲಿ ||
ಚಿಂತೆಯಿಲ್ಲದೆ ರಾತ್ರಿಯನು ಬಲು |
ಸಂತಸದೊಳಾಶ್ರಮದೆ ಕಳೆದ |
ತ್ಯಂತವಿನಯದೆ ನಮಿಸಿ ಮುನಿಗಳ ಮಾರನೆಯದಿನದೆ ||೩೨||

ತೆರಳಲಾಜ್ಞೆಯನಾಂತು ಬಳಿಕ |
ಲ್ಲಿರದೆ ಸಿಂಗಾಡಿಯನು ಭುಜದಲಿ |
ಧರಿಸಿ ಮದಿಸಿದ ಗಜದವೊಲು ಮುಂಕೊಂಡು ನಡೆಯುತಿರೆ |
ತರಳೆ ನೋಡಿದಳಾತ್ಮವಲ್ಲಭ |
ನಿರವ ಮೆಲ್ಲನೆ ಸಾರ್ದು ಸನಿಹಕೆ |
ಸರಸಭಾವದೊಳರುಹಿದಳು ಮನದರ್ಥವನು ಸೀತೆ ||೩೩||

ಚಿತ್ತವಲ್ಲಭ ಲಾಲಿಪುದು ಸತಿ |
ಬಿತ್ತರಿಸುವೀನುಡಿಯನೊಲವಿಂ |
ದುತ್ತಮೋತ್ತಮಧರ್ಮನಿಷ್ಠನು ನೀನು ಜಗವರಿಯೆ ||
ಮತ್ತಭಾವವದಿಲ್ಲ ಪರಸತಿ |
ಯತ್ತ ಬಯಕೆಯುಮಿಲ್ಲವಾದೊಡ |
ನೊತ್ತಿಕೊಂಡಿಹುದೊಂದು ಪರಪೀಡನೆಯ ಕಲ್ಮಷವು ||೩೪||

ತಾತನಾಣತಿವಿಡಿದು ಮುನಿಗಳ |
ರೀತಿಯಲಿ ವನದಲ್ಲಿ ಚರಿಸವಿ |
ನೀತನಂದದೆ ಶಸ್ತ್ರಧಾರಣಮೇಕೆ ನಿನಗಿಲ್ಲಿ ||
ಭೂತಹಿಂಸಾಕ್ಷತ್ರಧರ್ಮದ |
ನೀತಿ ಸಲುವುದು ರಾಜ್ಯದೊಳಗಿರ |
ಲೀತಪಶ್ಚರ್ಯೆಯೊಳು ಸಲುವುದೆ ಪೇಳು ಮತ್ಪತಿಯೆ ||೩೫||

ಎನ್ನ ಮನಕೀರೀತಿ ತೋರ್ಪುದು |
ಸನ್ನುತಾಂಗನೆ ನಿನ್ನ ಚಿತ್ತದೊ |
ಳಿನ್ನು ತೋರಿದಪರಿಯೊಳೆಸಗುವುದೆಂದು ಸತಿಯುಸಿರೆ ||
ತನ್ನ ಮನದೊಳು ಹಿಗ್ಗಿ ಗುಣಸಂ |
ಪನ್ನನಾ ರಾಘವನು ಸತಿಯರ |
ರನ್ನಕೆಂದನು ಲೋಕಕತಿಹಿತಮಪ್ಪವಾಕ್ಯವನು ||೩೬||

ವಲ್ಲಭೆಯೆ ನಿನಗೊರೆವೆನಿದಕೇ |
ಳೆಲ್ಲಿ ಪಾರ್ಥಿವನಾಳ್ವನಾ ನೆಲ |
ದಲ್ಲಿ ಮೊರೆಯಿಡೆ ಜನವು ತಾನದನೊಲಿದು ರಕ್ಷಿಸಲು ||
ಬಿಲ್ಲುಕಣೆಗಳ ತಳೆದು ಲೋಕದೆ |
ಖುಲ್ಲರುಪಟಳವದನುತಗ್ಗಿಪು |
ದಲ್ಲದಿರ್ದೊಡೆ ನರಕಭಾಜನವಪ್ಪನಾ ನೃಪತಿ ||೩||

ಇಂದು ನಾವೀದಂಡಕಾವನ |
ಕೆಂದು ಬಂದೊಡೆ ಋಷಿಗಳೆಲ್ಲರು |
ಬಂದು ರಾಕ್ಷಸರಿಂದೆ ತಮ್ಮಯ ಯಾಗಗಳು ನೃಪಸೆ ||
ಒಂದಿದುವು ದುರ್ದಶೆಯನವು ನಿ |
ನ್ನಿಂದಮುಳಿಯಲುಬೇಕು ದುಷ್ಟರ |
ಕೊಂದು ನಮ್ಮನು ರಕ್ಷಿಸೆನಲಾಂ ಕೊಟ್ಟೆನಭಯವನು ||೩೮||

ಕಂದಮೂಲಫಲಾದಿಗಳ ತಾಂ |
ತಿಂದು ಜಪನಿಯಮೋಪವಾಸಗ |
ಳಿಂದೆ ಕಾಯಕ್ಲೇಶವಾನುತೆ ಘೋರತಪಗಳನು ||
ಚಂದದಿಂದಾಚರಿಪಮುನಿಜನ |
ವೃಂದವನು ನೆರೆ ಬಾಧಿಸುತ್ತಿಹ |
ಹಂದೆರಕ್ಕಸಮಂದೆಯನು ಸರಲಿಂದೆ ಸವರುವೆನು ||೩೯||

ನೀರೆ ನಿನಗೆನ್ನಲ್ಲಿ ನೇಹವು |
ಪಾರವೆಂಬುದು ನಿನ್ನ ನುಡಿಯಿಂ |
ತೋರುವುದು ಬೇರಿಲ್ಲ ನಡೆಯೆಂದಂದು ತೆರಳುತ್ತೆ ||
ಸಾರಿ ಋಷ್ಯಾಶ್ರಮಗಳಸು ನಲ |
ವೇರಿ ಕಾಲವ ಕಳೆದು ಕೆಲವೆಡೆ |
ಮೂರುತಿಂಗಳು ಮತ್ತೆ ಕೆಲವೆಡೆಯಾರುತಿಂಗಳೆನೆ ||೪೦||

ಇಂತು ನವವರ್ಷಗಳ ಕಳೆಯು |
ತ್ತಂತದಲಿ ಹತ್ತನೆಯವರ್ಷವ |
ಸಂತಮುನಿಸಂಸೇವ್ಯರೆನಿಸುವಗಸ್ತ್ಯಮುನಿವರರ |
ಪಿಂತಣದ್ಭುತಮಹಿಮೆಗಳನೆನೆ |
ದಂತರಂಗದೆ ಪೊಗಳಿ ತೇಜೋ |
ವಂತರಪ್ಪವರಾಶ್ರಮವ ಪೊಕ್ಕೆರಗಲವರಂದು ||೪೧||

ಕ್ಷೇಮವೇನೈ ನಿನಗೆ ನಿನ್ನೀ |
ಪ್ರೇಮನಿಧಿ ಸೋದರನು ಕುಶಲಿಯೆ |
ಭಾಮಿನೀಮಣಿ ಸುಖದಿನಿಹಳೇ ಜಾನಕೀದೇವಿ ||
ರಾಮಭದ್ರನೆ ನಿನ್ನ ದರ್ಶನ |
ದಾಮಹಾಸುಖವೆನಗೆ ಲಭಿಸಿ |
ತ್ತೀಮಹಾಟವಿ ಪೂತಮಾದುದು ನಿನ್ನ ಬರವಿಂದೆ ||೪೨||

ಬರುವೆ ನೀಂ ನಿನಗೀಯಬೇಕೆಂ |
ದರಿಭಯಂಕರ ವಿಷ್ಣುಧನುವಿದ |
ನುರುಶರಂಗಳ ಬತ್ತದಿಹ ಬತ್ತಳಿಕೆಯೊಡನಿರದೆ |
ಮೆರೆಯುವೀಖಡ್ಗವುಮನಿಂದಿನ |
ವರೆಗಮೋವಿದೆನಯ್ಯ ನೀಂ ನ್ವೀ |
ಕರಿಪುದಿವನೆಂದಿತ್ತು ಮಂತ್ರನ್ಯಾಸಪೂರ್ವಕದೆ ||೪೩||

ಧುರದೊಳಿದಿರಾದಸುರರಸುವನು |
ಹುರಿದು ಮುಕ್ಕುವುವಲ್ಲದಿಲ್ಲವು |
ಕೊರತೆಯಿವುಗಳೊಳಿವು ನಿಶಾಚರಕುಲವಿನಾಶಿಗಳು ||
ಹರಿಯು ಪೂರ್ವದೆ ರಕ್ಕಸರ ಸಂ |
ಹರಿಸಿದನು ತಾನೀಧನುವಿನಿಂ |
ಧರಿಸುತಿದ ನೀಂ ಸುಖವನೊಂದೆನುತಾಗ ಹರಸಿದನು ||೪೪||

ಮುನಿಪನಿತ್ತಾಧನುವು ಮೊದಲಾ |
ದನಿತುಮಂ ಸ್ವೀಕರಿಸಿ ರಾಮನು |
ತನಗೆ ಪಾಸುಕ್ಕೊಂದು ಠಾವನು ಬೆಸಸಿ ನೀವೆನಲು ||
ಮನದೆ ತಾಂ ಕ್ಷಣಮಾತ್ರ ಜಾನಿಸಿ |
ಯನುವಹುದು ನಿನಗೀ ಸಮೀಪದ |
ಬನವು ನೀನಲ್ಲಿರ್ದೊಡಪ್ಪುದು ಸಕಲಸಂಪದವು ||೪೫||

ಅದನು ಕರೆವರು ಪಂಚವಟಿಯೆಂ |
ದದರೊಳೊಣಗವು ಪುಷ್ಪಫಲಗಳು |
ಸದಮಲವು ತತ್ಪುಣ್ಯದೇಶವು ಸೌಖ್ಯದಾಯಕವು ||
ಪದುಮನೇತ್ರನೆ ನಿನ್ನ ಹೃದಯದ |
ಹದನ ಬಲ್ಲೆನು ಠಾವು ನಿನಗದು |
ಮುದವನೀವುದು ಪರ್ಣಶಾಲೆಯ ರಚಿಸು ನೀನಲ್ಲಿ ||೪೬||

ಎಂದು ನುಡಿಯುವಗಸ್ತ್ಯಮುನಿಪಗೆ |
ವಂದನೆಯ ಗೈದವನನುಜ್ಞೆಯ |
ನೊಂದಿ ಸೀತಾಲಕ್ಷ್ಮಣರನೊಡಗೂಡಿ ರಾಘವನು ||
ಮುಂದೆ ಪೋಗುತೆ ಮಧ್ಯಮಾರ್ಗದೊ |
ಳೊಂದು ವಟವೃಕ್ಷದೊಳು ಮೇಘ |
ಸ್ಕಂಧದಂದದಿನಿರ್ದ ಗೃಧ್ರನ ಕಂಡು ಬೆಸಗೊಂಡ ||೪೭||

ಎಲವೊ ನೀನಾರಾವುದೈ ನಿಜ |
ಕುಲವು ಪೆಸರೇನೆನ್ನೊಳೊರೆಯೆನ |
ಲಲಘುಮತಿ ಕೇಳಾಂ ಜಟಾಯು ಭವತ್ಪಿತಗೆ ಸಖನು ||
ಕುಲವ ಪೇಳುವೊಡರುಣಪುತ್ರನು |
ಬಲಯುತನು ಸಂಪಾತಿಯೆಂಬವ |
ನಿಳೆಯೊಳಗ್ರಜನೆನಗೆ ನಿನಗಿನ್ನಾಂ ಸಹಾಯಕನು ||೪೮||

ನಿನ್ನ ಬಳಿಯೊಳಗಿಹೆನು ಗುಣಸಂ |
ಪನ್ನ ಲಕ್ಷ್ಮಣನೊಡನೆ ನೀನಿರ |
ದನ್ಯಕಾರ್ಯಕೆ ತೆರಳೆ ರಕ್ಷಿಸುತಿಹೆನು ಜಾನಕಿಯ ||
ಮನ್ನಿಪುದು ನೀನೆಂದ ಪಕ್ಷಿಯ |
ಮನ್ನಣೆಯಿನಾದರಿಸುತೆರಗು |
ತ್ತಿನ್ನನೇ ನೀನೆನಗೆ ಬಾಂಧವನೆಂದನಾ ರಾಮ ||೪೯||

ಪೇಳುತೀಪರಿ ಪಂಚವಟಿಯ ವಿ |
ಶಾಲಸುಕ್ಷೇತ್ರವನು ಸಾರ್ದನು |
ಕೂಲವಾದೀಯೆಡೆಯ ನೋಡೈ ತಮ್ಮ ನಾವಿಲ್ಲಿ ||
ಕಾಲವನು ಕಳೆಯಲ್ಕೆ ತಳಿರಿನ |
ಶಾಲೆಯೊಂದನು ರಚಿಸು ನೀನೆನ |
ಲಾಲಯವ ಧಿಕ್ಕರಿಸುವಾಶ್ರಮವೊಂದನೆಸಗಿದನು ||೫೦

ನೋಡಿದನು ರಾಘವನು ಲಕ್ಷ್ಮಣ |
ಮಾಡಿದಾವರಪರ್ಣಶಾಲೆಯ |
ನಾಡಿಗಚ್ಚರಿ ತಮ್ಮ ನಿನ್ನಯ ಬುದ್ಧಿಕುಶಲತೆಯು ||
ನೀಡುವೊಡೆ ನಿನಗುಡುಗೊರೆಯನೀ |
ಕಾಡಿನೊಳು ದುರ್ಲಭವು ಪಡಿಯಿದು |
ಗಾಢತರದಾಲಿಂಗನವು ಕೊಳ್ಳೆನುತೆ ಬಿಗಿಯಪ್ಪಿ ||೫೧

ಲೋಲಲೋಚನೆಯೊಡನೆ ಮಿಂದು ವಿ |
ಶಾಲಗೋದಾವರಿಯೊಳಮಲದು |
ಕೂಲಗಳ ಧರಿಸುತ್ತೆ ಸಂಧ್ಯಾದಿಗಳನಿರದೆಸಗಿ ||
ಮೇಲೆನಿಪ ಸುಮುಹೂರ್ತದಲಿ ಬಲ |
ಶಾಲಿ ಲಕ್ಷ್ಮಣನೊಡನೆ ನೂತನ |
ಶಾಲೆಯನು ಸಂಭ್ರಮದೆ ಪೊಕ್ಕನು ದಾನವಧ್ವಂಸಿ ||೫೨

ಮೊದಲನೆಯಸಂಧಿ ಸಂಪೂರ್ಣಂ.

ಎರಡನೆಯ ಸಂಧಿ.

ಸೂಚನೆ|| ಭೋಗದಾಸೆಯ ಶೂರ್ಪಣಖೆಯನು |
ಮೂಗನರಿದಟ್ಟಲ್ಕೆ ಲಕ್ಷ್ಮಣ |
ನಾಗ ರಾಮನ ಕೆಣಕಿಯಳಿದರು ಖರಮುಖಾಸುರರು ||

ನೂಕುತಿರ್ದರು ದಿವಸಗಳನ |
ವ್ಯಾಕುಲರು ತಾವಲ್ಲಿ ಮೂವರು |
ಮೇಕಮಾನಸರಾಗಿ ಮರೆದಾವಿಪಿನದಾಯಸವ |
ಸಾಕು ಸಾಕಾತಪದ ತಾಪವು |
ನೂಕದೆಮಗಿಂದೆಂಬ ಜನದವಿ |
ವೇಕಕುರೆ ಬೇಸತ್ತಸೆನೆ ರವಿದಕ್ಷಿಣಕೆ ಸರಿದ ||೧||

ಸಂದು ಸಿಕ್ಕಿತು ತನಗದೆನ್ನುತೆ |
ಬಂದನಾಹೇಮಂತಭೂಪನು |
ಮಂದಿಯನು ಚಳಿಯೆಂಬ ಸಂಕಲೆಯಿಂದೆ ಬಂಧಿಸುತೆ ||
ಅಂದಗಿಡಿಸುವ ಮಂಜಿನಸ್ತ್ರಗ |
ಳಿಂದಮಿರಿಯಲು ಸಹಿಸಲಾರದೆ |
ನೊಂದು ಬಯಸಿತು ಮಂದಿ ದಿನಮಣಿಗುತ್ತರಾಯಣವ ||೨||

ನೀರನೆಳಸದು ಜನವು ಪೂವಿನ |
ಹಾರವಾನದು ಮಿಾಯದಲೆ ಕಾ |
ಸಾರಗಳೊಳುರೆ ಕಾಯಲಿಚ್ಛೈಸಿದುದು ವಹ್ನಿಯನು ||
ವಾರಿಜಂಗಳ ದಳಗಳುದಿರಿದು |
ವಾರಿಪೋದುವು ರವಿಯ ಕಿರಣಗ |
ಳಾರಯಿಸಿದುವು ಸಕಲಜಂತುಗಳುಷ್ಣವಸ್ತುಗಳ ||೩||

ಈತೆರದಹಿಮಕಾಲದೊಳು ಭೂ |
ಜಾತೆಯುಂ ಲಕ್ಷ್ಮಣನುಮೊಡನಿರ |
ಲಾತಪೋಧನಯೋಗ್ಯವಾದುಟಜದೊಳು ರಾಘವನು ||
ಶೀತಭಯದಿಂ ಹರಿಣದಜಿನವ |
ನೋತು ಮೈಯಲ್ಲಾಂತು ಮೆರೆಯುತೆ |
ವೀತಿಹೋತ್ರನ ದಿವ್ಯತೇಜವನಿಳಿಕೆಗೈಯುತಿರೆ ||೪||

ಬಂದಳವರೆಡೆಗಂದು ರಾಕ್ಷಸ |
ವೃಂದವೈಭವಹಾನಿದಾಯಿಕೆ |
ಮಂದಮತಿಗಳಿಗಗ್ರನಾಯಿಕೆ ಕುಮುಖಿ ಶೂರ್ಪಣಖೆ ||
ನಿಂದು ನೋಡಿದಳಮಲರಾಘವ |
ನಂದಚಂದವ ಕಾಮಶರಹತಿ |
ಗಂದು ವೈಗೊಟ್ಟೆರಗಿ ನುಡಿಸಿದಳಾ ದೃಢವ್ರತನ ||೫||

ಆರು ನೀನೆಲೆ ವೀರ ನಿನಗೀ |
ನಾರಿಯೇನಹಳಾತನಾವನ |
ಪಾರಪೌರುಷನಂತಿಹನು ನಿಮಗಿಲ್ಲಿ ಬರವೇನು ||
ಕೂರರಹ ರಕ್ಕಸರು ಚರಿಸುವ |
ಘೋರಕಾನನವೆಂಬುದರಿಯದೆ |
ಮೀರಿ ನಡೆವುದಕೇನುಕಾರಣವೆಂದಳಾದನುಜೆ ||೬||

ನೋಡಿದನು ರಾಘವನು ಮಿಗೆ ಮಾ |
ತಾಡಿದನು ಕೇಳಬಲೆ ಲೋಕದೆ |
ರೂಢಮಾಗಿಹ ಸೂರ್ಯವಂಶದ ದಶರಥಾಧಿಪನಾ ||
ಗಾಢಮೋಹದ ಪುತ್ರರಾವೀ |
ಗಾಡಿಕಾತಿ ಮದೀಯಸುದತಿಯು |
ಕಾಡಿಗಾಪಿತೃವಾಕ್ಯಪಾಲನೆಗಾಗಿ ಬರವಾಯ್ತು ||೭||

ಕರೆವರೆನ್ನನು ರಾಮನೆನ್ನುತೆ |
ಮೆರೆವಲಕ್ಷ್ಮಣನಾಮವೀತಗೆ |
ಕಿರಿಯನಿವನೆನ್ನಿಂದೆ ಸೀತಾಭಿಧೆಯು ತಾನಿವಳು ||
ಅರಿಯಲನುಪಮ ಜನಕಚಕ್ರೇ |
ಶ್ವರನ ಕುವರಿಯು ತನ್ನ ಭಾಗ್ಯದ |
ಸಿರಿಯು ನೀನಾರೇತಕೈದಿದೆ ಪೇಳು ನಿಶ್ಚಯವ ||೮||

ಸರಸವಾದಾನುಡಿಯನಾಲಿಸಿ |
ಹರಿಸಗಡಲೊಳ್ಮುಳುಗುತಸುರಿಯು |
ಮೆರೆವಲಂಕಾಧೀಶರಾವಣನನುಜೆ ತಾನಹೆನು ||
ಧರೆಯೊಳೆನ್ನನು ಶೂರ್ಪಣಖೆಯೆಂ |
ದೊರೆವರೀಯಭಿಧಾನವನು ಕೇ |
ಳ್ದರಿಯೆವೆಂಬಾಜನವು ದುರ್ಲಭವಲ್ತೆ ಲೋಕದಲಿ ||೯||

ರಂಭೆಯೂರ್ವಶಿಯರ್ಕಳೆನ್ನ ನಿ |
ತಂಬಬಿಂಬಕೆ ಸಾಟಿಯೇ ಮೇ |
ಣಂಬುಜೋದ್ಭವನರಸಿ ಸರಸತಿ ತನಗೆ ಸರಿಯಹಳೇ ||
ಎಂಬೊಡತಿಶಯವಲ್ಲ ಕೇಳಲ |
ರಂಬನಾ ಸತಿಗಿತಿಯರೆನ್ನೀ |
ಕುಂಭಕುಚಕೇನೆಣೆಯೆ ತೆಗೆ ತನ್ನುಂಗುಟಕೆ ಸರಿಯೇ ||೧೦||

ಮಾರಿದೆನು ದೇಹವನಿದನು ನಿನ |
ಗಾರ ದರ್ಶನಫಲವೊ ಕಾಣೆನು |
ಸಾರವಹ ಸಂಸಾರವೊದವಿದುದಿಂದು ಪುಣ್ಯವಲಾ ||
ಧೀರರೆನಿಬರೊ ರಾಕ್ಷಸೇಂದ್ರರ |
ಪಾರಸಾಹಸದೋರ ಬೇಡಲ |
ದಾರುಮಂ ಲೆಕ್ಕಿಸದ ಚೆಲುವೆಯು ನಿನಗೆ ಸೋತೆನಲಾ ||೧೧||

ಬರುವಕಾಲದೆ ಪುಣ್ಯವಾರಿಗು |
ಮೊರೆಯದೈದುವುದೆಂಬ ನಾಳ್ನುಡಿ |
ಯರಿಯಲೀಗಳು ಸಫಲಮಾದುದು ನಿನ್ನ ವಿಷಯದಲಿ ||
ಅರಸ ನೀನಿನ್ನೇಳು ಮನುಮತ |
ನೊರಸೊರಸು ಘನಮಾಯ್ತು ತನ್ನನು |
ವರಿಸು ಬಾರೆಂದೆನಲು ನಸುನಗುತೆಂದನಾ ರಾಮ ||೧೨||

ಸುರರ ಲೆಕ್ಕಿಸದಿರ್ಪ ದಾನವ |
ರರಸನಿಗೆ ಮಾನಾಪಹರಣವ |
ನಿರದೆ ಬಯಸುವುದಸುರಿ ಕೇಳ್ನಿನಗಿಂದು ತರವಲ್ಲ |
ಧರಣಿಯೊಳು ಸೀಂ ಗೈದ ದೋಷವ |
ನೊರಗಿಪುದು ಜನವಾತನಲಿ ದನು |
ಜರಿಗಕೀರ್ತಿಯನೀವಮಾರ್ಗಕೆ ಮನವನೀಯದಿರು ||೧೩||

ಜಾಣೆ ಕೇಳಿಂದೆನ್ನ ನಿಯಮವ |
ಬಾಣಮೊಂದೇವಾಣಿಯೊಂದೇ |
ಪ್ರಾಣಪದಕವ ಪೋಲ್ವ ಪತ್ನಿಯುವೊರ್ವಳೇ ತನಗೆ ||
ಮಾಣು ನಿನ್ನಭಿಲಾಷೆಯನು ಶಿವ |
ನಾಣೆ ನಾನಿದ ತಪ್ಪಿ ನಡೆಯೆನು |
ಕೇಣಗೊಳ್ಳದೆ ತೆರಳು ನೀನಿನ್ನೆಂದು ನೃಪನೊರೆದ ||೧೪||

ರೋಗಿ ಬಂದೊಡೆ ಬಳಿಗೆ ವೈದ್ಯನು |
ರೋಗವರಿತೌಷಧವ ಕರುಣಿಸಿ |
ನೀಗಿ ಬೇಗನೆ ಬೇಗೆಯೆಲ್ಲವನವನ ಪೋಷಿಸನೆ ||
ನಾಗವೇಣಿಯು ಬಂದು ಬೇಡಲು |
ರಾಗದಿಂದವಳಳಲ ನೀಗದೆ |
ಪೋಗು ನೀನೆಂದೊರೆವುದುಚಿತವೆ ನಿನಗೆಸಂಮತವೆ ||೧೫||

ಎನುತೆ ದುರುಳೆಯು ಹಲುಬುತಿರಲಾ |
ಮನುಕುಲೇಶನು ಕೇಳಿ ಸೀತೆಯ |
ಮನದ ಬೇಸರನೊರೆಸಬೇಕೆಂದಂದು ಮನದಂದು ||
ದನುಜೆ ತನಗೀಕಾರ್ಯ ಸಲುವುದೆ |
ಇನಿಯಳೆನಗಿಲ್ಲಿಹಳು ನೀನೆ |
ನ್ನನುಜನನು ವರಿಸಿಂದು ತಾನೇಕಾಂಗಿಯಾಗಿಹನು ||೧೬||

ಭೇದವೇನನುಜನೊಳು ನಿನಗದು |
ಸಾಧುವೆಂದೆನಲವಳು ಕಾಮನ |
ಬಾಧೆಗಾರದೆ ಪೋಗಿ ಯಾಚಿಸಲದಕೆ ಸೌಮಿತ್ರಿ ||
ಸಾಧುಮಾರ್ಗದೆ ಬೊಮ್ಮ ಚರಿಯವ |
ಸಾಧಿಸುತ್ತಿಹೆನವಧಿ ಮುಗಿವಿನ |
ಮಾದುರಾಗತವಾಗದೆನ್ನೊಳು ಸಾಗು ನೀನೆನಲು ||೧೭||

ಕೋಪವುಕ್ಕಿದುದೊಡನೆ ಮನ್ಮಥ |
ತಾಪ ಸುಕ್ಕಿದುದೆನ್ನ ನೀಪರಿ |
ಪಾಪಿಗಳು ಪರಿಹಾಸಗೆಯ್ವುದೊಲಾಯ್ತಲಾ ಎನುತೆ ||
ಓಪಳಿರ್ದಪಳೆಂಬಗರ್ವವೊ |
ಭಾವುಭಾಪೆಲೊ ಹಂದೆರಾಮನೆ |
ಯಾಪಿನಾಕಿಯಕರೆದು ಬದುಕಿಸ ನಿನ್ನವಲ್ಲಭೆಯ ||೧೮||

ಅರುಚುತೀಪರಿ ಕುಪ್ಪಳಿಸಿ ಮುಂ |
ಬರಿದು ಸೀತೆಯ ಮೇಲೆ ರಭಸದಿ |
ನೆರಗಲೈತಹದುಷ್ಟೆಯನು ಕೈಯಿಂದವುಡಗಟ್ಟಿ ||
ಅರಸ ಸೂಚಿಸಲೊಡನೆ ಲಕ್ಷ್ಮಣ |
ನಿರದೆ ಸರಲಿಂ ಮೂಗುಕಿವಿಗಳ |
ನರಿಯೆ ಹಾಹಾರವದೆ ಹಾಯ್ದಳು ಜವದೆ ಪಥವಿಡಿದು ||೧೯||

ಸದೆದು ಸುಜನರನಾಚನಸಾ |
ನದಲಿ ಬಹುಬಲರೊಡನೆ ರಾಜಿಪ |
ಮದಮುಖರ ಖರದೂಷಣರ ತನ್ನ ಸುಜರೆಡೆಗಿರದೆ ||
ಬೆದರುತೊದರುತೆ ಮುಖದೆ ಪರಿವಾ |
ರುಧಿರಮಂ ತಾನುಟ್ಟಸೀರೆಯೊ |
ಳದಿಮುತರುಚುತೆ ಬಂದು ಬಿದ್ದಳು ಕಾವುದೆಂದೆನುತೆ ||೨೦||

ನೋಡಿದನು ಖರನಾತ್ಮಸೋದರಿ |
ಗಾಡಬಾರದಭಂಗವೊದವಿತೆ ।
ದಾಡೆಯಲುಗಿದಸೀಚನಾವನು ಕಾಲಭೈರವನ ||
ಆಡು ವನಿತಾಮಣಿಯೆ ನಿನಗೀ |
ಕೇಡದಾರಿಂದಾಯ್ತು ಪಾಪಿಯ |
ಬಾಡನಾರೋಗಣೆಗೆ ಬಡಿಸುತೆ ನಿನ್ನ ತಣಿಸುವೆನು ||೨೧||

ಸುರರು ಯಕ್ಷರು ಕಿನ್ನರರು ನ |
ಮ್ಮೊರೆಗೆ ಬರ್ಪರೆ ಸಾಲರಾಹುಲು ।
ನರರ ಮಾತಂತಿರಲಿ ಗಣಸೆಯೊಳಿಲ್ಲ ನಮಗವರು ||
ಹರಿಹರಬ್ರಹ್ಮಾದಿಗಳು ನ |
ಮ್ಮರಮನೆಯ ಕಾದಿಹರು ಶಿವಶಿವ ।
ಪಿರಿಯ ಸೋಜಿಗವಲ್ತೆ ನಿನ್ನಯ ವಿಕೃತರೂಪವಿದು ||೨೨||

ಎಂದು ನುಡಿವಾದನುಜಪತಿಯೊಡ |
ನೆಂದಳಿಂತಾ ಶೂರ್ಪಣಖೆ ಕೇ |
ಳ್ಬಂದಿಹರು ಬನಕಿಂದಯೋಧ್ಯಾಧಿಪನ ದಶರಥನ ||
ನಂದನರ್ಕಳು ರಾಮಲಕ್ಷ್ಮಣ |
ರೆಂದು ನಾಮವವರ್ಗೆ ರಾಮಂ |
ಗಿಂದುನಿಭಮುಖಿ ಸೀತೆಯೆಂಬಳು ಪತ್ನಿಯಾಗಿಹಳು ||೨೩||

ರೂಪಿನಲಿ ಮನುಮತನನದಟಿಸೊ |
ಳಾಪಿನಾಕಿಯ ಸೋಲಿಪರು ವರ |
ಚಾಪಹಸ್ತರು ಕೋಮಲಾಂಗರು ಮೇಣ್ ಸಹೋದರರು ||
ತಾಪಸರವೊಲ್ನಾರುಡೆಯನಾಂ ।
ತಾ ಫಲಂಗಳ ಮೆಲುವರೆಂತುಂ |
ಚಾಪಲಕೆತಾ ಪೆದೆಯುಸೀಯರು ಧೀರಮಾನಸರು ||೨೪||

ಆತಳೋದರಿ ಸೀತೆ ಭುವನ |
ಖ್ಯಾತೆ ಸುಗುಣೋಪೇತೆ ಸಜ್ಜನ |
ಗೀತೆ ದೋಷಾತೀತೆ ಸತ್ಕುಲಜಾತೆ ಸುವಿಸೀತೆ ||
ಆತರುಣಿಯನು ನಿನಗೆ ತರಲೆಂ |
ದಾತುರದಿನಾನೈದಲೆನಗಾ |
ಪಾತಕಿಯು ಲಕ್ಷ್ಮಣನು ತತ್ಕ್ಷಣವೀವಿಲಕ್ಷಣವ ||೨೫||

ನೈದನೆನುತಳುತಿರ್ಪ ತಂಗಿಯ |
ನಾದರಿಸಿ ಖರಸಿರದೆ ಬಲವನು |
ಮೋದದಿಂ ಸಂವರಿಸಿ ಪೊಕ್ಕನು ಪಂಚವಟಿಯುದನು ||
ಆದುದದ್ಭುತರಭಸ ಭೇರೀ |
ನಾದ ಕಿವುಡೇಳಿಸಿತು ಜಗವನು |
ಹೋದ ಕಿವಿಮೂಗುಗಳ ದನುಜೆಯ ಕಡೆಯ ದಂಡೆಸುತೆ ||೨೬||

ಅರಿದು ರಾಮನು ಲಕ್ಷ್ಮಣನೆ ನೀಂ |
ಧರಣಿಜೆಯನೆಚ್ಚರದೆ ಕಾದಿರು |
ತರಿವೆನಾನೀದುರುಳರನು ಬಿಡದೆನುತೆ ಬಿಲುಗೊಂಡು ||
ಅರಿಗಳೇ ನೀವೆಮಗೆ ಕಾರಣ |
ವರಿಯಬಾರದು ತನಗೆ ತವಸಿಗ |
ಳಿರವನಾಂತೆಮ್ಮೊಳಗೆ ವೈರವದೆಂತು ನಿಮಗಾಯ್ತು ||೨೭||

ದುರುಳೆಯೊರ್ವಳು ನಮ್ಮ ತರುಣಿಯ |
ನಿರಪರಾಧೆಯ ಭಕ್ಷಿಸುವೆನೆಂ |
ದೆರಗಲಬಲೆಯ ಕೊಲುವುದನುಚಿತವೆಂದು ನಾವರಿದು ||
ಅರಿದೆವೈ ಕಿವಿಮೂಗುಗಳ ನೀ |
ಧುರಕೆ ನೀವಿಂದೇತಕೈದಿದಿ |
ರೊರೆವುದೆಮ್ಮ ಪರಾಧವೇನೆಂಬುದನು ನೀವೀಗ ||೨೮||

ದಂಡಕಾವನತಾಪಸರು ನಿ |
ಮ್ಮಂಡಲೆಯ ಸೈರಿಸದೆ ತನ್ನನು |
ಕಂಡು ಕೇಳಿದರಿತ್ತೆ ಸಭಯವನಾಮಹಾಜನಕೆ ||
ಪುಂಡರಕ್ಕಸವಿಂಡ ಮತ್ತೋ |
ದಂಡಕಾಹುತಿಯಾವೆನೆನ್ನುತೆ |
ಕಂಡು ನಿವ್ಮಾದಂಡಿಯನು ಹುರಿಗೊಳಿಸಿತಾವಚನ ||೨೯||

ಹೆಂಡಿರಾಸೆಯು ಮಕ್ಕಳಾಸೆಯು |
ಕಂಡುಕೇಳಿದರಾಸೆ ನಿಮಗಿರೆ |
ಖಂಡೆಯದ ಮೇಲಾಣೆಯಿಡುವುದು ಸಜ್ಜನರ್ಕಳನು ||
ಕಂಡೊಡೀದಿನಮೊದಲು ನಿಮ್ಮಯ |
ಮಂಡೆಗಳ ಬಾಗಿಸುತೆ ದೂರದೆ |
ಕೆಂಡವನು ಕಂಡಂತೆ ಜಾರುವೆವೆಂದು ನೀವೀಗ ||೩೦||

ಅಲ್ಲದಿದ್ದೊಡೆ ನಿಮ್ಮನೀಗಳೆ |
ಹುಲ್ಲುನೆದೆಯನು ಕಿಚ್ಚು ಸುಡುವಂ |
ತಿಲ್ಲೆ ನಿರ್ನಾಮರನು ಗೆಯ್ದುಪೆನೆನಲು ರಾಘವನು ||
ಕಲ್ಲಿನೊಳು ಮಳೆಗರೆದೊಡೇನದು |
ಮೆಲ್ಲಿತಹುದೇ ರಾಮವಾಕ್ಯದ |
ಬಲ್ಲವಿಕೆಯನು ಖುಲ್ಲರರಿವರೆ ಹಾಯ್ದರೊಗ್ಗಡಸಿ ||೩೧||

ದಾನವರು ಪದಿನಾಲ್ಕುಸಾಸಿರ |
ವಾಸುವಾಬಗೆಯೆಂತು ರಾಮನು |
ತಾಸದೊರ್ವನೆ ನಿಂತು ಕಲಕುವುದೆಂತು ಪಗೆಗಡಲ ||
ಏನಗ್ಗಿದಪನೆಂತು ಸೆಣಸುವ |
ನೀನಿದಾನವ ಸೋಲ್ಪೆವೆನ್ನು |
ತ್ತಾನಭೋಂಗಣದೊಳಗೆ ನೆರೆದರು ಶಕ್ರಮುಖಸುರರು ||೩೨||

ಧರೆಯ ಜನಕಿತ್ತಧಿಕಬಾಧೆಯ |
ಸುರರ ಸಂಕಟಗೊಳಿಸಿ ಧರ್ಮವ |
ಸರಕುಗೆಯ್ಯದೆ ಮೀರಿ ಸಲೆ ದುರ್ಮಾರ್ಗಪರರಾಗಿ ||
ನರಕಭೀತಿಯ ತೃಣಕೆ ಸಮವೆಂ |
ದರಿತು ನಡೆಯುವ ದುರುಳರಕ್ಕಸ |
ಗುರಿಗಳೇ ನಿಮ್ಮಾಯು ಪೂರ್ತಿಯನೊಂದಿತಿಂದಿನಲಿ ||೩೩||

ಎಂದು ಸರಳುಗಳಿಂದೆ ಸುಭಟರ |
ವೃಂದವೃಂದಂಗಳನು ಸದೆದಾ |
ಸ್ಯಂದನಂಗಳಕೂಡೆ ರಥಿಕರನಂದು ತರಿಯುತ್ತೆ ||
ಮುಂದೆ ಬಹ ಮದದಾನೆಗಳ ಬಲು |
ಸಂದಣೆಯನುರುಳಿಸುತುಮಶ್ವವ |
ದೊಂದುಮಿಲ್ಲೆನೆ ಸವರಿ ಹುಡಿಗುಟ್ಟಿದನು ರಾಘವನು ||೩೪||

ದಿಟ್ಟರವರೊಳ್ಕೆಲರು ಸಮರದ |
ಜಟ್ಟಿಗಳು ಮುಂದೈದಿ ರಾಮನ |
ಗಟ್ಟಿಸಿದರಾ ಪರಿಘತೋಮರಕುಂತಖಡ್ಗದಲಿ ||
ಪೆಟ್ಟು ತಾಗಿತು ರೋಷವೇರಿತು |
ಹುಟ್ಟುಗುಟ್ಟುವೆನಿವರನೆನ್ನುತೆ |
ತೊಟ್ಟು ಗಾಂಧರ್ವಾಸ್ತ್ರವನು ಬಿಡದೆಚ್ಚನಾ ಭೂಪ ||೩೫||

ಕಕ್ಕಿದರು ನೆತ್ತರನು ಕೆಲಬರು |
ಸೊಕ್ಕಿ ಮಲಗಿದರಂದನೇಕರು |
ಮಿಕ್ಕವರು ಚಿಕ್ಕಸವನಾಂತೋಡಿದರು ಕಳಸುಳಿದು ||
ತಿಕ್ಕಿಮುಕ್ಕಿತು ಸರಳು ಸಕಲರ |
ನಕ್ಕಜವು ತಾನೆಂದು ದೂಷಣ |
ನುಕ್ಕುಗಾರನು ಪೊಕ್ಕನಾಹವಕಂದು ಷಮತಳಿಸಿ ||೩೬||

ಸಿಡಿಲಿಗೆಣೆಯಹ ಸರಳ ಪೂಡುತೆ |
ತಡೆದುಕೊಳ್ಳೆಂದೆಸೆಯಲದನಿ |
ಕ್ಕಡಿಯಗೈಯುತೆ ರಾಮನಾತನ ಬಿಲ್ಲನೊಂದರಲಿ ||
ಕಡಿದು ನಾಲ್ಕಂಬಿನಲಿ ಕುದುರೆಗ |
ಳೊಡಲನಿರದೆಚ್ಚೊಂದುಶರದಲಿ |
ಕೆಡಹಿ ಸೂತನ ಮೂರುಬಾಣದೆ ದೂಷಣನನೆಚ್ಚ ||೩೭||

ಉರವಣಿಸಿ ಕೈಯೊಡನೆ ಖಳ ತಾ |
ನುರುಬಿದನು ತರುಬಿದನು ಪರಿಘದೊ |
ಳೆರಗಿದನು ಹಗೆಹರಿದುದೀದಿನಮೆನುತೆ ಬೊಬ್ಬಿರಿದು |
ಸರಳ ಸುರಿದನು ರಾಮನೊಡನೆಯೆ |
ತರಿದನಾತನ ಭುಜಗಳೆರಡನು |
ಹರಣವೊಡಲನು ಬಿಡಲು ಬಿದ್ದನು ಗಿರಿವೊಲಾ ಖಳನು ||೩೮||

ಆಸಮಯದೊಳಗಂತರಿಕ್ಷದೆ |
ವಾಸವನು ಮೊದಲಾದ ಸುರರು |
ದ್ಭಾಸಿಸುಮಗಳ ಚೆಲ್ಲಿದರು ರಾಘವರ ಸಿರಿಮುಡಿಗೆ ||
ಈಸುವನು ನೋಡಿದನು ಮನದಲಿ |
ಗಾಸಿಯಾಂತನು ತಮ್ಮನಳಿವಿಂ |
ಗೈಸಲೇ ಎನುತೆದ್ದು ಕೊಂಡನು ಧನುವನಾ ಖರನು ||೩೯||

ತಾಳುತಾಳ್ಕೈ ದೇವ ನಿನಗೀ |
ಹಾಲುಹಸುಳೆಯು ಸಮವೆ ತನಗಿಂ |
ದೂಳಿಗವ ಕುಡು ನಿನ್ನ ಸೇನಾನಾಥನಾಸಲ್ತೆ ||
ಜಾಲಗೈಯದೆ ಕೊಲುವೆನೆನ್ನುತೆ |
ಶೂಲವೊಂದಂ ತ್ರಿಶಿರನಾರ್ದಿಡೆ |
ಕೋಲುಗಳಿನಿರದದನೆ ಖಂಡಿಸುತಾ ಕಕುತ್ಸ್ಥಜನು ||೪೦||

ಒಡನೆ ಕವಲಂಬುಗಳ ಜೋಡಿಸಿ |
ಬಿಡದೆ ತಲೆಗಳ ಮೂರನಿಳುಹ |
ಲ್ಕಡರಿ ನಭದೊಳ್ಕಣಿದುಬಿದ್ದುವು ಖರನ ಸಮ್ಮುಖಕೆ ||
ಕೆಡೆದ ತಲೆಗಳ ಕಂಡು ಕೋಪದೆ |
ತಡೆಯದೆದ್ದನು ಕಾರ್ಮುಕವ ಜೇ |
ವೊಡೆದು ರಾಮನ ಮುಂದೆ ಸುಳಿಸಿದನಮರರಿಪು ರಥವ ||೪೧||

ಎಲೆಲೊ ರಾಘವ ನಿನ್ನ ಭುಜಬಲ |
ದಳವನರಿಯದೆ ನಮ್ಮ ಕೆಣಕಿದೆ |
ಕೆಲರ ಹುಲುರಕ್ಕಸರ ಕೊಂದಿಹ ಗರುವಗರಹೊಡೆದು ||
ಸಲೆ ಪರಾಕ್ರಮಿಯೆನುತೆ ಬೆರೆತಿಹೆ |
ನಿಲಿಸು ನಿನ್ನೀಕೊಬ್ಬನೀಗಳೆ |
ಕಳುಹುವೆನು ಯಮಪುರಕೆ ನಿಲ್ಲೆಂದೊದರಿದನು ಖರನು ||೪೨||

ಆದುದಾಯಿತು ನೀನಳಿಯೆ ತವ |
ಸೋದರಿಗೆ ಕಿವಿಮೂಗು ಬರ್ಪುವೆ |
ಈದುರಾಗ್ರಹವೇಕೆ ನಿನ್ನೊಡನಿರ್ದಭಟರೆಲ್ಲ ||
ಹೋದರಿದರಿಂದೆಂದು ಬಗೆಯುತೆ |
ಕಾದುವಾಸೆಯನುಳಿದು ಬದುಕುವ |
ಹಾದಿಯುರಸೆಲೆಖರಸೆಯೆಂದನು ನಗುತೆ ದಾಶರಥಿ ||೪೩||

ಬರಿಯ ಖರನಲ್ಲಾನು ನಿನ್ನಯ |
ಹರಣಜಳವನು ಪೀರ್ವದಾರುಣ |
ಖರಕರನಲಾ ತಂಗಿಗೊದವಿದ ಮಾನಭಂಗವನು |
ಹರಿದು ಕಳೆವುದಸಾಧ್ಯವೇ ನಿ |
ನ್ನರಸಿಯಾ ಕಿವಿಮೂಗುಗಳನಾ |
ಸರಿದು ನಿನ್ನನು ಕೊಲುವೆ ನೋಡೆಂದೆಚ್ಚನಾ ಖಳನು ||೪೪||

ಎಚ್ಚ ಕಣೆಗಳ ರಾಮನಾಗಳೆ ।
ಕೊಚ್ಚಿದನು ಬಳಿಕವನ ರಥವನು ।
ಮುಚ್ಚಿದನು ಕೆಂಗರಿಯ ಪೊಸಮಸೆವೆತ್ತಬಾಣದಲಿ ॥
ಕಿಚ್ಚನುಗುಳುವಶರಗಳಿಂ ಖರ ।
ನುಚ್ಚಳೊಡಲನು ನೊಂದು ದೇವನು ।
ನುಚ್ಚುನುರಿಯಾಗಿಸಿದನಾತನ ತೇರನಾಕ್ಷಣದೆ ॥೪೫॥

ಲೇಸುಲೇಸೈ ರಾಮ ಕದನದ ।
ವಾಸಿ ನಿನಗಿನಿತೇಕೆ ನಿಲಿಸೈ ।
ಯೀಸುಪರಿಯಂತರವು ಕಾಣದೆ ಮೋಸವೋದೆನಲಾ ॥
ಈಸಿಕೊಳ್ಳೆನ್ನೀಶರಂಗಳ ।
ಗಾಸಿಯೊಂದದೆ ನಿಂದೆಯಾದೊಡೆ ।
ಸಾಸಿ ನೀನೇ ಮೂರುಲೋಕದೊಳೆಸುತೆ ತೇರುಳಿದು ॥೪೬॥

ಶರಗಳೋ ಕಡೆಗಾಲದಬುದಿಯ ।
ತೆರೆಗಳೋ ನಡುವಗಲ ದಿನಪನ ।
ಕರಗಳೋ ಎಂಬವೊಲು ಕರೆದನು ಶರನ ಸಾಸಿರವ ॥
ಬರುವಬಾಣಂಗಳಿಗೆ ಭಾರಿಯ ।
ಸರಳನೆಸೆಯುತೆ ಕತ್ತರಿಸಿದನು ।
ಮರಳಿ ಮೊನೆಗಣೆಗಳನು ಬಿಟ್ಟನು ಬೇಗ ರಾಘವನು ॥೪೭॥

ಖರನ ಕರಧನು ಮುರಿದು ಬಿದ್ದುದು ।
ಬೆರಗನಾನುತ್ತಾ ಖಳಾಧಮ ।
ನುರುವಗದೆಯಿಂದಪ್ಪಳಿಸಿದನು ದೂಷಣಾಂತಕನ ॥
ಕೆರಳಿ ಪಜ್ಜೆಯನೆಳೆದು ಪಿಂದಕೆ ।
ಭರದೊಳೈಂದ್ರಾಸ್ತ್ರದಲಿ ರಾಮನು ।
ಖರನ ಶೀರ್ಷವನಿಳುಹೆ ಪೊಗಳಿದರಭ್ರದಲಿ ಸುರರು ॥೪೮॥

ಅರಸಿ ಕಂಡಳು ತನ್ನ ರಮಣನ ।
ಧುರದ ಜಯವನು ಬಾಚಿ ತಬ್ಬಿದ ।
ಳರಸ ನೊಂದ್ಯೆ ಪಾಪಿದನುಜರ ಕೈಗಳಿಂದಕಟಾ ॥
ಧರೆಯ ಸಾಮ್ರಾಜ್ಯವನು ನೀಗು ।
ತ್ತುರುತರದ ವನವಾಸಕಷ್ಟದೊ ।
ಳಿರುವ ನಿನಗೀದುರುಳರೊಂದೆಡೆ ಹಿಂಸೆಗೈವರಲಾ ॥೪೯॥

ಹರಿಯು ನೀಂ ನಿನಗೇಪರಿಯ ಬೇ |
ಸರಮುಮಿಲ್ಲಮೆನುತ್ತೆ ಲೋಕದೊ |
ಳೊರೆವರಾ ಮಾತಿರಲಿ ನರನಾಗುದಯಿಸಿದ ಬಳಿಕ ||
ಮೆರೆವ ಮಾಂಸದ ಮಜ್ಜೆಯೆಲುವಿನ |
ಬೆರಕೆಯಿಂ ಬಿಗಿದಿರ್ಪ ತನುವಿದ |
ಸಿರಿಯ ಸೋಯದೆ ಮುದವನಾಂಪುದೆ ಎಂದಳಾ ಸುದತಿ ||೫೦||

ಅರಸಿ ನಿನ್ನಾಲಿಂಗನದ ಸುಖ |
ದೊರೆತೊಡೆನಗಿರದಾವಗಂ ತಾಂ |
ಬರಲಿ ಬರ್ಪಾಕಷ್ಟವೆಲ್ಲವು ಕೊನೆಗೆ ಹಿತಕರವು ||
ಅರಿಗಳಾಯುಧವೆನ್ನ ಘಾತಿಸಿ |
ಕೊರಗಿಸುವುದೇ ನಿನ್ನ ಕೋಮಲ |
ಕರತಲಸ್ಪರ್ಶಾಮೃತಾಸೇಚನದ ಬಲವಿರಲು ||೫೧||

ರಾಮವಾಕ್ಯಾಮೃತದ ವೃಷ್ಟಿಗೆ |
ಕೋಮಲಾಂಗಿಯ ಬಗೆನವಿಲು ಸು |
ಪ್ರೇಮದಿಂ ನಲಿದಾಡೆ ಸಮಯವು ತಮಗಿದೆಂದೆನುತೆ ||
ಮೈಮರೆತ ಖರದೂಷಣಾದ್ಯರ |
ಕೈಮೆಯಡಗಿಸಿ ನಮ್ಮ ಸಲಹಿದ |
ಭೀಮವಿಕ್ರಮ ಜಯಜಯೆಂದುದು ಬಂದು ಮುನಿನಿಕರ ||೫೨||

ಸುರಪನನು ಶರಭಂಗಮುನಿಪನ |
ವರತಪೋವನಕಿಳಿಸಿ ಸಕಲರು |
ಬೆರಸಿ ಚಿಂತಿಸಿ ದುಷ್ಟನಿಗ್ರಹಕೋಸುಗವೆ ನಾವು ||
ಅರಸ ನಿನ್ನನು ತಂದೆವಿಲ್ಲಿಗೆ |
ದುರುಳರೀದಿನಪಳಿದುಪೋದರು |
ಪರಮಪುರುಷನೆ ಸೈರಿಸುವುದೆನೆ ರಾಮ ಮನ್ನಿಸಿದ ||೫೩||

ಎರಡನೆಯಸಂಧಿ ಸಂಪೂರ್ಣಂ.

ಮೂರನೆಯ ಸಂಧಿ.

ಸೂಚನೆ || ದಶಮುಖನಕಂಪನನ ಮುಖದಿಂ |
ದಸಮುಖರಮುಖರಳಿವನರಿದು |
ಬ್ಬಸದೆ ಮಾರೀಚನ ಸಹಾಯದಿಸವನಿಜೆಯನೊಯ್ದ ||

ಖರನ ಮರಣವ ಕಂಡು ಲಂಕಾ |
ಪುರಿಗಕಂಪನನೆಂಬರಾಕ್ಷಸ |
ನಿರದೆ ಭರದಿಂದೋಡಿ ತಾಂ ರಾವಣನ ಬಳಿಸಾರ್ದು ||
ಖರನೆ ಮೊದಲಾದಖಿಳದನುಜರು |
ಧುರದೆ ಹತರಾದುದನು ಮೇಣ್ಬಂ |
ಧುರಜನಸ್ಥಾನದ ವಿನಾಶವನರುಹಿದನು ಬಳಿಕ ||೧||

ಕೇಳಿದೊಡನೆಯೆ ರೋಷವಹ್ನಿ |
ಜ್ವಾಲೆಯಂಗವ ಸುಡಲಕಾಲದೆ |
ಕಾಲನೆಂತಾರಾಕ್ಷಸೇಂದ್ರರ ಸೋಂಕಲೆಳಸಿದನು ||
ಕೋಳುಹೋದುದೆ ತನ್ನ ಪಾಳೆಯ |
ಪೇಳು ತನ್ನನು ಗಣಿಸದದನುರೆ |
ಪಾಳನೆಸಗಿದಖೂಳನಾವನು ಬೊಮ್ಮನೋ ಹರಿಯೋ ||೨||

ಎಂದು ಬೆಸಗೊಳುತಿರ್ಪ ದನುಜನ |
ಮುಂದುಗಡೆಯೊಳ್ಬಂದು ಬಿದ್ದಳು |
ಮಂದಿ ಬೆದರಲು ಮೂಕೊರತಿಯಾ ಕುಮತಿ ಕುಹಕಕೃತಿ ||
ಇಂದಿದೇನಿದು ಬಿದ್ದುದೆನ್ನುತೆ |
ಸಂದೆಗಂಬಡುತಾಗ ಕಂಡನು |
ಸಂದಕಿವಿಮೂಗಿನ ಲತಾಂಗಿಯ ತನ್ನ ತಂಗಿಯನು ||೩||

ಏನಿದೇನಿದು ತಂಗಿ ತಾನೀ |
ಹಾನಿಯಾರಿಂದಾಯ್ತು ನಿನಗೀ |
ಮಾನಭಂಗವನೆಸಗಿದಾತನು ಜೀವದಿಂದಿಹನೆ ||
ಆನಪುಂಸಕನಾವನೆಲ್ಲಿಹ |
ನೇನುಕಾರಣವೆಂಬುದೆಲ್ಲವ |
ನೀನು ನನ್ನೊಡನುಸಿರು ಬೇಗದೊಳೆಂದು ಖಳ ನುಡಿದ ||೪||

ಅಣ್ಣ ನೀನಿದನೇಕೆ ಕೇಳುವೆ |
ತಣ್ಣಗಾದುದು ದನುಜರೈಸಿರಿ |
ನಿನ್ನವಂದಿಗರಿರಲು ರಾಕ್ಷಸಕುಲವು ವರ್ಧಿಪುದೆ ||
ತನ್ನ ದೇಶವೆನಿತ್ತು ಮೇಣು |
ತೃಣ್ಣವೇನಾದ್ಯಂತಜನಗಳಿ |
ಗುನ್ನತಸ್ಥಿತಿಯೊಧವರ್ಲೇನೇಸಿತುದು ಸಾಧನವು ||೫||

ಎಂಬಿವನು ತಾಂ ಬಗೆಗೆ ತಾರದೆ |
ಡಂಭದಧಿಕಾರಿಗಳ ಮಾತನು |
ನಂಬುತವರಂತಿರ್ಪ ರಾಜನ ರಾಜ್ಯವುಳಿದಪುದೆ ||
ಕುಂಭಕುಚೆಯರಿಗೊಲಿದು ನೀನಲ |
ರಂಬನಾಟದೆ ಹೊತ್ತ ಕಳೆಯಲು |
ಚುಂಬಿಸಳೆ ನಿನ್ನಿಳೆಯನಪಜಯಲಕ್ಷ್ಮಿ ತಾನೊಲಿದು ||೬||

ಮೂಜಗವು ತಲ್ಲಣಿಸೆ ಸಕಲರ |
ನಾಜಿಯಲಿ ಗೆದ್ದುದಕೆ ಫಲವೇ |
ನಾಜನಸ್ಥಾನವಲೆ ವಿಜನಸ್ಥಾನವೆನಿಸಿದುದು ||
ವ್ಯಾಜವಿಲ್ಲದೆ ತರಳರಿರ್ವರು |
ರಾಜಸುತರದನಿಂತೆಸಗಿದರು |
ಸೋಜಿಗವು ನಿನಗರುಹದಿರ್ಪುದು ಬೇಹಿನವರಿದನು ||೭||

ಖರನ ಕೊಂದರು ದೂಷಣನ ಶಿರ |
ವರಿದರಾತ್ರಿಶಿರನ ಸಿರಂಗಳ |
ತರಿದರುಳದಾರಕ್ಕಸರ್ಕಳನೆಲ್ಲ ಸದೆಬಡಿದು ||
ಸುರರಿಪುಕ್ಷಯಕೃತಿಗೆ ವಿಘ್ನೇ |
ಶ್ವರನ ಪೂಜೆವೊಲೆನ್ನಭಂಗಿಸಿ |
ತರಳೆಯನು ಕೊಲಲಾಗದೆಂಬಾಧರ್ಮದಿಂದುಳುಹಿ ||೮||

ಬಿಟ್ಟರೆನ್ನೊರ್ವಳನು ಸಾನೀ |
ಕೆಟ್ಟಕೇಡನದಾರಿಗೊರೆಯಲಿ |
ಹುಟ್ಟಿ ನಿನ್ನೊಡನೆನ್ನಮಾನವು ಬಟ್ಟಬಯಲಾಯ್ತು ||
ದಿಟ್ಟರೆನಿಪವರಟ್ಟಹಾಸವ |
ನಿಷ್ಟೆನುತೆ ನಿರ್ಣಯಿಸಲಸದಳ |
ನಿಟ್ಟಿಸಲ್ಕಿನಗಳಿವ ತರ್ಪರು ಕಟ್ಟಕಡೆಯೊಳಗೆ ||೯||

ನುಡಿಯ ಕೇಳ್ದೊಡನಿರದೆ ಕಿಡಿಗೊಂ |
ಡೆಡೆಯ ರಕ್ಕಸಗಡಣದೆದೆ ಗಡ |
ಗಡನೆ ನಡುಗಲ್ಕೆದ್ದು ಕಡುಗವ ಜಡಿದು ಜಳಿಪಿಸುತೆ ||
ನುಡಿನುಡಿ ಸಹೋದರಿಯೆ ಮೃತ್ಯುವಿ |
ನುಡಿಜಿರಗ ಜಾರಿಸಿದ ಕೊಬ್ಬಿನ |
ಕಡುಹುಕಾರರದಾರು ತೊಡೆವೆನು ಬಾಳದಕ್ಕರವ ||೧೦||

ಎಲೆಲೊ ನರಗುರಿಗಳಿರ ನೀವೆ |
ನ್ನಳವನರಿಯದೆ ಕೆಣಕಿ ಕೆಟ್ಟಿರಿ |
ಫಲವನುಣ್ಣಿರಿಮೆನ್ನುತಸುರಾಧಿಪನು ಲಟಕಟಿಸೆ ||
ಬಲುಭುಜನ ತಬ್ಬಿದಳು ತಡೆದಳು |
ಚಲದ ಪರಿಯಿದು ಸಾಗದವರೊಳು |
ನೆಲದ ಹುಲುನರರೆಂದು ಭಾವಿಸಬೇಡ ನೀನವರ ||೧೧||

ಕೇಳಿ ಬಲ್ಲೈ ನೀನಯೋಧ್ಯೆಯ |
ನಾಳುತಿರ್ದನ ದಶರಥೇಂದ್ರನ |
ಮೇಲೆನಿಪ ತನುಜಾತರೆನಿವರು ರಾಮಲಕ್ಷ್ಮಣರು ||
ನೀಳಮಾಗಿಹ ತೋಳು ಮೇಣ್ಸುವಿ |
ಶಾಲಮಾಗಿಹ ಚಕ್ಷು ವಲ್ಕಲ |
ಚೇಲವಂಗಜರೂಪು ಶೋಭಾಕರವು ರಾಮಂಗೆ ||೧೨||

ಧನುವ ಧರಿಯಿಸಿ ಕರದೊಳಾವಗ |
ಮನಲಕೀಲವನುಗುಳ್ವ*ಬಾಣವ |
ನನುಗೊಳಿಸುತೆಚ್ಚರದೊಳಿರ್ಪನು ಶೂರ ರಘುವೀರ ||
ಅನಿಮಿಷರಿಗೀಕ್ಷಿಸುವೊಡರಿದಾ |
ಅನುಪಮನ ಕೈಚಳಕಮಿಷುಗಳ |
ನೆನಿತುವೇಗದೆ ತೆಗೆವವೂಡುವನಿಸುವನೆಂಬುದಿದು ||೧೩||

ಏನನುಜ್ಞೆಯನೀವನಣ್ಣನು |
ತಾನದೆಲ್ಲನಿತುವನು ಮಿಾರದೆ |
ಮಾನಿ ಲಕ್ಷ್ಮಣನವನನೇ ನೆಳಲಂತೆ ಪೊದ್ದಿಹನು ||
ಮಿಾನಕೇತನನರಸಿಯನು ನುಸಿ |
ಗಾಣುವಾಕಡುರೂಪನೊಂದಿದ |
ಮಾನಿನೀಮಣಿಯೊರ್ವಳಿರ್ಪಳು ರಾಣಿ ರಾಮಂಗೆ ||೧೪||

ಇಂದುವನು ನಗುತಿಹುದು ವದನವು |
ಬಂದುಗೆಯನಾ ತುಟಿಯು ಪಳಿವುದು |
ಮಂದಗತಿಗಳುಕುತ್ತೆ ಮದಗಜಮಡವಿಗೈದಿದುವು ||
ಸುಂದರಾಂಗಿಯ ನೇತ್ರಯುಗಮರ |
ವಿಂದವನು ಸೋಲಿಪುದು ಸಂಪಗೆ |
ಯಂದವನು ಕಡೆಗಣಿಸಿ ಮೆರೆವುದು ಲಲಿತವಹ ಮೂಗು ||೧೫||

ಜನಕಭೂಪನ ಸುತೆಯ ಸೀತೆಯ |
ಘನತರವೆನಿಪ್ಪಾಸ್ವಯಂವರ |
ದನುವನಾಲಿಸಿ ಪೋಗಿ ಮಿಥಿಲೆಗೆ ನೀನು ಪೂರ್ವದಲಿ ||
ಧನುವನೆತ್ತದೆ ಭಗ್ನಮಾನಸ |
ನೆನಿಸಿ ಹಿಂದಿರುಗಿದೆಗಡಾ ತ |
ದ್ವನಿತೆಯೀ ತಾನಾಗಿಯೆಮ್ಮೆಡೆಗಿಂದು ಬಂದಿಹಳು ||೧೬||

ನಿನ್ನ ರೂಪಿಂಗವಳ ಚೆಲುವನು |
ಮುನ್ನ ನಾನೊರೆಯಿಕ್ಕಿ ಸಮವೆಂ |
ದುನ್ನತೋತ್ಸವದಿಂದಮವಳನು ಪಿಡಿಯಲನುವಾಗೆ ||
ಕುನ್ನಿ ಫಡ ಹೋಗೆಂದು ಲಕ್ಷ್ಮಣ |
ತನ್ನ ಸರಲಿಂದೆನ್ನ ನೀಪರಿ |
ಬನ್ನಬಡಿಸಿದನಣ್ಣ ನಿನ್ನಿಂದೆನಗೆ ಪರಿಭವವು ||೧೭||

ಆಸುರದ ಸಕಲಾಯುಧಂಗಳ |
ನಾಸವಿವರೊಳ್ನಡೆಯದೆಂತುಟು |
ವೇಸವನು ಮರೆಯಿಸುತೆ ಮುನಿಗಳ ತೆರದೆ ಬಂದಿಹರೊ ||
ಲೇಸರಿದು ನೀನಂತುಟವರನು |
ಮೋಸದಿಂದಮೆ ನಾಶಪಡಿಸುವ |
ದೇಸಿಯೊಂದಿಹುದದನು ತಿಳಿಪುವೆ ಕೇಳು ಕೃಪೆದಾಳು ||೧೮||

ತರುಣಿಯಾ ನಡೆನುಡಿಗಳಿಗೆ ರಕ್ಕಸು |
ವರನು ಮೆಚ್ಚಿಹನವನ ಸುರುಚಿರ |
ತರಗುಣಾಂಗಳಿಗಾಕೆ ಸೋತಿಹಳಿರ್ವರೊಂದೆನಲು ||
ಮೆರೆಯುವೆಣೆವಕ್ಕಿಗಳೊ ತಾವೆನ |
ಲೆರಕಗೊಂಡಿಹರದರಿನವನಾ |
ಸರಸಿಜಾಕ್ಷಿಯ ಜತೆಯ ತಪ್ಪಲು ಕೊರಗಿ ಸತ್ತಪನು ||೧೯||

ಪೇಳುವೆನು ನಾನೊಂದುಪಾಯವ |
ಕೇಳು ಮಾರೀಚನನು ಮಾವನ |
ನೋಲಗಿಸಿಯೊಲಿಸುತ್ತೆ ಕಾರ್ಯವ ಸಾಧಿಪುದು ಮತವು ||
ತಾಳಿ ಹೊಮ್ಮಿಗವರಿಜನವನಾ |
ಬಾಲೆಯಿದಿರೊಳ್ಸುಳಿಯಲಾಕೆಯು |
ತಾಳುತಾಸೆಯನದನು ಪಿಡಿಯೆಂದರಸನನು ಕಾಡೆ ||೨೦||

ಅಸಿಯಳಿಷ್ಟವ ಸಲಿಸಬೇಕೆಂ |
ದಸಮಶೂರನು ಪಿಡಿಯಲೈತರ |
ಲೆಸೆದು ಬಳಿಯಲಿ ಸಿಕ್ಕಿತೆನಲಸವಸದೆ ಲಂಘಿಸುತೆ ||
ಸಸಿನೆ ಮುಂದಕೆ ಪಾರುತಂತಂ |
ತಸದೃಶದ ಬೆಡಗಿಂದಮುರುಸಾ |
ಹಸದೊಳವನನು ಸೆಳೆದು ದೂರಕೆ ಸಾರ್ದು ತಾನಿರದೆ ||೨೧||

ತಮ್ಮ ಲಕ್ಷ್ಮಣ ಸೀತೆ ಹಾ ಎಂ |
ದುಮ್ಮಳಿಸುತಾ ರಾಮನಂದದೊ |
ಳೊಮ್ಮೆ ಕೂಗಲು ಕೇಳಿ ಲಕ್ಷ್ಮಣನಾಂತು ಕಳವಳವ ||
ಹಮ್ಮದಂಗೊಂಡೆದ್ದು ರಾಮನ |
ನೆಮ್ಮದಿಗೆ ಭಯಮೊದವಿತೆನ್ನುತೆ |
ಗಮ್ಮನಾದನಿವಿಡಿದು ತಾನಲ್ಲಿಂದೆ ತೆರಳುವನು ||೨೨||

ಕಡುಭರದೆ ನೀಂ ಯತಿಯ ವೇಷವ |
ಗಡಣಿಸುತ್ತಾಶ್ರಮವ ಪೊಕ್ಕಾ |
ಮಡದಿಯನು ಪಿಡಿತರ್ಪುದುಚಿತವಿದೆಂದು ಖಳ ನುಡಿಯೆ ||
ಒಡನೆ ತಂಗಿಯ ತಬ್ಬಿ ಮುದ್ದಿ |
ಟ್ಟಡಸಿದಾಪತ್ತಿನಲಿ ತನ್ನನು |
ಬಿಡದೆ ಸಲಹಿದೆ ತಾಯೆಯೆಂದೆನುತೆದ್ದನಸುರಪತಿ ||೨೩||

ಆಗಳಾಜ್ಞೆಯನಿತ್ತು ರಥವನು |
ಬೇಗ ತರಿಸುತ್ತಡರಿದನು ಲೇ |
ಸಾಗಿ ದುರ್ವೃತ್ತಿಯನು ದೂರೀಕರಿಸಿ ವಿಪಿನದಲಿ ||
ಯೋಗಮಾರ್ಗದೊಳಿರ್ದು ಲೌಕಿಕ |
ರಾಗಮೆಲ್ಲವ ನೀಗಿ ಶಿವಸಂ |
ಯೋಗಮಾನಸನಾದ ಮಾರೀಚನನು ತಾಂ ಸೇರಿ ||೨೪||

ರೋಗಮಡಸಿಹುದೆನಗೆ ನೀಂ ನೆರ |
ವಾಗಿ ತಕ್ಕುದೆನಿಪ್ಪಮದ್ದನು |
ಬೇಗನಿತ್ತೋವೆಂದು ದೈನ್ಯವ ಬೀರಿ ಯಾಚಿಸಲು ||
ಆಗಮೋದಿತತತ್ತ್ವಪರನೀ |
ನಾಗಿ ನನ್ನಿಂದಲ್ಪಮತಿಯಿಂ |
ದೀಗಳೇನನು ಪಡೆಯಲ್ಪೈದಿದೆಯೆಂದನಾದನುಜ ||೨೫||

ಪೇಳಲೇನನು ಮಾವ ರಕ್ಕಸ |
ರೇಳಿಗೆಗೆ ಕಡುಭಂಗವೊದವಿತು |
ಕೀಳುತರದಾ ಹುಲುನರರು ಬಲುಗೂಳಿಯಾದರಲಾ ||
ಕೇಳಿದೊಡೆ ನಮ್ಮವರ ವಿಧಿಯನು |
ಬಾಳಬಹುದೇ ಧರೆಯೊಳಗೆ ಬ |
ಲ್ಲಾಳತನ ತಾನೆತ್ತಲಡಗಿತೊ ದಾನವರ ಕುಲದ ||೨೬||

ಬಂದಿಹರು ಸಾಕೇತಪುರವರ |
ದಿಂದೆ ಭೂಪತಿದಶರಥೇಂದ್ರನ |
ನಂದನರುಗಡ ರಾಮಲಕ್ಷ್ಮಣರೆಂಬ ಬಾಲಕರು ||
ಚಂದಿರಾನನೆ ಸೀತೆ ಜತೆಯಲಿ |
ಬಂದಿಹಳು ಗಡ ತರಳರವರೀ |
ಗೊಂದಿ ಮುನಿವೇಷವನು ಚರಿಪರುಗಡ ತಪೋವನದೆ ||೨೭||

ಅಲ್ಲಿಕಾವಲಿಗಿರಿಸಿದೆಮ್ಮಯ |
ಬಲ್ಲಿದರು ಪದಿನಾಲ್ಕುಸಾಸಿರ |
ಮಲ್ಲರೆನಿಸಿದ ಭಟರ ನಿಷ್ಕಾರಣದೆ ಸದೆಬಡೆದು ||
ಇಲ್ಲ ಸಮರಾಂಗಣದೆ ಸಮಭಟ |
ರೆಲ್ಲಿಯುಂ ಖರದೂಷಣರಿಗೆಂ |
ದೆಲ್ಲರಾಡುತ್ತಿರ್ದ ತನ್ನಯ ಸೋದರರ ಮುರಿದು ||೨೮||

ಲಲನೆಯರ ಸೌಭಾಗ್ಯಲಕ್ಷ್ಮಿಯ |
ಚಲುವಿನರಗಿಳಿ ಶೂರ್ಪಣಖೆಯನು |
ಕಲಹವಿಲ್ಲದೆ ಮೂಗುಕಿವಿಗಳನರಿದು ತಾಂ ಕಳುಹಿ ||
ನೆಲದೊಳೆನಗಾಸೂರ್ಯಚಂದ್ರರು |
ನೆಲಸಿರುವಪರಿಯಂತ ಕೊರತೆಯ |
ನಿಲಿಸಿದರು ಪಾಪಿಗಳು ತಮ್ಮಯ ಕೊಬ್ಬಿನುಬ್ಬಿನಲಿ ||೨೯

ಮಾವ ನಿನ್ನ ಸಹಾಯಮಿರಲೀ |
ರಾವಣಂಗಿದಿರಾರು ಲೋಕದೊ |
ಳಾವಘನಪೌರುಷರು ಮಾನಿಸಪುಳುಗಳೆಂಬವರು ||
ಸಾವು ಸಮನಿಸದಂತೆ ಸೀತಾ |
ದೇವಿಯನು ಹಾರಿಸುವುಪಾಯವ |
ಭಾವಿಸುತೆ ಮನದೊಳಗೆ ನಿನ್ನಯ ಬಳಿಗೆ ಬಂದಿಹೆನು ||೨೦||

ಆಲಿಸೈ ಮುನ್ನಾ ಸ್ವಯಂವರ |
ಕಾಲದಲಿ ನೆರೆದಿರ್ದಪೃಥ್ವೀ |
ಪಾಲರಿದಿರೊಳು ಹೆದೆಯನೇರಿಸುವಾಗ ಬಿಲ್ದುದಿಗೆ ||
ಲೋಲಲೋಚನೆಯಂದಚಂದದ |
ಮೇಲೆ ತನ್ನಯ ಮನವು ಮೋಹಿಸಿ |
ಕಾಲು ಜಾರಿದೊಡೆನ್ನನೀಕ್ಷಿಸಿ ನಕ್ಕಳೇಳಿಸುತೆ ||೨೧||

ಇಂದು ತಂಗಿಗೆ ಮಾನಭಂಗವು |
ಬಂದುದೀಕೆಯದೆಸೆಯಿನಲ್ಲದೆ |
ಸುಂದರಾಂಗಿಯನೊಂದಬೇಕೆಂಬಾಸೆ ತನಗಿಹುದು ||
ಒಂದು ಮೂರರದಿರಲಿ ಮಧ್ಯದ |
ಕ್ಕುಂದಿನಿಂದೀ ನಮ್ಮ ಕುಲವೇ |
ಬೆಂದುದಿದಕಿಂದವಳನಪಹರಿಸುವುದೆ ಮುಯ್ಯಲ್ತೆ ||೨೨||

ಅಸುರಮುನಿ ಕೇಳಿದಕುಪಾಯವ |
ನುಸಿರುವೆನು ನೀನಲ್ಲದಿತರರಿ |
ಗಸದಳವಿದೆಂದರಿದು ಚಿಂತಿಸಿ ಬಂದೆನೊಲವಿನಲಿ ||
ಹುಸಿಯದಂದದೊಳೀಯಭೀಷ್ಟವ |
ನೆಸಗಿ ನನ್ನನು ಸಲಹು ನೀನೆಂ |
ದಸುರಪತಿ ಕುಲನಾಶಮಂತ್ರವನುಸಿರಿದನು ಖಳಗೆ ||೨೩||

ಬೆಚ್ಚಿದನು ಮಾರೀಚನಂದಿನ |
ನಚ್ಚು ನೆನಪಿಗೆ ಬರಲು ರಾಮನ |
ಬಚ್ಚಣೆಯ ಬಾಣವದು ನಟ್ಟಂತಾಗೆ ಹೃದಯದಲಿ ||
ಸುಚ್ಚುನೂರಾಯ್ತೆದೆಯು ಬಳಿಕಿರ |
ದೆಚ್ಚರೊಂದುತೆ ರಾಮನೆಂಬಾ |
ಕಿಚ್ಚು ಪರ್ಬುತೆ ದನುಜವಂಶವ ಸುಟ್ಟವೊಲು ಬಗೆದು ||೨೪||

ಬಂದನೇಸ್ಸೈ ದಾನವಾರಿಯು |
ತಂದನೇಸ್ಸೈ ಮರಣದೋಲೆಯ |
ನಂದಿತೇಸ್ಸೈ ದನುಜರ್ಸೈಸಿರಿಯೆಂಬ ಪೆರ್ಜೊಡರು ||
ಕಂದ ನಿನ್ನೀಬುದ್ಧಿಗಿಂದಿದ |
ತಂದು ಚಾಚಿದಳೇನು ಪಾಪಿನಿ |
ಮಂದಮತಿ ಚಲಗಾತಿ ಖಲರತಿಯಸತಿ ಮೂಕೊರತಿ ||೩೫||

ರೂಪವತಿ ತಾನೆನ್ನುತವರೊಳು |
ಪಾಪಕೃತ್ಯಕ್ಕೆಳಸಲಿಂತು ವಿ |
ರೂಪವೆಸಗಿದರಿವಳಿಗಲ್ಲದೆ ಬೇರೆ ಕಾಣಿಸದು ||
ಚಾಪಲದೆ ಪುರುಷರೊಳು ಕಪಟಾ |
ಟೋಪವನು ನೆರೆ ತೋರ್ಪ ಪೆಣ್ಗಳಿ |
ಗೀಪರಿಯ ಮದ್ದರೆದೊಡಲ್ಲದೆ ಬುದ್ಧಿ ತಾಂ ಬಹುದೆ ||೩೬||

ರಾಮಲಕ್ಷ್ಮಣರಾರು ತಾನಾ |
ಭೂಮಿಸುತೆಯಾರೆಂಬುದನು ನೀಂ |
ಕಾಮವಶದಿಂ ಮನಕೆ ತಾರದೆ ಕೆಣಕಿ ಕೆಡಬೇಡ ||
ಈಮಹೀಭಾರವನು ತಗ್ಗಿಪ |
ನೇಮದಿಂದಿವರುದಯಿಸಿರ್ಪ |
ರ್ದ್ದಾಮಮಹಿಮರನಾದಿಪುರುಷಾನಂತಲಕ್ಷ್ಮಿಯರು ||೩೭||

ಖಲರ ಮಲಿನಾಚರಣೆಗಳು ಭೂ |
ತಲದೆ ವೃದ್ಧಿಯನೊಂದಲಾಗಳೆ |
ಕೆಲಕೆ ನೂಕುತೆ ಮತ್ತೆ ಸನ್ಮಾರ್ಗವನು ನಿಲಿಸಲ್ಕೆ ||
ಜಲಜನಾಭನು ಹಲವುವೇಳೆಯೊ |
ಳೊಲಿದು ಧರಣಿಯೊಳುದಿಸಿ ದುರುಳರ |
ಕೊಲುವನೆಂಬರಿವೆತ್ತಲಡಗಿತು ನಿನ್ನ ಚಿತ್ತದಲಿ ||೩೮||

ಮಗುವು ರಾಘವನೆಂದುಪೇಕ್ಷಿಸಿ |
ವಿಗಡವಿಶ್ವಾಮಿತ್ರನಾಶ್ರಮ |
ವುಗುತೆ ಪಿಂತೆ ಸುಬಾಹುವಾನುಂ ಕಾಳೆಗವನೆಸಗೆ ||
ಬಗೆಯುತೆಮ್ಮನು ತೃಣದವೋಲ್ಕಿರು |
ನಗೆಯ ಪಸರಿಸುತಂಬೆರಡಸಿಡ |
ಲಗಲಿತಸು ತಮ್ಮಂಗೆ ಕೆಡೆದೆನು ನಾನು ಕಡಲೊಳಗೆ ||೩೯||

ಇರಲು ನಿಜರೂಪದೊಳು ರಾಘವ |
ಶರಕೆ ತುತ್ತಹೆನೆಂಬ ಭಯದಿಂ |
ದುರುತಪಸ್ವಿಯ ಚರ್ಯೆಯಿಂದೀಬನದೆ ಜೀವಿಪೆನು ||
ಅರಿಯಲಾ ಖರದೂಷಣಾದ್ಯರು |
ಕಿರಿಯರೇ ಬಲದೊಳಗೆ ನೀನಿದ |
ನರಿದರಿದು ಮೇಲ್ವಾಯ್ವುದುಚಿತವೆ ತಾಟಕಾರಿಯೊಳು ||೪೦||

ಕಾಮಶರಕೀಡಾಗಿ ಸೀತಾ |
ಭಾಮಿನಿಯನುರೆ ಬಯಸಿ ಸುಜನ |
ಪ್ರೇಮವಿರಹಿತನಾಗಿ ಧರ್ಮವಿದೂರನೆಂದೆನಿಸೆ ||
ಭೂಮಿ ಹೇಸದೆ ಕೀರ್ತಿ ಮಾಸದೆ |
ನಾಮವಳಿಯದೆ ಮೃತ್ಯುವೆಳೆಯದೆ |
ರಾಮಬಾಣವು ನಿನ್ನಸದೆಯದೆ ಬಿಡುವುದೇ ಬರಿದೆ ||೪೧||

ಬೇಡಬೇಡಿಂತಹ ಕುಚೇಷ್ಟೆಯ |
ಮಾಡದಿರು ರಘುರಾಮನೊಡನಿಂ |
ತಾಡಿ ಕೆಟ್ಟರು ಮುನ್ನ ಹಲಬರು ದುರುಳತನದಿಂದೆ ||
ನೋಡುನೋಡುತೆ ಕೊಲುವ ಮಾರಿಯ |
ದಾಡೆಯಲುಗುವರುಂಟೆ ನಿನ್ನನು |
ಬೇಡಿಕೊಳ್ವೆನು ಮರಳು ಪುರಕೆಂದಸುರಮುನಿ ನುಡಿದ ||೪೨||

ರೋಗಿಗೌಷಧ ಸೇರದಂದದೆ |
ಭೋಗಿಗುರೆ ತಪ ರುಚಿಸದಂದದೆ |
ಯೋಗಿಗಾ ಸಂಸಾರ ಲೋಲತೆ ಸೊಗಸದಂದದಲಿ ||
ತಾಗಿದೊಡನೀಮಾತು ಕಿವಿಗಳಿ |
ಗಾಗ ರೋಷಜ್ವಾಲೆ ಕಿಡಿಯಿಡೆ |
ಬೇಗನೇಳುತೆ ಕಡುಗಗೊಂಡನು ಜಡಿದು ರಾವಣನು ||೪೩||

ಏನಿವೆಲವೋ ನಿನ್ನ ನುಡಿಗಳು |
ಭಾನುವಿದಿರೊಳು ತಿಮಿರವಿಹುದೇ |
ಶ್ಯೇನನಿದಿರೊಳು ಪಾರಿವಾಳವು ಸುಳಿದು ಜೀವಿಪುದೆ ||
ಜೇನುಹುಟ್ಟಿನೊಳೆರಗಿ ನೊಣವೆ |
ತ್ತಾನುಮುಳಿಯಲುಬಹುದೆ ತನಗಾ |
ಮಾನವರ ಪಡಿಗಟ್ಟಿ ನುಡಿವೆಯ ನಿಲಿಸು ನಾಲಗೆಯ ||೪೪||

ವೃದ್ಧನೆನ್ನುತೆ ನಿನ್ನ ಬಳಿಗಾಂ |
ಪೊದ್ದಿದುದಕಲೆ ನಾಲಗೆಯು ನೊಳ |
ದುದ್ದ ಸಿಗುರಿತು ತನ್ನ ಸಾರೆಂದರಿಯದೀಪರಿಯ ||
ಬುದ್ಧಿವಾದವ ಪೇಳುತಿಹೆ ನೀಂ |
ಕ್ರುದ್ಧಭಾವದೆ ನಿಂದೆನಾದೊಡೆ |
ಯುದ್ಧರಂಗದೆ ಕಾಲರುದ್ರನು ಸದ್ದುದೋರುವನೆ ||೪೫||

ಇರಲಿ ನಿನ್ನಯ ಹಲುಬು ತನ್ನಯ |
ಬರವಿಗುತ್ತರವೇನು ನೀನಾ |
ಹರಿಣರೂಪವನಾಂತು ಬರ್ಪೆಯೊ ಬಾರೆಯೋ ಪೇಳು ||
ಹರಣದಾಸೆಯದಿರ್ದೊಡೆನ್ನೊಡ |
ನೆರೆದು ಬರ್ಪುದು ತಪ್ಪಿದೊಡೆ ನಿ |
ನ್ನರಕೆ ಚಾಚುವೆ ಚಂದ್ರಹಾಸವನೆಂದು ಗರ್ಜಿಸಿದ ||೪೬||

ಕೇಳಿದೊಡನೆಯೆ ಭಯಪಯೋಧಿಯೊ |
ಳಾಳಿದನು ಮೈಬೆಮರಿತಾಕ್ಷಣ |
ಖೂಳನಿವನೊರೆದಂತೆ ನಡೆಸದೆ ಮಾಣನೆಂದೆನುತೆ ||
ಕಾಲವೊದವಿತು ತನಗವಿಾಕೇ |
ಡಾಳಿಯಿಂದಸು ತೊಲಗದಿರದು ಕೃ |
ಪಾಳುರಾಘವನಸ್ತ್ರಕಿದ ಬಲಿಯಾಗಲರ್ಪಿಪೆನು ||೪೭||

ದೂರಕೆಳೆದೊಯ್ಯುತ್ತುಮವನನು |
ಮೀರಿ ದಣಿಸಿದೊಡಿರದೆ ಕೋಪಿಸಿ |
ಕ್ರೂರಲಗಿನಿಂದೆನ್ನ ಸಂಹರಿಸುವನು ರಾಘವನು |
ಧಾರಿಣಿಯೊಳೀಸೈಪು ಮತ್ತಿ |
ನ್ನಾರಿಗಾದೊಡಮುಂಟೆ ಮುಕ್ತಿಯ |
ನಾರಿ ಸೇರುವನೆನ್ನನಾನೇ ಧನ್ಯನಹೆನೆಂದ ||೪೮||

ಅಳುಕಲೇಕಿನ್ನಿದಕೆನುತೆ ಮನ |
ದೊಳಗೆ ನಿರ್ಧರಿಸುತ್ತೆ ದನುಜನು |
ಏಳಯರುದ್ರನ ತೆರದೆ ನಿಂದಿಹ ರಾವಣನ ನೋಡಿ ||
ಎಲವೊಪಾಪಿಯೆ ನನ್ನ ನುಡಿಗಳು |
ಫಲಿಸದಾದುವು ನಿನ್ನ ಚಿತ್ತದ |
ಚಲನಬಿಡೆ ಏನಾದುದಾಗಲಿ ಬರ್ಪೆನೆಂದೊರೆದು ||೪೯||

ತೆರಳುವಾ ಮಾರೀಚನನು ಖಳ |
ರರಸನಾಗಳೆ ಕರೆದು ತಸಗಿ |
ನ್ನರಿಯ ಗೆಲುವುದು ಸುಲಭವಾದುದು ಮಾವ ರಥವೇರು ||
ತರುಣಿಯನು ಕರೆತಂದು ಸಗ್ಗದ |
ಪರಮಸುಖವೊಂದೆಂದು ನಲವಿಂ |
ಪರಸಿನನ್ನೊಡನಿಂದು ಬಾರೈ ರಾಮನಾಶ್ರಮಕೆ ||೫೦||

ಒರೆದು ತಾನಿಂತಡರಿ ರಥವನು |
ಸುರವಿರೋಧಿಯು ಮನದಭೀಷ್ಟವ |
ಭರದೆ ಪಡೆದಪೆನೆಂದು ನಲಿದವನೊಡನೆ ಪೊರಮಟ್ಟು ||
ಪರಿಪರಿಯೊಳೊಪ್ಪುತಿಹ ಪಟ್ಟಣ |
ಗಿರಿವನಂಗಳ ದುರ್ಗನದಿಗಳ |
ನಿರದೆ ಕಳೆಯುತೆ ದಂಡಕಾವನಮಧ್ಯದೇಶವನು ||೫೧||

ಸೇರಿ ಕದಳೀವನದ ಮಧ್ಯದೆ |
ತೋರುತಿರ್ಪಾಶ್ರಮವನೊಂದನು |
ದೂರದಿಂದಮೆ ಕಾಣುತಿದು ಪೊಳತಾಗಿ ತೋರುತಿದೆ ||
ತೇರನಿಲ್ಲಿಯೆ ನಿಲ್ಲಿಸೆಂದಾ |
ಸಾರಥಿಗೆ ತಾಂ ಸೂಚಿಸಿಳಿದನು |
ನಾರುಮುಡಿಯನು ಧರಿಸಿ ಮಾವನೊಳೆಂದನಸುರೇಂದ್ರ ||೫೨||

ಮಾವ ಕೇಳೀಯಾಶ್ರಮವು ಪರಿ |
ಭಾವಿಸಲು ರಾಮನದು ನೀನೀ |
ತಾವಿನಲಿ ನಿನ್ನಖಿಲಸಾಮರ್ಥ್ಯವನು ತೋರಿಸುತೆ ||
ಮೇವಿಗೆಳಸಿದ ಹೊಮ್ಮಿಗವೊ ಎಂ |
ಬಾವಿಧದೆ ಮೋಹವನೆ ಪುಟ್ಟಿಸಿ |
ಭೂವಲಯಕದ್ಭುತವ ತೋರುತ್ತೊಲಿಸು ಜಾನಕಿಯ ||೫೩||

ಬಳಿಕ ಮಿಕ್ಕಿನ ಕಾರ್ಯವೆಲ್ಲವು |
ಸುಲಭವಾಗಿಯೆ ಸಿದ್ಧಿಸುವುದೈ |
ಬಲುಹಿನಿಂ ಕರವೆಳೆಯೆ ಕಾಯವು ತಾನೆ ಬಪ್ಪುದಲಾ ||
ಪಲವುಬಗೆಯನು ಮನಕೆ ತಾರದೆ |
ಚೆಲುವರೂಪನು ಬೇಗ ತಾಳೆಂ |
ಬುಲಿವು ಹಿಂಚಿತು ಮುಂಚಿತಂತಹ ಪುಲ್ಲೆಯುಪವನಕೆ ||೫೪||

ಸುಳಿದುದಡು ತಾನಿತ್ತಲತ್ತಲು |
ಮೆಲೆವಸೆಯ ಸರಿಸದಲಿ ತೋರುತೆ |
ಕೆಲಕೆ ಸಾರುತೆ ಒಳಿಕ ಮುಗುಳ್ನೈದುತ್ತೆ ನಿಲ್ಲುತ್ತೆ ||
ಹಲವುಬಣ್ಣದೊಳೈದೆ ರಂಜಿಸು |
ತಲುಗದಕ್ಷಿಗಳಿಂದೆ ನೋಡುತೆ |
ಸಲಿಯುು ತೊಪ್ಪುವ ಸೊಬಗ ಬೀರಿತು ಕನಕಮೃಗವಂದು ||೫೫||

ಮಣಿಯುತಣಿಯುತ್ತರಸಿ ಪುಷ್ಪವ |
ಮನಕೆ ಬಂದುದ ತಿರಿದು ಮುಡಿಲೊಳು |
ಜನಕನಾತ್ಮಜೆ ತುಂಬಿಯೆಲೆವನೆಯಿದಿರಿನುಪವನದೆ ||
ಮಿನುಗುತಿಹಕಾಂಚನಮಯಾಂಗದ |
ಘನಮನೋಹರಮಾದ ರೂಪಿಂ |
ದನುಪಮಾನಮಿದೆನಿಪಮಿಗವನು ಕಂಡು ಮೋಹಿಸುತೆ ||೫೬||

ಏನಿದೆತ್ತಣಿನೈದಿತೆರಳೆಯು |
ಕಾನನದ ಮೃಗಪೋತಕೀಪರಿ |
ಕಾನಕಾಂಗಮಿದಮುಮ ಸೋಜಿಗಮಲ್ತೆ ಪರಿಕಿಸಲು ||
ನಾನಿದನು ಪಡೆದಿಂದು ವಿಪಿನ |
ಗ್ಲಾನಿಯನು ಪರಿಹರಿಪೆನೆಂದಾ |
ಮಾನಿನೀಮಣಿ ಸಡಗರದೆ ಹೊದ್ದಿದಳು ವಲ್ಲಭನ ||೫೭||

ಮೆಲ್ಲನೈತಂದಿದಿರೆ ನಿಂದಿಹ |
ವಲ್ಲಭೆಯನೀಕ್ಷಿಸುತೆ ರಾಮನು |
ಪಲ್ಲವಾಧರೆ ನಿನ್ನ ಬರವಿಂಗೇನು ಕಾರಣವು ||
ಇಲ್ಲದೇನುಂ ಬರಿದೆ ಬರ್ಪವ |
ಳಲ್ಲ ನಿನ್ನಯ ಮನದ ಬಯಕೆಯ |
ನಲ್ಲಳೇ ನೀಂ ನುಡಿಯೆ ಸಲಿಸುವೆನೆಂದನಾರಘುಜ ||೫೮||

ಇನಿಯನೊರೆದಿನಿವಾತನಾಲಿಸಿ |
ಘನಮನೋರಥವಾಂತೆನೆನ್ನುತೆ |
ವನಿತೆ ನುಡಿದಳು ಕಾಂತ ಕೇಳಿಂದೆಮ್ಮ ವನದೆಡೆಗೆ ||
ಕನಕಮಯಮೆನೆ ಮೆರೆವ ತನುವಿನ |
ವಿನುತಹರಿಣವದೊಂದು ಬಂದಿಹು |
ದೆನಗೆ ಮನದಭಿಲಾಷೆಯಿಹುದದನೊಂದಬೇಕೆಂದು ||೫೯||

ಎದ್ದು ಬಾ ತೋರುವೆನು ನಲ್ಲನೆ ।
ಮುದ್ದುಮಿಗವನು ನಿನಗೆ ಮೆಲ್ಲನೆ ।
ಸದ್ದುದೋರದೆ ಬರ್ಪುದೆನ್ನೊಡನೆನುತೆ ಕೈವಿಡಿದು ॥
ಉದ್ದುರುಳ್ವನಿತರೊಳಗಾಮಿಗ ।
ಪಿದ್ದರಾವನು ಸೇರಿ ಸೊಬಗಿಂ ।
ಕದ್ದು ನನ್ನಯ ಮನವನಚ್ಚರಿಗೊಳಿಪ ಮಿಗವಿದೆಕೊ ॥೬೦॥

ಸದಯ ನಿನ್ನನುರಾಗರಸಕಾ ।
ಸ್ಪದವು ನಾನಹುದಲ್ಲವೆಂಬುದ ।
ನಿದರಿನರಿಯಲುಬಹುದು ನೀನಿಂದಿರದೆ ಸಾಹಸದೆ ॥
ಚದುರತನವನು ತೋರಿ ಬಾಣದೆ ।
ನದೆದು ನೋಯಿಸದಂತೆ ನೀಂಪಿಡಿ ।
ದಿದನು ತಂದೆನಗೀಯೆ ಕಾಲವ ಕಳೆವೆನಿದರೊಡನೆ ॥೬೧॥

ಎಂದು ತನ್ನಯ ಮನದ ಕಾಂಕ್ಷೆಯ ।
ನಿಂದುಮುಖಿ ಬಿನ್ನೈಸಲಾರಘು ।
ನಂದನನು ಬಗೆ ತಣಿಯೆ ಮುದ್ದಿಸುತರಸಿ ಲಾಲಿಪುದು ॥
ಇಂದು ನಿನಗೀಬಣಗು ಪುಲ್ಲೆಯ ।
ತಂದುಕುಡೆ ಮತ್ಪ್ರೇಮಸಿಂಧುವ ।
ನೊಂದಿದಳೆಶೆಯು ಪೂರ್ಣಮಾಯಿತ್ತೆಂದು ಭಾವಿಪೆಯಾ ॥೬೨॥

ಸುಂದರಾಂಗಿಯೆ ನನಗೆ ನಿನ್ನೊಳ ।
ಗೆಂದುಮಿರ್ಪೊಲ್ಮೆಯನು ಪರಿಕಿಸೆ ।
ಬಂದೊಡಾಕಸ್ಮಿಕದೆ ನಿನಗೊಂದೆಡರು ನಾನೊಡನೆ ॥
ಮಂದರಾದ್ರಿಯನಾದೊಡಂ ಕೀ ।
ಳ್ತಂದು ಜಲಧಿಯ ನಡುವೆ ಸಾಹಸ ।
ದಿಂದೆ ಸೇತುವನಾದೊಡಂ ನೆರೆಕಟ್ಟಿ ಸಲಹುವೆನು ॥೬೩॥

ಅಗ ನೀಂ ಸಂತುಷ್ಟೆಯಾಗನು ।
ರಾಗದಾಳವದೆನ್ನೊಳಿಂತುಟಿ ।
ರಾಘವನೆ ನಾನರಿದುದಿಲ್ಲೆಂದೆನುತೆ ತಕ್ಕೈಸೆ ॥
ನಾಗವೇಣಿಯೆ ನನ್ನ ಜನುಮವ ।
ದಾಗ ಸಾಫಲ್ಯವನು ಪಡೆಯಲು ।
ಭೋಗಿಶಯನನ ಪದವಿಯಾಂತನ ತೆರದೆ ಸುಖಿಸುವೆನು ॥೬೪॥

ಇದರ್ೊಡಿಲ್ಲಿಯೆ ರಮಣಿ ನೀಂ ನಿಮಿ |
ಷಾರ್ಧದೊಳು ತಂದೀವೆನೆನ್ನುತೆ |
ಸಾರ್ದುಲಕ್ಷ್ಮಣನೆಡೆಯನೆಲ್ಲವನವನೊಳದನರಿಪಿ ||
ಪೊರ್ದಿತೆನಗೀವ್ಯಸನವಾದೊಡ |
ಮಿರ್ದು ಬಳಿಯೊಳು ಸೀತೆಯನು ಬಲು |
ಬರ್ದಿನಿಂ ಕಾದಿಹುದು ನೀನೆಂದೆಚ್ಚರಿಸಲವನು ||೬೫||

ಏನಿದಚ್ಚರಿಯಣ್ಣ ನೀಸಿದು |
ಹೀನರಾಕ್ಷಸಮಾಯೆಯೆಂಬುದ |
ನೇನುಮರಿಯದನಂತೆ ಭ್ರಾಂತಿಯನೊಂದಿ ಗಮಿಸುವುದು ||
ಶ್ವಾನದೆಕ್ಕಲನೆರಳೆಯಂದದ |
ನಾನುತಾ ಮಾಯಾವಿದನುಜವಿ |
ತಾನವಾವಗಮಿಲ್ಲೆ ಚರಿಸುವುದೆಂದು ಕೇಳ್ವರಿಯ ||೬೬||

ಲೋಕದೊಳಗೀಪರಿಯಮೃಗವು ವಿ |
ಲೋಕಿಸುವೊಡಿಲ್ಲಾವದೆಸೆಯೊಳ |
ಮಾಕುಟೀರದ ಬಳಿಯೊಳಿಂದುದ್ಭವಿಸಿದಂತಿಹುದು ||
ಸೋಕಿ ಬೆರೆಯದೆ ಮಿಕ್ಕ ಮೃಗಗಳು |
ನೂಕಿ ಬೆದರುತೆ ಚದರಿಪೋಪುವು |
ಸಾಕು ಸಾಕಿದನರಿಯಬಾರದೆ ದೇವ ಕನಡೆಂದು ||೬೭||

ತಮ್ಮ ನೀನಾಡಿದುದು ಸತ್ಯವು |
ಸಮ್ಮತವು ತನಗಾದೊಡಂ ಕೇ |
ಳೆಮ್ಮರಸಿ ಬಯಸಿದೊಡೆ ನಾನದಕೊಪ್ಪಿದೆನು ಬಳಿಕ ||
ಸುಮ್ಮನೇಕಳುಕುವುದು ನನಗೀ |
ಹೊಮ್ಮಗವು ನಿಜಮಲ್ಲ ಖಳನೆಂ |
ದೊಮ್ಮೆ ತೋರ್ದೊಡೆ ಕಡಿದು ಬಿಸುಡುವೆನೇಕೆ ಸಂಶಯವು ||೬೮||

ಅರಸಿಯಿಹಳೆಡೆವಿಡದೆ ಕಾದಿರು |
ಬರುವೆನತಿಶೀಘ್ರದೊಳು ತಾನೆಂ |
ದರಸನಾ ಹರಿಣನನು ಬೆನ್ನಟ್ಟಲ್ಕೆ ಬಳಿಕಿರದೆ |
ತರತರದ ನಟನೆಗಳ ತೋರು |
ತ್ತರರೆ ಸಿಕ್ಕಿತು ಸಿಕ್ಕಿತೆನಿಸುತೆ |
ಭರದೆ ಮುಂದಕೆ ಚಿಮ್ಮಿ ನಿಲ್ಲುತೆ ನೋಡಿ ಪಿಂಗಡೆಗೆ ||೬೯||

ಬರುವನಿನ್ನೇಂ ಸರಿಸಕೆಂಬನಿ |
ತರೊಳು ಜಾರುತೆ ಮರಳಿ ನಿಲ್ಲುತೆ |
ಮರೆಯದೀಪರಿ ಬವಣಿಗೊಳಗಾಗಿಸುತೆ ರಾಘವನ ||
ಪರಿಪರಿಯ ಬಳಲಿಕೆಯನೀಯು |
ತ್ತಿರದೆ ವನದಿಂ ವನಕೆ ಸಾರುತೆ |
ಭರದಿನೊಯ್ದುದು ನೃಪನ ದೂರದೊಳುಳಿದುದಾಶ್ರಮವು ||೨೦||

ಜಲಜಸಖನಪರಾಬ್ಧಿಗಿಳಿವನು |
ಹಲವುಪಾಯಗಳೆಲ್ಲ ತೀರ್ದುವು |
ಹುಲುಮಿಗವು ಕೈಸೇರದಾಯಸವಾಂತುದೆನ್ನೊಡಲು ||
ತಿಳಿಯಲಿದು ಸಾಮಾನ್ಯವಾಗಿರ |
ದೆಲೆವನೆಯು ಬಹುದೂರವಾಯಿ |
ತ್ತುಲಿದನಾಗಳೆ ತಮ್ಮ ತಾನಿದು ಕಪಟಮೃಗವೆಂದು ||೨೧||

ಹಿರಿಯಮಕ್ಕಳು ಪುಷ್ಟಕಾಯರು |
ಕಿರಿಯವರು ಮೇಧಾವಿಗಳೆನು |
ತ್ತೊರೆವನಾಳ್ನುಡಿ ಸತ್ಯವಾದುದು ನಮ್ಮ ವಿಷಯದಲಿ ||
ಅರಿಯದಿಂದೈತಂದಬಳಿಕಿ |
ನ್ನಿರುವುದೇನೀಖೂಳಮಿಗವನು |
ತರಿದು ಚರ್ಮವ ನೊಯ್ದು ತನ್ನಯ ರಮಣಿಗಿತ್ತಪೆನು ||೨೨||

ಎನುತೆ ಧನುವಿಂಗಾಗ ಬಾಣವ |
ನನುಗೊಳಿಸುತಿಸಲಾಗ ಹರಿಣನು |
ದನುಜರೂಪದೆ ಲಕ್ಷ್ಮಣನೆ ಹಾ ಸೀತೆ ಹಾ ಎನುತೆ ||
ವನಮದೆಲ್ಲವು ಮೊಳಗುವಂದದೊ |
ಳಿನಕುಲೇಶನ ಕೊರಲ ದನಿಯನೆ |
ಅನುಕರಿಸಿ ಮಿಗೆ ಕೂಗುತಸುವನು ಬಿಟ್ಟುದಾಕ್ಷಣವೆ ||೨೩||

ದುಗುಡವಾಂತನು ರಾಮನಾಗಳು |
ವಿಗಡರಕ್ಕಸಮಾಯೆ ಬಲ್ಲಿತು |
ಪುಗದೆ ಬಿಡದೀನುಡಿಯು ಸೀತಾಲಕ್ಷ್ಮಣರ ಕಿವಿಗೆ ||
ಬಗೆಬಗೆಯ ಬಗೆಗಳನು ಕಲ್ಪಿಸಿ |
ಹಗರಣವನೇಂತಹರೊ ಕಾಣೆನು |
ಮಗುವಲಾ ಸೌಮಿತ್ರಿಯೆಂದಾ ರಾಮನಳುಕಿದನು ||೨೪||

ತಾಳಲಾರೆನು ಹರಣದೆರೆಯನು |
ವೇಳೆಗಳೆವನದೇತಕರಿಯೆನು |
ಪಾಳುಮೃಗದಿಂದೇನು ಬಸುಟದನೇಕೆ ಬಾರನೊ ಹಾ ||
ಕಾಳುಮೂಳನೆ ಬಯಸೆ ಗದರಿಸಿ |
ಪೇಳಲಾರದೆ ಬುದ್ಧಿಯನು ತನ |
ಗಾಳುಗೆಲಸಕೆ ತೆತ್ತು ದೇಹವನೇಕೆ ದಣಿಸುವನೋ ||೭೫||

ಹರಿಣನಿಲ್ಲಿಗೆ ಬರಲದೇತಕೆ |
ಯಿರದೆ ನಾನದನೆಳಸಲೇತಕೆ |
ತರುವೆನೆನ್ನುತೆ ತೆರಳಲೇತಕೆ ರಮಣನೇನಹನೋ ||
ಅರಿಯದೊಂದುಂ ಮನಕೆ ರಮಣನ |
ಬರವಿಗೇತಕೆ ತಡವೆನುತ್ತಾ |
ತರುಣಿ ಮಿಗೆ ಚಿಂತಿಸುವ ಸಮಯಕೆ ಕೇಳ್ದುದಾದನಿಯು ||೭೬||

ಬಿದ್ದುದೇನಿದುತನ್ನ ಕಿವಿಯೊಳು |
ಸದ್ದು ರಾಮನದಾಗದಿರದಿಂ |
ದದ್ದಿ ಪೋದುದೆ ಧರಣಿ ತಾನಕಟಬ್ಧಿಮಧ್ಯದೊಳು ||
ಬಿದ್ದರೋ ರವಿಶಶಿಗಳಿಳೆಗಿಂ |
ದುದ್ದವಹ ಸುರಮಾರ್ಗದಿಂ ಮೇಣ್ |
ಕದ್ದುದೋವಿಧಿ ತನ್ನ ಮಂಗಳಸೂತ್ರದೈಸಿರಿಯ ||೭೭||

ಏನಿದಿಂತಾಯ್ತೆಂದು ಮೈದುನ |
ನೀನು ಕೇಳೆಯ ರಾಘವೇಶನ |
ದೀನಭಾಷಿತವಿದನು ಕೇಳಿಯುಮಿನ್ನು ಜೀವಿಪೆಯ ||
ನಾನುಭೂಮಿಜೆ ಜಡತೆಯಾಂತವ |
ಳೇನಬಲ್ಲೆನು ಕಷ್ಟವನು ಕೇಳ್ |
ನೀನಭಿಜ್ಞತೆಯಾಂತ ಮಾನವನಾಗಿ ಚಿಂತಿಸೆಯಾ ||೭೮||

ಪೋಗು ಪೋಗೈ ಲಕ್ಷ್ಮಣನೆ ನಿನ |
ಗೀಗ ವೇಳೆಯೆ ಚಿಂತಿಸಲು ನಡೆ |
ಬೇಗ ನಿಲ್ಲದಿರಾರ್ಯಪುತ್ರಗೆ ಜೀವಸಂಶಯವು ||
ಆಗುಹೋಗೇನೆಂಬುದರಿಯದೆ |
ಬಾಗಿಸಿದ ಶಿರದಿಂದೆ ಮುಂಗಡೆ |
ಕೈಗಳನು ಮುಗಿಯುತ್ತೆ ನಿಂದಿಹುದಕ್ಕೆ ಸಮಯವಿದೆ ||೭೯||

ಏನಿದೇನೀನಡೆಯು ತಕ್ಕುದೆ |
ನಾನಳಲಿ ನಿಂದೊರಲುತಿರಲುಂ |
ಹಾನಿಯಾನದ ಮಾನವನ ತೆರದಿಂದೆ ವರ್ತಿಸುವೆ ||
ಮಾನವೇ ನಿಮ್ಮಣ್ಣನಾಪದ |
ವಾನುತಿರೆ ಹೆಚ್ಚಳವು ನಿನಗಿದು |
ಹೀನ ನಿಲ್ಲದೆ ತೊಲಗುತೊಲಗೆಂದುಲಿದಳಾ ಸೀತೆ ||೮೦||

ಕೇಳಿಯಾರ್ತಧ್ವನಿಯ ಲಕ್ಷ್ಮಣ |
ನಾಲಿಯಲಿ ನೀರ್ದುಂಬಿ ಸಂಶಯ |
ಜಾಲದೊಳು ಮನ ಸಿಲುಕಲೇನುಮನರಿಯದರೆಗಳಿಗೆ ||
ಮೇಲೆ ತಾಂ ನಿಶ್ಚೈಸಿ ರಾಕ್ಷಸ |
ಜಾಲವಲ್ಲದೆ ಕಾಣೆ ಲಕ್ಷ್ಮೀ |
ಲೋಲನಸುವಿಂಗುಂಟೆ ಕೊರತೆಯು ಸತ್ಯವೆಂದೆನುತೆ ||೮೧||

ಧರಣಿಜಾತೆಯ ನಿಷ್ಠುರೋಕ್ತಿಯ |
ಸರಕುಗೈಯದೆ ದೇವಿ ಕೇಳ್ವುದು |
ಸರಸಿರುಹಭವತಾತಗಳಿವುಂಟೆಂಬರೇ ತಾಯೆ ||
ಧರಣಿ ಮೇಣೀಸೂರ್ಯಚಂದ್ರರು |
ಮೆರೆವನಕ್ಷತ್ರಾದಿಗಳು ವಿಧಿ |
ವಿರಚಿತಾಂಡವಿದೆಲ್ಲ ಲಯಿಸೆಯುಮಳಿವದಿಲ್ಲವಗೆ ||೮೨||

ತಾಯೆ ನೀವೇ ಲಕ್ಷ್ಮಿ ನಿಮ್ಮಯ |
ನಾಯಕನೆ ಲಕ್ಷ್ಮೀಶನಿಂತಿರ |
ಲಾಯತವೆ ನಿಮಗಿನಿತು ಮರವೆಯು ದನುಜಮಾಯೆಯಿದು ||
ರಾಯರಾಘವವರನ ತೋರ್ಪೆನು |
ನೋಯಲಾಗದು ಮನದೆ ನಿಖಿಲಾ |
ನ್ಯಾಯಮೂರ್ತಿಯ ಕಾಣ್ಬೆರಿನ್ನರೆಗಳಿಗೆಯೊಳಗೆನಲು ||೮೩||

ಅರಸನಳಲಿಂ ಕುದಿದು ಬೇವಾ |
ಪರಮಸಾಧ್ವಿಯ ಮನಕೆ ರುಚಿವುದೆ |
ವೆರರು ಪೇಳುವ ನೀತಿವಚನವು ಕೇಳ್ದು ತತ್ಕ್ಷಣದೆ ||
ಕೆರಳಿದಳು ಲಲಿತಾಂಗಿ ನಿಸ್ಸಯ |
ಪರಿಯೆ ಮತ್ತೊಂದಾಗಿ ತೋರ್ಪುದು |
ಪರಿದುದಾಮೊದಲಿದ್ದ ಭಕ್ತಿಯು ನಮ್ಮೊಳಿಲೊ ನಿನಗೆ ||೮೪||

ತರುಣಿಯನು ರಕ್ಷಿಸುವುದೆಂದೊರೆ |
ದಿರಿಸಿ ಪೋಗಲು ನಿನ್ನನವನಿಪ |
ನೆರಡನೆಣಿಸುವೆಯೇನೊ ಪಾಪಿಯೆ ನಿನ್ನನುರೆ ಸುಡಲಿ ||
ಹರಣದೆರೆಯಂಗೊದವಲಾಪ |
ತ್ತರಿದರಿದು ಜೀವಿಪೆನೆ ನಾನಿ |
ನ್ನಿರಲುವೂರೆನು ತೊರೆವೆನಸುವನೆನುತ್ತೆ ಸಡಗರಿಸಿ ||೮೫||

ಸೆರಗನೆಳೆದದನಾಗ ಹೊಸೆಯುತೆ |
ಕೊರಲ ಸರಿಸಕೆ ಕೊಂಡುಪೋಗಲು |
ಭರದೆ ಲಕ್ಷ್ಮಣ ಬೇಡಬೇಡೆಂದೆರಗಿ ಪದಯುಗಕೆ ||
ದುರುಳರಸುರರು ನಿಮಗಪಾಯವ |
ನಿರದೆ ಹವಣಿಪರಾನು ಪೋಗಲು |
ತೆರಳುವೆನು ತಾನಾದುದಾಗಲೆನುತ್ತೆ ಪೊರಮಟ್ಟು ||೮೬||

ಶಿವಶಿವೇನಿಂತಾದುದೀಗಳ್ |
ಭುವನಮಾತೆಯ ಬುದ್ಧಿಗಂಧತೆ |
ಕವಿಯಿತೆನಲಿನ್ನುಳಿದ ಪೆಣ್ಗಳನೆಂದು ಫಲವೇನು ||
ನವೆದನೆಮಗಾಗೀತನೆಂಬುದ |
ಲವವುಮಂ ತಾಂ ಮನಕೆ ತಾರದೆ |
ಕಿವಿಗೆ ಸಲ್ಲದಮಾತನಾಡುತ್ತೆನ್ನನಟ್ಟಿದಳು ||೮೭||

ನಾರಿಯರುತಾಂ ಮೂರ್ಖೆಯರು ಮಿಗೆ |
ಸಾರುತಿರ್ಪುವು ನೀತಿವಚನಗ |
ಳಾರಯಿದು ನೋಡಲ್ಕೆ ಸುಡಿವುವು ಸತ್ಯವನೆ ತಾವು ||
ದೂರದೃಷ್ಟಿಯೊಳಪ್ಪ ಸುಖವೇ |
ಸಾರವೆಂಬುದನರಿಯದಾಕ್ಷಣ |
ತೋರುತಡಗುವಸುಖವೆ ಸಾರವೆನುತ್ತೆ ನಂಬುವರು ||೮೮||

ಆವನಂಶವೆ ಕಿಡಲಿ ತಮ್ಮಿಂ |
ದಾವನುರುತರಕೀರ್ತಿಯಳಿಯಲಿ |
ತಾವದೇನಪದಶೆಯನಾಸಲಿ ಪಿಡಿದಚಲವದನು ||
ಆವುದೊಂದುಮನಮುಮ ಬಗೆಯದೆ |
ಭಾವಕೇಪರಿ ತೋರ್ದುದದೆ ಸಂ |
ಭಾವಿತವು ತಾನೆಂದು ಸಾಧಿಪಯತ್ನವೆಸಗುವರು ||೮೯||

ಎಂದು ಲಕ್ಷ್ಮಣ ಮನದೆ ಚಿಂತಿಸು |
ತಂದು ಮುಂದಕೆ ನಡೆಯುತಲ್ಲಿಯೆ |
ನಿಂದು ಪಿಂದಕೆ ತಿರುಗಿ ನೋಡುತೆ ಸುಯ್ದು ನೀವರಿಸಿ ||
ಒಂದುದೆಲ್ಲವು ಬರಲಿ ತಾಂ ಪಡೆ |
ತಂದುದನು ಮತ್ತಾವನುಂಡಪ |
ನಿಂದು ತಾನಿಲ್ಲಿಹುದು ಮತವಲ್ಲೆಂದು ತೆರಳಿದನು ||೯೦||

ಅತ್ತ ಲಕ್ಷ್ಮಣನಂತು ತೆರಳ |
ಲ್ಕಿತ್ತ ರಾವಣನಿದುವೆ ಸಮಯಮೆ |
ನುತ್ತೆ ಭೂಮಿಜೆಯಿರ್ಪ ಪರ್ಣಾಗಾರದೆಡೆಗೈದಿ ||
ಚಿತ್ತಮಾವಳೊಳೀಸುದಿನ ನೆಲ |
ಸಿತ್ತೊ ತಾನಾಸುಂದರಾಂಗಿಯ |
ನೆತ್ತಿ ಮುದ್ದಿಟ್ಟೊತ್ತು ತಾಲಿಂಗಿಸುವೆನೆಂದೆನುತೆ ||೯೧||

ಉಟ್ಟ ಕಾಷಾಯಾಂಬರದ ಪಣೆ |
ಗಿಟ್ಟ ಸಿತಭಸಿತತ್ರಿಪುಂಡದ |
ದಿಟ್ಟಿಯನು ಸೆರೆಗೈವ ಭಸ್ಮವ ಧರಿಸಿದವಯವದ ||
ಜಟ್ಟಿಮುನಿಯಿವನಾವನೆಂಬವೊ |
ಲಟ್ಟಹಾಸದೆ ಜಗ್ಗುವಡಿಗಳ |
ನಿಟ್ಟು ರಾಮನ ಪಟ್ಟದರಸಿಯ ಮುಟ್ಟುವಾಸೆಯಲಿ ||೯೨||

ಬಂದು ಬಾಗಿಲ ಬಳಿಗೆ ನಿಂದವ |
ನೆಂದನಾರ್ ಗೃಹದೆ ಬಿಕ್ಷವ |
ತಂದು ನೀಡುವುದತಿಥಿಗೊಲಿದಪನಿಂದುಧರನಿಂದು ||
ಎಂದು ನುಡಿವಾ ಕಪಟವೇಷಿಯ |
ನಂದು ರಕ್ಕಸನೆಂಬುದರಿಯದೆ |
ವಂದಿಸುತ್ತರ್ಘ್ಯಾದಿಸತ್ಕಾರಗಳನಿರದೆಸಗಿ ||೯೩||

ಬಳಿಯೊಳವನತೆಯಾಗಿ ಕಾಂತನು |
ಬಳಿಯೊಳಿಲ್ಲದುದಕ್ಕೆ ಚಿಂತಿಸು |
ತಳುಕುತವನೈತರುವ ಮಾರ್ಗವ ಬಿಡದೆ ನೋಡುತಿಹ ||
ಲಲನೆಯನು ಕಾಣುತ್ತೆ ಮನುಮತ |
ನಲಗಿನಿಂ ಕಡುನೊಂದ ಹೃದಯದ |
ಖಳಶಿರೋಮಣಿಯಾಗ ಕೇಳಿದನಾ ಪತಿವ್ರತೆಯ ||೯೪||

ಚೆಲುವೆ ನೀನಾರಾರ ಕುವರಿಯು ।
ತಿಳಿಪದಾವನು ನಿನ್ನ ರಮಣನು ।
ಬಲಸಮನ್ವಿತರಸುರರಿರ್ಪೆಡೆಗೇತಕ್ಕೈದಿದಿರಿ ॥
ಜಲಜಭವಸೃಷ್ಟಿಯಲಿ ಪಲಬರ ।
ನಲಘುಲಾವಣ್ಯಾಂಗನೆಯರನು ।
ಬಳಸಿ ಬಲ್ಲೆನು ಕಾಣೆ ನಿನ್ನಯ ರೂಪಿಗಿನ್ನೆಣೆಯು ॥೯೫॥

ಮಾನಿನೀಮಣಿಯಿದನು ನಂಬೆನ ।
ಲೇನಿದಕಟವರಿಂತು ನುಡಿವರ್ ।
ಧ್ಯಾನನಿಷ್ಠರಿಗೇಕೆ ಯುವತಿಯರಂದಚಂದಗಳು ॥
ಮಾನವೇಶನದೇಕೆ ಬಾರದೆ ।
ತಾನಿನಿತ್ತುವಿಲಂಬವೆಸಗಿದ ।
ನೀನವೀನನ ಬರವು ಮನಕುರುಭಯವನಿತ್ತಪುದು ॥೯೬॥

ಕಾಲಹರಣವನೆಸಗುತಿರಲಾ ।
ಭೂಲಲಾಮರು ಬರುವರವರೀ ।
ಯಾಳಿನಾಟಕೆ ತಕ್ಕುಪಾಯವ ತಾವೆ ಹವಣಿಪರು ॥
ಕೇಳಿದೀಶನ ನುಡಿಗೆ ಮರುನುಡಿ ।
ವೇಳತೊಡಗುವೆನೀಗಳೆಂದಾ ।
ಲೋಲಲೋಚನೆಯಾಗಳೊರೆದಳು ತನ್ನ ಸಂಗತಿಯ ॥೯೭॥

ಯತಿಯೆ ಕೇಳೈ ನಾನು ಮೆರೆವಾ ।
ಮಿಥಿಲೆಯಾಣ್ಮನ ಜನಕಭೂಪನ ।
ಸುತೆಯು ತನ್ನನು ಕರೆದಪರು ಸೀತಾಭಿಧಾನದಲಿ ॥
ಕ್ಷಿತಿಪದಶರಥಸಾರ್ವಭೌಮನ ।
ಸುತನು ಸುಯಶೋನ್ವಿತನು ರಾಮನು ।
ಪತಿಯು ತನಗವನೆಸೆವಯೋಧ್ಯೆಯ ರಾಜ್ಯಭಾರವನು ॥೯೮॥

ಪಿತನ ಸತ್ಯೋದ್ಧಾರಕೋಸುಗ ।
ಜತೆಯೊಳುದಿಸಿದ ಭರತಗೊಲಿದಿ ।
ತ್ರತಿಭಯಂಕರವಿಪಿನದೊಳ್ಪದಿನಾಲ್ಕುವತ್ಸರವ ॥
ಹಿತದೆ ಕಳೆಯಲ್ಕಹಹ ಬಂದಿಹ ।
ನತಿಪರಾಕ್ರಮಶಾಲಿ ಸುಗುಣಾ ।
ನ್ವಿತನು ಸೋದರವರ್ಯಲಕ್ಷ್ಮಣಸಹಿತನೆನ್ನೊಡನೆ ॥೯೯॥

ಅರಸು ರಾಮನು ಸುಪ್ರಸಿದ್ಧನು |
ಪರಮಶಿಷ್ಟನು ಸತ್ಯಸಂಧನು |
ಸರಸನತಿಶುಚಿ ಬಹುದಯಾಪರನುರುಗುಣಾರ್ಣವನು ||
ಸುರನರೋರಗದನುಜರೊಗ್ಗಾ |
ಗೆರೆಯನೊಳ್ಪ್ರತಿಭಟಿಸಿ ನಿಲಲುಂ |
ಧುರದೊಳವರರೆಗಳಿಗೆಯುಳಿಯರು ಕೇಳು ಪೌರುಷವ ||೧೦೦||

ಧರಣಿಯೊಳಗಣ ಸಾರ್ವಭೌಮರ |
ನೆರವಿ ಸೇರಿದುದಾ ಸ್ವಯಂವರ |
ವರಮಹಾಮಂಟಪದೆ ತನ್ನನು ವರಿಸುವಾದಿನದೆ ||
ಹರನ ಧನುವನು ಸೆಳೆದು ನಾರಿಯ |
ಕೊರಲಿಗೇರಿಸಿ ಮೆರೆವ ನಾರಿಯ |
ಕೊರಲಿಗನುಗೊಳಿಸುವುದು ತಾಳಿಯನೆಂದು ಮತ್ತಿತನು ||೧೦೧||

ಸಾರಲಿರದಾ ನೃಪರು ಚಾಪಕೆ |
ದೂರದಿಂ ನಮಿಸುತ್ತೆ ಸಾಗದೆ |
ಮೋರೆಗಳ ಜೋಲಿಡುತೆ ನಿಂದಿರೆ ಕಂಡು ರಾವಣನು ||
ತೋರುವೆನು ಪೌರುಷವನೆನ್ನುತೆ |
ಮೀರಿ ಬಗ್ಗಿಸಿಯೊದೆಯಲದು ಕಾ |
ಲ್ಜಾರಿ ಬೀಳಲ್ನಗೆಯೊಳದ್ದುದು ನೆರೆದ ನೃಪನಿಕರ ||೧೦೨||

ಎದ್ದನಾಗೆನ್ನರಸ ರಾಮನು |
ಸದ್ದು ನಿಂದುದು ರಾಜಸಭೆಯೊಳು |
ಹೊದ್ದಿದನು ಶಿವಧನುವನೆಡಗೈಯಿಂದೆ ಪಿಡಿದದನು ||
ತಿದ್ದಿ ನಾರಿಯನೊತ್ತಿ ಬಾಗಿಸೆ |
ಬಿದ್ದುದಿಳೆಗೆರಡಾಗಿ ಮುರಿದಂ |
ದಿದ್ದರೆಲ್ಲರು ಪಟದ ಬೊಂಬೆಗಳಂತೆ ಬೆರಗಿನಲಿ ||೧೦೩||

ಇನಿತು ಸತ್ವದೆ ಮೆರೆವ ಕಾಂತನ |
ಘನಪರಾಕ್ರಮವರಿಯದಿಲ್ಲಿಯ |
ದನುಜರಿದಿರಿಸಿ ಹರಣವಿತ್ತಗಮೋಘಶರಗಳಿಗೆ ||
ವಿನಯಿ ನೀನಾರಿತ್ತ ಬರನೇ |
ಕೆನಗೆ ಪೇಳುವುದೆಂದು ನುಡಿಯುವ |
ವನಿತೆಯಾನುಡಿಗೇಳಿ ರಾವಣನಾಗ ನಗುತೆಂದ ||೧೦೪||

ಹೇಳತೊಡಗಲೊ ತನ್ನ ಚರಿತೆಯ |
ಕೇಳುತದ ನೀಂ ಸುಮ್ಮನಿರ್ಪೆಯ |
ಕಾಳುಮನುಜನ ರಾಮನೆಂಬನ ಕೂಟ ಬೇಡೆನೆಯ |
ಪಾಳುಮನೆಯೊಳಗುರಿವ ದೀಪದ |
ವೋಲು ನಿನ್ನೀರೂಪು ವಿಫಲವು |
ಬಾಲೆ ನಿನಗನುರೂಪನೇನಾ ಮಾನವಾಧಮನು ||೧೦೫||

ದೇವದಾನವಯಕ್ಷಕಿನ್ನರ |
ರಾವಗಂ ನೆರೆ ಸೇವಿಸುತ್ತಿಹ |
ರಾವನಂ ತಾ ನಾವನಮರಾವತಿಯನೇಳಿಸುವ ||
ಠೀವಿಯಿಂ ರಾಜಿಸುವ ಲಂಕೆಗೆ |
ದೇವನೆನಿಪನೊ ಮೂರುಲೋಕವ |
ಕಾವನಾದಿತಿಜಪತಿಯೀಪ್ರತಿಯೆಂದು ತಿಳಿ ಯುವತಿ ||೧೦೬||

ತನ್ನ ನಾಮವ ಕೇಳಿದೊಡನೆಯೆ |
ಖಿನ್ನರಪ್ಪರು ದಿಕ್ಪತಿಗಳೆನ |
ಲಿನ್ನುಳಿದಪಂದೆಗಳ ಪಾಡೇಂ ತೆಗೆ ನರಾಧಮರ ||
ಮುನ್ನ ಗೈದಿಹ ತಪದ ಫಲದಿಂ |
ದೆನ್ನರಾಣಿಯರೆನಿಸಿ ಲೋಕದ |
ಮನ್ನಣೆಗೆ ಗುರಿಯೆನಿಸಿಕೊಂಡರು ಹಲವುಕನ್ನೆಯರು ||೧೦೭||

ಇಲ್ಲ ಕೇಳ್ಸರಿ ತನ್ನ ವೈಭವ |
ಕಿಲ್ಲ ಪಾಸಟಿ·ಬಾಹುಬಲಕಿ |
ನ್ನಿಲ್ಲವಿಂದೆನ್ನಾಜ್ಞೆಗುಲ್ಲಂಘಿಸೆಯು ಮೂಜಗದೆ ||
ಬಲ್ಲತನಕೆಣೆಯಿಲ್ಲ ವಿದ್ಯೆಗ |
ಳೆಲ್ಲವಡಗಿಹುವೆನ್ನ ಮೊಗದೊಳೆ |
ನಲ್ಲಳೇ ನೀನಿನ್ನು ಮನಮೊಲಿದೆನ್ನ ವರಿಸುವುದು ||೧೦೮||

ತರಳೆಯೆನ್ನರಸಿಯರ ನಿನ್ನಯ |
ಪರಿಚರಿಯಕಿರಿಸುವೆನು ಕೇಳೆ |
ನ್ನರಮನೆಯುಮೆನ್ನೈಸಿರಿಯು ನಿನ್ನದು ವಿಚಾರಿಸಲು ||
ಹಿರಿಯಮಗನೆನಿಸಿದೊಡಮವನಿಯ |
ಸಿರಿಯನೀಯದೆ ಜನಕನಟ್ಟಲು |
ಗಿರಿವನಂಗಳ ಸೇರಿ ಜೀವಿಪ ತಿರುಕನಲೆ ರಾಮು ||೧೦೯||

ಹರಿತಮಾದಲಗುಗಳು ನಾಂಟದ |
ಪರುಷಮಾಗಿಹ ಹೃದಯವಿದು ಸುಮ |
ಶರಕೆ ಪಕ್ಕಾದುಡನು ನೋಡಲು ನಿನ್ನ ಮಹಿಮೆಕಣಾ ||
ವಿರಹದಾವಾನಲನ ಪೆರ್ಚಿಸಿ |
ಕರಗಿಸುತ್ತೆನ್ನೆದೆಯ ನೀರೆನೆ |
ಲರಲ ಸರಲಿಂಗೆಡೆಯ ಮಾಡಿದೆಯಲ್ತೆ ನೀನಿಂದು ||೧೧೦||

ಎಂದು ನುಡಿವಾ ದಶಮುಖನ ಪೂ |
ರ್ಣೇಂದುಮುಖಿ ನೋಡುತ್ತೆ ಭೀತಿಯ |
ನೊಂದಿ ಮನದೊಳು ಬೆಚ್ಚಿ ಬೆದರುತೆ ನಡುಗಿ ಕಳವಳಿಸಿ ||
ಮಂದೆಯಗಲಿದಪುಲ್ಲೆ ಬಲೆಯೊಳ |
ಗೊಂದೆ ಸಿಲುಕುತೆ ಹೊಲಬುಗಾಣದೆ |
ನೊಂದು ನಾಲ್ಕುಂದೆಸೆಯನೀಕ್ಷಿಪ ಚಂದದಿಂದಿರದೆ ||೧೧೧||

ಹಿಂದೆ ಮುಂದಿಕ್ಕೆಲವ ನೋಡಿದ |
ಳಂದು ಕಾಣದೆ ಜನದ ಸುಳಿವನು |
ನೊಂದು ವಿಧಿಯನು ಬೈದು ಚೀರ್ದಳು ಗತಿಯದೇನೆನಗೆ |
ಇಂದದೇತಕೆ ಸಂಜೆಯಾದೊಡ |
ವೊಂದಿ ಮಂದಿರಕೈದದಿರ್ಪರು |
ಸುಂದರಾಂಗರು ರಾಮಲಕ್ಷ್ಮಣರೆಂದು ಹಲುಬಿದಳು ||೧೧೨||

ಬಳಿಕ ಚಿಂತಿಸಿ ಫಲವದೇನೆಂ |
ದಳುಕದೆಂದಳು ಕೇಳು ನೀಚನೆ |
ಕುಲಸಮಾಪ್ತಿಯನೆಳಸಿ ಬಂದೆಯ ಖುಲ್ಲ ರಾವಣನೆ ||
ಅಲಘುಶೌರ್ಯನೆನುತ್ತೆ ನಿರ್ಜನ |
ನಿಳಯದಲಿ ದಂಭವನು ತೋರುವೆ |
ಗಳಿಗೆ ತಾಳಿದೊಡಾಗ ಕಾಣಲುಬಹುದು ಪೌರುಷವ ||೧೧೩||

ಆರು ತಾನೆಂಬುದನು ತಿಳಿಯದೆ |
ಮೀರಿ ತುಟಿಗಳ ಮಾತನಾಡುವೆ |
ಧೀರ ಗುಣಗಂಭೀರ ರಾಘವನರಸಿ ನಾನಹೆನು ||
ಮೇರುವಂದದೊಳಚಲನಬ್ಧಿವೊ |
ಲಾರಿಗಂ ತಡೆಯಲ್ಕಶಕ್ಯನ |
ಪಾರಶೌರ್ಯನು ರಾಮನಾತನರಾಣಿ ನಾನಹೆನು ||೧೧೪||

ಸರ್ವಲಕ್ಷಣಸಂಪದನ್ವಿತ |
ನುರ್ವಿಯುಂದದೆ ಸಹನಶಾಲಿಯ |
ಖರ್ವಭುಜಬಲನೆನಿಪ ರಘುಜನಪತ್ನಿ ನಾನಹೆನು ||
ಸರ್ವಧರ್ಮವಿನಾಶರೆನಿಸು |
ತ್ತುರ್ವಿ ಕೊರ್ವಿದ ದುಷ್ಟದನುಜರ |
ಗರ್ವಗಿರಿಪವಿದಾಶರಥಿಯಾ ಮಡದಿ ನಾನಹೆನು ||೧೧೫||

ಹರಿಯು ಭುಂಜಿಪ ವಸ್ತುವನು ಹುಲು |
ನರಿಯು ಕಾಂಕ್ಷಿಸಿ ಬದುಕಬಲ್ಲುದೆ |
ಕರಿಯಭುಜಗನ ಸರಸಕೆಳಸಿದ ನರನು ಜೀವಿಪನೆ ||
ಉರಿವಬೆಂಕಿಯನುಟ್ಟಬಟ್ಟೆಯೊ |
ಳಿರುಕಿಸುವೆನೆಂಬಾತನುಳಿವನೆ |
ಧರೆಯ ಮೇಲುಳಿದಪನೆ ರಾಮನ ಸತಿಯನೆಳಸಿದವ ||೧೧೬||

ಶರಧಿಗೆಣೆಯೇ ಕಾಲುವೆಯು ಮದ |
ಕರಿಗೆ ಸಾಟಿಯೆ ಸೂಕರನು ಮೇಣ್ |
ಗರುಡನಿಗೆ ವಾಯಸವೆವರಕನಕಕ್ಕೆ ಕಬ್ಬಿಣವೆ ||
ಸುರಪನಿದಿರೊಳು ಹುಲುಕಿರಾತನ |
ಹರಿಗೆ ಸಮವೇ ಜಂಬುಕವು ನರ |
ವರಗೆ ರಾಮಂಗಿದಿರೆ ಖಳ ನೀನೆಂದಳಾ ಸಾಧ್ವಿ ||೧೧೭||

ವ್ರತದ ಜಪತಪದತುಲಫಲಗಳು |
ಪತಿಯ ಸೇವಾಮಾತ್ರದಿಂದಮೆ |
ಸತಿಗೆ ದೊರೆವುವು ಮೇಲೆ ಸದ್ಗತಿ ಕರತಲಾಮಲಕ ||
ಕ್ಷಿತಿಯೊಳಿದನಾ ಚರಿಸುತಿರ್ಪನ |
ಗಿತರವಿರ್ಪುದೆ ರಾಮನಲ್ಲದೆ |
ಗತಿ ಮನೋವಾಕ್ಕಾಯ ಸಾಕ್ಷ್ಯದೊಳವನ ನಂಬಿಹೆನು ||೧೧೮||

ಸಿರಿಯ ಸೊಬಗನು ಪೋಲ್ವ ಸೊಬಗೈ |
ಸಿರಿಯು ಧನದನ ಭಾಗ್ಯಕಿಮ್ಮಡಿ |
ಕರೆದೊಡಾಗಳೆ ಸಾಸಿರಾಳ್ಗಳು ಹೈಹಸಾದೆನುತೆ ||
ಕರವ ಜೋಡಿಸಿ ಸೇವಿಪುದುಮೇಂ |
ಹರಣದೆರೆಯನ ಚರಣಸೇವಾ |
ಪರಮಸಾಮ್ರಾಜ್ಯಾಭಿಷೇಕೋತ್ಸವ ಕೆಸರಿವಹುವೆ ||೧೧೯||

ಶೀಲವತಿಯಹ ಸತಿಯು ನಿಜಪತಿ |
ಯೊಳಗದೆ ದೇಹವನು ತೇಯುತೆ |
ಕಾಲಕಾಲದೊಳೊಪ್ಪುವುಪಚಾರಗಳಸೊಲಿದೆಸಗಿ ||
ಜಾಲಗೆಯ್ಯದೆ ಸಕಲಕಾರ್ಯದೊ |
ಳಾಳಿಯಂದದೆ ನಡೆದು ಸಾಧ್ವೀ |
ಮೌಳಿಯೆನಿಸುತ್ತಿಹಪರಂಗಳ ಸೂರೆಗೊಂಡಪಳು ||೧೨೦||

ಭಂಡದನುಜಾಧಮನೆ ನಿನ್ನಯ |
ಗುಂಡಿಗೆಯನಿರದಿರಿವ ಸುಭಟರ |
ಗಂಡ ರಿಪುಭೇರುಂಡ ರಘುಜೋದ್ದಂಡನೈತಹನು ||
ದಿಂಡುದರಿಯುತೆ ನಿನ್ನ ಕೊಬ್ಬಿದ |
ಖಂಡವನು ನೆರೆ ಕಿತ್ತು ರಕುತವ |
ಕೊಂಡು ಭೂತಂಗಳನು ತಣಿಪುವ ಭೂಪನೈತಹನು ||೧೨೧||

ದುರುಳ ನಿನ್ನೊಡಹುಟ್ಟಿದವಳಿಗೆ |
ಮರೆಯದಂದದ ಗುರುತನೊಡರಿಸಿ |
ಖರನ ಸಂಹರಿಸಿರ್ಪ ದಾನವಕಾಲನೈತಹನು ||
ಧರೆಯ ಭಾರವ ತಗ್ಗಿಸುವೆನೆಂ |
ದುರುವಭಾಷೆಯನಿತ್ತು ಮುನಿಜನ |
ಕಿರದೆ ಕಾರ್ಯೋದ್ಯುಕ್ತನಾಗಿಹ ದೇವನೈತಹನು ||೧೨೨||

ಪೆರರ ಸತಿಯರಿಗಳುಪಿದಧಮನ |
ಭರದಿನೊಯ್ವರು ಯಮನ ಕಿಂಕರ |
ರುರುಳಿಸುವರಾಘೋರಕುಂಭೀಪಾಕನರಕದೊಳು ||
ಅರುಚಲಯ್ಯೋ ಎಂಬರಿಲ್ಲವು |
ಸರಿಯಲತ್ತಿತ್ತಿರಿದು ಶೂಲದೊ |
ಳುರಿಗೆ ನೂಕುವರರಿಯ ನೀನಿದನೆಂದಳಿಂದುಮುಖಿ ||೧೨೩||

ನುಡಿಯುತಿಂತವನಿಜೆಯು ಮತ್ತೊಡ |
ನೊಡೆಯನೈತಹ ದೆಸೆಯ ನೋಡುತೆ |
ಸಡಿಲವಾಗಲು ಮನದ ಬಯಕೆಯು ಕೂಡೆ ಕಡುಬೆದರಿ ||
ಮಡದಿಮಣಿ ಕಂಗಿಡುತೆ ಬಿಸುಸು |
ಯ್ದಡೆಯ ಕಂಭವನೊರಗೆ ನಿಟ್ಟಿಸಿ |
ತಡೆದೊಡೆನ್ನಯ ಕಾರ್ಯ ಕಿಡುವುದೆನುತ್ತೆ ರಾವಣನು ||೧೨೪||

ಎಲೆಗೆ ನಿನ್ನನು ವರಿಸುವುದಕಾ |
ಹಲವುಜೋಹವ ಧರಿಸಿ ಬಂದವ |
ರೊಳಗದಾವನೊ ನನ್ನ ವೇಷವನೊಂದಿಯೈತಂದು ||
ಫಲವನೊಂದದೆ ಪೋದವೂತ್ರದೆ |
ನೆಲದೊಳಗ್ಗಳನೆನಿಪ ರಾವಣ |
ನಳುಕಿದನು ಧನುವೆತ್ತಲೆಂಬೆಯ ನೋಡು ನೀನವನ ||೧೨೫||

ಹತ್ತುತಲೆಗಳು ತೋಳ್ಗಳಿಪ್ಪ |
ತ್ತೆತ್ತಣದ್ಭುತಕಾಯವೀತನ |
ನೆತ್ತಿಗೆಣ್ಣೆಯನೆತ್ತಣಿಂ ತಂದೊತ್ತಿದಳೊ ತಾಯಿ ||
ಎತ್ತಿದಾ ತೋಳ್ಬೀಳದಾಗದೆ |
ತೊತ್ತುಗಳ ಸಂದಣಿಯು ದಣಿಯದೆ |
ಹೆತ್ತವರಿಗುಬ್ಬಸವನೀಯದೆ ಬಳೆದುದೇ ಶಿಶುವು ||೧೨೬||

ಎಂದು ನೋಡಿದ ಜನದ ಕಣ್ಮನ |
ಕೊಂದಿಸುತೆ ವಿಸ್ಮಯವ ಕಾರ್ಮುಗಿ |
ಲೊಂದದೇಕಿಳೆಗಿಳಿದುದೆಂಬಂತೆಸೆಯುತಿದಿರಿನಲಿ ||
ಸುಂದರಾಂಗಿಯನೊಲಿಸಲಿದು ತ |
ಕ್ಕಂದವಾಗಿಹುದೆಂದು ಗರ್ವಿಸಿ |
ಮಂದಮತಿಯೊಲವಿಂದೆ ನಿಂದಿರೆ ಸೀತೆ ಬೆದರಿದಳು ||೧೨೭||

ಮುಗುದೆ ನೋಡೀಗೆನ್ನ ಚೆಲುವನು |
ಬಗೆಗಿದೊಪ್ಪಿತೆ ಪೇಳು ನಿಜವನು |
ಜೊಗಸೆಗಣ್ಗಳ ತೃಷೆಯ ಕಳೆದುಕೊ ನೋಡಿ ಮನ ತಣಿಯೆ ||
ಪುಗುತುಮಳಕಾವತಿಯ ಯಕ್ಷರ |
ಹಗರಣಂಗೊಳಿಸುತೆ ಕುಬೇರನ |
ಗಗನಯಾನವನಾವಿಮಾನವ ತಂದಭಟನಾನೆ ||೧೨೮||

ಹಲವುಪರಿಯೊಳು ಶಿವನ ಭಜಿಸು |
ತ್ತೊಲಿಯದಿರಲವನಾಗ ಕೆರಳು |
ತ್ತಲುಗಿಸಿದೆನಾರಜತಗಿರಿಯನು ತೋಳ ಬಲುಹಿಂದೆ ||
ಅಳುಕಿದಳು ಪಾರ್ವತಿಯು ಬಳಿಕಾ |
ನೆಳಸಿದಿಷ್ಟವನೆಲ್ಲ ಪಶುಪತಿ |
ಸಲಿಸಿದನು ನೀಂ ಕೇಳ್ದದಿಲ್ಲವೆ ಎಂದು ಖಲನೊರೆದು ||೧೨೯||

ಧರೆಯು ಬಿರಿದತ್ತೆಂಬವೋಲೊದೆ |
ದಿರದೆ ಝುಂಕಿಸಿ ಕರವನೀಡುತೆ |
ಧರಣಿಜೆಯ ಸಿರಿಮುಡಿಗೆ ಹಾಯ್ದನು ಘೋರದಾನವನು ||
ಸುರರು ನಭದಲಿ ಬೇಡಬೇಡೆಂ |
ದಿರದೆ ಕೂಗಲು ಗಣನೆಗೆಯ್ಯದೆ |
ಪರಿಮಳದೆ ಮಗಮಗಿಪ ಜಡೆಯನು ಬಿಡದೆ ತುಡುಕಿದನು ||೧೩೦||

ಭೂಮಿದೇವಿಯ ಗರ್ಭಕೋಶದೊ |
ಳೀಮಹಾಸತಿಯಿರ್ದ ಕಾಲದೆ |
ಕೋಮಲತೆವಡೆದಿವಳ ಕಚಭರಕಿಲ್ಲದಿಹ ಕೊರತೆ ||
ಕಾಮುಕನ ಕಡುಮೂರ್ಖದನುಜನ |
ವಾಮಕರದಂಕಿನಲಿ ನೊಂದುದೆ |
ಹಾಮಹಾದೇವೆನುತೆ ಚೀರ್ದುದು ಮೇಲೆ ಸುರನಿಕರ ||೧೩೧||

ಜಡಿದು ಮುಡಿಯನು ಸೆಳೆದು ಕೈನೆಯೆ |
ನಡೆ ಭರದೆ ನಡೆಯೆಂದು ಗರ್ಜಿಸು |
ತೊಡನೆ ತಂದನು ಕುಕ್ಕರಿಸಿದನು ತನ್ನ ರಥದೊಳಗೆ ||
ಒಡಲ ಕೊಂಕಿಸ ನಡುಗುವಂಗದ |
ದಡದಡಿಸುತಿಹ ಮನದ ಮಾನಿನಿ |
ಕಡುಬಡವೆಯಾತೆರಪಿಸಿದ್ದಳು ರಾಮರಾಮೆನುತೆ ||೧೩೨||

ಮೂರನೆಯಸಂಧಿ ಸಂಪೂರ್ಣಂ.

ನಾಲ್ಕನೆಯಸಂಧಿ.

ಸೂ|| ಭರದೆ ತಡೆದ ಜಟಾಯುವನು ಸಲೆ |
ತರಿದು ರಾವಣನೈದಿ ಲಂಕೆಯೊ |
ಳಿರಿಸಿದನು ಸೀತೆಯನಶೋಕೊದ್ಯಾನಮಧ್ಯದಲಿ ||

ಎತ್ತಲಿರ್ಪೆಯೊ ರಮಣ ನೀನಿಂ |
ದೆತ್ತಲಿರ್ಪೈ ಲಕ್ಷ್ಮಣನೆ ಖಳ |
ನಿತ್ತಲೊಯ್ವನು ಪಿಡಿದು ನನ್ನನು ನೀವದೆಲ್ಲಿಹಿರಿ ||
ಒತ್ತಿದುದು ಮುಳ್ಳೆನ್ನ ಚರಣಕೆ |
ನುತ್ತುಮಾನಿರಲೆನಿತೊ ಮರುಗುತೆ |
ಸುತ್ತಿಕೊಂಡುಪಚಾರವೆಸಗುವ ಹಿತರದೆಲ್ಲಿಹಿರಿ ||೧||

ಹೆತ್ತ ತಾಯ್ತಂದೆಗಳು ಸಟೆ ನೀ |
ನುತ್ತಮೋತ್ತಮನೆನುತೆ ನಿನ್ನನೆ |
ಹತ್ತಿಕೊಂಡಿಹಳಲ್ಲುಪೇಕ್ಷೆಯೆ ದೇವ ರಾಘವನೇ ||
ಮಿತ್ತುವಿನ ಬಾಯ್ದುತ್ತೆನೆಪ್ಪೀ |
ಮತ್ತಕಾಶಿನಿಯನುರೆ ಬಿಡಿಸಲು |
ಮತ್ತದಾವಂಗಳವು ಪುರುಷೋತ್ತಮನೆ ನೀಂ ಬಿಡಿಸಾ ||೨||

ಕೊಂಡು ಪೋಪನು ಲಂಕೆಗೆನ್ನನು |
ಚಂಡದನುಜನು ರಾವಣನು ಕಡಿ |
ಕಂಡವೆಸಗಿಂದಿವನನೆನ್ನನದೇಕೆ ಬಿಡಿಸದಿಹೆ ||
ಭಂಡನಿವನೇಂ ನಿನಗಸಾಧ್ಯನೆ |
ಖಂಡಪರಶುವಿನಾ ಮಹಾಧನು |
ಗಂಡುಗಿಡದೇ ನಿನ್ನ ವಿಕ್ರಮಚಂಡದೋರ್ಬಲಕೆ ||೩||

ತಂದೆತಾಯ್ಗಳನುಜ್ಞೆವಡೆಯದೆ |
ಸಂದಮಾವನ ಬುದ್ಧಿಗೇಳದೆ |
ಚಂದವಲ್ಲೆಂಬತ್ತೆನಾದಿನಿಯರನು ತಾಂ ಮೀರಿ ||
ಬಂಧುಗಳ ಕಡೆಗಣಿಸಿ ಬೇಡಕ |
ಟೆಂದ ಪೌರರನೆಲ್ಲ ಧಿಕ್ಕರಿ |
ಸಿಂದು ನಿನ್ನನೆ ನಂಬಿ ಬಂದೀತರಳೆಗೀವಿಧಿಯೇ ||೪||

ಅಂದು ನೀನೆಂದುದನು ಕೇಳದೆ |
ಬಂದುದಕ್ಕೆನಗಿನಿತು ಶಿಕ್ಷೆಯೆ |
ಕುಂದು ನಿನ್ನಯ ಕುಲಕಿದೆಂಬುದನಿಂದು ಮರೆದಪೆಯಾ ||
ಸುಂದರಾಂಗನೆ ನಿನ್ನ ಸುದತಿಯು |
ನೊಂದಳೈ ಬಲು ಬೆಂದಳೈ ನೀಂ |
ಬಂದು ಬಿಡಿಸಾ ಸೆರೆಯನೆಂದೇಣಾಕ್ಷಿಯೊರಲಿದಳು || ||೫||

ಬಾರೊ ಬಾರೋ ನೀರ ನಿನ್ನೀ |
ನಾರಿಯನು ಬಲುಹಿಂದೆ ದುರುಳನು |
ಚೋರನಂದದೊಳೆಳೆದುಕೊಂಡೊಯ್ದಪನು ಪರಿಭವಿಸಿ ||
ಮೀರಿ ಭೂಮಿಯ ನಿವನು ಕಡಲನು |
ಸೇರುವನಿತರೊಳೆನ್ನ ಬಿಡಿಸೈ |
ಸಾರಸಾಕ್ಷನೆ ಬಳಿಕ ತೃಣವೇ ಬೆಟ್ಟವಪ್ಪುದಲಾ ||೬||

ರಾಮ ರಕ್ಷಿಸು ಸಕಲಜಗದಧಿ |
ರಾಮ ರಕ್ಷಿಸು ವೈರಿವಂಶವಿ |
ರಾಮ ರಕ್ಷಿಸು ರಕ್ಷಿಸಕಟಾ ನೀನನಾಥೆಯನು ||
ಪ್ರೇಮದಿಂದೊಡಗೂಡಿ ನಿನ್ನಯ |
ನಾಮಮಾತ್ರವ ಭಜಿಸಲದು ಸು |
ತ್ರಾಮಪದವಿಯ ಸೂರೆಗುಡುವುದೆನಿಪ್ಪ ನುಡಿ ಪುಸಿಯೆ ||೭||

ದೇವ ನಿನ್ನಯ ಪಾದಪೂಜೆಯೆ |
ಭಾವಿಸಲ್ತನಗಖಿಲಮೆಂದೇ |
ಸೇವಿಸುತ್ತಿಹಮಡದಿಯೊಳಗಿಂತೇಕೆ ಖತಿ ನಿನಗೆ ||
ಜೀವಿತೇಶನೆ ಬೇಗಸೈದೀ |
ಗಾವಿಲನ ಕೈಯಿಂದೆ ಬಿಡಿಸೈ |
ಕಾವನೇ ನೀಂ ಕಾಯದಿರಲಿನ್ನಾರು ಕಾವವರು ||೮||

ಎಲೆಲೆ ವನದಭಿಮಾನದೇವತೆ |
ಗಳಿರ ನಿಮಗಿದೊ ಕರವ ಮುಗಿವೆನು |
ಬಲುಹಿನಿಂ ರಾವಣನು ನಿನ್ನಯ ಮಡದಿ ಸೀತೆಯನು ||
ಪಲತೆರದೆ ಬೇಡಿದೊಡಮೋವದೆ |
ಕಳವಿನಿಂ ಸೆಳೆದೊಯ್ದನೆಂದಾ |
ಯಿಳೆಯರಮನಂಗೊರೆವುದೌ ನೀಂವಲ್ತೆ ಗತಿ ತನಗೆ ||೯||

ವನದ ವೃಕ್ಷಂಗಳಿರ ನೀವೆ |
ನ್ನಿನಿಯನೈತರಲವನೊಳೊರೆವುದು |
ತನಗೆ ಸಾಜಮೆನಿಪ್ಪ ಶಕ್ತಿಯದಿರ್ಪಪರಿಯಂತ ||
ದನುಜನಿಗೆ ವಶೆಯಾಗೆನೆಂದದು |
ಕೊನೆಯನೈದುವವೇಳೆ ಸಮನಿಸೆ |
ತನುವನೀಗುವೆನೆಂದುಮರಿಕೆಯಗೈದಳಿವಳೆಂದು ||೧೦||

ಅನಿತರೊಳು ನೀಂ ಬಂದು ಬಿಡಿಸುವು |
ದೆಣಿಸಬಾಗದು ಬೇರೆಪರಿಯನು |
ಜನಕರಾಜರ್ಷಿಯೊಳು ಜನಿಸಿದಳೆನಿಸಿಕೊಳುತಿಹೆನು ||
ಮನದೆ ಸಂಶಯಕೆಡೆಯನಿತ್ತೊಡೆ |
ಮನುಕುಲೇಶನೆ ಸತ್ವಗುಂದು |
ತ್ತಣುವ ಘನವಾಗೆಣಿಸಿ ಮಾಳ್ಪುದನುಳಿವೆ ಬೇಸರದೆ ||೧೧||

ತನ್ನ ಪಾತಿವ್ರತ್ಯವಹ್ನಿಗೆ |
ನಿನ್ನಸಾಹಸಮೆಂಬ ಮರುತನ |
ನಿನ್ನು ಸೇರಿಸಿ ದಹಿಸು ದಾನವವಂಶಕಾನನವ |
ಗನ್ನಗತಕವಿದಲ್ಲ ನಂಬುವು |
ದೆನ್ನ ನುಡಿಗಳನೆಂದು ಸೀತೆಯು |
ಬಿನ್ನವಿಸಿದಳು ಕರವ ಜೋಡಿಸುತೆನ್ನಿ ಮತ್ಪತಿಗೆ ||೧೨||

ಇಂತು ಹಲವಂದದಲಿ ಹಲುಬುತೆ |
ಕಾಂತನಾಮಸ್ಮರಣೆಮಾಡುವ |
ಕಾಂತೆಯನು ಕೊಂಡಂತರಿಕ್ಷದೆ ಪೋಪ ರಾವಣನ ||
ಮುಂತೆ ವೃಕ್ಷದ ತುದಿಯೊಳಿದ್ದು ಸ |
ಮಂತು ನಿಟ್ಟಿಸುತಾ ಜಟಾಯುವು |
ಚಿಂತೆಯೊಂದುತ್ತಾಗ ತಡೆದನು ನುಡಿಸಿದನು ಖಳನ ||೧೩||

ಏನಿದಕ್ಕಟ ವಿಶ್ರವಸ್ಸಿನ |
ಸೂನುವೇ ಕಥೆಗಳೊಳು ನಿನ್ನನು |
ದಾನಿ ಬಹುಧರ್ಮಾತ್ಮನೆಂದೊರೆವುದನು ಕೇಳ್ದಿಹೆನು ||
ದಾನವೇಶ್ವರನೆನಿಸುತೀಪರಿ !
ಮಾನಹೀನನವೋಲಕಾರ್ಯವಿ |
ದೇನನೆಸಗಿದೆ ಮೂರುಲೋಕದ ವೀರಗಿದು ಸರಿಯೆ ||೧೪||

ಎಲವೊ ನೀನಿಂದಿವಳನಾರೆಂ |
ದೊಲಿಸಲಿಚ್ಛೈಸಿಂತು ಕಪಟವ |
ಬಳಸಿಯೀಪರಿ ಪಿಡಿಯುತೊಯ್ವ್ಯ ನಿನಗೆ ತೀರುವುದೇ ||
ಹಲವುಲೋಕವ ಸೃಜಿಸಿ ಸಲಹುತೆ |
ವಿಲಯವೆಸಗುವನಾದಿಪುರುಷನ !
ಲಲನೆಯೊಲಿವಳೆ ಪಾಪಿ ತೆಗೆ ನಿನಗೇಕೆ ದುರ್ವ್ಯಸನ ||೧೫||

ಅರಸನೆನಿಪವನಾತ್ಮಧರ್ಮಕೆ |
ಕೊರತೆ ಬಾರದ ತೆರದೆ ನಡೆವುದು |
ಪರಸತಿಯರನು ನಿಜಸಹೋದರಿಯರವೊಲಾದರಿಸಿ ||
ಧರೆಯ ಪಾಲಿಪುದಿದುವೆ ನೀತಿಯು |
ಮರೆತು ನೀನಿದನಿಂತು ಕಾಮುಕ |
ರೆರೆಯನಾಗೀಲೋಕಮಾತೆಯೊಳೆರಡನೆಣಿಸಿದೆಯಾ ||೧೬||

ನಿಲಿಸು ರಥವನು ತಾಯನಿಳಿಸೆಲೆ |
ಖಲನೆ ನಾನಾರೆಂಬುದರಿಯೆಯ |
ಬಲುಮೆಯೊಂದಿದ ಗೃಧ್ರರಾಜನು ನಾಂ ಜಟಾಯುಕಣಾ ||
ಕಲಕುವೆನು ನಿನ್ನೊಡಲ ರಕುತವ |
ನೆಲವೊ ನನಗಿದಿರಾಗು ನಿನ್ನಯ |
ಹಲವು ತಲೆಗಳಿಗಾನು ಬೆದರೆನು ನೋಡು ತನ್ನದಟ ||೧೭||

ಎನುತೆ ಪಾರುತೆ ನಭಕೆ ತನಗು |
ಳ್ಳನಿತು ಶಕ್ತಿಯನಾಂತು ರಥವನು |
ಹಣಿದವಾಡುವೆನೆನುತೆ ರೆಕ್ಕೆಯೊಳೆರಗುತಪ್ಪಳಿಸೆ ||
ಝಣಝಣಧ್ವನಿಗೈದು ಘಂಟೆಗ |
ಳೆಣಿಸಲಸದಳವಾಗಲುದುರಿದು |
ವಣಿಯರಂ ಕೆಟ್ಟಳಕವಾದುವು ರಥದ ಕೀಲುಗಳು ||೧೮||

ಜೋತ ತೊಂಡೆಯ ಪಕ್ಷಿ ವಾಯಸ |
ವಾತುರದೊಳೆರಗುತ್ತೆ ಶಬರನ |
ನೂತನದ ಒಲೆಗಿರದೆ ಸಿಲುಕಿದ ತೆರದೊಳೀದಿನದೆ ||
ಸೀತೆಯನ ಸಲೆ ಬಯಸಿ ನನ್ನೀ |
ಘಾತಕೆಡೆಯಾಗೀಗಳೆರಗುವ |
ರೀತಿಯೊದವಿತು ನಿನಗೆ ಕೊಳ್ಳೆಂದೆನುತೆ ಕೊಕ್ಕಿನಲಿ ||೧೯||

ಕುಕ್ಕಿಯಾತನ ತನುವ ರಕುತವ |
ದುಕ್ಕುವಂದದೆ ಬಗಿದು ಕಾಲ್ಗಳಿ |
ನಿಕ್ಕಿ ಸೂತನ ಕೊಂದು ರಥವಾಜಿಗಳ ಖಂಡಿಸಲು ||
ಪಕ್ಕಿಗೇನೀಶೌರ್ಯವೆನ್ನು |
ತ್ತಕ್ಕಜಂಗೊಂಡಾಗ ಖಳ ದು |
ಮ್ಮಿಕ್ಕಿ ಧಾರಿಣಿಗಿರದೆ ಧನುವಿಂಗಸಮುಜಾಣವನು ||೨೦||

ಅಳವಡಿಸುತೆಸೆಯಲ್ಕೆ ತಾನಂ |
ದಳುಕದಾಗಳೆ ಬೀಸಿ ರೆಕ್ಕೆಯ |
ಕೆಲಕೆ ಜಾರಿಸಿ ತನ್ನ ಮುಂದೆಡೆ ಬಂದ ಬಾಣವನು ||
ತಲೆಯ ಮೇಲಣ ಮಕುಟವೆಲ್ಲವು |
ನೆಲಕೆ ಬೀಳ್ವವೊಲೊದೆದು ಬೆನ್ನೊಳು |
ಕುಳಿತು ಮಂಡೆಯನಿರದೆ ಕೊಕ್ಕಿಂ ಕುಕ್ಕಿ ಘಾತಿಸಲು ||೨೧||

ಒದರಿದನು ಬೆನ್ನಿಂದೆ ಪಕ್ಷಿಯ |
ನಿದನುಪೇಕ್ಷಿಸಲಾಗದೆನುತವೆ |
ಬದಿಯ ಕಡುಗವ ಸೆಳೆದು ರೆಕ್ಕೆಗಳೆರಡನುರೆ ತರಿಯೆ ||
ಪದುಮನಾಭನೆ ರಾಮ ಸಲಹೆಂ |
ದೊದರುತುರುಳಿದನಾ ಜಟಾಯುವು |
ಬೆದರುತಂಗನೆ ಚೀರ್ದು ಬೈದಳು ಸಿಜವುರಾಕ್ಕೃತವ ||೨೨||

ಏಸಿದಕಟೀಗೆನ್ನದೃಷ್ಟವು |
ಹೀನಭಾಗ್ಯೆಯನಿಂದು ರಕ್ಷಿಸ |
ಲೀನಭಸ್ಸ್ಥಳಗಾಮಿ ಯತ್ನಿಸಿಯಸುವ ನೀಗುತಿದೆ ||
ಪ್ರಾಣನಾಥನಸುಳಿದ ಸುದತಿಗೆ |
ಹಾನಿಯಲ್ಲದೆ ಲೇಸು ಒಪ್ಪುದೆ |
ದೀನೆಯಾದೆನಗೇನುಗತಿಯೆಂದಬಲೆಯೊರಲಿದಳು ||೨೩||

ಪರಮಮಿತ್ರನೆ ಪಕ್ಷಿರಾಜನೆ |
ದುರಿತವತಿಗೆನಗಾಗಿ ನೀನೀ |
ಪರಿಯ ಕಷ್ಟಕೆ ಗುರಿಯೆನಿಸಿದೈ ಮರೆಯೆ ನಾನಿದನು ||
ಪರಮಪುರುಷನು ರಾಮಚಂದ್ರನು |
ಬರುವನಿಲ್ಲಿಗೆ ಮರೆಯದೆಲ್ಲವ |
ನರುಹಿ ನೀನವನೊಳ್ಸಾವನೆ ಮೋಕ್ಷಸುಖಿಯಾಗು ||೨೪||

ಎನುತೆ ಪೇಳ್ವನಿತರೊಳು ಖಳನಾ |
ವನಿತೆಯನು ಮುಡಿವಿಡಿದು ಮೇಲೆ |
ತ್ತನಿಲವೇಗದೊಳಡರಿ ನಭವನು ಮುಂದೆ ಪೋಗುತಿರೆ ||
ಅನುಪಮಾನಶರೀರನಿಂ ಸಲೆ |
ಘನತರಾದ್ರಿಯ ಕೋಡುಗಲ್ಗಳ |
ನನುಕರಿಪ ತೆರದಿಂದೆ ಕುಳಿತಿಹ ಕಪಿಗಳೈವರನು ||೨೫||

ಸುದತಿಯೀಕ್ಷಿಸಿ ತನ್ನ ಮೇಲಣ |
ಹೊದಿಕೆಯಂಚನು ಗೀಳಿಯದರೊಳು |
ಹುದುಗಿಸುತೆ ತೊಡವುಗಳನಾಗಳೆ ಕಟ್ಟಿಪೊಟ್ಟಳನ ||
ಸದುಮರಿರ ನೀವಿದನು ಕೊಳ್ವುದು |
ಹೃದಯವಲ್ಲಭ ರಾಮನೈತರೆ |
ಮುದದೊಳರುಹುವುದೆನ್ನವಸ್ಥೆಯನೆನ್ನುತವರೆಡೆಗೆ ||೨೬||

ಎಸೆಯಲದನವರಾಂತು ಕಡುಬಿ |
ಕ್ಕಸವನಾಸುತ್ತೆವೆಯನಿಕ್ಕದೆ |
ಯಸುರಚೇಷ್ಟೆಯ ನೋಡುತಿರ್ದರು ಮರುಗಿ ಮನದೊಳಗೆ ||
ಶಶಿವದನೆಯಿನ್ನೇನು ಮತ್ಕರ |
ವಶೆಯೆ ಆದಂತಾಯ್ತೆನುತ್ತಸ |
ವಸದೆ ಪೋಗುತೆ ಕಾಣದಾದನು ದನುಜಪತಿಯಿದನು ||೨೬||

ತೆರಳುತೀಪರಿಯಿಂದೆ ಕೆಳಗಡೆ |
ಮೆರೆವ ಪಂಪಾಸರವ ಲಂಘಿಸಿ |
ಪರಿಪರಿಯ ವನಪರ್ವತಂಗಳನೆಲ್ಲ ಪಿಂದುಳುಹಿ ||
ಧರೆಯಭಾಗವನೆಲ್ಲ ಕಳೆದುರೆ |
ತರತರದೊಳೊಪ್ಪುತಿಹ ತೆರೆಗಳಿ |
ನುರುಭಯಂಕರವಾಗಿ ಘೋರ್ಗರೆಯುತ್ತೆ ರಂಜಿಸುವ ||೨೮||

ಶರಧಿಯನು ಕಂಡದರ ಮಧ್ಯದೆ |
ಮೆರೆವ ಕೋಟೆಗಳಿಂದೆ ಸುರನರ |
ವರರಿಗಸದಳ ಪುಗುವೊಡೆಂಬವೊಲೆಸೆವ ಲಂಕೆಯನು |
ಹರಿಸದಿಂದೊಳವೊಕ್ಕು ಲಕ್ಷ್ಮೀ |
ಸುರುಚಿರಾಮಳಮುಖವು ದಿಟಮಿದು |
ಕೊರತೆಯೇನಿದಕೆಂಬವೋಲ್ಮೆರೆವರಮನೆಯುಸ್ಸೈದಿ ||೨೯||

ನಿರುಪಮಾಂತಃಪುರವ ಸೇರ್ದಂ |
ತರದ ಭೂತಾಕೃತಿಯ ವದನದ |
ಪರಿಚರಿಯದಸುರಿಯರ ಸೀತೆಯಸೇವೆಗನುಗೊಳಿಸಿ ||
ಸರಸಿಜಾನನೆಯಾಣತಿಯನುರೆ |
ಸಿರದೊಳಾನುತೆ ನೀವು ನಡೆವುದು |
ಕೊರತೆಯಿನಿಸುಂ ಮನಕೆ ತೋರದ ತೆರವೆ ಸೇವಿಪುದು ||೩೦||

ತನಗಿವಳನೊಡಗೂಡಿಸುವುದೇಂ |
ಘನದ ಕಾರ್ಯವು ನಿಮಗದೆನಿಜರೊ |
ವನಿತೆಯರ್ಕಳನೊಲಿಸಿ ನೆರಪಿದ ಚದುರೆಯರು ನೀವು ||
ಎನುತೆ ನೇಮಿಸಿ ಸಭೆಗೆ ನಡೆತಂ |
ದನಿತು ತನ್ನಳಿಗಜ್ಜಗಳುಮಂ |
ಮನದೆ ಹೇಸದೆ ಸಚಿವಮುಖ್ಯರ್ಗೊರೆದು ತವಕದಲಿ ||೩೧||

ಬರಿಸಿ ತನಗತ್ಯಾಪ್ತರೆನಿಸುವ |
ದುರುಳರಕ್ಕಸರೆಂಟುಮಂದಿಯ |
ನೊರೆದನವರೊಡನಾ ಜನಸ್ಥಾನದೊಳು ರಾಘವನು ||
ಚರಿಸುವನು ಸೋದರನ ಬೆರಸುತೆ |
ಮರೆಸಿ ನೀವಲ್ಲಿರುತೆ ನಡೆವಾ |
ಚರಿಯವೆಲ್ಲವನೆನಗೆ ಲೇಖನಮುಖದೆ ತಿಳಿಯಿಸುತೆ ||೩೨||

ಸಮಯವೀಕ್ಷಿಸುತವರ ಕೊಲುವಾ |
ಕ್ರಮವ ಚಿಂತಿಸುತಿರ್ಪುದೆಂದೊರೆ |
ದಮಿತಮಾದುಡುಗೊರೆಯನಿತ್ತವರುಗಳ ಬೀಳ್ಕೊಟ್ಟು ||
ಸುಮಶರಂಗಳು ನಾಂಟಿ ಹೃದಯದೊ |
ಳಮಮ ಕಡುಬೆಮೆಗೊಂಡ ಕುಮತಿಯು |
ಕಮಲಲೋಚನೆಯೆಡೆಗೆ ಬಂದನು ನುಡಿಸಿದನು ಸತಿಯ ||೩೩||

ಎಲೆಗೆ ಸೀತಾಲಲನೆ ನಿನ್ನಯ |
ಚೆಲುವಿಗೆನ್ನಸು ಸೂರೆವೋದುದು |
ಸಲೆ ಕಟಾಕ್ಷವ ಬೀರಿನನ್ನನು ಕರುಣದಿಂದುಳುಹು ||
ಬಲವಿಹೀನನಸಂಗನಿಂದೀ |
ಬಲನಿಧಾನನೆನಿಪ್ಪ ದಶಶಿರ |
ಗಳಿವು ತಾನೆನೆ ಜಗವು ನಗುವುದು ಮಾಣಿಸಿದನೊಲಿದು ||೩೪||

ಕ್ಷಿತಿಜೆ ನಿನ್ನಯ ಚರಣಕಮಲ |
ಕ್ಕತಿಶಯವೆನಿಪ್ಪೆನ್ನ ಮಕುಟವ |
ನತುಳಪಾದುಕೆಗೈದು ಪೂಜಿಪೆನನುದಿನದೊಳದನು ||
ಅತನುಹತಗೆನಗಿಂದು ಸುಖಸಂ |
ತತಿಯನೊದವಿಪ ನಿನ್ನಸಂಗವ |
ಹಿತದೆ ಕರುಣಿಸಿ ಕಾಯಬೇಕೆಂದೆರಗಿದನು ಪದಕೆ ||೩೫||

ಕೇಳುತಿರ್ದಳು ಸುದತಿಯಾತನ |
ಕೀಳುನುಡಿಗಳ ಕೆರಳಿದಳು ಛಢ |
ಖೂಳ ನೀನಿಂತೇಕೆ ಗಳಹುವೆ ಸಾವ ಲೆಕ್ಕಿಸದೆ ||
ಸಾಲುತಲೆಗಳು ನಿನ್ನವಿವು ಭೂ |
ಪಾಲರಾಮನ ಬಾಣವಹ್ನಿ |
ಜ್ವಾಲೆಗಾಹುತಿಯೆನಿಸದುಳಿವುವೆ ಕಾಣೆ ನೀನಿದನು ||೩೬||

ಎಂದು ನುಡಿವಾಸತಿಯ ಬಿರುನುಡಿ |
ಗಂದು ದಶಕಂಧರನು ಮುಳಿಯು |
ತ್ತೆಂದನಾ ಕಾವಲಿನ ರಕ್ಕಸಿಯರಿಗೆ ನೀವಿವಳ ||
ಬಂದಿಯೊಳಗಿಟ್ಟಾ ಅಶೋಕದ |
ನಂದನದೊಳುರುಭಯವ ಪುಟ್ಟಿಸು |
ತೊಂದಬುದಪರಿಯಂತ ಕಾದಿಹುದನಿತರೊಳಗಿವಳು ||೩೭||

ಒಲಿದೊಡೊಳ್ಳಿತನೊಂದಿ ಸುಖಿಸುವ |
ಳೊಲಿಯದಿರೆ ಮರುದಿನವೆ ಮಾರಿಗೆ |
ಬಲಿಯಹಳು ಖಂಡಿತದ ನುಡಿಯಿಂತಿದಕೆ ಕವಡಿಲ್ಲ ||
ಸಲಿಗೆಯಾ ನುಡಿ ಸಲ್ಲದಿವಳೊಳು |
ಕಲುಮನದ ಕಡುಸೊಕ್ಕಿನಿವಳನು |
ಬಲುಹಿನಿಂ ವಶಗೊಳಿಪುದೆಂದೊಡರುತ್ತೆ ತೆರಳಿದನು ||೩೮||

ಒಡನೆ ಬಂದುದು ದಡಿಗರಕ್ಕಸಿ |
ಗಡಣವೀಕೆಯ ಮುತ್ತಿಕೊಂಡುದು |
ನಡೆನಡೆಯೆನುತ್ತಟ್ಟುತಾರ್ಭಟಿಸುತ್ತೆ ಬೆದರಿಸುತೆ ||
ಮಡದಿ ಗಡಗಡನಡುಗುತಡಿಯಿಡು |
ತೊಡೆಯನಹ ರಘುರಾಮನಡಿಗಳ |
ಬಿಡದೆ ನೆನೆಯುತೆ ಪೋಗಿ ಕಾಲವ ಕಳೆದಳಾಬನದೆ ||೩೯||

ನಾಲ್ಕನೆಯಸಂಧಿ ಸಂಪೂರ್ಣಂ.

ಐದನೆಯ ಸಂಧಿ.

ಸೂಚನೆ|| ವರರಘುಜನರಸುತ್ತೆ ಸೀತೆಯ |
ನುರುವನದೆ ಕಂಡಾಜಟಾಯುವ |
ನರಿಕಬಂಧನನರಿದು ಮಾತಂಗಾದ್ರಿಗೈದಿದನು ||

ಮರುಗಿ ಲಕ್ಷ್ಮಣನಿತ್ತ ಸೀತೆಯ |
ಬಿರುನುಡಿಗೆ ಕುದಿಕುದಿದು ಮನದೊಳು |
ತೆರಳಿಯಣ್ಣನ ಕಡೆಗೆ ಕಾನನದೊಳಗೆ ಪೋಗುತಿರೆ ||
ದುರುಳದನುಜನು ಹರಣವಿಡುವಾ |
ಗೊರಲಿದಾ ನುಡಿಗಂಜಿ ರಾಘವ |
ನರರೆ ತನ್ನವರಿದನು ಕೇಳ್ದೊಡದೇನ ಗೈದಪರೋ ||೧||

ಎಂಬ ಸಂಶಯುವಡರೆ ಮನವನು |
ಹಂಬಲಿಸಿ ತೊಳಲುತ್ತೆ ವನನಿಕು |
ರುಂಬವನು ನಿಮಿಷದಲಿ ದಾಂಟಿ ಬರುತ್ತುಮಿದಿರಿನಲಿ ||
ಕಾಂಬರಾರೆಂದೊತ್ತಿ ನಿಟ್ಟಿಸಿ |
ತಾಂ ಬರುವವನೆ ತಮ್ಮನೆಂದರಿ |
ದಂಬುಜಾಕ್ಷನು ದುಗುಡದಿಂ ನುಡಿಸಿದನು ಲಕ್ಷ್ಮಣನ ||೨||

ಏನಿದೇನೈ ತಮ್ಮ ನಿನ್ನ ನ |
ವೀನವೆನಿಸಿದ ರೀತಿ ನೀನೆ |
ನ್ನಾಣತಿಯ ವಿಷರ್ದಿಲ್ಲಿಗೈದಿಹೆ ಸೀತೆಯೆಲ್ಲಿಹಳು ||
ಕಾನನದೊಳೇಂ ಬರುತುಮಿರ್ಪಳೆ |
ಕಾಣಿಸಳು ತನಗೇಕೆ ನಿನ್ನಯ |
ದೀನವದನವ ನೋಡೆ ಕಳವಳವಹುದು ಮಾನಸಕೆ ||೩||

ತಮ್ಮ ನೀಂ ಪರನಾಪ್ತನೆಂದರಿ |
ದೊಮ್ಮೆ ಮಡದಿಯು ನಿನ್ನ ಬಳಿಯೊಳ |
ಗುಮ್ಮಹದೆ ಬಿಡಲಿಂತುಪೇಕ್ಷಿಸಿರುವಳನುಳಿಯುವದು ||
ಸಮ್ಮತವೆ ನಿನಗಮ್ಮೊಳೀಪರಿ |
ದುಮ್ಮನದ ವೈಷಮ್ಯವಕಟಕ |
ಟುಮ್ಮಳಕೆ ಗುರಿನಾಗಿಸ್ಪುದೇನಿದು ಬಿಸದವೇ ಪೇಳ ||೪||

ದೇಶಕೋಶವನುಳಿದು ಪೆತ್ತರೊ |
ಳಾಶೆಯನು ಮಿಗೆ ತೊರೆದು ತನಗೆ ನಿ |
ಜೇಶನೇ ಗತಿಯೆಂದು ನಾಬುತ್ತೆನ್ನ ಪಿಂದೈದಿ ||
ಲೇಶಮಾತ್ರವುಮುಗ್ರವಿಪಿನ |
ಕ್ಲೇಶಕಂಜದೆ ಭೂರಿಸುಗುಣಾ |
ವೇಶದಿಂ ಮೆಚ್ಚಿಸಿದ ಮಡದಿಗಿದಲ್ತೆ ಉಡುಗೊರೆಯು ||೫||

ಖರನ ಸಂಹರಿಸಿದುದೆ ಮೊದಲಾ |
ಗಿರದೆ ನಮ್ಮೊಳು ಬಹುಳವೈರವ |
ಧರಿಸಿ ದನುಜರು ಸಮಯವೀಕ್ಷಿಸುತಿರ್ಪರೆಂಬುದನು ||
ಅರಿಯದನೆ ನೀನೆನಗೆ ಬುದ್ಧಿಯ |
ನೊರೆಯೆಯಾ ನಾಂ ಬರ್ಪಕಾಲದೊ |
ಳರರೆ ನಿನಗಿಂದಂಧಕಾರವದೆಂತು ಸಮುನಿಸಿತು ||೬||

ಮನಕೆ ಸಂಶಯವೀಗ ತೋರ್ಪುದು |
ಜನಕತನುಜೆಯ ಕುಶಲದಲ್ಲಿಯೆ |
ಮನೆಯೊಳವಳನು ಕಾಣ್ಬೆವೋ ಮೇಣ್ಪ್ರಾಣದಳಲುವೆವೋ ||
ವನಿತೆಯಾ ಮೃದುತನುವಿಗೆಳಸುತೆ |
ದನುಜರವಳನು ಮುರಿದು ತಿಂದುರೆ |
ತಣಿವಸೊಂದದೆ ಮಾಣರೇಗುವೆನಿದಕೆ ತಾ ನಿಂದು ||೭||

ವಾದವೇತಕೆ ಲಕ್ಷ್ಮಣನೆ ನೀ |
ನ್ಯೈದುವಾ ಸಮಯದಲಿ ತಾನಾ |
ಮೆದಿನೀಸುತೆ ಸುಖದೊಳಿರ್ದಳೆ ತಳಿರ ಮಂದಿರದೆ ||
ಸೋದರನೆ ಕೃಪೆಯೆತ್ತ ಪೋಯಿ |
ತ್ತಾದುದೇನನಿವಾರ್ಯಮಾಕೆಯೊ |
ಳೀದುರಾಗ್ರಹಕೇಂ ನಿಮಿತ್ತವು ಪೇಳು ವಹಿಲದಲಿ ||೮||

ಏತಕಿನ್ನಕಟೆನ್ನ ಬಾಳಿಕೆ |
ಬೀತತರು ತಾನಾದೆನೈ ನನ |
ಗಾತಳೋದರಿಯಿಲ್ಲದಿರೆ ಪೆರತುಂಟೆ ಜೀವನವು ||
ಧಾತುಗೆಟ್ಟೆನು ತಮ್ಮ ನೀನಿ |
ನ್ನೇತಕೀಬಳಿಯಿರ್ಪೆ ವರಸಾ |
ಕೇತಪುರಿಗಿರದೈದಿ ಭರತನ ಕೂಡಿ ನೀಂ ಬದುಕು ||೯||

ಮುಳಿಸು ನಿನ್ನೊಳಗಿಲ್ಲ ಪೂರ್ವದೆ |
ಗಳಿಸಿದುದನಿಂದುಣ್ಬೆನೆನಗಾ |
ಗಳಲದಿರು ಶುಭಮಕ್ಕೆ ಮಾರ್ಗದೊಳೆನಲು ರಾಘವನು ||
ಪಳಪಳನೆ ಕಣ್ಬನಿಯ ಧಾರೆಗ |
ಳೆಳೆಗೆ ಸುರಿಯಲು ಲಕ್ಷ್ಮಣನ ಮನ |
ದೊಳಗೆ ಶೋಕಾನಳವು ಪೊಕ್ಕದು ಸುಟ್ಟುದವಯವವ ||೧೦||

ಮರೆದನಂಗವನೊಡನೆ ಕೆದರಿದ |
ಕರಣಮೊದಲಂತಾಗಲಂಜುತೆ |
ಕರವ ಜೋಡಿಸಿ ಬಿನ್ನವಿಸಿದನು ಗದ್ಗದಸ್ವರದೆ ||
ಒರೆಯಲೇನನು ದೇವ ಚಿತ್ತ |
ಕ್ಕರಿಕೆಯಿಲ್ಲದುದುಂಟೆ ರಕ್ಕಸ |
ನೊರಲಿದಾರ್ತಧ್ವನಿಯೆ ಕಾರಣವೆನ್ನ ಬರವಿಂಗೆ ||೧೧||

ಮೋಸವೀನುಡಿ ತಾಯೆ ಮಹಿಮಾ |
ವಾಸರಾಮಂಗಿಲ್ಲಪಾಯವು |
ಲೇಸ ಕಾಣ್ಬರಿ ನಿಮಿಷ ಸೈರಿಪುದೆಂದು ನಾನುಸಿರೆ ||
ಭಾಸುರಾಂಗಿಗೆ ನಿಮ್ಮೊಳಿಹ ವಿ |
ಶ್ವಾಸವೇ ಗಾಢಾಂಧತೆಯನಿ |
ತ್ತೀಸುಬೇಡಿದೊಡೈಸು ನಿಷ್ಫಲವೆನಿಸಿತೆಲ್ಲವನು ||೧೨||

ಪೋಗುಪೋಗೆಂದೆನ್ನ ಸಟ್ಟಿಯೆ |
ಮೇಗುಕೀಳಾವುದುಮನೆಣಿಸದೆ |
ಬಾಗುಳದೆ ಹುಲುನರರಿಗೊಪ್ಪುವ ಕೀಳುನುಡಿಗಳಲಿ ||
ಬೇಗುದಿಯನೆನಗಿತ್ತರದರಿಂ |
ಬೇಗ ಬಂದೆನು ದೇವ ಕರುಣಾ |
ಸಾಗರನೆ ಕೃಪೆದೋರಿ ಮನ್ನಿಪುದೆನ್ನ ನೀನೆನಲು ||೧೩||

ಮೀರಿ ತನ್ನಯ ನೇಮವನು ಕಾ |
ಯ್ಪೇರಿ ಬಂದುದದೊಂದು ಮೇಣವಿ |
ಚಾರೆಯೆನಿಪಾ ಮಾನಿನಿಯ ಮಾತಿಂಗೆ ಮತಿಗೆಟ್ಟು ||
ಕ್ರೂರದಾನವರಿರ್ಪ ಕಾಡೊಳ |
ಗಾರುಸಾಹಾಯಕರುಮಿಲ್ಲದ |
ನಾರಿಯೊಬ್ಬಳ ಬಿಟ್ಟು ಬಂದಾ ತಪ್ಪು ತಾನೊಂದು ||೧೪||

ಇಂತು ನೀನಪರಾಧವೆರಡನು |
ಭ್ರಾಂತಿಯಿಂದಮೆ ಗೈದೆ ನಿನ್ನನೆ |
ಸಂತತವು ಸಂಬಿರ್ದನಮ್ಮೊಳಗಿಂತದೇಕಾದೆ ||
ಚಿಂತೆಯೊಂದಿರೆ ದೇವಿಯಾಕೆಯ |
ಸಂತವಿಸುತಲ್ಲಿಪ್ಪುದನು ಬಿಸು |
ಟೆಂತುಟಾದೊಡಮಾಗಲೆಂದುಳಿದಕಟ ಬರಬಹುದೇ ||೧೫||

ಎಂದು ದುಃಖಿಸುತಾಡಿದಣ್ಣಂ |
ಗೆಂದನಾ ಸೌಮಿತ್ರಿ ಲಾಲಿಪು |
ದಿಂದುವದನೆಯ ನಿಷ್ಠುರೋಕ್ತಿಯ ಕೇಳಿ ಜೀವಿಪರೆ ||
ಇಂದು ಮತ್ಪ್ರಿಯನಳಿದೊಡೆನ್ನನು |
ಹೊಂದುವಿಚ್ಛೆಯೊಳಗಲದಿರ್ಪೆಯ |
ಕೊಂದುಕೊಂಡಪೆನಲ್ಲದುಳಿಯೆನೆನುತ್ತೆ ವಾಚಿಸಲು ||೧೬||

ಒಡೆದುದೆನ್ನೆದೆ ಬಳಿಕ ಬೇಡಿದೆ |
ನೊಡತಿ ಮನ್ನಿ ಪುದೆನುತುಮಲ್ಲಿಂ |
ದುಡುಕಿಸಿಂದೈತಂದೆ ನಾಂ ಭವದೀಯಸನ್ನಿಧಿಗೆ ||
ತಡೆಯಲಸದಳವಾದ ನುಡಿಗೇ |
ಳ್ದಡೆಯೊಳೆಂತಿಹುದಣ್ಣದೇವನೆ |
ನುಡಿಯಲಂಜುವೆನೆನ್ನ ದೋಷವ ಮರೆದು ನೀಂ ಸಲಹು ||೧೭||

ಎನುತೆಯಾಡಿದ ಲಕ್ಷ್ಮಣನ ನುಡಿ |
ಗಿನಕುಲಾಧಿಪನಿರದೆ ಮನ್ನಿಸಿ |
ವನದೆ ನಡೆದನು ವಾಯುವೇಗದೊಳೆಲೆವನೆಯ ಕಡೆಗೆ ||
ಜನಕಜೆಯ ಬಾಗಿಲೊಳು ಕಾಣದೆ |
ಮನಕೆ ಸಂಶಯವಾಗಲೊಡನೆಯೆ |
ಘನವಿಷಾದವನಾಂತು ನಿಲಯವ ಪೊಕ್ಕು ಹುಡುಕಿದನು ||೧೮||

ಕಾಣಲಿಲ್ಲವು ತನ್ನ ಸತಿ ಬಳ |
ಕಾಣೆಯುಕ್ಕುತೆ ಕೂಗಿದನು ಮ |
ತ್ಪ್ರಾಣವಲ್ಲಭೆ ಮಾತನಾಡೆಯದೇತಕೆಲ್ಲಿರುವೆ ||
ಕೇಣವನು ಬಿಸುಡೇಣವನು ಕೊ |
ಳ್ಳೇಣಲೋಚನೆ ಬೇಗ ಬಾ ನಿ |
ನ್ನಾಣತಿಯ ಮೀರುವನೆ ರಾಮನದೇಕೆ ತಡಗೈವೆ ||೧೯||

ಅಸುರರಂಜಿಕೆಗವಿತುಕೊಂಡೆಯೊ |
ಅಸುರನುರ್ದನಸಿದೆಕೊ ಬಂದಿಹೆ |
ನೊಸಗೆಯುಳ್ಳವೆ ಸತಿಯರಗ್ರಣಿಗಿನಿಯನಾಗಮನ ||
ಬಸಿದು ಬೀಳುವ ನಿನ್ನ ಮಮತಾ |
ರಸವದೋಪನೊಳಿಂಗಿಪೋದುದೆ |
ಬಸಿರಶಿಖಿ ಸುಡುತಿಹುದು ತೋರಿಸು ಮೊಗವ ಶಶಿವದನೆ ||೨೦||

ಸುತ್ತಿ ಕೂಗಿದುದಾಯ್ತು ಮನೆಯೊಳ |
ಗೆತ್ತಲುಂ ಜಾನಕಿಯ ಸುಳಿವಿ |
ಲ್ಲೆತ್ತ ಪೋದಳೊ ಕಾಣಲೊಲ್ಲಳು ಚಿತ್ತವಲ್ಲಭೆಯು ||
ಚಿತ್ತದಾಸರ ಕಳೆಯಲುಪವನ |
ದತ್ತಲೈದಿರಬೇಕು ಲಕ್ಷ್ಮಣ |
ಮತ್ತಕಾಶಿನಿಯಿಪ್ಪೆಡೆಯ ನೀಂ ಗೊತ್ತುಗೈಯೆನಲು ||೨೧||

ತಾನು ಗೈದವಿವೇಕದಿಂದೀ |
ಹಾನಿಯಣ್ಣಂಗಾಯ್ತು ಶಿವಶಿವ |
ಹೀನಭಾಗ್ಯರು ಧರೆಯೊಳೆನಗೆ ಸಮಾನರಾರಿಹರು ||
ಮಾನಿನಿಯ ಕುಶಲದೊಳೆ ಸಂಶಯ |
ವೇನಮಾಡುವೆನಿನ್ನು ಮುಸುಕಿದ |
ಕಾನನಂಗಳನೆಲ್ಲ ಶೋಧಿಪೆನೆಂದು ಲಕ್ಷ್ಮಣನು ||೨೨||

ಹೂವನಂಗಳೊಳರಸಿದನು ಗೋ |
ದಾವರಿಯ ತಡಿಗಳಲಿ ಕೂಗಿದ |
ನಾವನಜತತಿಯೊಗೆದ ಸರಗಳನೆಲ್ಲ ಬಳಸಿದನು ||
ಆವೆಡೆಯೊಳಂ ಕಾಣಳಿನ್ನೇ |
ಗೈವೆನೆಂದೆಲೆವನೆಗೆ ಮರಳುತೆ |
ದೇವ ಚಿತ್ತೈಸೆಲ್ಲಿಯುಂ ದೇವಿಯರ ಸುಳಿವಿಲ್ಲ ||೨೩||

ಎಂದು ನುಡಿಯಲ್ಕೇಳಿ ರಘುಪತಿ |
ನೊಂದು ಹಮ್ಮೈಸಿದನು ಮನದೊಳ |
ಗಿಂದುಮುಖಿ ನೀನಿಂತು ಮೋಸವ ಗೈವುದೇ ತನಗೆ ||
ದಂದುಗಕ್ಕೆಡೆಗೈದು ನನ್ನನು |
ಮಂದಭಾಗ್ಯನನೊರ್ವನನೆ ಬಿಡು |
ತಿಂದು ನೀನಕಟೆತ್ತ ತೆರಳಿದೆ ಮುಂದೆ ಗತಿಯೇನು ||೨೪||

ಹಾ ತನೂದರಿ ಸೀತೆ ಭುವನ |
ಖ್ಯಾತೆ ಧರಣೀಜಾತೆ ಸುಗುಣೋ |
ಪೇತೆ ಸಜ್ಜನಗೀತೆ ಮುನಿಸುಪ್ರೀತೆ ಘನದಯಿತೆ ||
ಬೀತುದೆನ್ನಯ ಸಿರಿಯು ಭುವನ |
ಖ್ಯಾತರಘುಕುಲವುದ್ಧದಬುದಿಯೊ |
ಳಾತುಕೊಂಡೆನಕೀರ್ತಿಯನು ನಾನೆಂದು ಹಲುಬಿದನು ||೨೫||

ನೋಡಿದನು ಲಕ್ಷ್ಮಣನು ರಾಮನ |
ನಾಡಮನುಜರಿಗುಚಿತವೆನಿಸುವ |
ಗಾಢತರದಾಲಾಪಗಳ ನಿವನಡಗಿಸುವೆನೆಂದು ||
ಬೇಡಿದನು ಕೈಮುಗಿದು ನಿನಗೀ |
ಪಾಡು ತಕ್ಕುದೆ ದೇವ ದೇವಿಯ |
ನಾಡೆ ಹುಡುಕುವೆಮೇಳು ಸನಿಹದ ಗಿರಿಯ ಗುಹೆಗಳೊಳು ||೨೬||

ಸರಸು ನೀನಲ್ಲಸುರರಳಿವಿಗೆ |
ಧರೆಯೊಳವತರಿಸಿರ್ಪ ಮಾಧವ |
ನೊರೆಯಲೇನವನಿಜೆಯು ಸಾಕ್ಷಾಲ್ಲಕ್ಷ್ಮಿಯೆಂಬುದನು ||
ಅರಿಯದನೆ ನೀಂ ನಿನಗಿದೇಕೇ |
ಪರಿಬವಣೆ ಚಿತ್ತದಲಿ ಸಾಕೇ |
ಳರಸ ದೇವಿಯನರಸಲೆಂದಲ್ಲಿಂದೆ ಪೊರಮಡಿಸೆ ||೨೭||

ದಾರಿಯಲ್ಲದದಾರಿಗೈದುತೆ |
ಚೀರಿಯಂದದೆ ಚೀರಿ ಮತ್ಸಖಿ |
ಬಾರ ಜಾನಕಿ ಹೃದಯನಾಯಿಕೆ ಬಾ ಸರೋಜಮುಖಿ ||
ಧೀರೆ ಗುಣಮಣಿಹಾರೆ ರತ್ಯಾ |
ಕಾರೆ ದುರಿತವಿದೂರೆ ರಾಮನ |
ನೀರೆ ನೀನಿಂದೆತ್ತಲೈದಿದೆ ಮೊಗವ ತೋರೆನುತೆ ||೨೮||

ದಿಕ್ಕುತೋರದೆ ಕಣ್ಗಳೊಳು ನೀ |
ರುಕ್ಕಿಬರೆ ರೋದನವನೆಸಗು |
ತ್ತಕ್ಕಜದ ನರರೂಪದಾಹರಿ ಹರವಸದೆ ಸೊರಗಿ ||
ಪಕ್ಕಿಗಳ ಕೈವೀಸಿ ಕರೆಯುತೆ |
ಸೊಕ್ಕುಜೌವನೆ ತನ್ನ ಮಡದಿಯ |
ನಕ್ಕಟಾ ನೀಂಕಾಣಿರೇ ಎಂದೊಲಿದು ಬೆಸಗೊಂಡ ||೨೯||

ಹರಿಣಗಳ ಕೇಳಿದನು ತನ್ನಯ |
ಹರಿಣಲೋಚನೆಯೆತ್ತಲೆನ್ನುತೆ |
ಕರಿಣಿಗಳ ಕಂಡರ್ಥಿಸಿದನಾಕರಿಗಮನೆಯಿರವ ||
ಧರಣಿಯನು ಬೇಡಿದನು ತನಗಾ |
ಧರಣಿಜೆಯ ತೋರೆನುತೆ ತಾಪಸಿ |
ಯರನು ಕೇಳಿದನಾತಪಸ್ವಿನಿಯಿರ್ಪಳೆಲ್ಲೆಂದು ||೩೦||

ಧೈರ್ಯಗೆಟ್ಟುದು ಮನವು ಮೊದಲಿನ |
ಕಾರ್ಯವೆಲ್ಲಡಗಿತ್ತೊ ಶಿವಶಿವ |
ಶೌರ್ಯವೆಲ್ಲವು ಸಡಿಲಿತುತ್ಸವಮೆಲ್ಲವಿಂಗಿದುದು ||
ಸ್ಥೈರ್ಯಭುಜಬಲದರ್ಪಗಳು ನಿಜ |
ಕಾರ್ಯಗಾಣದೆ ಬಣ್ಣಗೆಟ್ಟವು |
ಸೂರ್ಯವಂಶದ ನೃಪತಿಗರಸಿಯುನಗಲಿದುದರಿಂದ ||೩೧||

ದೇವರಾಮಂಗಾಗಚೇಷ್ಟಾ |
ಭಾವದಿಂ ಜಾನಕಿಯ ಮಾರ್ಗವ |
ನಾವನಂಗಳ ಮೃಗಗಳೆಲ್ಲವು ತೋರುತಿಹುವೆನಲು ||
ಮೇವನುಳಿದಿದಿರಲ್ಲಿ ನೆಗೆಯುತೆ |
ತಾವು ತೆಂಕಣದಿಕ್ಕಿಗೋಡಿದು |
ಏವಿಶೇಷವ ಕಂಡು ರಘುವರರತ್ತ ನಡೆಯುತ್ತೆ ||೩೨||

ಕಂಡರೊಂದೆಡೆಯಲ್ಲಿ ಹೂವಿನ |
ದಂಡೆಯಿಂದುದಿರಿರ್ದ ಪುಷ್ಪವ |
ಖಂಡಿತದೆ ಜಾನಕಿಯ ಮಂಡೆಯೊಳಿರ್ದುದಹುದೆನುತೆ ||
ಕೊಂಡು ರಾಘವನದನು ಚುಂಬಿಸಿ |
ಪುಂಡರೀಕಾಂಬಕೆಯ ನಿಜದಿಂ |
ಕಂಡನೋ ಎನೆ ಹರಿಸಗಡಲೊಳು ಮುಳುಗಿ ಮೈಮರೆದು ||೩೩||

ಮತ್ತೆ ಚೇತರಿಸುತ್ತಿದರ್ಕೆ ನಿ |
ಮಿತ್ತವೇನುಂಟಾಯ್ತು ತನ್ನಯ |
ಮತ್ತಕಾಶಿನಿ ಮುಡಿದ ಸುಮವಿಂತೇಕೆ ಕೆದರಿದುದು ||
ಉತ್ತಮಾಂಗದ ಮುಡಿಗದಾವನೊ |
ಮಿತ್ತುರೂಹಿಸ ದಾನವನು ಹಾ |
ಯ್ದೆತ್ತಿಕೊಂಡರಸಿಯನು ಪೋಗಿರವೇಳ್ಕುಮೆಂದೆನುತೆ ||೩೪||

ಸುತ್ತಮುತ್ತಲು ನೋಡಿ ಹೇಸರ |
ಗತ್ತೆಗಳು ಸತ್ತಿಹುದ ಕಂಡವ |
ರೊತ್ತಿನಲಿ ಮುರಿದಿಳೆಯೊಳುರುಳಿದ ರಥವದೊಂದಿರಲು ||
ಚಿತ್ತವಿಭ್ರಮವಾಂತು ಮುಂದೈ |
ದುತ್ತೆ ತನ್ನಯ ನಾಮವನು ಜಪಿ |
ಸುತ್ತೆ ಕೆಡೆದಿರ್ಪಾ ಜಟಾಯುವನಾಗ ನೋಡಿದನು ||೩೫||

ಪರಿದರೆಕ್ಕೆಯ ಸುರಿವ ರಕುತದ |
ಗೊರಗೊರೆಂಬುತ್ಕ್ರಮಣನಿನದದ |
ಕೊರಗುತಿಹ ಖಗಪತಿಯ ಮುಖದಿಂದರಿದದೆಲ್ಲವನು ||
ದುರುಳರಾವಣನಿಂದೆ ತನ್ನಯ |
ಹರಿಬಕೋಸುಗ ಕೆಡೆದನೆಂದುರೆ |
ಮರುಗಿದನು ಸಂಸ್ಕರಿಸಿದನು ಮಡಿದಾ ಜಟಾಯುವನು ||೩೬||

ಪರರಿಗುಪಕಾರವನು ಮಾಳ್ಪವ |
ನಿರಿಸುವನೆ ದೇಹಾಭಿಮಾನವ |
ಸರರೆ ತಂದೆ ಜಟಾಯು ತನಗಾಗಸುವನೀಗಿದೆಯ ||
ಪರಮಪುಣ್ಯಶ್ಲೋಕ ನೀನಾ |
ಪರಮಪದದೊಳ್ಸುಖದೆ ಬಾಳೆಂ |
ದರಸನುದಕಾಂಜಲಿಯನಿತ್ತನು ಮುಂದೆ ತೆರಳಿದನು ||೩೭||

ಬಿಡದೆ ತೆಂಕಣದೆಸೆಗೆ ನಡೆಗೊಂ |
ಡೆಡಬಲಂಗಳೊಳಿರ್ಪ ಗಿರಿಗಳ |
ನಡರಿ ನೋಡುತೆ ವನವ ಸೋದಿಸಿ ಗುಹೆಗಳನು ಪುಗುತೆ ||
ತಡೆಯದಲ್ಲಲ್ಲರಸಿ ಸೀತೆಯ |
ಕಡೆಗೆ ಕಾಣದೆ ದುಃಖಪರವಶ |
ರಡಿಗಡಿಗೆ ಹಮ್ಮೈಸಿ ಬಿಕ್ಕಿರದೊಡನೆಯೇಳುತ್ತೆ ||೩೮||

ಇಂತು ಕಂಗೆಟ್ಟಡವಿಯಲಿ ಬಲು |
ಚಿಂತೆಗಂಗವನಿತ್ತು ತೆರಳುತೆ |
ಕಂತುಪೀಡಿತೆಯಾದಯೋಮುಖಿಯೆಂಬ ದನುಜೆಯನು ||
ಪಿಂತೆ ತಾವಾ ಶೂರ್ಪಣಖೆಗಿರ |
ದೆಂತು ಗೈದರೊ ಆವಿಧಾನದ |
ಸಂತವಣೆಗವಳರ್ಹೆಯೆನ್ನುತೆ ಭಂಗಿಸಿದರವಳ ||೩೯||

ದಾರಿಯೇ ನರೆ ಕಾಣಬಾರದ |
ಘೋರಕಾನನದೊಳಗೆ ಬರುತಿರ |
ಲಾರುಬಟೆಯೊಂದಾಗ ಕೇಳಿಸಿತತಿಭಯಂಕರದ ||
ಭೂರಿಸೂಕರಹರಿಗಜಂಗಳು |
ಚೀರಿಡುತೆ ದೆಸೆಗೆಟ್ಟು ಹಾರಿದು |
ಏರಭಸಕಿಂದೇನುಕಾರಣವರಿಯಬೇಕೆಂದು ||೪೦||

ಸುತ್ತಲೀಕ್ಷಿಸುತುಭಯದಿಶೆಯಿಂ |
ದೊತ್ತಿ ಬರ್ಪುವು ಗಿರಿಯುಸಾಲ್ಗಳಿ |
ವೆತ್ತಣದ್ಭುತ ಸಿಲುಕಿಸಿದುವಿಂದೆಮ್ಮನಿರುಬಿನಲಿ ||
ನಿತ್ತರಿಪಹುದನಾವುದೆನ್ನುತೆ |
ಚಿತ್ತದಲಿ ಸಂಭ್ರಾಂತರಾಗುತೆ |
ಮತ್ತೆನೋಡುತ್ತರಿದರಸುರನ ತೋಳ್ಗಳೆಂದೆನುತೆ ||೪೧||

ಸಿರವದಿರ್ದುದು ಬಸಿರಮಧ್ಯದೆ |
ಚರಣವಿಲ್ಲದ ಬರಿಯ ಮುಂಡವು |
ಕರಗಳವು ತಾನೆರಡುಯೋಜನದುದ್ದದಳತೆಯಲಿ ||
ಉರಿವನೇತ್ರವದೊಂದು ಪಣೆಯೊಳ |
ಗಿರಲು ಪಸರಿಸಿದುಭಯಕರಗಳ |
ಸೆರೆಗೆ ಸಿಕ್ಕಿದ ವನಮೃಗಂಗಳ ತಿಂದು ತೇಗುತ್ತೆ ||೪೨||

ಅದುಭುತಾಕಾರದಲಿ ಗಿರಿಯವೊ |
ಲಿದಿರೊಳಿರುವನ ಕಂಡದೇನಿಂ |
ದಿದಕುಪಾಯವು ಕೊಂದೊಡಲ್ಲದೆ ಬಾಳ್ಕೆ ತಮಗಿಲ್ಲ ||
ಸದೆದು ಕಳೆ ನೀನೊಂದುಬಾಹುವ |
ನಿದೆಕೊ ನಾಂ ಮತ್ತೊಂದ ಕಡಿವೆನು |
ಬೆದರಲಾಗದೆನುತ್ತೆ ರಾಘವನೊರೆದನನುಜಂಗೆ ||೪೩||

ಭರದೊಳಾಗಳೆ ವೀರರಿರ್ವರು |
ಶರಗಳಿಂದವನೆರಡುತೋಳ್ಗಳ |
ನರಿಯಲಾತಂಗರಿವು ಬಂದುದು ಕಂಡನಾಹರಿಯ ||
ಗುರುವೆ ತವದರ್ಶನದೊಳೆನ್ನಯ |
ದುರಿತರಾಶಿಯು ಕರಗಿ ಪೋದ |
ತ್ತರರೆ ದಾನವಜನ್ಮದುಃಖವು ಕಳೆದುದಿಂದಿನಲಿ ||೪೪||

ಅರಿಯಲಾನು ಕಬಂಧನೆಂಬವ |
ನಿರವು ತನಗೀವಿಪಿನಮಧ್ಯದೆ |
ದೊರೆದುದೀದನುಜತ್ವವೊರ್ವ ತಪೋಧನನು ಶಪಿಸೆ ||
ಪರಿಹೃತಿಯ ಯಾಚಿಸಲು ಲಕ್ಷ್ಮೀ |
ವರನು ನರನಾಗುದಿಸಿ ನಿನ್ನೀ |
ಕರವನರಿಯೆ ವಿಶಾಪವಹುದೆಂದವನು ಬೆಸಸಿದನು ||೪೫||

ಎಂದಿಗಪ್ಪುದೊ ನಿನ್ನ ಪದಗಳ |
ಸಂದರುಶನದ ಭಾಗ್ಯವೆಂದರ |
ವಿಂದನಾಭನೆ ಸಮಯವೀಕ್ಷಿಸುತಿಂದು ಧನ್ಯತೆಯ ||
ಒಂದಿದೆನು ನಿನ್ನಯ ಕರಂಗಳಿ |
ನಿಂಧನವನುರಿಗೊಳಿಸಿ ಪಾಪಿಕ |
ಬಂಧದೇಹವ ದಹಿಸಿದೊಡೆ ಲೇಸಹದು ನಿನಗೆನಲು ||೪೬||

ಒಡನೆ ಸಹಭವರಿಂಧಸಂಗಳ |
ಕಡಿದು ಜೋಡಿಸಿಯಸುರದೇಹವ |
ನಿಡುತುಮಗ್ನಿಯೊಳುರಿಸಲದರಿಂದೆಳ್ದು ಗಗನದಲಿ ||
ಕಡುಚೆಲುವ ಗಂಧರ್ವನೊಪ್ಪುತೆ |
ನುಡಿಸಿದನು ಸಿರಿಯೆರೆಯ ನಿನ್ನಯ |
ಮಡದಿಮಣಿಯನು ಕಾಣ್ಬುಪಾಯವ ಪೇಳ್ವೆನವಧರಿಸು ||೪೭||

ಅರಸರಿಗೆ ಷಡ್ಗುಣಗಳೇ ತಾ |
ವರಿಯೆ ಕಾರ‍್ಯಕೆ ಸಾಧನಂಗಳು |
ಪಿರಿಯಕಷ್ಟದೊಳೊದವಿದಾತನೆ ತಿಳಿಯಲುಪಕಾರಿ ||
ನಿರುತ ನಿನ್ನಾಪತ್ತಿಗೆಣೆಯಾ |
ದುರುವಿಪತ್ತನು ಪೊರ್ದಿ ಕೊರಗುವ |
ಖರಕರಾತ್ಮಜನೆನಿಪ ಸುಗ್ರೀವಾಖ್ಯ ಕಪಿವರನು ||೪೮||

ವರಪರಾಕ್ರಮಿಯೆನಿಸಿ ಸೊಕ್ಕಿದ |
ಹಿರಿಯಸೋದರನಪ್ಪ ವಾಲಿಯ |
ಕರದೊಳಪಜಯವೊಂದಿ ನಾಲ್ವರು ಮಂತ್ರಿವರರೊಡನೆ ||
ಇರುವನಾವರಋುಶ್ಯಮೂಕದ |
ಗಿರಿಯೊಳವನನು ಸೇರಿ ಸಖ್ಯವ |
ನುರುವಿವೇಕದೆ ಬಳಸಲಪ್ಪುದು ಕಾರ‍್ಯವತಿಜವದೆ ||೪೯||

ಕಲಹವಾಗಲು ಸೋದರನ ನಿಜ |
ಲಲನೆ ರುಮೆಯೆಂಬಳನು ಬಲುಹಿಂ |
ದಲಘುಭುಜಬಲನಿಂದ್ರತನುಜನು ವಾಲಿಯಪಹರಿಸಿ ||
ನಿಲಯದಿಂ ಪೊರಮಡಿಸಿ ತಮ್ಮನ |
ನೆಳಲ ಸೈಸದೆ ಕಾಡಿಗಟ್ಟ |
ಲ್ಕಲೆಯುತಿರ್ಪನು ಸತಿಯ ವಿರಹದೊಳವನು ಕಂಗೆಟ್ಟು ||೫೦||

ದೊರೆವುದಾತನ ಮೈತ್ರಿ ದಿಟದಲಿ |
ತೆರಳು ಪಶ್ಚಿಮದಿಕ್ಕಿಗೀಗಳೆ |
ಮೆರೆವ ಪಂಪಾಸರದ ತೀರದ ಪುಣ್ಯವನಗಳಲಿ ||
ಪರಿಪರಿಯ ಫಲಪುಷ್ಪವಿರ್ಪುವು |
ಹರಿಣಸೆಕ್ಕಲನಾದಿಯಹ ಮಿಗ |
ಮಿರುವುವಲ್ಲಿಯೆ ಕೆಲವುಕಾಲವ ಕಳೆವುದನುಕೂಲ ||೫೧||

ಅದರ ಪಡುವಣ ತಡಿಯ ಸೇರಲು |
ಸದಮಲಾಶ್ರಮವೊಂದು ಮನಕುರೆ |
ಮುದವ ಬೀರುತೆ ಗೋಚರಿಪುದಲ್ಲೊರ್ವ ತಾಪಸಿಯು ||
ಪದುಮನಾಭನೆ ಶಬರಿಯೆಂಬವ |
ಳಿದಿರುನೋಡುತೆ ನಿನ್ನ ಚರಣವ |
ಪದುಳದಿಂ ಸೇವಿಸುವುದಕೆ ಕಾದಿಹಳು ಪೋಗಲ್ಲಿ ||೫೨||

ಎನುತೆ ನುಡಿದಾ ವರಕಬಂಧನ |
ವಿನಯದುಕ್ತಿಗೆ ಮೆಚ್ಚಿ ರಾಮನು |
ಘನಮಹಿಮ ನೀನಿನ್ನು ನಿನ್ನಯ ಲೋಕಕ್ಕೈದೆಂದು ||
ಅನುಜನೊಡನಲ್ಲಿಂದೆ ಪೊರಮ |
ಟ್ಟನು ನಯಾನ್ವಿತೆಯಾದ ಶಬರಿಯ |
ವಿನುತಮಾದಾಶ್ರಮವನರಸುತ್ತಲ್ಲಿಗೈತಂದ ||೫೩||

ಸಡಗರದೊಳಾ ಘನವಿರಕ್ತೆಯು |
ಮುಡಿಯ ಚಾಚುತೆ ರಾಮನಂಘ್ರಿಗೆ |
ಕಡುದರಿದ್ರಗೆ ನಿಧಿಯು ದೊರೆದಂತಾಗಳೊಲವಿನಲಿ ||
ತಡೆಯದರ್ಘ್ಯಾದಿಗಳ ನೀಯು |
ತ್ತಡಿಗಡಿಗೆ ಕೀರ್ತಿಸುತೆ ಕುಣಿಯು |
ತ್ತೊಡನೆ ಫಲಮೂಲಾದಿಗಳ ನಿತ್ತಾಗಳುಪಚರಿಸೆ ||೫೪||

ರಾಮನಾತಿಥ್ಯವನು ಕೈಕೊಂ |
ಡಾಮಹಾವ್ರತೆಗಿರ್ಪ ಭಕ್ತಿಗ |
ಮಾಮಹಿತವೈರಾಗ್ಯಕಂ ಮಚ್ಚುತ್ತೆ ತಲೆದೂಗಿ ||
ನೇಮವಿತ್ತೆನು ನಿನಗೆ ನೀನಿ |
ನ್ನಾಮಹೇಂದ್ರನ ಲೋಕವನು ಮೇಣ್ |
ಕಾಮಿಸುವ ಲೋಕಾಂತರನಸಿರದೊಂದಿ ಸುಖದೊಳಿರು ||೫೫||

ಎಂದು ನುಡಿಯಲ್ಕೊಡನೆ ವೃದ್ಧೆಯು |
ವಂದಿಸಿ ರಘೂದ್ವಹನ ಪದಗಳಿ |
ಗಂದು ಯಜ್ಞೇಶ್ವರನಿಗಾಹುತಿಯಿತ್ತು ನಿಜತನುವ ||
ಹಿಂದೆ ತನ್ನಯ ಗುರುಮತಂಗನು |
ಹೊಂದಿದಾವರಪುಣ್ಯಲೋಕಕೆ |
ಸಂದು ಸುರುಚಿರಸುಖದೊಳೆಸೆದಳು ಶಬರಿ ಗುಣಲಹರಿ ||೫೬||

ಬಳಿಕವಾ ಮಾತಂಗವನವನು |
ಕಳೆದು ಮುಂದಿಹ ಗಿರಿಯನೀಕ್ಷಿಸಿ |
ವಲಿಮುಖೇಂದ್ರನ ಕಾಣುವೆವು ತಾವೆಂಬ ಸಡಗರದೆ ||
ಲಲಿತಹರ್ಷವನಾಂತು ಭಾಸ್ಕರ |
ಕುಲಜರೈದುತೆ ಕೆಲದೊಳೆಸೆವಾ |
ತಿಲಕಪಾಟಲಿಪನಸನಾರಂಗಾದಿತರುಗಳೊಳು ||೫೭||

ನೆರೆದು ಕುಳಿತಿಹ ಶುಕಪಿಕಂಗಳ |
ನೆರವಿಯಿಂದೈತಪ್ಪ ಮೃದುಲ |
ಸ್ವರವನಾಲಿಸುತತಿಮನೋಹರವಾಗಿ ರಂಜಿಸುವ ||
ಗೊರಟೆ ಸಂಪಗೆಯಾದಿಯಾದಾ |
ತರುಗಳಿಗೆ ಪರ್ಬಿರ್ಪ್ಪವನಲತೆ |
ಭರದೆ ಕುಸುಮಿತವಾಗಿ ಮೆರೆದಿರಲದರ ಮಧ್ಯದಲಿ ||೫೮||

ವನಸುಮಂಗಳ ಮೇಲೆ ಬೀಸು |
ತ್ತನಿಲಸುರೆ ತನಿಗಂಪನಾನುತೆ |
ತನುವಿಗಾಪ್ಯಾಯನವ ಮಾಳ್ಪುದ ಕಂಡು ರಘುವರರು ||
ವಿನುತಚೈತ್ರನ ಮಹಿಮೆಗಿರದುರೆ |
ಮನದೊಳಾನಂದಿಸುತೆ ಕಪಿಕುಲ |
ವನಧಿಚಂದ್ರನ ಕಾಣ್ಬ ತವಕದೊಳೈದಿದರು ಮುಂದೆ ||೫೯

ವಿದಿತಘನಕರ್ಣಾಟರಾಜ್ಯದ |
ಪದಕೊಡೆಯನಹ ಕೃಷ್ಣಭೂಪನ |
ಪದದ ಸೇವಕನೆನಿಪ ಚಿಕಲಿಂಗಾಖ್ಯಪಾರ್ಥಿವನು ||
ಪದೆದು ನುಡಿದನರಣ್ಯಕಾಂಡವ |
ನಿದನು ಸುಲಲಿತಭಾಮಿನೀಷ |
ಟ್ಪದಿಯೊಳಿದು ರಾಜಿಸುಗೆ ಸುಜನಗೋಲವನೊಡರಿಸುತೆ ||

ಅರಣ್ಯಕಾಂಡಂ ಸಮಾಪ್ತಂ

ಕಿಷ್ಕಿಂಧಾ ಕಾಂಡವು.

ಸೂ|| ಒಲಿದು ಸುಗ್ರೀವಂಗೆ ವಾಲಿಗೆ |
ಮುಳಿದು ಕಿಷ್ಕಿಂಧಾಧಿಪತ್ಯವ |
ಒಲಿದು ಮಿತ್ರನೊಳೊರೆದನುಡಿಯನು ರಘುಜನೋವಿದನು ||

ಇತ್ತಲೆಸೆವಾಋಶ್ಯಮೂಕದ |
ನೆತ್ತಿಯೊಳು ಪವನಸುತಸೀಲಾ |
ದ್ಯತ್ತಮಕಪೀಂದ್ರರ್ವೆರಸಿಯೊಡ್ಡೋಲಗದೊಳಿರುತೆ ||
ಕೆತ್ತ ದುಗುಡಕೆ ಮನವ ತೆತ್ತುದ |
ನೊತ್ತಲೇನಿಹುದಕಟುಪಾಯವೆ |
ನುತ್ತೆ ಸುಗ್ರೀವಾಂಕ ಚಿಂತಿಸುತಿರ್ದನನಿತರೊಳು || ||೧||

ನೆತ್ತಿಯೊಳು ಜಡೆಯಾಂತು ನಡುವಿಗೆ |
ಸುತ್ತಿ ವಲ್ಕಲಗಳನು ಕರದೊಳು |
ಕತ್ತಿಬಿಲುಗಳನಾಂತು ವಿಕ್ರಮದಿಂದೆ ರಂಜಿಸುತೆ ||
ಬತ್ತಳಿಕೆಯೊಳು ಮಿರುಗುವಂಬುಗ |
ಳೊತ್ತಿ ತುಂಬಿರೆ ನಡೆಯ ಗಮಕದ |
ಬಿತ್ತಿಗರನೀಕ್ಷಿಸಿದನಂದಾರಾಮಲಕ್ಷ್ಮಣರ || ||೨||

ಏನಿದಚ್ಚರಿ ನಮ್ಮ ವನಮಿದ |
ಮಾನುಷವು ತಾನೆಂದಿರಲು ಪೊಸ |
ತೀನವಾಯಿಯೊಳಿತ್ತಲೈದುವ ಪುರುಷರಾರಿವರು ||
ಏನು ಮಿಾಗಳ್ ಮನಕೆ ತೋರದು |
ಮಾನವರ ವೇಷದೊಳು ನಮಗುರೆ |
ಹಾನಿಯೆಸಗಲ್ಕಣ್ಣಸಟ್ಟಿರವೇಳ್ಕು ಮಿಂದಿವರ ||೩||

ಶೂರಮಾರುತಿ ಪೋಗಿ ಬಳಿಗಿವ |
ರಾರು ಪರಿಕಿಸಿ ನೋಡಿ ಬಾರೈ |
ತೋರಿಸದೆ ನಿಜರೂಪವನಾನುತೆ ಸಲೆ ನರಾಕೃತಿಯ ||
ದೂರನಾಕಾರದ ಕುಮಾರರು |
ದಾರಿಯಲ್ಲದ ವಿಪಿನಕೈದಲು |
ಕಾರಣವದೇನೆಂಬುದನು ನೆರೆ ತಿಳಿದು [illegible] ||೪||

ಜೇಯನಾಣತಿಯೆನುತುಮಲ್ಲಿಂ |
ವಾಯುಸುತನತಿಭರದೆ ಲಂಘಿಸಿ |
ಯಾಯತದ ಬಿಲ್ಲಂಬುವಿಡಿದಿರ್ದೈದುವವರೆಡೆಗೆ ||
ಮಾಯದಿಂ ಯತಿರೂಪುದಾಳ್ದು ವಿ |
ಧೇಯನಾಗಿಯೆ ಪೋಗಿ ಕಂಡೆಲೆ |
ತೋಯಜಾಕ್ಷರೆ ನಿಮ್ಮನೀಕ್ಷಿಸಲಾದುದತಿಮುದವು || ೫ ||

ಆವದೇಶವು ಸುಕೃತವಡೆದುದ |
ದಾವವಂಶವು ಬೆಳಗುತಿರ್ಪುದು |
ಭಾವಿಸಲ್ನಿಮ್ಮಿಂದವೆಂಬುದನರಿಯಲೆಳಸುವೆನು ||
ದೇವಸಮರೆಂಬುದನು ನಿಮ್ಮಯ |
ಭಾವಭೇದಗಳಿಂದಮರಿತೆನು |
ಕೋವಿದರೆ ನೀವಿತ್ತ ಬಿಜಯಂಗೈದ ಹದನೇನು || ೬ ||

ನೆತ್ತಿಯೊಳು ಜಡೆಗೇನು ಕಾರಣ |
ಕತ್ತಿನೊಳು ರುದ್ರಾಕ್ಷವೇತಕೆ |
ಕತ್ತಿಬಿಲ್ಗಳ ಧರಿಸಿದವರಿಗುಂಟೆ ಮುನಿವೃತ್ತಿ ||
ಎತ್ತಣಿಂದಾಗಮನವಿಲ್ಲಿಗೆ |
ಮತ್ತೆ ಮುಂದಕೆ ಪಯಣವೆಲ್ಲಿಗೆ |
ಚಿತ್ರವಿಪುದಿಂದೆನ್ನ ಮನವಿಯನು ಬಿತ್ತರಿಪೆನೊಸೆದು || ೭ ||

ಪೊರೆವನೀಗಿರಿಶಿಖರದೊಳು ಸ |
ಮ್ಮರಸನಹ ಸುಗ್ರೀವದೇವನು |
ಪರಮಸತ್ಯವ್ರತಿ ಸುಧರ್ಮಯವಾರಗುಣಯುತನು ||
ಅರಿಯಲಾತನಮಾತ್ಯನಾನಹೆ |
ಸುರುವ ವಾನರಕುಲವು ನಮ್ಮದು |
ಕರೆವರೆನ್ನನು ಹನುಮನೆನ್ನುತೆ ಕಾಮರೂಪಿನಗೆ || ೮ ||

ದೇವತಾಂಶರೆ ನಿಮ್ಮ ಮೈತ್ರಿಯ |
ಪಾವನಕೆಯನು ನೆನೆದು ವರಸು |
ಗ್ರೀವನೆನ್ನನು ಕಳುಹೆ ಬಂದೆನು ಬೇಡಲೀಗದನು ||
ಈ ವಿಚಾರದೊಳಿನಿತು ಕೊರತೆಯ |
ಭಾವಕಿಂದಂಟಿಸದೆ ನಮ್ಮನು |
ಕಾವುದೆಂದೊರೆದೆರಗೆ ರಾಘವನೆಂದನನುಜಂಗೆ || ೯ ||

ಅನುಜ ಕೇಳ್ದಿಯ ಹನುಮನಾಡಿದ |
ವಿನಯಗುಣರಸಭರಿತಮಾದೀ |
ಘನತರೋಕ್ತಿಯನಿದು ಗಹನಮಜ್ಞರಿಗಯೋಗ್ಯರಿಗೆ ||
ಅನುಗುಣವು ವೇದಾಂಗನಿಗಮಾ |
ದ್ಯನುಪಮಿತವಿದ್ಯೆಗಳನರಿತ |
ಗನುಪಮನನದರಿಂದಮಂಗೀಕರಿಸು ನೀನೆನಲು || ೧೦ ||

ಬಳಿಕ ಲಕ್ಷ್ಮಣನನಿಲತನುಜಂ |
ಗುಲಿದನೀಪರಿ ನಿನ್ನ ದೆಸೆಯಿಂ |
ದಲಘುಬಲಸುಗ್ರೀವದೇವನ ವರಗುಣಾವಳಿಯ ||
ತಿಳಿಯಲಾದೆವು ನಾವು ಕಷ್ಟಕೆ |
ಸಿಲುಕಿಯಾತನ ಸಖ್ಯವನೆ ಸಂ |
ಗಳಿಸಬಂದಿಹೆವೆಮ್ಮ ಬರವಿಂಗಿದುವೆ ಕಾರಣವು || ೧೧ ||

ಎನುತೆ ಪೇಳಿದ ನುಡಿಗೆ ಪವನನ |
ತನಯನುರೆ ಹಿಗ್ಗಿದನು ಮನದೊಳ |
ಗಿನತನೂಜನು ಗೆಲಿದನಳಿದನು ಸುರಪತಿಯ ಸೂನು ||
ಮನದ ಸಂಶಯವಿಂದು ಹಿಂಗಿತು |
ಘನಪರಾಕ್ರಮರಿವರ ಕಜ್ಜಕೆ |
ತನುವ ತೆತ್ತಿಹೆನಿಂದು ಮೊದಲಾಗೆನುತೆ ನಿಶ್ಚಯಿಸಿ || ೧೨ ||

ಕರವ ಮುಗಿಯುತೆ ರಾಮಚಂದ್ರನ |
ಮಿರುಗುವಾನನವನು ನಿರೀಕ್ಷಿಸು |
ತೊರೆಯಬೇಹುದು ನೀವದಾರೆಂಬುದನು ತನಗೊಲಿದು ||
ತರತರಿಸುತಿದೆ ಮನವು ಬೇಗದೊ |
ಳರಿಪಬೇಕೆಂದೆನಲು ರಾಘವ |
ನಿರದೆ ಸೌಮಿತ್ರಿಯನು ನೋಡಲ್ಕಾತನಿಂತೆಂದ || ೧೩ ||

ಒರೆವೆನಾಲಿಸು ಕಪಿಕುಲೋತ್ತಮ |
ಧರಣಿಗೊಡೆಯನು ದಶರಥೇಂದ್ರನು |
ಮೆರೆವಯೋಧ್ಯೆಯೊಳಾಳುತಿರ್ದನು ಸುತರು ನಾವವಗೆ ||
ಹಿರಿಯನೀರಘುರಾಮ ತಂದೆಯ |
ಪರಮಭಾಷೆಯ ಸಲಿಸಬೇಕೆಂ |
ದರಸುವೆರಸುತ್ತೆನ್ನನೊಡಗೊಂಡೈದಿದನು ಬನಕೆ || ೧೪ ||

ಚರಲು ಶಾಪದವಿಯೊಳು ರಾವಣ |
ನಿರದೆ ಮೋಸದೊಳೀತನರಸಿಯ |
ನರಿಯದೊಲ್ಕದ್ದೊಯ್ದುದರಿಂದಿಲ್ಲಿಗೈದಿದೆವು ||
ಬರುತುಮರಿದೆವು ನಿಮ್ಮ ರಾಯನು |
ನೆರೆ ಬಲಾನ್ವಿತನತುಳಸತ್ಯಾ |
ದರನು ಮೈತ್ರಿಯ ಬೆಳಸಲೆಮ್ಮಯ ಕಾರ್ಯವಹುದೆನುತೆ || ೧೫ ||

ಬಂದೆವಿಲ್ಲಿಗೆ ನಿಮ್ಮ ರಾಯನ |
ನೊಂದಿಹುದು ಮೇಣೆಮ್ಮ ಕಜ್ಜವ |
ದಿಂದುವೊಡಲಾಗವನೆ ಶರಣೆಂದೆನುತೆ ನಂಬಿಕೆಪ್ಪ ||
ಕಂದುಕಸರಿಕೆ ನಮ್ಮ ಮೈತ್ರಿಯೊ |
ಳೊಂದುಮಿಲ್ಲದ ತೆರದೆ ನಡೆವೆವು |
ಮುಂದೆ ಪರಿಕಿಸೆ ವೇದ್ಯಮಪ್ಪುದು ಸಕಲವಾಕಂಗೆ || ೧೬ ||

ತಿಳಿಯಲಾನತಕಲ್ಪಭೂಜನು |
ಮಲಿತ ಪಗೆವರ ಲಯಕೃತಾಂತನು |
ಜಲಜಸಖನನ್ವಯದ ಭೂಪನು ಕೆಳೆಯನೆಳಸಿಹನು ||
ಇಳೆಯ ರಮಣರದಾವನಂಘ್ರಿಗೆ |
ತಲೆಯ ಬಾಗುತೆ ನಪ್ರಿಸಿದ್ಧನೊ |
ಕಲಿಗಳಗ್ರಣಿ ರಾಘವೇಶನು ಕೆಳೆಯನೆಳಸಿಹನು || ೧೭ ||

ಪ್ಲವಗಪತಿ ಸುಗ್ರೀವನಿಂದಹು |
ದವನಿಜೆಯ ಸಾಧನವು ಮಿಕ್ಕಿನ |
ಕವಡುಗಳ ಪಾಡಲ್ಲ ನೂಕದಿದಜಭವಾದ್ಯರಿಗೆ ||
ಅವನ ಸೇರಿಯೆ ಮನದ ದುಗುಡವ |
ತವಿಸುವೆನು ತಾನೆನುತುಮೀಗೆ |
ಮ್ಮವನಿಪತಿ ಬಂದಿಹನು ನಿಮ್ಮೊಡೆಯನ ಸಮಾಗಮಕೆ || ೧೮ ||

ನುಡಿಯದೇನಿತುದಿನ್ನು ಕಾರ್ಯ |
ಕ್ಕೊಡಬಡಿಸು ನೀನೆನಲು ಸಂತಸ |
ಗಡಲೊಳಗೆ ಮುಳುಗುತ್ತೆ ತನ್ನಯ ಮೊದಲಿನಾಕೃತಿಯ ||
ಪಡೆದು ಭುಜಗಳೊಳವರನೇರಿಸು |
ತೊಡೆಯನಹ ಸುಗ್ರೀವನಿಪ್ಪಾ |
ಕಡೆಗೆ ಧೀಂಕಿಟ್ಟುವನಿಳುಹಿದನವನ ಸರಿಸದೊಳು || ೧೯ ||

ಅರಿಪಿದನು ಸುಗ್ರೀವಗೀಸೃಪ |
ವರರ ಚರಿತವನೆಲ್ಲ ತಾವಿಂ |
ದಿವಿಜಯರ್ಕೈದಿಹರು ಸಖ್ಯವ ಬೆಳಸುವಿಚ್ಛೆಯಲಿ ||
ಪರಮಪುರುಷರ ಸತ್ಕರಿಪುದೆನೆ |
ಭರದೆ ಬಂದುಪಚರಿಸುತವರನು |
ಹರಿಸುದಿಂದೆನ್ನಘವು ನಿಮ್ಮಯ ದರ್ಶನದೊಳೆನುತೆ || ೨೦ ||

ದೇವತಾಂಶರು ನೀವ್ವ ನಾನಿಂ |
ದೀವನಂಗಳೊಳಿರ್ಪ ಕೋಡಗ |
ನಾವಕಾಲದೊಳೇನೊ ತನ್ನಯ ಚಿತ್ತಪತಿಚಪಲ ||
ಭಾವಿಸಲ್ಕಿಮಗೆಂತು ಬರ್ಪುದು |
ಭಾವದೊಳ್ನಂಬುಗೆಯು ತನೊಳು |
ಪಾವಕನ ಸಮ್ಮುಖದೊಳೆಸಗಲು ನೇಹಮಂ ನೆಲೆಯು || ೨೧ ||

ದೇವರೊಪ್ಪುವುದೆನೆ ಕೃಶಾನುವ |
ಪಾವಮಾನಿಯು ಸಜ್ಜುಗೊಳಿಸ |
ಲ್ಕಾವನೇಚರಪತಿಯು ಕೈಯನು ನೀಡೆ ರಾಘವನು ||
ಭಾವಶುದ್ಧಿಯೊಳಾತ್ಮ ಕರದಾ |
ಜೀವದಿಂದಡನೊಡನೆ ಪಿಡಿಯ |
ಲ್ದೇವದುಂದುಭಿ ಮೊಳಗಿತಭ್ರದೆ ಸುರರು ಘೋಷನಲು || ೨೨ ||

ಇಂದು ನಿನ್ನಯ ನೇಹವೊದವಿತು |
ಮುಂದೆ ತನ್ನೇಳಿಗೆಗೆ ಕುರುಹಿದು |
ಮಂದಿಮಾರ್ಬಲಸತಿಗಳೊಡನಾರಾಜ್ಯವನು ನೀಗಿ ||
ದಂದುಗಂಬಡುತಿರ್ದ ತನ್ನನು |
ಬಂದು ನೀನೀಗುದ್ಧರಿಸಿದ್ಯೆ |
ಬಂಧು ನೀನೆನಗೆಂದನಾಸುಗ್ರೀವ ಕೈಮುಗಿದು || ೨೩ ||

ಸಂತವಿಸಿದನು ರಾಮನವನನು |
ಚಿಂತೆ ಬೇಡಿದಕಿನ್ನು ನಿನ್ನ ದು |
ರಂತಮಾದಳಲಿಂಗೆ ನೀಡು ಜಲಾಂಜಲಿಯನಿಂದು ||
ಪಿಂತೆಯೇ ಕೇಳ್ದಿಹೆನು ನಿನ್ನಾ |
ದ್ಯಂತಚರಿತವನೆಲ್ಲ ನೀನಿ |
ನ್ನಂತರಂಗವಿಶುದ್ಧನಾಗಿಹ ಸಖನು ತನಗೆಂದ || ೨೪ ||

ಕೆಲವುದಿನಗಳನಿಂತು ಕಳೆಯುತೆ |
ಸಲುಗೆ ಪೆಚ್ಚಿದ ಬಳಿಕ ರವಿಜನು
ಲಲನೆಯೊರ್ವಳು ಬಿಸುಟಗಂಟನು ನೆನೆಯುತದ ತರಿಸಿ ||
ಲಲಿತಗುಣನಿಧಿ ರಾಮಚಂದ್ರನೆ |
ಖಲಶಿರೋಮಣಿಯೊರ್ವದನುಜನು |
ಬಲುಹಿನಿಂದೊಬ್ಬಳನು ಪಿಡಿಯುತೆ ಗಗನಮಾರ್ಗದಲಿ || ೨೫ ||

ಪೋಗುತಿಹ ಸಮಯದೊಳು ಸತಿ ತಾ |
ನೀಗುರುತನೆನ್ನರೆಯಗೀವವ |
ರಾಗಿ ನೀವೆಂದಿಡಲು ನಾವಿದ ಬಳಿಯೊಳಿರಿಸಿದೆವು ||
ಈಗ ನಿನ್ನಯ ಕಥೆಯ ಕೇಳಲು |
ತಾಗಿತೆನ್ನಯ ಮನಕೆ ತಾನಾ |
ನಾಗವೇಣಿಯೆ ಸೀತೆಯಾಗಿರವೇಳ್ಕುಮೆಂಬೂಹೆ || ೨೬ ||

ನೋಡು ನೀನಿದನೆಂದೊಡಾಗಳೆ |
ನಾಡೆ ಗಂಟನು ಬಿಚ್ಚಿ ಕಂಡನು |
ಖೋಡಿಯಿಲ್ಲದ ಜನಕಜೆಯ ನಿಖಿಲಾಭರಣಗಳನು ||
ರೂಢಿಸಿದ ಶೋಕಾಬ್ಧಿಯೊಳು ಮುಳು |
ಗಾಡುತಾಗಳು ತನ್ನ ಮುದ್ದಿನ |
ಗಾಡಿಕಾತಿಯೆ ಬಾರ ಬಾ ರಾಜೀವಲೋಚನೆಯೆ || ೨೭ ||

ಎತ್ತಲಿಹೆ ನೀಂ ದೇವಿ ನಾನಿಂ |
ದೆತ್ತಲಿರ್ಪೆನು ನಿನ್ನ ಸುದ್ದಿಯ |
ನೆತ್ತಿ ಹೇಳುವರಿಲ್ಲಲೇ ಮತ್ತೇನನೆಸಗುವೆನು |
ಮತ್ತನಹ ಖಳರಾವಣನು ತಾ |
ನೆತ್ತಿಕೊಂಡೈದಿದುದನರಿತೆನು |
ಗೊತ್ತುಗುರಿಯಾವುದುಮನರಿಯೆನು ಖೂಳನಾನೆಲೆಯ || ೨೮ ||

ನೀರೆ ನಿನ್ನಾಭರಣಗಳ ಕ |
ಣ್ಣಾರೆ ನೋಡುತೆ ಸುಖಿಪೆನೆನೆ ಕ |
ಣ್ಣೀರು ತಾನದಕೀಯದೆಡೆಯನು ತುಂಬಿತುಳುಕುತಿದೆ ||
ಚಾರುಮುಖಿ ಖಳನೊಯ್ದ ದಾರಿಯ |
ತೋರಬೇಕೆನಗೆಂದು ತೊಡಿಗೆಯ |
ಜಾರಿಸಿದೆ ಕಡುಜಾಣೆ ನಿನಗಿನ್ನೆಣೆಯನಾಂ ಕಾಣೆ || ೨೯ ||

ಮೊದಲು ಮಿಗಗಳು ಬಳಿಕ ಖಗಗಳು |
ಚದರಿದಾಭರಣಂಗಳೀಗಳು |
ಸುದತಿ ನಿನಗೊದವಿರ್ಪ ಕಷ್ಟವನರುಹಿದುವು ತನಗೆ ||
ವಿದಿತಮಾದೊಡಮೆನಗೆ ಸುದ್ದಿಯು |
ಪದುಮಗಂಧಿಯೆ ನಿನ್ನನೆಳೆದೊ |
ಯ್ದಧಮರಾಕ್ಷಸನಿರ್ಪ ತಾಣವು ಮಾತ್ರ ತಿಳಿಯದಲಾ || ೨೦ ||

ಎನುತೆ ಹಂಬಲಿಸುತ್ತುಮೊಡವೆಯ |
ನನುಜ ನೀಂ ನೋಡೆಂದು ನೀಡುತೆ |
ತೊನೆಯುತೊಡನೆದೆಗೊತ್ತಿ ಚುಂಬಿಸಿ ಪಲವುರೀತಿಯೊಳು ||
ನೆನೆನೆನೆದು ಶೋಕಿಸುತೆ ನೃಪನಿ |
ಪ್ಪನುವನಾಸುಗ್ರೀವನೀಕ್ಷಿಸಿ |
ಜನಪ ನಿನಗಿದು ಸರಿಯೆ ಧೀರೋದಾತ್ತನಾಯಕಗೆ || ೨೧ ||

ದೊರೆತ ಕುರುಹಿದು ಸಾಕು ನಾನೀ |
ಗರಸಿ ನಿನ್ನಯ ಪಟ್ಟದರಸಿಯ |
ನರಿಯದಂದದೆ ಕಳವಿನಿಂ ಕೊಂಡೊಯ್ದ ಪಾತಕಿಯು ||
ಸುರನರೋರಗಲೋಕಗಳೊಳೆ |
ಲ್ಲಿರುವನೆಂಬುದನರಿದು ನಿನಗಾ |
ನೊರೆವೆ ನೀನಿದಕಿನಿತು ಚಿಂತಿಪುದೇಕೆ ನಾನಿರಲು || || ೨೨ ||

ಚಿತ್ತದೊಳು ನೆಮ್ಮದಿಯ ನಾಸುಕು |
ಮೊತ್ತಿಕಳೆ ದುಗುಡವನು ನೀತಿಯು |
ಬಿತ್ತರಿಪುದಲೆ ಚಿಂತೆ ಚಿತೆಗೆಣೆಯಪ್ಪುದೆಂಬುದನು ||
ಬತ್ತುವುದು ಬೇಸಗೆಯ ಕೊಳದವೊ |
ಲುತ್ತಮೋತ್ತಮಬಲವದಿರೆಯುಂ |
ಮಿಕ್ಕು ತಾನೆನಿಸುವುದು ಬೆಸನವು ಮನುಜಾಳಿಯೊಳಗೆ || ೨೩ ||

ಎಂದು ವರಸುಗ್ರೀವನಾಡಲು |
ತಂದು ಧೈರ್ಯವ ಮನಕೆ ರಘುಪತಿ |
ಯೆಂದನಿನ್ನಾರೆನಗೆ ಹಿತಚಿಂತಕರು ನಿನ್ನವೊಲು ||
ತಂದೆ ಕಪಿವರ ನಿನ್ನ ಬಲದಿಂ |
ದಿಂದುಮುಖಿಯನು ಸೇರುವಾಸೆಯು |
ನೊಂದಿ ಧೈರ್ಯದೊಳಿರ್ಪೆನಲ್ಲದೆ ಬೇರೆಯೇನಿಹುದು || ೨೪ ||

ಸತ್ಯವೀಸುಡಿಯಿದರೊಳಿಲ್ಲವ |
ಸತ್ಯವೆಂಬುದು ನಿನಗೆ ಭಾಷೆಯು |
ನಿತ್ತವೊಲು ಸಲಿಸುನೆನು ತಾಸದ ನೊತ್ತವೊದಲೊಳಗೆ ||
ಚಿತ್ತಕಾಗೆ ಸಮರ್ಪಕವು ಬಳಿ |
ಕುತ್ತರದೆ ನೀನೆನ್ನ ಕಾರ್ಯವ |
ನುತ್ತಮನೆ ಕೈಗೂಡಿಸುವುದೆನಲೆಂದನಾ ರವಿಜ || ೩೫ ||

ಅರಸ ನಿನ್ನಯ ಕರುಣವಿರಲಾ |
ಸುರಪನುಖದಿಕ್ಪತಿಗಳೈಸಿರಿ |
ದೊರೆವುದೆನೆ ಭಲ್ಲೂಕಗೋಲಾಂಗೂಲರಾಜ್ಯವಿದು ||
ಒರೆಯುವಿನ್ನೇಸರದು ತನ್ನಯ |
ಪರಕೆ ಕೈಗೂಡಿಸುದು ನಿನಗಿ |
ನ್ನೊರೆವೆನಾಲಿವುದಗ್ರಜನ್ಮನ ವಾಲಿಯ ಘಟಿತಗಳ || ೩೬ ||

ವೀರನಿವನನುಕೋಪಯಕೆ ಮೊದ |
ಲೂರ ಹೊರವಂಟಂಬುನಿಧಿಗಳ |
ಸೇರಿಯುವರೊಳು ಮಿಂದು ನಿತ್ಯವು ಮರಳಿಬರುತಿಹನು ||
ಭೂರಿಭುಜಬಲವನು ಪರೀಕ್ಷಿಸೆ |
ತಾರುತಟ್ಟನೆ ಘನತರಾದ್ರಿಯ |
ತೋರವಾಗಿಹ ಕೋಡುಗಲ್ಲಗಳ ಕಿತ್ತು ಬಿಸುಡುವನು || ೩೭ ||

ಒಂದುದಿನವಿವನೊಡನೆ ಕಾಳಗ |
ಕೆಂದು ಬಂದನು ಸುರರಿಗಲಗಹ |
ದುಂದುಭಿಯೆನಿಪ್ಪೂರ್ವದೈತ್ಯನು ಪರ್ವತೋಪಮನು ||
ಹೊಂದಿ ಮಹಿಷಾಕೃತಿಯ ಕೋಡುಗ |
ಳಂದಚಂದದೊಳೊಪ್ಪುತಿಸನ |
ನಿಂದು ಕೆಣಕಿದನಾಗಳಂಟಿತು ವಿಷಮವಹ ಸಮರ || ೩೮ ||

ಕಾದಿದರು ಸಮಜೋಡಿಯೆಂದೆನ |
ಲಾದುದದ್ಭುತರಣವು ಕೊನೆಯೊಳ |
ಗಾದುರಾತ್ಮಕದುಂದುಭಿಯನೆಮ್ಮಣ್ಣನೊರಸಿದನು ||
ಹೋದುದಸುವೆಂದಿರದೆ ಪೆಣದಾ |
ಪಾದವೊಂದನು ಹಿಡಿದು ಬಿಸುಡ |
ಲ್ಕಾಧರಾಂಗಣದಾಚೆ ಬಿಳ್ದುದು ಯೋಜನಾಂತರದ || ೩೯ ||

ಬಿಸುಟ ರಭಸಕ್ಕದರ ಬಾಯಿಂ |
ದೊಸರ್ದ ರುಧಿರವು ಮುನಿಮತಂಗನ |
ಮಿಸುಪ ಪುಣ್ಯಾಶ್ರಮಕೆ ಬೀಳಲು ಖತಿಯು ತಾಳ್ದವನು ||
ಅಸಮಸಾಹಸಿಯೆಂಬ ಗರ್ವದೊ |
ಳೆಸೆದನಿದನಾವಾಲಿಯುದರಿಂ |
ದಸುವ ನೀಗಲಿ ಬಂದೊಡೀವನಕೆಂದು ಶಪಿಸಿದನು ||೪೦||

ಇತ್ತಲದರಿಂದವನು ಬಾರನೆ |
ನುತ್ತುಮಿಲ್ಲಿಯೆ ಸೇರಿಕೊಂಡೆವು |
ಮತ್ತೆ ಇನಗವನೊಡನೆ ಹಗೆತನವೊಗೆದ ಕಾರಣವ ||
ಚಿತ್ತರಿಸುವೆನು ಕೇಳು ದುಂದುಭಿ |
ಸತ್ತನವನಿಂದೆಂಬುದರಿಯುತೆ |
ಮತ್ತನಹ ಮಾಯಾವಿಯೆಂಬವನವನ ತನುಭವನು ||೪೧||

ಅಟ್ಟಹಾಸದೊಳೆಂದು ವಾಲಿಯು |
ಕುಟ್ಟುವೆನು ತಾನೆನುತೆ ಬರುತಿರ |
ಲಟ್ಟುತಗ್ರಜನವನ ಬೆನ್ನಂಟಿರದೆ ಪೋಗುತಿರೆ ||
ತಟ್ಟನವನಂಜುತ್ತೆ ಕಡು ಕಂ |
ಗೆಟ್ಟು ಹೊಕ್ಕೊಡೆ ಗವಿಯನೊಂದನು |
ದಿಟ್ಟಕಪಿವರನವನ ಹಿಂದೆಯೆ ಬಿಡದೆ ನುಗ್ಗಿದನು ||೪೨||

ಜತೆಯೊಳಿರ್ದಾಂ ನುಸುಳಬೇಡೆನೆ |
ಖತಿಯನಾನುತ್ತೆನ್ನ ಗಜರಿಸಿ |
ಜತನದಿಂ ಕಾದಿಹುದು ಬಾಗಿಲೊಳೆಂದು ನನಗೊರೆದು ||
ಅತಿಪರಾಕ್ರಮಿಯೊಂದುವರುಷವು |
ಗತಿಸಿದೊಡಮಿತ್ತೃದದಿರೆಯು |
ದ್ಭುತಮೆನಿಪ ಕೋಲಾಹಲಧ್ವನಿಯೊಂದು ಕೇಳಿಸಿತು ||೪೩||

ಕೇಳಿತಿಲ್ಲವು ನಮ್ಮವನ ದನಿ |
ಕೇಳಿಸಿತು ರಕ್ಕಸನ ಹುಯ್ಯಲು |
ತಾಳಿ ದುಃಖವ ಮನದೊಳಣ್ಣನು ಮೃತಿವಡೆದನೆಂದು ||
ಗೋಳಿಡುತೆ ಕೆಲದಿನವ ಕಳೆದೆನು |
ವಾಲಿಯಾಸೆಯುಮಿಲ್ಲದಿರೆ ನಾಂ |
ಕೀಲಿಸಿದೆನಾಗವಿಯ ಬಾಗಿಲನೊಂದು ಶಿಲೆಯಿಂದೆ ||೪೪||

ಬಳಿಕಮಲ್ಲಿಂ ನಗರಿಗೈತರೆ |
ಬಲುಹಿನಿಂ ಮಂತ್ರಿಗಳು ರಾಜ್ಯವ |
ನಿಳುಹಿದರು ಕನ್ನೊಳಗೆ ಕಳೆದೆನು ಪಲವುಕಾಲವನು ||
ಗೆಲವನೊಂದಿದ ವಾಲಿ ಬಾಗಿಲ |
ಶಿಲೆಯ ಕಂಡದನೊದೆದು ಬಂದನು |
ವಿಲಯಕಾಲದ ರುದ್ರನಾಟೋಪವನು ತೋರುತ್ತೆ || ೪೫ ||

ಲಲನೆಯಿರಲೆನ್ನ ವಳನಿರದು |
ಯ್ಯುಲಿಯಬಾರದ ಹಿಂಸೆಗೈಯು |
ತ್ತೆಳೆದು ನೂಕಿದನೆನ್ನನೂರಿಂ ಪೊರಗೆ ಪೋಗೆನುತೆ ||
ಅಳಲಿನಾಂಕಂಗೆಟ್ಟು ಬರುತಿರೆ |
ಘಳಿಲನೀಮಂತ್ರಿಗಳು ಸಹಿಸದೆ |
ಬಳಿಯೆ ಬಂದರು ವಾಸವಾದ‌ದು ನಮಗೆ ಗಿರಿಯೊಳಗೆ || ೪೬ ||

ಅದೆಕೊ ಸೊರಗಿದ ದುಂದುಭಿಯ ಶವ |
ವಿದಿರೊಳಿರ್ಪುದದನು ನಿನ್ನಯ |
ಪದದಿನೊದೆದಿನ್ನೂರುಬಿಲ್ಲಂತರಕೆ ಹಾರಿಸಲು ||
ಸದೆವೆ ಲೀಲೆಯೊಳಗ್ರಜನನೆನ |
ಲದಟ ನೋಡೆಂದಾಗ ರಾಘವ |
ನೊಸೆಯೆ ಪಾದಾಂಗುಷ್ಠದಿಂದದು ಹತ್ತುಯೋಜನದೆ || ೪೭ ||

ಬೀಳುಚ್ಚರಿವಡುತೆ ಮಗುಳಿರ |
ದಾಳುತನವಿನ್ನೊಂದ ತೋರ್ಪುದು |
ಸಾಲವೃಕ್ಷಗಳೇಳು ಮೆರೆಯುತೆ ಕಾಣುತಿಹುವಿದೆಕೊ ||
ವಾಲಿಯೊಂದರೊಳೊಂದುವೆಜ್ಜವ |
ಕೋಲನೆನಿತನೊ ಜಿಸುಟು ಕೊರೆದನು |
ಕೋಲೊಳೊಂದರೊಳೆಸಗಿ ವೆಜ್ಜವ ಬಲುಹುದೋರ್ಪುದೆನೆ || ೪೮ ||

ನಕ್ಕನಸುರಾರಾತಿ ಕಪಿಗಳ |
ದಕ್ಕಡಿಗನೆಂದುದಕೆ ಬಿಸದದೊ |
ಳಿಕ್ಕತುಳಬಿಲ್ಲಿನೊಳು ಪೂಡುತೆ ಕಣೆಯನೊಂದನಿದೆ ||
ಪೊಕ್ಕುವೃಕ್ಷಗಳೇಳರೊಡಲೊಳ |
ಗಿಕ್ಕೆ ವೆಜ್ಜವನಾಗ ರವಿಸುತ |
ನಕ್ಕಜವನಾಂತ್ಕೆದೆ ಪೊಗಳುತ್ತೆಗಗಿದನು ಪದಕೆ || ೪೯ ||

ಆಗ ರಾಘವನೆಂದನೆನ್ನೊಳ |
ಗೀಗ ಪುಟ್ಟಿತೆ ಭರವಸವು ನೀಂ |
ಬೇಗನೈದಿಯೆ ವಾಲಿಯನು ಕರೆಯಿನ್ನು ಕಾಳಗಕೆ ||
ಪೋಗು ಬೆದರದಿರೆನ್ನ ಬಾಣದ |
ಲಾಗುವೇಗವ ತೋರುತವನನು |
ಸಾಗಿಸುವೆನಂತಕನ ಬಳಿಗೆನಲಾಗ ಕಪಿವರನು || ೫೦ ||

ಹಾರಿದನು ಕಿಷ್ಕಿಂಧೆಯೆಡೆಗಿರ |
ದಾರಿದನು ಪಾಪಾತ್ಮ ನೀಚನೆ |
ಬಾರೆಲವೊ ಪೌರುಷವು ನಿನಗಿರೆ ಕದನಕೆಂದೆನುತೆ ||
ಆರುಭಟೆಯನು ಕೇಳಿ ವಾಲಿಯು |
ದಾರು ಬಂದವನೆನುತೆ ನಡೆತಂ |
ದೂರ ಮುಂದಣ ವನದೆ ನಿಂದಿಹ ತಮ್ಮನನು ಕಂಡು || ೫೧ ||

ದುರುಳನಿವಗೆನ್ನೊಡನೆ ಸೆಣಸೇ |
ಹರಹರಾ ವಿಸ್ಮಯವಿದೇನೈ |
ನರಿಯು ಸಿಂಹದ ಕೂಡೆ ಮಲೆವುದು ಕಾಲಧರ್ಮವಲಾ ||
ಅಗಸಿಯನು ಕಳೆಕೊಂಡ ದುಃಖದೊ |
ಳುರಿಯ ಹಾಯ್ವೆಯು ತಮ್ಮ ನಿನ್ನೀ |
ಪರಿಯು ಲೇಸಾಯ್ತೆಂದು ತಿವಿದನು ಬಲಿದ ಮುಷ್ಟಿಯೊಳು || ೫೨ ||

ತರಹರಿಸಿದನು ಮತ್ತೊಡನೆ ಚೇ |
ತರಿಸಿಯಣ್ಣನ ಬದಿಯ ತಾಗಿದೊ |
ಡೆರಗಿದನು ಕಲಿವಾಲಿ ಕೋಪಾಟೋಪಮಯನಾಗಿ ||
ಅರಿಯಲೀಸುಗ್ರೀವ ಬಡವನೆ |
ಸರಿಸರಿಯೆ ಕಾದಿದನು ರಾಘವ |
ನರಿಯದಾದನು ವಾಲಿಯಾರ್ ಸುಗ್ರೀವನಾರೆಂದು || ೫೩ ||

ರೂಪವೊಂದೇ ವಜ್ರಕಾಯದ |
ಚಾಪವೊಂದೇ ವೀರರುಗ್ರಾ |
ಟೋಪವೊಂದೇ ಸರಳನೆಸೆವೊಡದೇನನಾಹುಕವೊ ||
ಭಾಪು ತನ್ನಯ ನುಡಿಗೆ ವಿಧಿಯಾ |
ರೋಪಿಸಿತೆ ವಿಕಳತೆಯನಾನತಿ |
ಪಾಪಿಯೆಂದಾನೃಪತಿ ಚಿಂತಿಸುವನಿತರೊಳಗಿತ್ತ || ೫೪ ||

ವಾಲಿಯಹಾಬಿರುಮುಷ್ಟಿಘಾತವ |
ತಾಳಲಾರದೆ ಋಶ್ಯಮೂಕದ |
ಶೈಲಕಾಸುಗ್ರೀವನೋಡಲುನೆನೆದು ಶಾಪವನು ||
ಕಾಲನಲ್ಲಿಡಲಂಜುತಊರಿಗೆ |
ಲೀಲೆಯಿಂ ತಿರುಗಿದನು ವಾಲಿಯು |
ಕಾಲಗಳೆಯದೆ ಬಂದನಿನಜನ ಬಳಿಗೆ ರಘುವರನು || ೫೫ ||

ಬಂದ ರಾಮನನಾಕಪೀಶ್ವರ |
ನಂದು ನುಡಿಸದೆಯಸ್ತ್ರ ಮೊಗವಿಂದೆ |
ಮುಂದಕೈದುತೆ ತನಗೊಗೆದ ಸಂದೇಹವನು ತಿಳಿಸಿ ||
ಇಂದು ತನ್ನಯ ತಪ್ಪ ಮನ್ನಿಸು |
ದುಂದೆ ನಾನಿರದಿದಕುಪಾಯವ |
ನೊಂದನೆಸಗುವೆನೆಂದು ಸಂಪಗೆವೂಗಳನು ತರಿಸಿ || ೫೬ ||

ಬಂಧಿಸುತೆ ಹಾರವನು ಗುರುತಿದು |
ಸಂದೆಗವ ತೊಲಗಿಪುದು ಧರಿಸೆಂ |
ದಂದು ಕೊರಳಿಗೆ ಸಾರ್ಚೆ ರಾಮನನಿನಜನಾದರಿಸಿ ||
ಇಂದು ತನ್ನಯ ಕಾರ್ಯಜಯವಹು |
ದೆಂದು ಸಕಲರು ಬೆರಸಿ ಮುಗುಳ್ಕೈ |
ತಂದನಾಕಿಷ್ಕಿಂಧೆಯುಪವನದೆಡೆಗೆ ಕಪಿವರನು || ೫೭ ||

ಆಲಿದನು ಮೊದಲಂತೆ ಗರ್ಜನೆ |
ಕೇಳಿಸಿತು ಕಿವಿಗಳ್ಗೆ ತಾಂ ಕ |
ಣ್ಣಾಲಿಗಳು ಕೆಂಪಡರೆ ಜಗ್ಗನೆ ಸಜ್ಜಿವನೆಯಿಂದೆ ||
ಕಾಲ ಪೆಂಡೆಯ ಝಣಝಣೆನುತಿರೆ |
ಕಾಲಭೈರವನಂತೆ ತಮ್ಮನ |
ಕಾಲ ಮುಗಿಯಿತ್ತೆನುತೆ ಬಂದನು ವಾಲಿ ರಿಪುಕೂಲಿ || ೫೮ ||

ಪೊರಮಡುತ್ತಿರೆ ತಾರೆ ತಡೆದೆ |
ನ್ನೆರೆಯ ಹೋಗದಿರಿಂದು ಸಮರ |
ಕ್ಕರಿಯಬಾರದು ದಿಕ್ಕು ಕಗ್ಗತ್ತಲೆಯು ಕವಿದಿಹುದು ||
ಅರಿದೆನಂಗದನಿಂದಮಿರ್ವರು |
ಧರಣಿಪರು ಬಲಶಾಲಿಗಳು ಸೋ |
ದರರಯೋಧ್ಯಾಧಿಪನ ಸುತರಾರಾಮಲಕ್ಷ್ಮಣರು || ೫೯ ||

ಹರೆಯುದವರವರಂತೆ ದುರ್ಧರ |
ಧುರಧುರಂಧರರಂತೆ ನಂಬಿದ |
ಶರಣಜನರ್ಗೆ ರಕ್ಷಕರು ತಾವಂತೆ ರಘುವರರು ||
ಕರಕರಿಪ ಸುಗ್ರೀವಗಭಯವ |
ನೀಡೆ ಕೊಟ್ಟಿಹರಂತೆಯದರಿಂ |
ದುರುಬಿನಿಂದೀನಿಶೆಯೊಳೈದಿಹನಂತೆ ಕಾಳಗಕೆ ||೬೦||

ಜಾಣ ನಿನ್ನಯ ತಮ್ಮ ಬರಿದೇ |
ತ್ರಾಣವಿಲ್ಲದರೊಡನೆ ನೇಹವ |
ನೇನುಕಾರಣ ಬಳಸುವನು ಬಲುವೀರರವರರಿಯೆ ||
ಮಾಣುಮಾಣವರೊಡನೆ ನಿನ್ನಯ |
ಕೇಣಸರವಿಂದಿನೊಳು ಸಾಗದು |
ಪ್ರಾಣನಾಥನೆ ಧಿಕ್ಕರಿಸದಿರು ಪೆಣ್ಣ ನುಡಿಯೆಂದು ||೬೧||

ಆಗದಾಗದು ಪತಿಯೆ ವೈರವು |
ರಾಘವೇಶನೊಳಕಟ ಪಿರಿದಹ |
ರಾಗದಿಂ ಸುಗ್ರೀವಗಿತ್ತಾ ಯೌವರಾಜ್ಯವನು ||
ತ್ಯಾಗಿಯೆಂಬ ಸುಕೀರ್ತಿಪಡೆಯುತೆ |
ಭೋಗಭಾಗ್ಯವನನುಭವಿಸುತಾ |
ಭೋಗಿಶಯನನ ತೆರದೆ ಪದುಳದೊಳಿಹುದು ನೀನೆನಲು ||೬೨||

ಧುರಕೆ ಪೊರಮಡುತಿರ್ಪ ನಿನ್ನನು |
ಹರಿಹರಾದ್ಯರು ತಡೆಯಲಮ್ಮರು |
ತರುಣಿ ನಿನ್ನೀಕೀಳುನುಡಿಗಳು ಕಿವಿಗೆ ಬೀಳುವುವೇ ||
ಧುರದೊಳೋಡುತ್ತಿರ್ದ ಹೇಡಿಯು |
ಮರಳುತೈತಂದಿಹುದ ನೋಡಲು |
ಪರಿಸಮಾಪ್ತವದಾಯ್ತು ತಮ್ಮನ ಪಣೆಯ ಬರೆಹವದು ||೬೩||

ಬಂದಿಹರೆ ರಘುಕುಲಜರೊಳ್ಳಿತು |
ಬಂದು ತನಗವರೇನ ಮಾಳ್ಪರು |
ಮುಂದೆ ನಿಂದೊಡೆ ಕಾಲನರಮನೆಗವರ ಕಳುಹುವೆನು ||
ಮಂದನೀಯುರೆನುತ್ತೆ ಕೇಳ್ದಿಹೆ |
ನಂಡಗೆಡಿಸರು ತಮ್ಮ ವಂಶವ |
ಹಿಂಡಣರಿತದ ಗೆಳೆಯರಲ್ಲವರೇನು ಭಯವೆನಗೆ ||೬೪||

ವಲ್ಲಭೆಯೆ ನೀನಿಂದು ತನ್ನನು |
ನಿಲ್ಲಿಸಿದುದಪಶಕುನವೆಂಬಿನೆ |
ಮಲ್ಲಜನಕೀಶಕುನಗಿಕುನವು ಹುಲ್ಲಿಗಿಂ ಕಡೆಯು ||
ಇಲ್ಲಿ ನೋಡುತ್ತಿರ್ದ್ದಯಾದೊಡೆ |
ಖುಲ್ಲತಮ್ಮನ ಪೆಣನೊಡನೆ ನಾ |
ನಿಲ್ಲಿಗೈದುವ ಸೊಬಗನೀಕ್ಷಿಪೆ ಬರಿದೆ ಬೆದರದಿರು || ೬೫ ||

ಎನುತ ರೋಷದೊಳೌಡುಗಚ್ಚುತ |
ಕಣೆವ ವಿಶಾಸೆಯ ಕರವ ತಿರುಹುತ |
ರಣಭಯಂಕರವಾಲಿ ನುಗ್ಗಿದನಹಿತನಿದ್ದೆಡೆಗೆ ||
ಕಿನಿಸಿನಾಲಿಗಳಿನಜನೊಳೆ ತಾಂ |
ಗಣಿಸದೀರವ ಕೀಲುಗೊಂಡಿರೆ |
ಹಣವೆ ತಾನೈದುಕ್ಕುಮುಪ್ಪಳಿಸಿದನು ಸಹಭವನ || ೬೬ ||

ಎರಗಿದರು ತಾವೊರ್ವರೊರ್ವರ |
ಸುರುಬೆಗಾರರು ಮಲೆತವನ ಮದ |
ಕರಿಗಳಂದದೆ ಹೋರುತಿರ್ದರು ಹೆಣಗಿ ತೋಳ್ಗಳಲಿ ||
ಚರಣಗಳ ತೊಡರಿಕ್ಕಿ ಮೇಗ್ಸೈ |
ಸರಿಸುತದ ಹೊಕ್ಕರದೊಳೆಸೆಯುತ |
ಪರಿಪರಿಯ ಜಾಣ್ಮೆಯನು ತೋರ್ದರು ಸುರಪರವಿಸುತರು || ೬೭ ||

ಮುಂದೆ ಕಲಿಯುಗದೊಳಗೆ ತವಿಮ್ಮಾ |
ದ್ವಂದ್ವಯುದ್ಧವನಿಳೆಯ ಜನ ಮನ |
ದಂದು ತಾನಭಿನಯಿಸಲಾಟದೊಳೆಂಬುದನು ಬಗೆದು ||
ಇಂದು ನಿರುಪಮವಿಸ್ಮಯದ ರಣ |
ದಂದವನು ತೋರುವರೊ ಮಝು ಭಾ |
ಪೆಂದು ನಭದೊಳ್ಸುರರು ಪೊಗಳುತ್ತಿರಲು ಕಾದಿದರು || ೬೮ ||

ಹೊಕ್ಕು ಹೆಣಗುತ ಸಿಕ್ಕಿ ಜಾರುತ |
ಪಕ್ಕಕೆರಗುತ ಗಕ್ಕನಿರಿಯುತ |
ಚಕ್ಕುಲಿಸುತಿರದಿಕ್ಕಿ ಕಂದದೊಳುಕ್ಕುವಾಳ್ತನದೆ ||
ಸೊಕ್ಕುವಖು ದುದೆ ತಮ್ಮ ನಿಸಗಿರೆ |
ದಿಕ್ಕು ಬಿಡಿಸಲಿ ನಿನ್ನನೆನುತುಂ |
ದಕ್ಕಡಿಗನಾವಾಲಿ ಸುಗ್ರೀವನನು ಕೆಡಹಿದನು || ೬೯ ||

ಕೆಳಗೆ ಬೀಳುತ್ತೋರೆಗಣ್ಣಿಂ |
ಕೆಲದೊಳಿಹ ರಘುವರನ ನೋಡ |
ಲ್ಕಿಳಿದುದೆಮ್ಮವಸಧಟು ಭಾಷೆಯ ಸಲಿಪೆನೆಂದವನು ||
ಜಲಜಸಖಸುತ ಬೆದರಬೇಡೆಂ |
ದುಲಿಯುತೆಸೆಯಲು ಶರವನೊಂದನು |
ಸಿಲುಕಿತೆದೆಯೊಳು ವಾಲಿ ಕೆಡೆದನು ಸಿಡಿಲುಬಡಿದವೊಲು ||೭೦||

ಉಬ್ಬಿದನು ಸುಗ್ರೀವ ರಾಮನ |
ತಬ್ಬಿದನು ನಲಿದಾಡಿ ತನ್ನನು |
ಹೆಬ್ಬುಲಿಯ ಬಾಯಿಂದೆ ಬಿಡಿಸಿದೆ ದೇವ ಕರುಣಾಳು ||
ಸಬ್ಬರರಿಯಲು ನಿನ್ನ ಮಾತಿನ |
ಹೆಬ್ಬೆಳಸು ಫಲವೊಂದಿತೈ ಬರಿ |
ಬೊಬ್ಬೆಯಾಗಿದೆ ನನ್ನ ನುಡಿಯಿನ್ನದನು ಸಲಿಸುವೆನು ||೭೧||

ಎನುತುಮಾಸುಗ್ರೀವನಾಡಲು |
ಮನುಕುಲೇಂದ್ರನು ಮನ್ನಿಸುತೆ |
ತನ್ನನುಜನೊಡನಾವಾಲಿ ಬಿದ್ದಿಹ ತಾಣಕಾಕ್ಷಣದೆ ||
ಮನಮರುಕದಿಂದೈದಿ ನೋಡು |
ತ್ತನುನಯಾನ್ವಿತರಿರ್ವರುಂ ಸ |
ದ್ವಿನಯದಿಂ ಸಂತೈಸುತಿರಲಾವಾಲಿಯಿಂತೆಂದ ||೭೨||

ಎಲೆಲೊ ರಾಮನೆ ಕಪಟವೇಷದ |
ಹುಲುಕಿರಾತನೆ ನಿನ್ನ ದೆಸೆಯಿಂ |
ಅಳಿದವನು ನಾನೊರ್ವನೆಂದೇ ಬಗೆದು ಹಿಗ್ಗದಿರು ||
ನೆಲದೊಳಗ್ಗಳರೆನಿಪ ದಿನಮಣಿ |
ಕುಲಜರಿನ್ನೆಗಮೊಲವಿನಿಂತಾಂ |
ಗಳಿಸಿದನುಪಮಕೀರ್ತಿಯೆಲ್ಲವ ಮಳಿದುದೆನ್ನೊಡನೆ ||೭೩||

ಮಾನವೇಶನ ದಶರಥೇಂದ್ರನ |
ಸೂನುವೆಂದೆನಿಸುತ್ತುಮೀದಿನ |
ಹೀನಕಾರ್ಯವಗೈದೆ ಪಾಪಿಯೆ ಹೇಸದೇಂ ಜಗವು ||
ನೀನು ಬಂದುದನರಿತೊಡಂ ವರ |
ಭಾನುವಂಶದ ರಾಜಪುತ್ರನು |
ಹೀನಬುದ್ಧಿಯ ಬಳಸನೆಂದಾಂ ನಂಬುಗೆಯನಾಂತು ||೭೪||

ಹಿಂದೆ ನೋಡದೆ ಬಾಹುಯುದ್ಧದೊ |
ಳಿಂದು ತೊಡಗಿರೆ ಸಮಯವೇದ್ಯೈ |
ತಂದು ಮರೆಯೊಳಗಿದ್ದು ಮತಿಗೆಟ್ಟೆಸುವರೇ ಶರವ ||
ಎಂದಿಗುಂ ಕುಶಿಕಾತ್ಮಜನು ಕ |
ಳ್ಳಂದವಿದನೊರೆದಿರ್ದನು ನಿನಗಿದು |
ಬಂದ ಪರಿಯೆಂತೀವಿವೇಕಕ್ಕಾವನೈ ಗುರುವು ||೭೫||

ಮೇಲೆ ನೋಡಲು ಹುಲ್ಲು ಮುಸುಕಿದ |
ಹಾಳು ಬಾವಿಯ ತೆರದೆ ಮುನಿಗಳ |
ಜೋಲುಜಡೆಗಳನಾನುತಡಸುತ್ತೊಳಗೆ ಕಪಟವನು ||
ಜಾಲಗಾರನ ತೆರದೆ ಚರಿಸುವ |
ಖೂಳನೆಂಬುದ ನರಿಯದಾದೆನು |
ವೇಳೆ ಮುಂಚಿದ ಬಳಿಕ ಚಿಂತಿಸಿ ಫಲವದೇನಿನ್ನು ||೭೬||

ತನ್ನ ಮಡದಿಯನೊಯ್ದದಧಮನು |
ನಿನ್ನ ಮಡದಿಯನರಸಿ ಕುಡುವನೆ |
ಗನ್ನಗತಕವಿದೆಂದು ತಿಳಿಯನೆ ನನ್ನ ಕೊಂದೆಯಲಾ ||
ಮುನ್ನ ವೆನಗೀಹದನನರಿಪಿರ |
ಲಿನ್ನೆಗಂ ರಾವಣನ ಕೊಂದಾ |
ಚನ್ನೆಯನು ನಿನ್ನೆಡೆಗೆ ಸೇರಿಸದಿರ್ದನೇ ಮರುಳೇ ||೭೭||

ನಿನ್ನ ಗೊಡವೆಗೆ ಬಾರದೆಯೆ ಬಿಡ |
ದನ್ಯನೊಂದಿಗೆ ಸೆಣಸುತಿರುವನ |
ನನ್ನೆಯದೆ ನೀನಿಂದು ಕೊಂದುದಧರ್ಮದಾಚರಣೆ ||
ಎನ್ನಡಗು ಭೂದೇವಪಾರ್ಥಿವ |
ರನ್ನರಿಗಯೋಗ್ಯವಲೆ ಶಂಕಿಸೆ |
ತಿನ್ನದುದನೇತಕ್ಕೆ ಕೊಂದ್ಯೆ ಪಾಪಿಯಾದೆಯಲಾ ||೭೮||

ಎಂದು ತನ್ನನು ಪಳಿವ ವಾಲಿಯು |
ನೆಂದು ನೋಡುತೆ ರಾಘವನು ಮನ |
ನೊಂದು ಧರ್ಮಾಧರ್ಮವಿವರವ ತಿಳುಹಬೇಕೆನುತೆ ||
ತಂದು ಚಿತ್ತದೊಳಾಲಿಸುವುದೆಲೆ |
ಮಂದಮತಿಯಜ್ಞಾನದತ್ತಣೆ |
ನಿಂದು ನನ್ನನು ಜರಿದು ಪಳಿವೈ ಕೇಳು ನಿಶ್ಚಯವ ||೭೯||

ಭೇದವಿಲ್ಲದ ಮೈತ್ರಿ ನಿನ್ನ ಸ |
ಹೋದರನೊಳೆನಗಾಯ್ತು ನೀನಪ |
ರಾಧಿಯಾತಂಗಾಗೆ ತನಗುಂ ಶತ್ರುವಾದೆ ಕಣಾ ||
ಮೋದವಾನುತ್ತವನ ಕಜ್ಜವ |
ನಾವರದೆ ಕೈಕೊಂಡು ನಿನ್ನನು |
ಭೇದಿಗಿದೆ ರಣದೊಳಗೆ ನಂಬಿದ ಮಿತ್ರನನು ಪೊರೆದೆ ||೮೦||

ನ್ಯಾಯಯುಕ್ತರಿಕ್ಷ್ವಾಕುವಂಶದ |
ರಾಯರೀಭೂಮಂಡಲೇಶ್ವರ |
ರಾಗುತದಿನಿಳೆಯಾಳುತಿರ್ಪರು ಧರ್ಮಮಾರ್ಗದೊಳು ||
ಕಾಯಜೋಪಮಭರತಭೂಪನ |
ಜೇಯ ಮತ್ಸಹಜಾತನೀಗಧಿ |
ನಾಯಕನು ತದ್ವಂಶಸಂಭವನವನನುಜ್ಞೆಯೊಳು ||೮೧||

ದುರುಳರನು ಶಿಕ್ಷಿಸುತೆ ಸಜ್ಜರಿ |
ಕರನು ಸಮ್ಮಾನಿಸುತೆ ಪಪಿನಾಂ |
ತರದೆ ಸಂಚರಿಸುತ್ತಿರ್ಪೆನು ಲಕ್ಷ್ಮಣಂಬೆರಸಿ ||
ಅರಿಯೆ ಮನುಜರು ಪಕ್ಷಿಮೃಗಗಳು |
ಧರೆಯ ನಿಖಿಲಪ್ರಾಣಿವರ್ಗವು |
ಚರಿಸುತಿರೆ ತಂತಮ್ಮ ಧರ್ಮದೊಳಿಮಗೆ ಸಂಮತವು ||೮೨||

ಉಳಿದು ಧರ್ಮವ ಕಾಮುಕತ್ವದೆ |
ಬಳಸಿ ಸೋದರನರಸಿಯನ್ನು ಮೋ |
ಣಳುಕದಪವಾದಕ್ಕೆ ರಾಜ್ಯದಿನವನ ಹೊರವಡಿಸಿ ||
ಕುಲಗಿಡುಕತನವೆಸಗಿ ಕೊಬ್ಬುತೆ |
ಹೊಲಬುದಪ್ಪಿದ ನಿನ್ನ ಕೊಲುವುದು |
ಸಲುವುದೆನಗಿದು ಧರ್ಮಶಾಸ್ತ್ರದ ಮರ್ಮವಿದನರಿಯೈ ||೮೩||

ಘನಮನುಸ್ಮೃತಿ ಸಾರುತಿರ್ದಪು |
ದನುಜಸುತರರಸಿಯರಿಂಗೆಳಪುವ |
ಮನುಜಪಾಪಿಯವಂಗೆ ತಕ್ಕುದು ಮರಣದಂಡನೆಯು ||
ಜನವು ತನ್ನಯ ಪಾಪಕೃತ್ಯ |
ಕ್ಕನುಗುಣದ ಶಿಕ್ಷೆಯನು ಪೊರ್ದಲು |
ಹನನಮಾಂಪುವು ಗೈದ ಪಾಪಗಳೆಲ್ಲ ಮೊಂದೆನುತೆ ||೮೪||

ಅರಸರಿಳೆಯೊಳು ಬೇಟೆಯಾಡುತೆ |
ದೊರೆತ ಮೃಗಗಳನೆಲ್ಲ ಕೊಲುವರು |
ನಿರುತ ಶಾಖಾಮೃಗವು ನೀನೆಂದರಿತು ಕೆಡಹಿದೆನು ||
ಮರೆಯ ದೋಷವದಿಲ್ಲ ಬೇಂಟೆಯೊ |
ಳಿರಿಯಬಹುದೆಂತಾನುಮದರಿಂ |
ದರಿಯದೆನ್ನನು ಬರಿದೆ ಜರೆದೊಡೆ ಕೊರತೆಯಿಲ್ಲೆನಗೆ || ೮೫ ||

ಎನ್ನೊಡನೆ ನೀಂ ಸೆಣಸಲೇಂ ಮೇ ||
ಣನ್ಯನೊಳು ಮಿಗೆ ಸೆಣಸಲೇನೈ |
ನಿನ್ನೊಡಲು ಕಪಿಜಾತಿಯದು ತಾನೆಂಬುದೇಂ ಹುಸಿಯೆ ||
ನಿನ್ನ ಕೊಲುವುದದೇಸಧರ್ಮವೆ |
ಬೆನ್ನದೆಸೆಯಿಂದೆಚ್ಚೊಡಂ ಕೇ |
ಳನ್ನೆಯವು ತಾನಿಲ್ಲವೆಂದನು ದಾಶರಥಿ ನಗುತೆ || ೮೬ ||

ಅರಸನಾಡಿದ ಧರ್ಮತತ್ತ್ವವು |
ಸುರಪತನುಜನ ಮನಕದಮೃತದ |
ಸರಿಯೆ ಸುರಿದಂತಾಗೆ ಶಾಂತತೆಯೊಂದಿ ಕೈಮುಗಿದು ||
ನರಕಯಾತನೆಗಳುಕದಿಪರಿ |
ದುರಿತಗಳನೆಸಗಿರ್ದ ತನ್ನನು |
ಕರುಣದಿಂದೀಕ್ಷಿಸುತೆ ಸದ್ಗತಿಯಿತ್ತು ಪಾಲಿಪುದು || ೮೭ ||

ಎಂದು ಕಣ್ಣೀರ್ದುಂಬಿ ರಾಮನೊ |
ಳೆಂದನೆಲೆ ದೇವಾಧಿದೇವನೆ |
ಕಂದನಂಗದನಿಂದು ಕೆಟ್ಟನು ನನ್ನ ಮರಣದೊಳು ||
ಮುಂದೆ ನಿನ್ನಯ ತನುಜನೆನುತುಂ |
ತಂದು ಕೃಪೆಯಿಂ ದೇವ ಸಲಹೈ |
ತಂದೆ ನೀನಿನ್ನವಗೆ ಬೇರಿನ್ನಿಲ್ಲ ರಕ್ಷಕರು || ೮೮ ||

ಎನುತೆ ನುಡಿವಾಸಮಯದೊಳು ತ |
ನ್ನಿನಿಯನೀಪರಿ ಬಿದ್ದನೆಂಬುದ |
ನನುಚರರ ಮುಖದಿಂದೆ ಕೇಳ್ದಾ ತಾರೆಯೈತಂದು ||
ಘನಮದದ್ವಿಪದಂತೆ ಬಿದ್ದಿ |
ರ್ದನಿಮಿಷೇಂದ್ರಾತ್ಮಜನ ಕಂಡೀ |
ವಿನುತಮಂಗಳಸೂತ್ರಕಾದುದೆ ವಿಧಿಯವಿಂದಿನೊಳು || ೮೯ ||

ಆವನೈ ನಿನಗಿಂತು ಗೈದವ |
ನಾವನೈ ಪಿಂದೆಸೆಯೊಳೆಂಬನು |
ಜೀವಹೆದು ಬಿಲ್ಲಿಂದಮೆಚ್ಚಾ ಪರಮಘಾತುಕನು ||
ಭಾವದೊಳಗೆಳ್ಳನಿತು ನಾಚದೆ |
ಯಾವಿಕಾರಕೆ ಮನವನಿತ್ತವ |
ನಾವನೈ ಬಲುಹೇಡಿಯಾವನು ನೀತಿಬಾಹಿರನು || ೯೦ ||

ಕಾಂತ ನೀಂ ಪೊರಮಡುವ ಕಾಲದೆ |
ನಾಂ ತಿಳಿಯುತಿದನೊರೆಯೆ ಚೀಭೀ |
ಭ್ರಾಂತಿಯುತೆ ನೀನೆಂದು ನನ್ನನು ಜರೆದು ನೀಂ ಬಂದು ||
ಕಾಂತಿವಿರಹಿತಸೂರ್ಯನಂದದೊ |
ಳಿಂತು ನೆಲಸನು ನೆಮ್ಮಿ ಮಲಗಿರ |
ಲೆಂತು ಜೀವವ ಪಿಡಿದು ನಿನ್ನನು ನೋಡಿ ಸೈರಿಪೆನು || ೯೧ ||

ಏಳು ಕಾಂತನೆ ನಿನ್ನ ಮೋಹದ |
ಬಾಲಕನ ಸಂತೈಸು ಕಂದನು |
ಕಾಲ ದೆಸೆಯೊಳು ಬಿದ್ದು ಹೊರಳುವನೇಕೆ ಸುಮ್ಮನಿಹೆ ||
ಹೇಳು ಬುದ್ಧಿಯನಿವಗೆ ಮುಂದಿ |
ನ್ನಾಳುಗೆಲಸವ ಕಲಿತು ಭೂಮಿಾ |
ಪಾಲಸುಗ್ರೀವನನು ಸೇವಿಸಿ ಬದುಕು ನೀನೆಂದು || ೯೨ ||

ಪತಿಯೆ ನಿನ್ನುದರದೊಳು ಬಂದೀ |
ಕ್ಷಿತಿಯನಾಳುವ ಪುಣ್ಯವಿಲ್ಲದೆ |
ಗತಿವಿಹೀನರ ತೆರದೊಳಾದನು ಕಂದನಂಗದನು ||
ಪತಿತನಾಸುಗ್ರೀವನೆಮ್ಮನು |
ಹಿತದೆ ಕಾಣ್ಬನೆ ಮುಂದೆ ತಮಗಾ |
ರ್ಗತಿಯು ಪೇಳೆಂದಬಲೆ ಗೋಳಿಡೆ ನುಡಿದನಾವಾಲಿ || ೯೩ ||

ಅರಸಿ ನನ್ನನು ತೆರಳಬೇಡೆಂ |
ದೊರೆದ ನಿನ್ನಯ ನುಡಿಯ ಮಿಾರಿಯೆ |
ಧುರಕೆ ಬಂದುದರಿಂದಮಿಾದುರ್ಗತಿಯನೊಂದಿದೆನು ||
ಧರಿಸಿ ಧೈರ್ಯವನಾಂತು ತಾಳ್ಮೆಯ |
ತರಳನನು ಸಂತೈಸಿ ನನ್ನೀ |
ಹರಣ ತೊಲಗಿದ ಮೇಲೆ ಸುಗ್ರೀವನನು ನೆರೆ ನಂಬು || ೯೪ ||

ಆತನಸುಮುಖವಿಡಿದು ನಡೆವುದು |
ನೀತಿ ನಿನಗೆಂದೊರೆದು ಮಗನಂ |
ಪ್ರೀತಿಯಿಂದಾಲಿಂಗಿಸುತ ಸುಗ್ರೀವನನು ಕರೆದು ||
ಭೀತಿಯಾಂತಿಹ ನಿಜಸತೀತನು |
ಜಾತರನು ಕೈವಿಡಿದು ಬಹುವಿ |
ಖ್ಯಾತಿವಡೆದವನಾಗು ನೀನೆಂದೊರೆದು ನಲವಿನಲಿ ||೯೫||

ತನ್ನ ಕಂಠದ ರತ್ನಹಾರವ |
ಮುನ್ನ ಸುರಪತಿಯಿಂದೆ ಬಂದಿಹು |
ದಿನ್ನು ನೀನಿದ ಧರಿಸೆ ನಿನಗತಿಭಾಗ್ಯವೊದವುವುದು ||
ನನ್ನಿಯಿಂದದನಿತ್ತು ಕೊಡಲ್ಕೆ |
ತನ್ನ ದಾರೆಯ ನೋಳ್ಪೆನೆನ್ನುತೆ |
ಸನ್ನುತಾಂಗನ ರಾಮಚಂದ್ರನ ನೋಡುತಸುವಳಿದ ||೯೬||

ಹೇವರಿಸಿದನು ತನ್ನ ಮಾಳ್ಕೆಗೆ |
ಭಾವದೊಳು ಕಡು ನೊಂದಸು |
ಗ್ರೀವನೈದಿ ನರೇಂದ್ರಚಂದ್ರನ ಚರಣಕೆರಗಿದನು ||
ದೇವ ಕೃಪೆಯಿಂದೆನಗನುಗ್ರಹ |
ವೀವುದೀದಿನವಣ್ಣನೊಡನೆಯೆ |
ಜೀವವನು ನಾಂ ಬಿಡುವೆನೊಲ್ಲೆನು ರಾಜ್ಯವೈಭವವ ||೯೭||

ದೇಶಕೋಶವನುಳಿದೆನೆಂಬಾ |
ಕ್ರೋಶದಿಂ ನಿನ್ನಿಂದಮಾಬಲು |
ಹೇಸಿಕೆಯ ಕಾರ್ಯವನು ಗೈಸಿದೆನಲ್ಲದಿನ್ನಿಲ್ಲ ||
ಆಸೆ ರಾಜ್ಯದೊಳಿಲ್ಲವೆನಗೀ |
ಕೀಶಪತಿಸುತನಂಗದಂಗಿದೊ |
ಸೇಸೆದಳೆವೆನು ಮಾತೆಯೊಡನಿವನಾಳಲೀನೆಲನ ||೯೮||

ಈತನತಿಸಂಪನ್ನಸದ್ಗುಣಿ |
ನೀತಿವಿದನಿವನೊಳಗೆ ರಾಜ್ಯವ |
ನೋತು ನೀನಿರಿಸಿದೊಡೆಯೊಪ್ಪಿಕೆಯಹುದು ಜಗಕೆಲ್ಲ ||
ಪಾತಕಿಯನಿಂದೆನ್ನನಿರಿಸಲ್ |
ಖ್ಯಾತಿ ಒಪ್ಪದೆ ನಿನಗೆ ಸುಜನ |
ವ್ರಾತ ನಗುವುದು ದೇವ ತನಗಿನ್ನಾಜ್ಞೆಯಾಯೆಂದ ||೯೯||

ಕಂಡನಿವರಳಲಿಕೆಯ ನಾಕೋ |
ದಂಡಧರನಾಜ್ಞೆಯಿಂದೆ ತನ್ನಯ |
ಗಂಡನೊಡಲಿನ ಮೇಲೆ ಬೀಳುತ್ತಳ್ಳು ಶೋಕದೊಳು ||
ಕಂಡತೆರದೊಳು ಹೊರಳುತಿವಳ್ |
ಪುಂಡರೀಕಾಂಬಕೆಗೆ ಮರುಕಂ |
ಗೊಂಡು ಸನಿಹಕೆ ಸಾರೆ ಕಂಡಳು ತಾರೆ ಚಿನುಮಯನ || ೧೦೦ ||

ರಾಮ ಜಗದಭಿರಾಮ ಸದ್ಗುಣ |
ಧಾಮ ನೀನಾಗೆನ್ನ ರಮಣನ |
ನೀಮಹೇಂದ್ರಾತ್ಮಜನ ಮರೆಯೊಳು ನಿಂದು ಕೊಂದಿಂದು ||
ವ್ಯೋಮಕೇಶನೆಂದೊಡಂ ಜಡ |
ಭೂಮಿಯೊಳು ನರಜನ್ಮವೆತ್ತಲು |
ತಾನುಸದ ಜಂಜಡವು ಬಿಡದೆಂಬುದನು ನೀಂ ತೋರ್ದೆ || ೧೦೧ ||

ದೇವ ನಿನ್ನೀನಾಟಕವ ತ |
ತ್ತ್ವವಿಧಾನಕರರಿವರಿತರರಿ |
ಗೀವಿಚಾರದೊಳಿಲ್ಲ ಬಳಕೆಯು ತಿಳಿವರೆಂತವರು ||
ಪಾವನನೆ ನೀನೆನ್ನ ರಮಣನ |
ನಾವಲೋಕಕೆ ಕೊಂಡು ಕಳಹಿದೆ |
ಭಾವಿಸುತ್ತಾಪದಿಯೊಳೆನ್ನನು ಸಾಗಿಸವನೆಡೆಗೆ || ೧೦೨ ||

ಉಳಿಯಲಾರೆನು ಪತಿಯ ಕಾಣದೆ |
ಬಳಿಯ ಸೇರಿಸು ನನ್ನನೆಂದಿಂ |
ತಳುವ ತಾರೆಯ ಸಂತವಿಸಲೆಂದಾಗ ರಾಘವನು ||
ಲಲನೆ ತಾರಾದೇವಿ ನೀನೇಂ |
ತಿಳಿಯದಜ್ಞೆಯೆ ವಿಧಿಯು ಬರೆಹವ |
ನಳಿಸಲಾರಿಂದಳವು ಮೀರುವರಾರು ತಾವದನು || ೧೦೩ ||

ಶೂರನೆನಿಸಿದ ಪತಿಯ ಸೇರಿದ |
ವೀರಪತ್ನಿಗೆ ಕಮಲಭವನೇ |
ಗೀರಿಹನು ವೈಧವ್ಯರೇಖೆಯ ಪಣೆಯ ಮಧ್ಯದೆಸಳು ||
ಧೀರೆ ನೀನದರಿಂದೆ ದುಃಖಕೆ |
ಮಾರದಿರು ಹೃದಯವನು ನಿನ್ನ ಕು |
ಮಾರನಾದಂಗದನಿಗೀವೆನು ರಾಜ್ಯಲಕ್ಷ್ಮಿಯನು || ೧೦೪ ||

ಕೇಳು ನೀಂ ಸುಗ್ರೀವ ಲಾಲಿಸಿ |
ಕೇಳು ನೀನಂಗದನೆ ಪವನಜ |
ಕೇಳು ನಳನೀಲಾದಿವಾನರಮುಖ್ಯರಿರ ಕೇಳಿ ||
ಕಾಲವಾರಿಂ ಮೀರಲಪ್ಪುದು |
ಕಾಲಕಿಲ್ಲವು ಬಂಧುಮಿತ್ರರು |
ಕಾಲವೆಲ್ಲಾ ಜಗವ ನೋಣೆವುದು ಸಕಲಕದು ಮೇಲು || ೧೦೫ ||

ಕಾಲದಿದಿರೊಳು ಮಿಡುಕು ನಡೆಯದು |
ಕಾಲವಿತರರ ಗಣನೆಗೊಳ್ಳದು |
ಕಾಲವೇ ಕಾರಣವು ಜಗಕದಕಿಲ್ಲ ಪರಿಮಿತಿಯು ||
ಕಾಲ ಮನುಜಗೆ ಪುಣ್ಯಪಾಪದ |
ಕೋಲಿಕೆಯು ಸುಖದುಃಖಮಿಾವುದು |
ಕಾಲವಿದು ತಾಂ ಮುಳಿಯೆ ವಾಲಿಯದೆಂತು ಜೀವಿಪನು || ೧೦೬ ||

ನಾವು ನೀವೀಸೂರ್ಯಚಂದ್ರರು |
ದೇವದಾನವಮುಖ್ಯರೆಲ್ಲರು |
ಮಾವಗಂ ನಡೆಯಿಸಲಬೇಕಾಕಾಲದಾಜ್ಞೆಯನು ||
ಭಾವಿಸಲು ಮತ್ಪ್ರಾಣನಾಯಿಕೆ |
ದೇವಿ ವೈದೇಹಿಯನು ನಾಂ ತೊರೆ |
ದೀವಿಷಾದದೊಳಿರ್ಪುದಿದು ಕಾಲಪ್ರಭಾವವಲೇ || ೧೦೭ ||

ಆದುದರಿನುಳಿದೀಗ ಚಿಂತೆಯ |
ನೈದೆ ಮುಂದಣ ಕಾರ್ಯವಾವುದೊ |
ಯೋಧರಿರ ನೀವದನು ಗೈವುದು ನೀತಿಸಂಮತವು ||
ಮೇದಿನೀಪತಿಯೋಗ್ಯಮಾದಾ |
ಸಾಧನಂಗಳನೆಲ್ಲ ಮೊದವಿಸು |
ತೀಧುರಂಧರವಾಲಿಗುತ್ತರಕರ್ಮವೆಸಗಿಮೆನೆ || ೧೦೮ ||

ಆಗಲೆಂದೊರೆದದಕೆ ಬೇಹುದ |
ನಾಗಳೊದವಿಸಿ ಶವವನಲ್ಲಿಂ |
ಬೇಗ ಸಾಗಿಸಿ ಚಿತಿಯ ವಿರಚಿಸಿ ದಹಿಸಿ ಸಂಸ್ಕರಿಸಿ ||
ರಾಘವನ ಬಳಿಗೈದಿ ಜೋಡಿಸಿ |
ಕೈಗಳನು ನಮಗರಸನಿನ್ನಾ |
ರಾಗುಕೋಗೇಪರಿಯೊ ಕರುಣಿಪುದೆಂದರವರೆರಗಿ || ೧೦೯ ||

ಅರಸನೆಂದನು ಸಚಿವವರ್ಯರೆ |
ಭರದಿನೀಸುಗ್ರೀವಗೊಪ್ಪಿಸಿ |
ಮೆರೆವ ಕಿಷ್ಕಿಂಧಾಧಿಪತ್ಯವ ಯೌವರಾಜ್ಯವನು |
ತರಳನಂಗದಗಿತ್ತು ಪೂರ್ವದ |
ಹಿರಿಯರಾಪದ್ಧತಿಯ ಮೀರದೆ |
ಪರಮಭಕ್ತಿಯೊಳಿವರ ಸೇವಿಸುತಿಹುದು ಪಡುಳದೊಳು || ೧೧೦ ||

ಎಂದು ರಾಮನು ನುಡಿಯೆ ಪರಮಾ |
ನಂದಪರವಶರಾಗಿ ಸಕಲರು |
ವಂದನೆಯನಿರದೆಸಗಲಾಸುಗ್ರೀವ ಕೈಮುಗಿದು ||
ತಂದೆ ರಾಘವ ಯಾಚಿಸುವೆನಿದ |
ನೊಂದನೀದ್ಯೆತಂದು ಪುರಕೆ |
ವಿಮ್ಮಂದೆ ಪೂಜೆಯನೊಂದಿ ನಮ್ಮನು ಸಲಹು ನೀನೆನಲು || ೧೧೧ ||

ಮಿಹಿರಸುತ ನೀನೆಂದ ನುಡಿ ತಾ |
ನಹಿತವಲ್ಲವಿದಾವೊಡಂ ವಚಿ |
ಸಿಹೆನು ನಿಜತಾತಂಗೆ ಪುರವನು ಪುಗುವುದಿಲ್ಲೆಂದು ||
ವಿಹಿತವದು ಪದಿನಾಲ್ಕುವತ್ಸರ |
ಗಹನವಾಸವು ಮುಗಿಯೆ ಪುಗುವುದು |
ವಹಿಸಿ ಮನ್ನಿಸು ಚಿಂತೆಗೊಳ್ಳದೆ ತೆರಳು ಪುರಕೆಂದು || ೧೧೨ ||

ಧರಣಿಭಾರವನಾಂತು ಶಕ್ರನ |
ಜರಿವ ಸಂಪದಕೊಡೆಯನೆನಿಸು |
ತ್ತರಸಿಯುಹ ರುಮೆಯೊಡನೆ ಭೋಗೋತ್ಸವವನನುಭವಿಸಿ ||
ಮೆರೆವ ವರ್ಷರ್ತುವನು ಕಳೆ ನೀಂ |
ಶರದವೈದಲ್ಕಾಗ ಕಪಿಬಲ |
ವೆರಸಿ ರಾವಣವಧೆಗೆ ಪೊರಮಡು ತಕ್ಕಸಮಯವದು || ೧೧೩ ||

ಮೆರೆವ ಮಾಲ್ಯವದಾಖ್ಯಮಾದಾ |
ಗಿರಿಯ ಗುಹೆಯೊಳಗನುಜನೊಡನಾ |
ನಿರುವೆನಾಪರಿಯಂತ ನೀನಿನ್ನೈದು ಪುರಕೆನಲು ||
ಪರಮಕರುಣಾರ್ಣವನೆ ಬೆಸನನು |
ಶಿರದೊಳಾಂತೆನೆನುತ್ತುಮೆರಗುತೆ |
ಪರಿಜನಂಬೆರಸೊಲ್ದು ತೆರಳಿದನಂದು ಸುಗ್ರೀವ || ೧೧೪ ||

ಎರಡನೆಯ ಸಂಧಿ.

ಸೂಚನೆ || ಸೀತೆಯನು ಹುಡುಕುತ್ತ ಕಾಣದೆ |
ಸೋತಮನದಾಕಪಿವರರು ಸಂ |
ಪಾತಿಯಿಂ ನೆಲೆಯರಿತು ಸೇರ್ದರು ತಡಿಯನಾಕಡಲ ||

ಶರಣಜನ ಬೀಳ್ಕೊಟ್ಟು ರಾಘವ |
ನಿರದೆ ಸೋದರನೊಡನಡದ್ಬರ್ |
ನಿರತಿಶಯವಿಸ್ತೀರ್ಣವಾಗಿಹ ಮಾಲ್ಯವದ್ಗಿರಿಯ ||
ಕರೆದು ಸೌಮಿತ್ರಿಯನು ನೋಡೀ |
ಗಿರಿಯೊಳಿಹ ಗುಹೆಗಳನು ನಾವೀ |
ಬರಸಂತುವನು ಕಳೆಯಲಿತ್ತಲು ಯೋಗ್ಯವಾಗಿಹುದು || ೧೧೫ ||

ನಿಟ್ಟಿಸಲ್ಕೀಪರ್ವತೇಂದ್ರನು |
ತೊಟ್ಟ ರತ್ನಾಭರಣವೆಂದೆನ |
ಲಿಟ್ಟಣಿಸಿ ಮೆರೆವಖಿಳವರ್ಣದ ಶಿಲೆಗಳಿಲ್ಲಿಹುವು ||
ಉಟ್ಟಿಹಳೊ ತಾಂ ಶೋಣವಸನವ |
ದಿಟ್ಟ ಭೂವಧುವೆಂಬವೋಲು ಬಲು |
ದಿಟ್ಟಿತಾಗಿಯೆ ತೋರ್ಪ ಗೈರಿಕದೆಡೆಯ ನೋಡೆಂದ || ೧೧೬ ||

ಇಲ್ಲಿ ನಾವಿನ್ನಿರ್ಪೆವೆನುತಾ |
ಸಲ್ಲಲಿತಗುಣನಿಧಿಗಳಿರಲಾ |
ಗೆಲ್ಲೆಡೆಯನಾವರಿಸಿ ಕೊಂಡುದು ಕಾರ್ಮುಗಿಲ ಗಡಣ ||
ಚೆಲ್ಲಿದುದು ಬಲುಮಳೆಯನದು ತಾ |
ನೆಲ್ಲೆಯುಂ ಬಿರುಗಾಳಿ ಬೀಸಿತು |
ನಿಲ್ಲಲಾರದೆ ದೇವತತಿಗಳು ತಲೆಯ ಮರೆಸಿದುವು || ೧೧೭ ||

ಸುತ್ತಲುಂ ಕವಿದಿರ್ಪ ಮುಗಿಲಿಂ |
ಕತ್ತಲೆಯು ತಾನಾಗೆ ಸೂರ್ಯನ |
ಗೊತ್ತನರಿಯದೆ ನಿತ್ಯಕರ್ಮವ ಗೈವ ಜನನಿಕರ ||
ಕತ್ತರಿಸಿ ಪಕ್ಷಿಗಳ ಗತಿಯಿಂ |
ಹೊತ್ತನರಿವಂತಾಯ್ತು ಬಿಸಿಲಿಂ |
ಬತ್ತಿದಾ ಕೆರೆಕಟ್ಟೆ ಜಲಧಿಂ ತುಂಬಿತುಳುಕಿದುವು || ೧೧೮ ||

ಋತುವು ತಲೆದೋರ್ದೊಡನೆ ಭರದಿಂ |
ಕ್ಷಿತಿಯು ಪೊಳೆವೆಣ್ಗಳ್ಗೆ ಮುಗಿಲಿಂ |
ಕತಿಪಯದಿನಂಗಳೊಳು ಗರ್ಭವು ಮೂಡಿ ಒಳೆಪುದರಿಂ ||
ವಿತತಕಷ್ಟವದಾಗೆ ಹೆರಿಗೆಯು |
ಬೆತೆಯ ಸೈಸದೆ ಯುವಲು ಮೊರೆಯು |
ಶ್ರುತಿಭಯಂಕರರವದೊಳೋಡುತ್ತೆ ಬಿದ್ದಳಂಬುಧಿಗೆ || ೧೧೯ ||

ನದಿಗಳುಬ್ಬುತ್ತೆ ಹರಿದು ಜಲಧಿಯ |
ನೊದೆವೊಲೆಸೆದುವು ಮುಗಿಲ ಕೊಡದಿಂ |
ತ್ರಿದಶರಭಿಷೇಕಿಪರು ಗಿರಿವರಲಿಂಗಗಳನೊಲಿದು ||
ವಿದಿತಮಪ್ಪುದಿದೆಂಬವೊಲು ಮಳೆ |
ಯಧಿಕವಾಗುತ್ತೆ ಭುವನವೆಲ್ಲವು |
ಮುದಕಮಯಮಾಗಲ್ಕೆ ಸುರಿವುದು ಪಗಲಿರುಳು ಬಿಡದೆ || ೧೨೦ ||

ಅತ್ತಲಾಸುಗ್ರೀವ ಘನಸಂ |
ಪತ್ತನಾಂತುರೆ ಮಂತ್ರಿಗಳ ವಶ |
ಕಿತ್ತು ರಾಜ್ಯದ ವಳಿತವನು ನಿಜಪತ್ನಿಯುಂ ಸೇರಿ ||
ಚಿತ್ತಜಾತನ ಕೇಳಿಯಿಂದು |
ನ್ಮತ್ತನಾಗುತ್ತೆ ಮಳೆಯ ದಿನಗಳ |
ನೊತ್ತಿ ಶರದೃತುವೈದಿತೆಂಬುದನಂದು ಲೆಕ್ಕಿಸನೆ || ೧೨೧ ||

ಭಾನುಕುಲಜಂಗಿತ್ತ ಗಡುಬವು |
ತಾನು ಮುಗಿದುದನರಿಯದಿರುತಿರ |
ಲಾನರೋತ್ತಮನಾಗ ಕೆರಳುತ್ತೆ ಲಕ್ಷ್ಮಣನ ಕರೆದು ||
ವಾನರೇಂದ್ರರ ಮೈತ್ರಿಗೊಂಡುದ |
ಕೇನು ಫಲವೆಮಗಾಯ್ತು ಕಂಡೆಯ |
ಹೀನಜನಕುಪಕೃತಿಯನೆಸಗಲು ನೆನೆವರೇನದನು || ೧೨೨ ||

ಅಡಿದಾಭಾಷಿತವ ನೆರೆ ಕಾ |
ಪಾಡಲೋಸುಗ ಬೆದರದಾರಿಪು |
ಬಾಡಬಾನಲಸದೃಶನಹ ವಾಲಿಯನು ಸಂಹರಿಸಿ ||
ಕೇಡುಗನನೀರಾಜ್ಯಕೊಡೆಯನ |
ಮಾಡಿ ನಿಲ್ಲಿಸಿದುದಕೆ ತನಗೀ |
ಪಾಡು ಬಂದುದು ಬಹುಕೃತಘ್ನನು ಮಿಹಿರಸಂಭವನು || ೧೨೩ ||

ಖೂಳನೆ ಪೇಳ್ವೆಗೈದಿದಿರಾಗಳೆ |
ಪೇಳುವುದು ನಾವಿಂದು ನಿನ್ನ |
ದ್ರಾಳಿಕೆಗೆ ಭಯಪೊಂದಿ ಸುಗ್ರೀವ ಬಳಿಯಿಗಿದೆವೆಂಬ ||
ಕೇಳು ಬುದ್ಧಿಯು ನಿನ್ನೊಳೊಗೆದಿರೆ |
ವಾಲಿಗೋಸುಗ ಸಜ್ಜುಗೊಳಿಸಿದ |
ಕಾಲನಗರಿಯು ಕದವು ತೆರವಿದೆ ನಿನ್ನ ಪಯಣಕ್ಕೆ || ೧೨೪ ||

ಆಗದಾನಡೆ ನಿನ್ನೊಳಿಂದೊಡೆ |
ಬೇಗನೈದುವುದೆಮ್ಮ ಬಳಿಗಿರ |
ದೀಗ ಕಪಿಬಲವೆರಸಿ ರಘುನಂದನ ಕಾರ್ಯಸಾಧನೆಗೆ ||
ಸಾಗದೆಮ್ಮೊಳು ನಿನ್ನ ಜಪಂತೆ |
ಯೋಗಡಿಕೆ ತಾನೆನ್ನುತನಸು |
ಪೋಗಿ ಬೆದರಿಸಿ ನೀನು ಬೇಗನೆ ಕರೆದುತಹುದೆಂದ || ೧೨೫ ||

ದುಡುಕದಿರು ನಾನೆಂದಪಾಯಿಗಳು |
ತಡೆದು ಕೋಪವ ತಾಳ್ಮೆಯಿಂ ನೀಂ |
ನಡೆವುದೊಳ್ಳಿತೆನುತ್ತ ಮಗುಳೆಚ್ಚರಿಸಿ ತಳುಪಲ್ಕೆ ||
ತಡೆಯದಾಗಳೆ ಪಿಡಿದು ಬಿಲ್ಲನು |
ನಡೆದು ಕಿಷ್ಕಿಂಧೆಗುರೆ ಕಣ್ಗೊಳು |
ಕಿಡಿಯನುಗುಳುತೆ ರೋಷದಿಂದಾಕಾಶಹಿನವರುಗಳ || ೧೨೬ ||

ಕರೆದು ನೀವೀಗಿನ್ನೆ ಬಳಸಾ |
ದರಸಸುಗ್ರೀವಂಗೆ ಲಕ್ಷ್ಮಣ |
ನುರುಧನುರ್ಧರನಾಗಿ ಬಂದಿಹನೆಂದು ಪೇಳುವುದು ||
ಅರಿತು ಬಂದೊಡೆ ಲೇಸು ಬಾರದೆ |
ಜರೆದು ನಿಂದೊಡೆ ನಾನೆ ಬರ್ಪೆನು |
ಹಿರಿಯ ಕಜ್ಜವದುಂಟು ನಿನ್ನೊಳಗೆನುತೆ ಪೇಳುವುದು || ೧೨೭ ||

ಎಂದು ನುಡಿವಾ ಲಕ್ಷ್ಮಣನ ಮನ |
ದಂದವನು ತಾವರಿತು ಕಪಿಗಳು |
ಬಂದು ದಾರಿಯೊಳಂಗದನ ಕಂಡರುಹಲವನಿರದೆ ||
ಬಂದಿದೇನಿಂತಾದ ದೆಂದೈ |
ತಂದು ಲಕ್ಷ್ಮಣದೇವನಂಘ್ರಿಗೆ |
ವಂದಿಸುತೆ ಸರ್ವಾಪರಾಧವ ಮನ್ನಿಸುವುದೆನಲು || ೧೨೮ ||

ಎಲ್ಲಿಹನು ಕಿರಿಯಯ್ಯ ನಿನ್ನವ |
ನಲ್ಲಿಗೊಯ್ಯುವುದು ನಮ್ಮನಿಂದೆನೆ |
ಬಲ್ಲಿದನೆ ನೀನಿತ್ತ ಬಿಜಯಂಗೈಯಬೇಕೆನುತೆ ||
ಮೆಲ್ಲನವನಾಕ್ರೋಶಮೂಲವ |
ನೆಲ್ಲವರಿಯುತೆ ಮನದೆ ಸುಗಿದ |
ಲ್ಲಲ್ಲಿ ರಕ್ಷಿಪುದೆಂದು ಯಾಚಿಸುತರಮನೆಯ ಸೇರಿ || ೧೨೯ ||

ಮೆರೆವ ಮಣಿಮಯಪೀಠವಿತ್ತಿದೊ |
ಳರೆದು ತಹೆನೆಂದಾಗಳಂತಃ |
ಪುರವ ಪೊಕ್ಕಲ್ಲರಸಿಯರ ಮೇಳದೊಳು ಮಂಡಿಸಿಹ ||
ಸುರೆಯ ಪಾನದೆ ಮದಿಸಿ ಸೊಕ್ಕಿಹ |
ಸರಸಿಜಾಕ್ಷಿಯರಂಗಸಂಗವೆ |
ಪರಮಸದ್ಗತಿಯೆಂಬ ಕಾಮಿವರೇಣ್ಯನಡಿಗೆರಗಿ || ೧೩೦ ||

ಕಾತ ಬಂದಿಹನೇಳು ನೃಪಸಹ |
ಜಾತನಾತನ ಕೋಪಶಿಖಿಗಾ |
ವಾತ ನಿಲುವನು ನಿನ್ನ ಬರಹೇಳೆಂದು ಗರ್ಜಿಸುತೆ ||
ಭೂತನಾಥರ ತೆರದೆ ಮೆರೆವನ |
ದೇತೆರದವೊ ನಮಗಿಂದು ಕಾಣೆನು |
ನೀತಿನಿಪುಣನೆ ಬೇಗನೇಳೆನೆ ಕೇಳಿ ಕಪಿವರನು || ೧೩೧ ||

ದಡದಡಿಸುತೆದೆ ಪಾರೆ ಕಾಲ್ಗಳು |
ತೊಡರುತಿರೆಯೆಡಬಲಕೆ ತೂರುತೆ |
ನಡುಗುತಂಜಿಕೆಯಿಂದೆ ನಡೆಯುತ್ತಾಸಭಾಂಗಣಕೆ ||
ಕಡುಹುಕಾರರನಾಪ್ತಸಚಿವರ |
ನೊಡನೆ ಬರಿಸಿಂದಿದಕುಪಾಯವ |
ನುಡಿವುದೆನಲಾಪಾವನಾಸ್ಯರು ತಳುಪದಿಂತೆಂದ || ೧೩೨ ||

ಅರಸ ಪೇಳುವುದೇನು ಕಳೆಯ |
ಲ್ವಿರಿಸರಿತು ಬಹೆನೆಂದು ನೀಂ ರಘು |
ವರನೊಳಾಡಿಯುಮಾತು ಗೈಯದೆಯಿಂತು ತಳುವುತಿರೆ ||
ನೆರೆವವನ ಕೋಪಾಗ್ನಿ ಸೀತಾ |
ವಿರಹಚಿಂತಾಪಾತರಭಸದಿ |
ಸುರಿಯುನುಗುಳುತ್ತೆಮ್ಮ ಜನಪನೆ ಸುಮ್ಮನೇತಿಹುದು || ೧೩೩ ||

ಕೊಟ್ಟ ಭಾಷೆಯ ಸಲಿಸಿ ನಿನ್ನನು |
ಪಟ್ಟದರಸನನೆಸಗಿ ನೆರೆತ |
ನ್ನಿಷ್ಟಸಾಧನವೊಡನೆ ನಿನ್ನಿಂದಪ್ಪುದೆಂದೆನುತೆ ||
ಬಿಟ್ಟಕಣ್ಣಿಂ ನಿನ್ನ ಬಟ್ಟೆಯ |
ನಿಟ್ಟಿಸುತೆ ಕಾದಿರ್ಪ ನೃಪತಿಗೆ |
ಸಿಟ್ಟು ಬಪ್ಪುದಿದೇನು ಚೋದ್ಯವೆ ಬಗೆದು ನೋಡಲ್ಕೆ || ೧೩೪ ||

ಅದರಿನೀಗಳೆ ಲಕ್ಷ್ಮಣನ ಸ |
ನ್ನಿಧಿಗೆ ತಾರಾದೇವಿ ಸಾರ್ದುರೆ |
ಚದುರತನದಿಂದವನ ಚಿತ್ತವ ತಿದ್ದಿದಾಬಳಿಕ ||
ಪದೆಪಿನಿಂ ನೀಂ ಪೋಗಿ ಕಾಣ್ಬುದು |
ಪದುಳವೆನಿಸುವುದೆಂದು ತಿಳಿಪ |
ಲ್ಕದು ವಿಧಾನವು ಯೋಗ್ಯವೆಂದರು ಮಿಕ್ಕಮಂತ್ರಿಗಳು || ೧೩೫ ||

ತೆರಳಿದನು ಸುಗ್ರೀವನಂತಃ |
ಪುರಕೆ ಕರೆದನು ತಾರೆ ಬಾರೆ |
ನ್ನಿರವನಾಲಿಸು ನಿನ್ನ ಕರಗತವೆನ್ನ ಜೀವನವು ||
ಅರಸನನುಜನ ಬಳಿಯ ಸಾರ್ದುರೆ |
ಮರುಕವನು ಪುಟ್ಟಿಸುವ ಜಾಣ್ಮೆಯ |
ಸರಸವಚನವನಾದಿಯಾತನ ಐಕಿಯ ನೀಂ ಜಿಡಿಸು || ೧೩೬ ||

ಬರುವೆನಾಂ ಬಳಿಕಿನ್ನು ನಡೆಯೆಂ |
ದೊರೆಯೆ ನೀರ್ದಳು ಪೆರ ಮನವನು |
ಕರಗಿಸುವ ಜಾಣ್ನುಡಿಯ ಚದುರೆಯು ಲಕ್ಷ್ಮಣನ ಬಳಿಯ ||
ಅರಸ ಜಿಡಜಿಡು ಕೋಪವಿದು ವಾ |
ನರರೊಳೆಪ್ಪೊಳು ತರವೆ ಕರುಣಾ |
ಕರನೆ ನೀನಿಂತಾಗಲಾಪಿನ್ನಾರ ಸೇರುವೆವು || ೧೩೭ ||

ಅರಿಯದಾತನು ಗೈದ ತಪ್ಪನು |
ಪರಮಪುರುಷನೆ ನೀನು ಮನ್ನಿಸಿ |
ಪೊರೆಯಬೇಕುದೆನುತ್ತೆ ಕೈಗಳ ಮುಗಿದು ಯಾಚಿಸಲು ||
ಕರಗಿತಾತನ ಹೃದಯವಾಕ್ಷಣ |
ಪರಿದುದುಬ್ಬಿದಮಾದ ಕೋಪವು |
ಸರಸಿಜಾಕ್ಷಿಯ ಮನ್ನಿಸುತೆ ಸೌಮಿತ್ರಿಯಿಂತೆಂದ || ೧೩೮ ||

ತರಳೆಯೀಪರಿ ವಿನಯಗುಣ ನಿ |
ಮ್ಮರಸನಲ್ಲಿರೆ ಲೇಸದೆನಿಪುದು |
ಸುಕಿಸಲ್ಕವನಲ್ಲಿ ಕಾಣೆವು ಲೇಶಮಾತ್ರವನು ||
ವರಿಸರಿತು ಮುಗಿವನಿತರೊಳು ತಾಂ |
ಬರುವೆನೆಂದಂದೊರೆದ ನುಡಿಯನು |
ಮರೆತು ಗಣಿಸದೆ ನಮ್ಮನೋರಂತುಬ್ಬಿ ಕೊಬ್ಬಿಹನು || ೧೩೯ ||

ಕಿಡಿಸಿ ಧರ್ಮಾರ್ಥವನು ತನಗಾ |
ರೊಡೆಯರವರಿಗೆ ಹಿತವನೆಣಿಸದೆ |
ಕುಡಿದು ಮಧುವನು ಕಾಮದಿಂ ಪ್ರಭುಧರ್ಮವನು ನೀಗಿ ||
ನುಡಿದು ಭಾಷೆಯ ದಂಡಯಾತ್ರೆಗೆ |
ತೊಡಗಿದೆಮ್ಮನು ತಡೆದು ಕಡುಪಿಂ |
ಬಿಡದನರ್ಥವ ಗೈದನೀನಡೆ ನಿನಗೆ ಸಮ್ಮತವೆ || ೧೪೦ ||

ಪೇಳು ನೀನೆನಲಾಗಳೆಂದಳು |
ಕಾಲ ಮೀರಿದುದೆಂಬ ಚಿಂತೆಯು |
ತಾಳಲಾಗದು ಕೊರತೆ ನಿಮಗದರಿಂದಮೇನಹುದು ||
ಮೇಲೆ ಗಗನಕೆ ಪಾರಿ ಪೋಪರು |
ಕಾಲುಹೊಳೆಯೆನೆ ಕಡಲ ಹಾಯ್ವರು |
ವಾಲಧಿಯ ಭಟರೇನನೆಸಗರೊ ನಿನ್ನ ಕಿಂಕರರು || ೧೪೧ ||

ಒರೆಯಿಹನು ಪತ್ರವನು ವಾನರ |
ರರಸನೆಲ್ಲಾ ದೇಶದೊಳಗಿಹ |
ವರಕಪೀಂದ್ರರಿಗಿರದೆ ಬರುತಿಹರವರು ಪಡೆವೆರಸಿ ||
ಕರಡಿಯುಬ್ಬರದವೊಂದು ಮುಸುಬಗ |
ಲೆಂಡುಕೋಟಿಗಳೆಣಿಸೆ ಕಪಿಗಳು |
ಧರಣಿಯುಗಲದೆ ತುಂಬಿ ಬರುತಿವೆ ಗಣನೆಗಸದಳವು || || ೧೪೨ ||

ನೆರೆದ ಬಳಿಕಿವರೆಲ್ಲರೊಡನೆಯೆ |
ಅರಸನಲ್ಲಿಗೆ ಪೋಗಬೇಕೆಂ |
ದಿರುವನಲ್ಲದೆ ಬೇರೆ ಭಾವನೆಯಿಲ್ಲ ಕಪಿಪತಿಗೆ ||
ಬರುತುಮಿರ್ಪನು ನೋಡು ನಿನ್ನಯ |
ದರುಶನಕೆ ನೀಂ ಮುಳಿದೆಯಾದೊಡೆ |
ತೊರಗುತಸುವನು ಬಿಡುವನದರಿಂ ಮುಂದೆ ಕೇಡಹುದು || ೧೪೩ ||

ಎಂದೊರೆವಸಮಯಕ್ಕೆ ಭಾಸ್ಕರ |
ನಂದನನು ಕಡುದುಗುಡಗೊಂಡೈ |
ತಂದು ವಿನಯದಿ ಘನಮಹಿಮ ನಿನಗೇತಕೀಬರವು ||
ಕುಂದದಾರಾಘವನ ಕೃಪೆಯಿಂ |
ಬಂದುದೀಸಾಮ್ರಾಜ್ಯವೆಂಬುದ |
ನಿಂದು ತಿಳಿಯದ ಮೂರ್ಖನೇ ನಾಂ ಮರೆವೆನುಪಕೃತಿಯ || ೧೪೪ ||

ಅರಿದೆನಾಘನಮಹಿಮರಾಮನು |
ಶರದಿನೊಂದರಿನೇಳುಮರಗಳ |
ಕೊರೆದದಿನವೇ ತನ್ನ ಮೈತ್ರಿಯೊಳೇನು ಫಲವಿವಗೆ ||
ಬರಿದೆ ನೆವವಿಟ್ಟೆನ್ನ ನಿಲ್ಲಿಸಿ |
ಧುರದೊಳಹಿತನ ಕೊಂದು ಸೀತೆಯ |
ತರುವನಲ್ಲದೆ ಮಾಣನಿವನೆಂದೆಂಬ ಸಂಗತಿಯ || ೧೪೫ ||

ಅರಿಯಲೆನ್ನಿಂದೇನುಪಾಯವು |
ಪರಮದೈವಕೆ ಸೇವಿಸಲು ಕಪಿ |
ವರರ ನೆರವಿನು ಕೂಡಿ ಬೆಂಬಲಕೊಲಿದು ಪೋಗುವೆನು ||
ಬರುತಿರುವರಿದೊ ನೋಡು ನಾನಾ |
ಗಿರಿಗುಹೆಗಳಿಂ ಭಟರು ನಾವಿ |
ನ್ನರಸನಲ್ಲಿಗೆ ಪೋಪೆವೇಳೆಂದೊಡಂಬಡಿಸಿ ತೆರಳೆ || ೧೪೬ ||

ಒಡನೆ ಬಂದುದು ಮಂತ್ರಿಮುಖ್ಯರ |
ಗಡಣ ಕೋಡಗಪಡೆಯು ಮರಗಳ |
ಬುಡವೆರಸು ಕಿತ್ತೆತ್ತಿ ಪಿಡಿದಾಲುತ್ತನೈದಿದುದು ||
ಜಡಪದಾರ್ಥಗಳೆಂತು ಚಲಿಪುವು |
ಗಿಡಗಳೇ ತಾವೈದುತಿರುವಲೆ |
ಕಡುಪೊಸತಿದೆಂದೆನುತೆ ನೋಳ್ಪವರದ್ಭುತಂಗೊಳಲು || ೧೪೭ ||

ಬಂದರಾಸುಗ್ರೀವಲಕ್ಷ್ಮಣ |
ರಂದು ಕಂಡರು ರಾಮಚಂದ್ರನ |
ಮುಂದಕಾಸುಗ್ರೀವನೈತಂದೆರಗಿರಲು ಪದಕೆ ||
ಮಂದಹಾಸದೆ ತನ್ನ ಹಸ್ತಗ |
ಳಿಂದೆ ತೆಗೆದಾಲಿಂಗಿಸುತ್ತಾ |
ನಂದದಿಂ ಕುಳ್ಳಿರಿಸಿ ರಾಘವನೆಂದನವನೊಡನೆ || ೧೪೮ ||

ಧೀರ ಕಪಿವರ ನಿನ್ನ ಸಖ್ಯದ |
ಸಾರವಿಂದೆನಗೊದವಿತೆಂದೇ |
ತೋರುತಿರ್ಪುದು ನಿನ್ನ ಕೋಡಗಪಡೆಗೆ ಮೆಚ್ಚಿದೆನು ||
ವಾರಿಧಿಯ ತೆರೆಯಂತೆ ನೆರೆದಿಹ |
ವೀರಭಟರನು ಕಳುಹಿಸೀಗಳೆ |
ಚೋರರಾವಣನಿರ್ಪ ನೆಲೆಯ ವಿಚಾರವೆಸಗುವುದು || ೧೪೯ ||

ಅರಿಯ ನಿಗ್ರಹಕಿದುವೆ ಸಮಯವು |
ತುರಿಪದಿಂದುಬ್ಬುಗಿಪುದನೆ ಕರೆ |
ದೊರೆಜನಿಸಜನು ಕಾಡಿಕೋಡಗಮುಸುಬಪಡೆಪಳರ ||
ಭರದೆ ನೀಂ ದೆಸೆದೆಸೆಗೆ ನಡೆದ |
ಲ್ಲಿರುವ ಗಿರಿವನಪಟ್ಟಣಂಗಳೊ |
ಳರಸಿ ಸೀತಾದೇವಿಯಿರ ನೆಲೆದಿಳಿದು ಬಂದರುಹಿ || ೧೫೦ ||

ಕೊಟ್ಟಿಹೆನು ನಾಂ ತಿಂಗಳವಧಿಯ |
ನಷ್ಟರೊಳು ನೀವರಸಿ ರಾಮನ |
ಪಟ್ಟದರಸಿಯ ಸುದ್ದಿಪೇಳ್ವುದು ಕುಡುವೆನುಡುಗೊರೆಯ ||
ಕಟ್ಟಳೆಯ ದಿನವದನು ಮೀರ |
ಲ್ಕಷ್ಟವಪ್ಪುವು ನಿಮ್ಮ ತಲೆಗಳು |
ತಟ್ಟನೆಲ್ಲಾ ಕಡೆಗೆ ತೆರಳಿರೆನುತ್ತೆ ಬೆಸಸುತ್ತೆ || ೧೫೧ ||

ಕರೆದು ವಾಲಿಯ ಕುವರನನು ನೀ |
ನಿರದೆ ಜಾಂಬವದನಿಲಜಾದ್ಯ |
ರ್ವೆರಸಿ ತೆಂಕಣ ದಿಕ್ಕಿನಲ್ಲಿಹ ಸಕಲದೇಶಗಳ ||
ಚರಿಸುತರಸುವುದೊದವದಿರೆ ಭೋ |
ರ್ಗರೆವ ಶರಧಿಯ ದಾಂಟಿ ಹೊರಗಣ |
ಕರೆಯೊಳಿರ್ಪಾ ದ್ವೀಪವನು ಸೇರ್ದಲ್ಲಿ ಹುಡುಕುವುದು || ೧೫೨ ||

ಕೇಳಿಹೆನು ದಶಕಂಠನಾಮದ |
ಖೂಳನಲ್ಲಿಹನೆಂಬುದನು ಕ |
ಟ್ಟಾಳುಗಳು ಸಾಹಸಿಕರೆನ್ನುತೆ ನಿಮ್ಮನಾ ಕಡೆಗೆ ||
ಬೀಳುಕೊಟ್ಟಿಹೆನಿಂದು ನೀವ್ಗಳು |
ಮೇಲೆನಿಪ ಕುಲದವರು ಸಮರದೆ |
ಕಾಲನನು ಬೆದರಿಸುವ ಶೂರರು ನಿಮಗದೇನರಿದು || ೧೫೩ ||

ಹರಿಯುದಿತರರ ಕೈಯೊಳಿದು ಬಲು |
ಹರುಷಗೊಡುತೆ ರಾಮಕಾರ್ಯವ |
ಜರುಗಿಸುವುದೆಂದೊರೆದು ಸೀತಾಪತಿಗೆ ಕೈಮುಗಿದು ||
ಅರಸ ಲಾಲಿಪುದೀಮರುತ್ಸುತ |
ನುರುಪರಾಕ್ರಮಿ ನಿನ್ನ ಕಾರ್ಯವ |
ನಿರದೆ ಕೈಗೂಡಿಸುವನಿವನನು ಕರೆದು ಮನ್ನಿಸೆನೆ || ೧೫೪ ||

ಮನಕದೊಪ್ಪಿತವಾಗಲರಸಂ |
ಗನಿಲಜನ ಕರೆದೆಂದನೆನ್ನಯ |
ವನಿತೆಯೆ ಲ್ಲಿಹಳೆಂಬುದನು ನೀಂ ತಿಳಿದಬಳಿಕಲ್ಲಿ ||
ಜನಕೆ ಗೋಚರವಾಗದಂದದೆ |
ವಿನುತಮಾದುಂಗುರವನಿದನಾ |
ಜನಕಜೆಗೆ ನೀಡವಳ ಸಂಶಯವಳಿವುದದರಿಂದೆ || ೧೫೫ ||

ಬಳಿಕ ತನ್ನಾಳೆಂದು ನಂಬಿಯೆ |
ಲಲನೆ ಪತಿಕರಿಸುತ್ತೆ ನಿನ್ನನು |
ಸಲುಗೆಯಿಂ ನುಡಿಯಿಪಳು ಕುರುಹನು ನೀನು ಕೊಳ್ಳೆನುತೆ ||
ಲಲಿತವಾದಂಗುಲಿಯ ಮುದ್ರೆಯ |
ನೊಲವಿನಿಂದಿತ್ತಾಕೆಗನುವಿಂ |
ದುಲಿವುದಿದನೆಂದಂತರಂಗದ ಕೆಲವುಸಂಗತಿಯ || ೧೫೬ ||

ಕಿವಿಯೊಳೊರೆದೆಲೆ ನಿನ್ನ ಕಾರ್ಯವು |
ತವಕದಿಂ ನೆರವೇರಲೆನ್ನೆಂ |
ದವಿರಳಾಶೀರ್ವಾದವನು ಗೈದಿಂವೆ ತೆರಳೆನಲು ||
ಪವನನಂದನನಾಗ ಸಂತಸ |
ನವಿಗಡಲೊಳಾಳುತ್ತೆ ದೇವನೆ |
ತವಕಟಾಕ್ಷದ ಬಲವದಿದ್ದೊಡೆ ಕಾರ್ಯವೆನಿತರದು || ೧೫೭ ||

ನುಡಿದವಧಿ ಪೂರೈಪ ಮುನ್ನ ಮೆ |
ಹುಡುಕಿ ಕಾಣಿಸಿಕೊಂಡು ದೇವಿಯ |
ಎಡಿಯ ನುಕ್ಷೇಮವನು ನಾಂ ಬಂದೊರೆಯದಿರೆ ಬಳಿಕ ||
ನುಡಿಯಲೇನೀದೇಹವನು ನೆರೆ |
ಸುಡುವೆನಗ್ನಿಯೊಳಲ್ಲದೊಡೆ ಕಡಿ |
ದೊಡನೆ ಭೂತಂಗಳನು ತಣಿಪದೆ ಮಾಣೆನೆಂದೆರಗಿ || ೧೫೮ ||

ಸರಿಯುಲೆಲ್ಲರುವೊಡನೆ ರಾಮನ |
ಚರಣಕಭಿವಂದಿಸುತೆ ಮನದೊಳ್
ಸ್ಮರಿಸುತಾರಘುರಾಮಮಂತ್ರವ ಜಪಿಸುತೆಡೆಬಿಡದೆ ||
ತೆರಳುತಲ್ಲಲ್ಲಿರುವ ವನಗಳೊ |
ಳರಸುತಾಯಾಭೂಧರಂಗಳ |
ನಿರದಡರುತಲ್ಲಲ್ಲಿ ಸೋದಿಸಿ ಕಾಣದವನಿಜೆಯ || ೧೫೯ ||

ಅಕಟ ಮುಂದಿನ್ನೇನು ಕಾರ್ಯವು |
ಯುಕುತಿಯಾವುದು ತೋರದಲೆ ಬಹು |
ವಿಕಳಮತಿಯಿಂದೊಪ್ಪುಗೊಂಡುದು ನಮ್ಮ ತಪ್ಪು ಗಡಾ ||
ಸಕಲವಾನರತತಿಯು ದಣಿದುದು |
ಸಕುತಿಗುಂದಿದೆವಾವು ಲೋಕ |
ಪ್ರಕಟವಾಯಿತು ಹೀನಬಲರಾವೆಂಬುದಿಂದಿನೊಳು || ೧೬೦ ||

ಗತಿಯದೇನೆಮಗೆಂದು ಚಿಂತಿಪ |
ನಿತರೊಳಾಗಳ್ ಕಂಡರಿದಿರೊಳ |
ಗತಿಭಯಂಕರವಾದ ಕಗ್ಗತ್ತಲೆಯ ಗಹ್ವರವ ||
ಕ್ಷಿತಿಜೆಯಿಲ್ಲಿರವೇಳ್ಕುಮೆಂದೆನು |
ತತುಳಬಲರಾಬಿಲವನೊಳವುಗ |
ಲತಿವಿರಾಜಿತಮಪ್ಪಪುರವೊಂದಲ್ಲಿ ಕಾಣಿಸಿತು || ೧೬೧ ||

ಚಿತ್ತಕಚ್ಚರಿಯಾಗೆ ಬಳಿಸಾ |
ರ್ದತ್ತ ನೋಡುತ್ತಿರ್ಪ ಸಮಯದೊ |
ಳುತ್ತಮೋತ್ತಮೆಯಾಸ್ವಯಂಪ್ರಭೆಯೆಂಬ ತಾಪಸಿಯು ||
ಹತ್ತಿರಕೆ ಸಡೆತಂದು ನುಡಿಸಿದ |
ಳೆತ್ತಣಿಂ ಬರವಾಯ್ತು ನಿಮಗೆ ನಿ |
ಮಿತ್ತವೇಂ ಬರಲಾದನುಜ್ಞೆಯು ಬಿತ್ತರಿಪುದೆಂದು || ೧೬೨ ||

ಕೇಳು ತಾಪಸಿ ನಾವಯೋಧ್ಯಾ |
ಭೂಲಲಾಮನ ರಾಮಚಂದ್ರಮ |
ನೋಲೆಕಾರರು ಪಯಣಗೊಂಡಿಹೆವಾತನರಸಿಯನು ||
ಖೂಳ ರಾವಣನೆಂಬ ದೈತ್ಯಕ |
ರಾಳನಿರದಪಹರಿಸಿಯೆತ್ತಲೊ |
ಕಾಲುದೆಗೆದನು ಪಾಪಿಯಾತನನರಸಬೇಕೆಂದು || || ೧೬೩ ||

ತೋರಲಿಲ್ಲಿಯುಮವನಿಸುತೆ ನಾಂ |
ದಾರಿಗಾಣೆವು ಮರಳಿಪೋಗಲು |
ಪಾರಗಾಣಿಪುದೆಮ್ಮ ನೀನೆಂದೆನುತೆ ವಿನಯದೊಳು ||
ಶೂರಮಾರುತಿಯೊರೆಯೆ ನೀವಾ |
ಹಾರಗೊಳ್ಳುವದೆನುತ್ತುಮವರಿಗೆ |
ಸಾರವಾದ ಫಲಂಗಳಂ ತಿನಲಿತ್ತು ತಣಿವೆಸಗಿ || ೧೬೪ ||

ತೆರೆದ ಕಣ್ಗಳ ಮುಚ್ಚಿಕೊಳೆ ನೀಂ |
ಪೊರಗೆ ಸಾಗಿಪೆನೀಗಳೆಂದವ |
ಳೊರೆಯಲಂತವರೆಸಗಲಾಕ್ಷಣಮಬ್ಧಿಯೆಡೆಯೊಳಗೆ ||
ಗಿರಿಯದೊಂದರ ತಪ್ಪಲೊಳು ತಾಂ |
ಮೆರೆದರಚ್ಚರಿವಡುತುಮಲ್ಲಿಯು |
ಮರಸನರಸಿಯನರಸಿ ಕಾಣದೆ ಚಿಂತೆವೆರಸಿದರು || ೧೬೫ ||

ಏನಿದಕಟೆಂತಾಯ್ತು ನಮಗಾ |
ವಾನರೇಶ್ವರನಿತ್ತ ಗಡುವಂ |
ತಾನದಾಗಲೆ ಕಳೆದುದಲೆ ಮುಂದೇನನೆಸಗುವೆವು ||
ಕ್ಷೋಣಿಜೆಯ ಕಾಣದೆಯೆ ಮರಳಲ್ |
ಪ್ರಾಣವುಳಿಯದು ರಾಮಕಾರ್ಯ |
ಕ್ಕೂಣೆಯವು ನಮ್ಮಿಂದೆ ಬಂದೊಡೆ ಬಳಿಕ ಬದುಕೇಕೆ || ೧೬೬ ||

ನಿರಶನವ್ರತದಿಂದಮಾಗಳು |
ಶರಧಿತಟದೊಳಗಸುವನೀಗಲು |
ಕರುಣಿಸನು ಸದ್ಗತಿಯನೆಮಗಾ ರಾಮಚಂದ್ರಮನು ||
ತೆರನಿದೇಸರಿ ತಮಗೆನುತವರು |
ತೊರೆದುನಿದ್ರಾಹಾರಗಳನುರೆ |
ಪರಮರಾಮಧ್ಯಾನಪರರಾಗಲ್ಲಿ ಕುಳ್ಳಿರಲು || ೧೬೭ ||

ಕಂಡನಿವರನು ಪರ್ವತಾಗ್ರದೆ |
ಮಂಡಿಸಿರ್ದ ಸಂಪಾತಿಯೆಂಬಾ |
ಚಂಡಭುಜಬಲಗೃಧ್ರರಾಜನು ಬಂದನಿವರೆಡೆಗೆ ||
ಕಂಡೆನಾಹಾರವನು ಬಹುದಿನ |
ಕುಂಡು ತೇಗುವೆನಿಂದು ನಿಮ್ಮನು |
ಖಂಡಪರಶುವೆ ನನ್ನ ಹಸಿವನು ಕಳೆಯಲಟ್ಟಿಹನು || ೧೬೮ ||

ಎಂದೊರೆಯೆ ಕೇಳ್ದಾಗಳಂಗದ |
ನೊಂದಿ ಚಿಂತೆಯನಯ್ಯ ನೀಂ ಮನ |
ದಂದು ಮದ್ವಾರ್ತೆಯನು ಕೇಳ್ವೈ ರಾಮನಾಸತಿಯ ||
ಮುಂದಮತಿ ರಾವಣನು ಕದ್ದೊ |
ಯ್ವಂದು ಕಡೆದಜಟಾಯುಪವನಿಂ |
ನೊಂದು ರಾಮಂಗರುಹಿ ಸಕಳವನಳುವ ನೀಗುವನು　　|| ೧೬೯ ||

ಎಮ್ಮೊಡೆಯನಿನಸುತನ ಸಖ್ಯವು |
ಸಮ್ಮುದದೆ ರಾಮಂಗೆ ಸಮನಿಸೆ |
ನಮ್ಮನಟ್ಟಿದನಾತನವನೀಸುತೆಯನರಸಲ್ಕೆ ||
ಒಮ್ಮನದೆ ನಾವರಸಿ ಕಾಣದೆ |
ಹಮ್ಮಳಿದು ಕೊರಗುತ್ತೆ ಬಂದೆವು |
ನೀಮ್ಮನಂದಂದೆಮ್ಮನೆಲ್ಲರನುಳುಹು ಕೃಪೆಯಿಂದೆ　　|| ೧೭೦ ||

ಎನುತುಮಂಗದನಾಡೆ ಕೇಳ್ದತಿ |
ಘನವಿಷಾದದೊಳಳ್ದು ವಿಹಗನು |
ತನಗದನು ಮತ್ತೊಮ್ಮೆ ಪೇಳ್ವುದು ವಿಶದವಪ್ಪವೊಲು ||
ಅನುಜನನು ರಾವಣನು ಕೊಂದನೆ |
ವಿನುತರಾಮನದಾರು ಪೇಳೆನೆ |
ಹನುಮನೊಲವಿಂ ನುಡಿದನಾಗಳೆ ನಡೆದ ಸಂಗತಿಯ　　|| ೧೭೧ ||

ದಾಯ ತಪ್ಪಿತು ತಮ್ಮನಳಿದನೆ |
ಬಾಯ ಬಿಡಲಿನ್ನೇನು ಫಲ ತನ |
ಗಾಯತಿಕೆಯೆಲ್ಲಿಹುದು ಶತ್ರುವನಿಂದು ನಿಗ್ರಹಿಸೆ ||
ಕಾಯ ತಗ್ಗಿದುದಲ್ಲದೆರಕೆಯು |
ಪೋಯಿತಂದಾರವಿಯ ಕಿರಣದೆ |
ಹೇಯಮಾದೀದೇಹವಿದ್ದೇನಕಟ ಬಿದ್ದೇನು ||　　|| ೧೭೨ ||

ನೂರುಯೋಜನಮಿಪ್ಪುದಬುದಿಯು |
ಹಾರಿ ಬೇಗನೆ ಪೋಪರಾದೊಡೆ |
ಘೋರರಾವಣನಿರ್ಪ ಲಂಕೆಯ ಸೇರ್ವಿರೈ ನೀವು ||
ಶೂರರಾಕ್ಷಸರದರ ಸುತ್ತಲು |
ಸೇರಿ ಕಾದಿರ್ಪರು ನೀವದ |
ಮೀರಿ ಪೋದೊಡೆ ಕಾಣ್ಬಿರೈ ಶ್ರೀರಾಘವನ ಸತಿಯ　　|| ೧೭೩ ||

ದೂರಮಲ್ತದು ನಮ್ಮ ದಿಟ್ಟಿಗ |
ಪಾರಶಕ್ತಿಯು ಧಾತೃನಿರ್ಮಿತ |
ವಾರುಮರಿಯದ ವಸ್ತು ನಮ್ಮಯ ಕಣ್ಗೆ ಕಂಡಪುದು ||
ಧೀರರಿರ ನಿಮಗನಶನವ್ರತ |
ದಾರುಣವು ಸಲ್ಲುವುದೆ ರಾಮನ |
ನೀರೆಯನು ಕಂಡಹಿರಿ ಶರಧಿಯ ದಾಂಟಿ ನೀವೆಂದು || ೧೭೪ ||

ಆವಿಹಂಗಮನೊರೆದು ಪೋಗಲ |
ದೇವಿಚಿತ್ರವೊ ರಾಮಮಹಿಮೆಯು |
ಸಾವು ತಪ್ಪಿತು ಶಕ್ತಿಯಿಮ್ಮಡಿಸಿದುದು ನಮಗಿಂದು ||
ದೇವಿಯರ ಸಂದರ್ಶನೋತ್ಸವ |
ಕಾವುದಿದಿರೆಮಗಣುವಿದಂಬುಧಿ
ನಾವೆಯಿಂದೇಂ ನಡೆವುದೆಂದರು ವೀರಕಪಿವರರು || ೧೭೫ ||

ಉಬ್ಬಿದರು ಸಂತಸದೆ ಕಮುಗಿದು |
ಹಬ್ಬವೆಂದರು ನೆಗೆದರಾಲುತೆ |
ಬೊಬ್ಬೆಗೈದರು ಪರ್ವತಂಗಳ ಗಬ್ಬವೊಡೆವುವೆನೆ ||
ಸಬ್ಬರಾಟವ ನೋಡುತಾಣತಿ |
ಯೊಬ್ಬೆಮಾರುವರೆಸುತುಮಂಗದ |
ನುಬ್ಬರದ ಕುಣಿತವನು ನಿಲಿಸಿದನಾಜುಬಟಿಗೈದು || ೧೭೬ ||

ಮುಂದಣಾಹದನೇನು ಧರಣೀ |
ನಂದನೆಯು ನೆಲೆಯರಿತೆವಾವೀ |
ಸಿಂಧುವನು ನೆರೆ ದಾಂಟಿಯುವರನು ಕಾಣ್ಬುತೆವನೆಂತು ||
ಇಂದು ನಮ್ಮೊಳಗಾವನೀಪ್ರತಿ |
ಬಂಧವನು ಮಿಗೆ ಕಳೆದು ಲಂಕೆಯು |
ನೊಂದಿ ಮರಳುವ ಸುಭಟನಾತಂಗಿದೆಕೊ ವೀಳೆಯವು || ೧೭೭ ||

ವೀರರಿರ ನಿಮಗೇನಸಾಧ್ಯವೆ |
ನೂರುಯೋಜನವನಿತೆ ಕಡಲಿದು |
ಧೀರಕಪಿಕುಲದಗ್ರಗಣ್ಯರಿಗೇನಿದತಿಶಯವು ||
ಕಾಲವಿದು ಸಾಹಸಕೆ ಪೌರುಷ |
ದೇರುಜೌವನದುಬ್ಬು ನಿಮ್ಮೊಳ |
ಗಾರಿಗುಂಟವಲೆದ್ದು ಕೊಳ್ವುದು ವೀಳೆಯವನೆಂದ || ೧೭೮ ||

ಕೇಳಿದರು ಭಟರಂಗದನ ಕ |
ಟ್ಟಾಳುತನದಾನುಡಿಯ ತವ್ಕ ವಿ |
ಶಾಲಭುಜಬಲದೊರೆಯನಿಕ್ಕುತುವಿಮರ್ದದೊಳಗೊಳಗೆ ||
ಹೇಳಿದರು ಗಜಗವಯಶರಭರು |
ಕೋಳ ಬಲವಿನಿತಿನಿತುತಮಗೆಂ |
ದಾಲಿಸಿದನರುಹಿದನು ಜಾಂಬವನಾಗ ತನ್ನ ದಟ ||೧೭೯||

ಹಿಂದೆ ಲೋಕತ್ರಯವನಂಘ್ರಿಗ |
ಳಿಂದಮಳೆಯುತ್ತಾತ್ರಿವಿಕ್ರಮ |
ನಿಂದಕಾಲದೊಳಾವುಹಾಂಗನ ಸುತ್ತಿದೆನು ಬಳಸಿ ||
ಬಂದುದೀವೃದ್ಧಾಪ್ಯದಶೆ ತನ |
ಗಿಂದು ನಾನೇಗೈವೆನಿನಿತುಂ |
ಕುಂದಸೊಂದದೆ ಹಾರುವೆನು ತೊಂಬತ್ತುಯೋಜನವ ||೧೮೦||

ಮುಂದಕೇತುಟೊ ಎಂಬ ಸಂಶಯ |
ವೊಂದುಬಾಧಿಸುತಿರ್ಪುದೆನಗೆನ |
ಲಿಂದು ತನ್ನನು ಕಳುಹಿ ನೋಡುವುದೆನುತುಮಂಗದನು ||
ಮುಂದುವರಿಯಲ್ಕಂಡು ಜಾಂಬವ |
ನಂದವಲ್ಲಿದು ರಾಜನೀತಿಗೆ |
ಕುಂದಹುದು ನೀಂ ಪೋಪುದೆಂದೊರೆದವನ ತಡೆಗೈದು ||೧೮೧||

ಬಾರ ಬಾರೈ ಮಾರುತನ ಸುತ |
ಮೇರುಗಿರಿಸಮಭುಜಬಲಾನ್ವಿತ |
ಬೀರಗಾಸೆಯ ಬಿಗಿಯುಲೇಳೈ ಸಕಲವಿಬುಧಸುತ ||
ತೋರು ನಿನ್ನ ವಿಶೇಷರೂಪವ |
ನಾರು ನಿನಗೆಣೆಯಹರು ರಾಮನ |
ಕಾರಯದ ಕೀರ್ತಿಯನು ಬೆಳಗುವನಾಗು ಲೋಕದಲಿ ||೧೮೨||

ನಿನ್ನ ದೆಸೆಯಿಂದವನಿತನುಜೆಯ |
ಸನ್ನುತಾಂಘ್ರಿಯ ಕುಶಲವಾದಾ |
ಪಿನ್ನು ರಾಮಂಗೆಮ್ಮ ಮುಖವನು ತೋರಿದಪೆವೆಂಬ ||
ಉನ್ನತಾಶೆಯೊಳೆಮ್ಮ ಹರಣವ |
ಮುನ್ನವೇ ಬಿಡದಾದಪಿತರು |
ಮನ್ನಿಸುವರಾದುಟು ರಕ್ಷಿಸಲೇಳು ಕಪಿಕುಲವ ||೧೮೩||

ಎಂದು ನುಡಿದಜಸೂನು ಕಂದಿಂ |
ದಂದು ಸಿರವನು ತಡವಲಾರಘು |
ನಂದನನ ಕಿಂಕರನು ತವಕದಿನೆದ್ದು ಕೈಮುಗಿದು ||
ಮಂದಬಲನಾನಿನಿತಕರ್ಹನೆ |
ಕಂದು ಕೃಪೆಯನು ತನ್ನನೀಪರಿ |
ಯಿಂದೆ ಮನ್ನಣೆಗೈದನಿವನಾತ್ಮಶಿಷದ ಬಲವಿರಲು || ೧೮೪ ||

ಎಣಿಕೆಯುಂಟೇ ಮನಕೆ ಮೇಣಿದು |
ವನರುಹಾಕ್ಷನ ಪರಮಕಾರ್ಯವು |
ತನಗೆ ತಾನೇ ಸಾಧ್ಯವಪ್ಪುದು ಶಂಕೆಯಿಲ್ಲಿದಕೆ ||
ಇನನುದಯದೊಳಗಂಧಕಾರವ |
ದಣಗಿ ಪೋಪಂದದೊಳು ರಾಮನ |
ಘನಿಹದಾಳನು ಕೇಣಲ್ಕೆಡನೆಮೆ ಬತ್ತದೇನಬುಧಿ || ೧೮೫ ||

ಸಿರದೊಳಾಂತೆನು ನಿಮ್ಮನುಜ್ಞೆಯ |
ಗುರುವರೇಣ್ಯನೆ ಪರಸಿ ಕಳುಹುವು |
ದೆರಗುವೆನು ನಿಮಗೆಂದು ವಿನಯದಿನಂದು ತಲೆವಾಗಿ ||
ಮೆರೆವ ವಿಲಯದ ರುದ್ರನಿವನೆನೆ |
ಸಿರವು ನಭವನು ತಾಗೆ ಬೆಳೆದನು |
ಭರದೆ ಸನಿಹದ ಮರಮಹೇಂದ್ರಾಚಲವನಡರಿದನು || ೧೮೬ ||

ಶರಧಿ ಮೊರೆದುದು ಮುಂದೆ ತನಗಾ |
ರ್ಸರಿಸಮಾನರು ತನ್ನ ಕುವರಿಯೆ |
ಸಿರಿಯು ನನಗದರಿಂದೆ ಜಾಮಾತನಲಾಹರಿಯು ||
ಸುರರಿಗಮೃತವನಿತ್ತೆನೊಳ್ಮಣಿ |
ಯಿರುವುವೆನ್ನೊಳು ಸುರಕುಜಾದಿಗ |
ಳೊರೆಯಲೇನೆನ್ನುದರಜನಿಕವು ನೋಡಿಮೆಂಬವೊಲು || ೧೮೭ ||

ಇಂದಿರನ ವಜ್ರಾಯುಧದ ಭಯ |
ದಿಂದೆ ವಹಿಲದೆ ಬಂದು ಮರೆವೊ |
ಕ್ಕಂದು ಮೈನಾಕನನು ಭೂಧರನೆಂದು ಸಲಹಿದೆನು ||
ಇಂದು ತನ್ನಿಂ ಭೂಮಿಜೀವನ |
ವೊಂದುತ್ತೆನ್ನಯ ಗತಿಯ ಬಾಧಿಸು |
ವೊಂದುಮುಳಿದದನೋದೆವುದೆನಲುಚ್ಚಲಿಸಿತಂಬುನಿಧಿ || ೧೮೮ ||

ನೋಡಿದನು ಪವನಜನು ಜಲಧಿಯ |
ಗಾಢಗರ್ವವನಿದು ಸವಿಾರನ |
ರೂಢಿಸದ ಬಲದೆಸಕವಿಳಿಯಿಪೆನೀಗಳಿದನೆಂದು ||
ಜೋಡಿಸಿದ ಕರದಿಂದೆ ತಂದೆಯ |
ಬೇಡುತಿರ್ದನು ತನ್ನ ಹರಿಬದ |
ಪಾಡದಾರದು ನಿನ್ನದೈಸಲೆಯುರಬನುಳಿಯೆಸುತೆ || ೧೮೯ ||

ಅತ್ತ ಸುಗ್ರೀವಾಜ್ಞೆಯಿಂ ನಡೆ |
ದೊತ್ತಿ ನಾನಾದಿಶೆಯೊಳರಸಿಯು |
ಮೆತ್ತಲುಂ ಜಾನಕಿಯ ಸಲೆಯುನೆ ಕಾಣದುರೆ ಬಳಲಿ ||
ಚಿತ್ತದುಮ್ಮಳದಿಂದೆ ಗಡುಬವು |
ಹತ್ತಿರಾಯ್ತೆಂದಂಜಿ ಕಪಿವಂ |
ಶೋತ್ತಮರು ಪಿಂದಿರುಗಿ ಬಂದರು ತರಣಿಸುತನೆಡೆಗೆ || ೧೯೦ ||

ದೇವ ಭವದಾಜ್ಞಾವಲಂಬಿಗ |
ಳಾವಿಳಾಮಂಡಲದ ದೇಶಗ |
ಳಾವುವುಂಟವಸೆಲ್ಲ ತಿರುಗಿದೆವಾಯ್ತು ನಿಷ್ಫಲವು ||
ದೇವಿಯರ ಸುದ್ದಿಯನೆ ಕಾಣೆವು |
ಕಾವುದೆಮ್ಮನೆಸಲ್ಕೆ ಮನ್ನಿಸಿ |
ಪಾವಮಾನಿಯು ನಿದಿರುನೋಡುತುಮಿರ್ದನಿನಸುನನು || ೧೯೧ ||

ವಿದಿತಘನಕರ್ಣಾಟರಾಜ್ಯದ |
ಪದಕೊಡೆಯನಹ ಕೃಷ್ಣಭೂಪನ |
ಪದದ ಸೇವಕನೆನಿಪ ಚಿಕಲಿಂಗಾಖ್ಯಪಾರ್ಥಿವನು ||
ಪದೆದು ಕಿಷ್ಕಿಂಧಾಖ್ಯಕಾಂಡವ |
ನಿದನು ನುಡಿದನು ಭಾಮಿನೀಷ |
ಟ್ಪದಿಯೊಳಿದು ರಾಜಿಸುಗೆ ಸುಜನಗೊಲವನೊದವಿಸುತೆ ||

ಕಿಷ್ಕಿಂಧಾಕಾಂಡಂ ಸಂಪೂರ್ಣಂ.

ಸುಂದರಕಾಂಡವು.

ಸೂ|| ಧೀರಮಾರುತಿ ಪಾರಿ ಕಡಲನ |
ಪಾರವಲ್ಲೆಂದೆನಿಸಿ ಲಂಕೆಯ |
ಸೇರಿ ಕಂಡನಶೋಕವನಮಧ್ಯದೊಳು ಜಾನಕಿಯ ||

ಗಿರಿಯ ಶಿಖರದೆ ನಿಂದು ಹನುಮನು |
ಕರಯುಗಳವನು ಮುಗಿದು ರಾಮನ |
ಚರಣವಾರಿಜಗಳನು ನೆನೆಯುತೆ ದೇವ ರಾಘವನೆ ||
ತರಳನಾದೆನಗಿಂದು ಶಕ್ತಿಯ |
ನಿರದೆ ಕರುಣಿಸಿ ದಾಂಟಿಸೀಸಾ |
ಗರವನಿದು ನಿನಗೇನು ದೊಡ್ಡಿತೆ ದಿವ್ಯಮಹಿಮಂಗೆ || ೧ ||

ಸ್ಮರಿಸೆ ನಿನ್ನನು ಜನವು ಭವಸಾ |
ಗರವ ದಾಂಟುವುದೆನಲು ನಿನ್ನಯ |
ಹರಿಬಕಂಗೈಸಿರುವ ಕಿಂಕರಗಾವುದಸದಳವು ||
ಪರಿಕಿಸಲು ಶತಯೋಜನದವಿ |
ಸ್ತರದ ರತ್ನಾಕರವ ದಾಂಟದೆ |
ಯುರುವ ಕಜ್ಜವು ಕೆಟ್ಟಿತೆಂದನಲಾರಿಗಪವಾದ || ೨ ||

ಸತ್ವವೀವುದೆನುತ್ತೆ ಕಾಲ್ಗಳಿ |
ನೊತ್ತಿ ನೆಲನನು ಮೇಲೆ ಕುಪ್ಪಳಿ |
ಸುತ್ತೆ ಗಗನವ ಬಗಿವನೆನೆ ತೋಳ್ಗಳನು ಬೀಸೆಳೆದು ||
ಒತ್ತಿಕೊಂಡೈತರ್ಪ ಮೇಘದ |
ಮೊತ್ತಮೊತ್ತಗಳೊಳಗೆ ನುಗ್ಗುತೆ |
ಮತ್ತೆ ಪೊರಮಡುತಿನನ ತೆರದೊಳಗೊಪ್ಪಿದನು ನಭದೆ || ೩ ||

ಆದುದಿನ್ನೇನಸುರರಾಟವು |
ಮೋದವಾಂಪುದು ಸುರರ ಕೂಟವು |
ಬೇದಿನೀಸುತೆಯೊಡನೆ ಬೇಟವು ದಿತಿಜಪತಿಗಳಿವು ||
ಹೋದರರಿಗಳು ನಿಮ್ಮ ಮನದಾ |
ಖೇದವನು ಬಿಸುಡುವುದು ಹನುಮನು |
ಹಾದನಿದೊ ಸಾಗರವನೆಂದನು ಸುರಪನಮರರ್ಗೆ || ೪ ||

ಹಿಂದೆ ತಾನಿಕ್ಷ್ವಾಕುವಂಶಜ |
ರಿಂದವೇಳ್ಗೆಯ ಪಡೆದೆನವರೊ |
ಳ್ಬಂದ ರಾಮನ ಕಾರ್ಯಕನಿಲಜನಿಂದು ತೊಡಗಿಹನು ||
ಚಂದವಲ್ಲದು ಸುಮ್ಮನಿರ್ಪುದು |
ಕುಂದಕವು ತನಗೆಂದು ಸಾಗರ |
ನಂದು ಚಿಂತಿಸಿ ಕರೆದು ಮೈನಾಕಂಗೆ ನಿರವಿಸಿದ || ೫ ||

ಎದ್ದನವನಂಬುಧಿಯ ಮಧ್ಯದೆ |
ಹೊದ್ದಿದನೊ ಗಗನವನು ತಾನೆನ |
ಲುದ್ದವಾಗಿಯೆ ಬಳೆಯುತನಿಲಜನೈದುವಾಪಥದೆ ||
ಇದ್ದು ಪಲವುಂಬಗೆಯ ಫಲಗಳು
ಸಿದ್ಧವಿರ್ಪುವು ಸೇವಿಸುತ್ತಿವ
ನುದ್ಧರಿಸು ಕೃಪೆಯಿಂದೆ ತನ್ನನೆನುತ್ತುಮರ್ಥಿಸಿದ || ೬ ||

ಸಮಯವೀಗೆನಗಿಲ್ಲವೈ ನೀಂ |
ಕ್ಷಮಿಸು ಸತ್ಕೃತನಾದೆನವಿರಳ |
ಮಮತೆ ನಿನಗುಂಟೆನ್ನೊಳಿದಕಾನಹೆನು ಹಂಗಿಗನು ||
ವಿಮಲರಾಘವದೇವನಾಜ್ಞೆಯಿ |
ನಮಿತಕಾರ್ಯದೆ ಸಕ್ತನಾಗಿಹೆ |
ನವಮು ಪೋಪನರೆಗಮುಚಿತವೆ ಬೇರೆ ಸುಖವೆನಗೆ || ೭ ||

ವೇಳೆಯುಳ್ಳಿದು ಮರಳಿ ಬರ್ಪೆನು |
ತಾಳಿ ಕೃಪೆಯನು ಮನ್ನಿಸೆಂದುರೆ |
ಯಾಲಿ ಜೊಬ್ಬಿರಿದಂಜನಾಸುತನಧಿಕವೇಗದೊಳು ||
ಮೇಲೆ ನಭದೊಳ್ಪೋಗುತಿರಲಿವ |
ನಾಳುತನವನು ತಿಳಿಯಬೇಕೆಂ |
ದಾಲಿವೆಯ್ಯನು ಕಳುಹಲಿದಿರಿಸಿ ನಿಂದಳಾಸುರಸೆ || ೮ ||

ನಿಲ್ಲು ನಿಲ್ಲೆಲೆ ಕಪಿಯೆ ಮುಂದಿ |
ನ್ನೆಲ್ಲಿಗೈದುವೆ ನಿನ್ನ ರಭಸ |
ಕ್ಕಲ್ಲ ಠಾವಿದು ಕಮಲಸಂಭವನಿತ್ತ ವರವೆನಗೆ ||
ಇಲ್ಲಿಗೈತಂದರನು ನುಂಗೆಂ |
ದೊಲ್ಲೆನೆಂದೊಡೆ ತಪ್ಪದೀಬಾ |
ಯಲ್ಲಿ ಪುಗು ನೀನೆನ್ನತಾರ್ಭಟಿಸಲ್ಕೆ ಕಂಡದನು || ೯ ||

ಮರುತನಾತ್ಮಜನಾಗಬಹುದೆಂ |
ದಿರದೆ ಬಳೆಯಲು ನೋಡಿಯದನನು |
ಸರಿಪ ವದನದೊಳೊಪ್ಪಲವಳಾಗಂಜನಾಸುತನು ||
ಇರದೆ ಯೋಜನದೊಂದರಳತೆಯ |
ಪಿರಿಯಕಾಯವ ತೋರೆ ನಸುನಗು |
ತೆರಡುಯೋಜನವಗಲದಾಸ್ಯದಿನೊಪ್ಪಿದಳು ಸುರಸೆ ||೧೦||

ಪಿರಿಯಭೂತವಿದಮಮ ತನ್ನೀ |
ಪರಿಯು ಕೊಳ್ಳದು ಬೇರೆ ಹವಣಿದ |
ಕರಿವೆನೆನ್ನುತೆ ತಾಂ ಪಿಪೀಲಿಕೆಯನಿತು ಮೆಯ್ಯಾಂತು ||
ಸುರಸೆಯಾಸ್ಯವ ಪೊಕ್ಕು ಬೇಗನೆ |
ಮರಳಿಯಿಾಚೆಗೆ ನಿನ್ನ ವರಕಿದೊ |
ಕೊರತೆಯಿಲ್ಲದ ತೆರನ ಗೈದಹೆನೆಂದನನಿಲಜನು ||೧೧||

ಜಿರಗನಾಂತಳು ಸುರಸೆ ತಾನಿವ |
ನರರೆ ನೋಡಲಮೋಘಸತ್ವನು
ಸುರರ ಕಾರ್ಯವು ಸುಭವಹಾಗಹುದಿವನದೆಸೆಯಿಂದೆ ||
ತೆರಳಲಿನ್ನಿವನೆನ್ನುತಾತನ |
ಪರಸಿ ಬೀಳ್ಕೊಳಲಾಗ ಮಾರುತಿ |
ಯಿರದೆ ಮೊದಲಂತಭ್ರಮಾರ್ಗದೊಳೈದಿದನು ಜವದೆ ||೧೨||

ಲೋಕದೊಳು ಸತ್ಕಾರ್ಯಸಿದ್ಧಿಗ |
ನೇಕವಿಘ್ನಗಳೆಂಬ ನಾಣ್ನುಡಿ |
ಗೇಕೆ ಒಪ್ಪದು ಕೊಂತೆ ಸಿಂಹಿಕೆಯೆಂಬ ರಕ್ಕಸಿಯು ||
ಸಾಕುಮಾಡ್ಯೆ ಗಮನವೆಲ್ಲಿಗೆ |
ನೂಕದಿಲ್ಲಿಂ ಮುಂದೆ ನಿಲ್ಲೆಂ |
ದಾಕಪೀಂದ್ರನ ನೆಳಲ ಪಿಡಿಯುತ್ತವನ ನಿಲಿಸಿದಳು ||೧೩||

ಬಂದುದೇ ಮತ್ತೆಡರು ಜಾಂಬವ |
ರೆಂದ ನೆಳಲೆಳೆವಸುರಿಯಿಾಕೆಯು |
ಕೊಂದೊಡಲ್ಲದೆ ಮುಂದೆ ಪಯಣಕ್ಕಿಲ್ಲ ನೆಮ್ಮದಿಯು ||
ಇಂದುಪಾಯವದೇನು ನನಗಿಹು |
ದೆಂದು ಪವನಜನಿರಲು ಕದಲದೆ |
ತಿಂದು ತೇಗುವೆನೆನ್ನುತವನನು ಪಿಡಿದು ನುಂಗಿದಳು ||೧೪||

ಸಮಯ ಸಿಕ್ಕಿತೆನುತ್ತೆ ಜಠರದೊ |
ಳವುವ ಬಳೆದನು ಪವನತನಯನು |
ಕುಮತಿ ಬೀಳೆಂದುಲಿಯುತುದರವ ಭೇದಿಸಿದೊಡವಳು ||
ಗಮಿಸಿದಳು ಯಮನಾಲಯಕೆ ಬಳಿ |
ಕಮಿತಭುಜಬಲನಿರದೆ ಪೊರಮ |
ಟ್ಟಮಲಸಾಧ್ವೀಮಣಿಯ ಹುಡುಕುವ ಕಾರ್ಯಕನುವಾದ || ೧೫ ||

ಸಾರಿ ಪೋಗುತ್ತಾಗ ಕಂಡನು |
ಧೀರಮಾರುತಿ ಕಡಲಿನಾಚೆಯ |
ತೀರದಾಭೂಮಿಯನು ಮನದೊಳಗುಬ್ಬಿ ನಲಿದಾಡಿ ||
ಸಾರಸಾಕ್ಷಿಯನಿನ್ನು ತಾಂ ಕ |
ಣ್ಣಾರೆ ಕಾಣುವೆನೆಂಬ ಸಂತಸ |
ದೇರುಜೌವನವುಡರೆ ಸೇರ್ದನು ನಿಮಿಷದೊಳು ತಡಿಯ || ೧೬ ||

ಎಸೆದುದಿದಿರೊಳು ಗಗನವನು ಚುಂ |
ಬಿಸುವ ಶಿಖರಗಳಿಂದೆ ಬಗೆಬಗೆ |
ಸಸಿಯ ಸಾಲ್ಗಳನೊಂದುತೆಲ್ಲಿಯುಮಾವಕಾಲದೊಳು ||
ಕುಸುಮಗಳ ಪರಿಮಳದಿನೊಪ್ಪುತೆ |
ರಸವನೊಸರುವ ಫಲಗಳಿಂದುರೆ |
ರಸೆಗೆ ತೊಡವೆನಿಪಾತ್ರಿಕೂಟಾಹ್ವಯದ ಪರ್ವತವು || ೧೭ ||

ಅದರೊಳೆಸೆವುನ್ನತಿಯ ಶಿಖರದೊ |
ಳಿದು ವಿಚಾರಿಸಲಮರನಗರಿಯೊ |
ಪದುಮನಾಭನ ರಾಜಧಾನಿಯೊ ಪೇಳಲರಿದೆನಿಸಿ ||
ಹೃದಯರಂಜಕವಾಗಿ ರಾಕ್ಷಸ |
ರಧಿಪರಾವಣನಾವಗಂ ಭುಜ |
ದದಟಿನಿಂ ರಕ್ಷಿಸುವ ಲಂಕಾನಗರಿ ಶೋಭಿಸಿತು || ೧೮ ||

ಆನಗರವನು ಕಂಡು ಪೊಕ್ಕಪೆ |
ನಾನೆನುತ್ತಣುರೂಪಿನೆಯ್ದಲು |
ಹೀನಕಪಿ ನಿನಗೇಕೆ ತೆಗೆ ಸುರಕೋಟಿಗಸದಳವು ||
ಈನಗರಿಯನು ಪುಗುವ ಬಲ್ಪತಿ |
ದೀನ ನಿನ್ನಿಂದಹುದೆ ನಡೆ ನಡೆ |
ಕಾನನಂಗಳೊಳರಸು ಪಣ್ಗಳನಲ್ಲಿ ದೊರೆಯುವವು || ೧೯ ||

ಎನುತೆ ಲಂಕಿಣಿಯೆಂಬ ರಕ್ಕಸಿ |
ಘನತರೋಜ್ಜ್ವಲರೋಷಭೀಕರಿ |
ಯನಿಲಜನ ಪಥಕಡ್ಡಮಾಗೈತಂದು ಬೊಬ್ಬಿರಿಯೆ ||
ವನಿತೆ ತನಗಿಹುದೊಂದಭೀಷ್ಟವು |
ಕನಕಕಲಶಗಳಿಂದೆ ಮೆರೆವೀ |
ದನುಜನಗರಿಯ ನೋಡಬೇಕೆಂದಿದನನುಗ್ರಹಿಸು || ೨೦ ||

ಕೋಪಕಿದವಸರವಲ್ಲ ನೀನಾ |
ರೀಪರಿಯೊಳೇಕೆನ್ನ ದಂಡಿಪೆ |
ಕಾವು ನಿನಗಿಲ್ಲಿಹುದೆ ಲಂಕಾಪುರದ ಬಾಗಿಲೊಳು ||
ಪಾಪವೈತಹುದುಂಟೆ ಕೋತಿಯ |
ಚಾಪಲವ ಹಿಂಗಿಸಲು ಮನಕುರೆ |
ತಾಪವೀಯದೆ ಸಲಿಸು ಬಯಕೆಯನೊಲಿದು ನೀನೆಂದ || ೨೧ ||

ಆವಳೇಕಿಂತೆನ್ನ ದಂಡಿಪೆ |
ಕಾವಲೊಳಿಗವುಂಟೆ ನಿನಗಂ |
ಬೀವಿಚಾರದ ಪಾರಪತ್ಯವದೇಕೊ ಕಪಿ ನಿನಗೆ ||
ದೇವರಿಪುಗಣ ಸಾರ್ವಭೌಮನ |
ರಾವಣೇಶ್ವರನಾಜ್ಞೆಯಿಂ ಪುರ |
ಕಾವಕೇಡುಂ ಬಾರದಂದದ ಕಾವು ತನಗಿಹುದು || ೨೨ ||

ಅರಿಯಲಾನಧಿದೇವಿ ಲಂಕಾ |
ಪುರಿಗೆ ಲಂಕಿಣಿಯೆಂಬರೆನ್ನನು |
ಸರಕುಗೆಯ್ಯದೆ ತನ್ನ ನೀನಿಂದೈದಿದೊಡೆ ಬಳಿಕ ||
ಮರಣವಲ್ಲದೆ ಕಪಿಯೆ ಗತ್ಯಂ |
ತರವು ನಿನಗೆಲ್ಲಿಯದು ಕೊಳ್ಳೀ |
ಆರದ ಸಂಭಾವನೆಯನೆನುತಪ್ಪಳಿಸಲನಿಲಜನು || ೨೩ ||

ಸರಿಯ ಸಂಭಾವನೆಯನೀಯದೆ |
ಸರಿಯಲೆನ್ನನುದಾರನೆಂಬರೆ |
ಸರಸರಿಂತಿದನೊಪ್ಪಿಕೊಳ್ಳೆಂದಾಗಳುರವಣಿಸಿ ||
ಸರಿಸದೊಳು ದೃಢಮುಷ್ಟಿಯಿಂದನು |
ಸರಿಸಿ ತಿವಿಯಲು ನೊಂದು ತಾನೋ |
ಸರಿಸಿ ಬಿದ್ದಳು ನೆಲದೆ ನೆನೆದಳು ಪೂರ್ವಸಂಗತಿಯ || ೨೪ ||

ಅಂದು ವಿಧಿ ತನಗಿತ್ತ ವರವಕ |
ಟೆಂದು ಕೊನೆಮುಟ್ಟಿದುದು ವಾನರ |
ನಿಂದೆ ತನಗಿಂತಾಯ್ತು ಪರಿಭವವಸುರರೇಳಿಗೆಯು ||
ನಂದಿಪೋದುದು ದೈವಗತಿಗಿ |
ನ್ನೆಂದುಫಲವೇನೆಂದು ಮಾರುತ |
ನಂದನನೆ ಬಾರೆಂದು ನುಡಿದಳು ವಿನಯದೊಡಗೂಡಿ || ೨೫ ||

ಕಪಿಯದೊಂದ್ಯೆತಂದು ನಿನ್ನನು |
ಕುಪಿತಭಾವದೊಳೆಂದು ಪೊಯ್ವುದೊ |
ಸಪರಿವಾರದಶಾನನಂಗಂದಹುದು ಲಯಸಮಯ ||
ತಪನಕುಲಜನ ರಾಣಿಗೊಲಿದಿವ |
ನಪಮೃತಿಗೆ ತುತ್ತಹನು ದಿಟವಿದು |
ಕಪಟವಲ್ಲೆಂದಜನು ಪೂರ್ವದೊಳುಸಿರಿಹನು ತನಗೆ || ೨೬ ||

ಹರಿಕುಲೋತ್ತಮ ನಿನ್ನ ಬರವಿದು |
ಬರಿದೆ ಪೋಗದು ರಿಪುಕುಲಕ್ಷಯ |
ವರಿಯಲಪ್ಪುದು ಪೊಕ್ಕು ನೀನೀಪುರಿಯ ನಿರ್ಭಯದೆ ||
ಚರಿಸುತಿಷ್ಟವನೆಲ್ಲ ಸಾಧಿಸಿ |
ಪರಮಕಲ್ಯಾಣವನು ಪೊರ್ದೆಂ |
ದೊರೆದು ಬೀಳ್ಕೊಡಲಾಗ ಮುಂದಣ ಪಯಣಕನುವಾದ || ೨೭ ||

ಶರದದಂಬುದನಿವಹದಂದದೆ |
ಮೆರೆವ ಭವನಗಳಿಂದೆ ರಿಪುಗಳಿ |
ಗರಿದೆನಿಸುವುನ್ನತಿಯ ಕೋಟೆಗಳಿಂದೆ ಶೋಭಿಸುವ ||
ಪರಿಪರಿಯ ರಿಪುಹನನಯಂತ್ರವಿ |
ಸರದಿನಸದಳಮೆನಿಸುತೆಸೆದಿಹ |
ಪುರವನೀಕ್ಷಿಸುತಂಜನಾಸುತನಾಂತು ವಿಸ್ಮಯವ || ೨೮ ||

ಸಾಲುಮನೆಗಳ ಮೇಲೆ ನಿಂದು ವಿ |
ಶಾಲವೀಧಿಗಳನು ನಿರೀಕ್ಷಿಸು |
ತಾಲಿಸುತೆ ಪುರದಸುರರಾಡುವನುಡಿಯ ರಾತ್ರಿಯೊಳು ||
ಮೇಲೆನಿಪ ಸಾಮಂತಭೂಮಿಪ |
ರಾಲಯಂಗಳನೆಲ್ಲ ಶೋಧಿಸು |
ತಾಲಕುಮಿಗಾವಾಸಮಂದಿರನೆನಿಪ ರಂಜಿಸುವ || ೨೯ ||

ಅರಮನೆಯ ಕಂಡಧಿಕಸಂಭ್ರಮ |
ಸರಸಿಯೊಳು ಮೀಯುತ್ತೆ ರಘುಕುಲ |
ದರಸನರಸಿಯ ಕಾಣ್ಬೆನೆಂಬುತ್ಸವಕೆ ಮನಗೊಟ್ಟು ||
ಭರದಿನಲ್ಲಲ್ಲರಸಿ ಕಾಣದೆ |
ಮೆರೆಯುವಂತಃಪುರವ ಪೊಕ್ಕ |
ಲ್ಲರಸಿಯರ ಮಧ್ಯದೊಳು ಹುಡುಕಿದನಿರದೆ ಜಾನಕಿಯ || ೩೦ ||

ನೋಡಿದೊಡೆ ಮನುಮಥನ ಖಾಡಾ |
ಖಾಡಿಗೆಳೆಯರೆ ಜನದ ಮನವನು |
ಕೂಡಿದರೆ ಸುರಲೋಕಸುಖಗಳನೀಯರೇಸಿವರು ||
ಗಾಡಿಕಾತಿಯರಂಗವಟ್ಟವ |
ನಾಡೆ ಪೊಗಳಲ್ಕಾದಿಶೇಷನ |
ಪಾಡೆ ತೆಗೆಯೆನಲೊಪ್ಪಿದರು ಮಲಗಿರ್ದ ಸುದತಿಯರು || ೩೧ ||

ಅವರ ಮಧ್ಯದೊಳಮಲತಾರಾ |
ನಿವಹ ಬಳಸಿದ ಚಂದ್ರನಂದದೆ |
ಪವಡಿಸೆಲ್ಲಾಲೋಕದೊಡೆತನ ತನಗೆ ಸೇರ್ದುದಕೆ ||
ನಿವಿಡವಾದಿವೆ ಸಾಧನಂಗಳು |
ಪವನಜನೆ ನೀಂ ನೋಡು ಮನವಳು |
ಕುವೊಡೆ ಪೆಸಾರೆಂದು ತೋರ್ಪಂತುಗ್ರಭುಜಗಳನು || ೩೨ ||

ಹರಹಿ ಪರಿಮಳಪೂರ್ಣಪುಷ್ಪದ |
ಸರದಿನೊಪ್ಪುತೆ ದಿವ್ಯರತ್ನಾಂ |
ಬರದ ಹೊದಿಕೆಯ ಹೊದೆದು ರಾರಾಜಿಸುವ ಮಂಚದಲಿ ||
ಒರಗಿ ನಿದ್ರಿಸುತಿರ್ಪ ರಕ್ಕಸ |
ರರಸನನು ಕಂಡಂಜನಾಸುತ |
ನರರೆ ರಾವಣನಿವನು ತಪ್ಪದೆನುತ್ತುಮೀಕ್ಷಿಸಿದ || ೩೩ ||

ಅಹುದು ಪುಸಿಯಲ್ಲಿವನೆ ಸಾಹಸ |
ಮಹಿತರಾವಣನಕ್ಕುಮಲ್ಲದೊ |
ಡಿಹುದೆ ಮಿಕ್ಕರಿಗೀಯಸಾಧಾರಣದ ಬಲುದೋಳು ||
ಅಹಹ ರಜತಾಚಲವನೆತ್ತುವ |
ಮಹಿಮೆಯಿವಕೇನರಿದೆ ನಮಗಿನ |
ನಹಿಶನಾಗಿಹನೀತನ ಜೈಸುವ ಬಗೆಯು ನಮಗೆಂತು || ೩೪ ||

ನೋಡಲೀತನ ಬಳಿಯೊಳೊರ್ವಳು |
ಗಾಢಕಾಂತಿಯು ಸೊಕ್ಕಿ ಮಲಗಿಹ |
ಳಾವಲೇವಿವಳಿಂದಿಲಕ್ಷ್ಮಿಯೊ ರತಿಯೊ ಭಾರತಿಯೊ ||
ರೂಢಿಗಸದಳವಾದ ರೂಪಿಂ |
ದೇಡಿಸುತ್ತಿಹಳಿತರವಧುಗಳ |
ನೀಡನೀಕೆಗೆ ಕಾಣೆನೆಲ್ಲಿಯುಮಹಹ ಮೂಜಗದೆ || ೩೫ ||

ಆರಿವಳು ಲಾವಣ್ಯವತಿ ಸುಕು |
ಮಾರಿಯೀಕೆಯು ನೋಡೆ ಸಂಶಯ |
ವಾರಿನಿಧಿಯೊಳು ಮುಳುಗುತೇಳುತುಮಿರ್ಪುದೆನ್ನ ಬಗೆ ||
ನೀರೆ ಸರ್ವಾಭರಣಭೂಷಿತೆ |
ಚಾರುಲಕ್ಷಣಪೂರ್ಣೆಯಿವಳೆನ |
ಗಾರಘೂದ್ವಹನರಸಿಯೆಂಬಾಭ್ರಾಂತಿಯಿತ್ತಪಳು || ೩೬ ||

ಶಿವಶಿವೇನಜ್ಞಾನವಿಂತೆನೆ |
ಗವನಿಜಾತೆಯು ನೀಚನಹ ದಾ |
ನವನ ಪಕ್ಕವ ಸೇರಿಯಾಪರಿ ಸುಖದೆ ನಿದ್ರಿಪಳೆ ||
ಇವಳ ನೋಡಲ್ಕಹಹ ಮಧುಪಾ |
ನವನು ಗೈದತಿಮುದವನಾನುತೆ |
ವಿವಿಧಭಾವದೊಳೊರಗಿದೀತನ ಭೋಗದರಸಿಯಡ || ೩೭ ||

ಖರೆಯುವಿದು ತಪ್ಪಲ್ಲ ರಾಘವ |
ನರಸಿ ತಾನಿವಳಲ್ಲ ದನುಜನ |
ಸಿರಿಗೆ ಸೋಲುವಳಲ್ಲವಿನಿಸುಂ ಮನದೆ ಹುಳುಕಿಲ್ಲ ||
ಪರಮಪಾತಿವ್ರತ್ಯಧರ್ಮಕೆ |
ಕೊರತೆಯೈದುವ ಸಮಯಕಸುವನು |
ತೊರೆವಳಲ್ಲದೆ ಹೇಸಿಕೆಗೆ ತನುವಿತ್ತು ಜೀವಿಸಳು || ೩೮ ||

ಗೈವೆನೇನನು ಮುಂದೆ ಪುರದೊಳ |
ಗಾವಠಾವಿನೊಳಿರ್ಪಳೋ ರಾ |
ಜೀವಮುಖಿ ನಾನರಿಯೆನಂತಃಪುರದೊಳಿಲ್ಲವಳು ||
ಭಾವಿಸಲ್ಕುರೆ ನಿದ್ರಿಸುತ್ತಿಹ |
ಭಾವೆಯರನೀಕ್ಷಿಸಿದ ಪುರುಷಂ |
ಗಾವರಿಸುವುದು ಪಾಪವೆಂಬುದು ಸುಪ್ರಸಿದ್ಧವಲಾ || ೩೯ ||

ವನಿತೆಯರ ನೋಡಿದೊಡೆ ಪುರುಷಂ |
ಗನಿತಕೇನಘಮಾವರಿಸುವುದೆ |
ಮನದೊಳವರನು ಸೋಂಕೆ ಬಿಡದದು ಶಾಸ್ತ್ರಮಾರ್ಗವಿದು ||
ತನಗೆ ನೋಳ್ಪೊಡೆ ಬೊಮ್ಮಚರಿಯದ |
ವಿನುತಸುವ್ರತಮಿರ್ಪ ಕಾರಣ |
ಮನಕೆ ಚಲನೆಯುದಿಲ್ಲಮಿಲ್ಲವು ಪಾಪಲೇಪನವು || ೪೦ ||

ಬೆದರೆನದರಿಂದಿದಕೆ ತನಗಕ |
ಟೊದವಿಹುದು ಮತ್ತೊಂದು ಭೀತಿಯು |
ಪದುಮನಾಭನ ರಾಣಿಯೇನಾಗಿಹಳೊ ತಾನೆಂದು ||
ಬೆದರಿ ದುಷ್ಟನ ಪರಿಗೆ ಸಾವುದೆ |
ಪದುಳವೆಂದೇನಸುವ ತೊರೆದಳೊ |
ಸುದತಿಯೆಲ್ಲಿಹಳೇಕೆ ಕಾಣಿಸಳಕಟ ತನಗಿಂದು || ೪೧ ||

ಆಕೆವಾಳರನೇಕರಿರ್ದೊಡ |
ಮಾಕಕುತ್ಸ್ಥಜನಪರೊಳಾಯ್ದಿಂ |
ತೇಕೆ ಕಳುಹಿದನೆನ್ನನೆನಗೇಕಿತ್ತನುಂಗುರವ ||
ಸಾಕಿದಾತನ ಹುರುಬವನು ಬಲು |
ಜೋಕೆಯಿಂ ಸಾಧಿಸುವ ಶಕ್ತಿ ವಿ |
ವೇಕವುಂಟಿವಗೆಂಬ ಭರವಸೆಯುತ್ತೆ ಮನದೊಳಗೆ || ೪೨ ||

ಇಂತು ತನ್ನನು ನಂಬಿದೊಡೆಯಂ |
ಗೆಂತು ನಾನುಪಕಾರಿಯೆನಿಪುದು |
ಕಂತುಸನ್ನಿಭನರಸಿ ಗೋಚರೆಯಾದೊಡಲೆ ತನಗೆ ||
ಚಿಂತಿಸಿದೊಡೇಂ ಫಲವು ನಿಶೆಯಾ |
ದ್ಯಂತ ಜಾರಿದ ಬಳಿಕಮುದಯಾ |
ನಂತರದೆ ತನ್ನಿಂದಮಪ್ಪುದೆ ನಗರಶೋಧನೆಯು || ೪೩ ||

ಇರುಳು ಕಳೆಯದ ಮುನ್ನವೆಲ್ಲೆಡೆ |
ಯರಸಿ ನೋಡುವೆನೆನುತುಮಲ್ಲಿಂ |
ಸರಿದು ಕಂಡುದ್ಯಾನವನಗಳ ಸಾರುತಾಬಳಿಗೆ ||
ಸುರಭಿಸುಮಕುಲದಿಂದೆ ತುಂಬಿದ |
ಸುರಗಿಪಾದರಿಯಸುಗೆಸಂಪಗೆ |
ಮರಗಳೆಸೆದಿರ್ಪೊಂದುವನವನು ಪೊಕ್ಕು ತಾಂ ಬಳಿಕ || ೪೪ ||

ಮೆರೆವ ಶಿಂಶುಪೆಯೆಂಬ ಘನತರ
ತರುವದೊಂದನು ಕಂಡು ಮೇಲ |
ಕ್ಕಿರದೆ ಲಂಘಿಸಿಯುಗ್ರಭಾಗವ ಸೇರ್ದು ಕುಳ್ಳಿರುತೆ ||
ತಿರುಗಿ ನಾಲ್ದೆಸೆಗಳೊಳು ರಾಘವ |
ನರಸಿಯೆಲ್ಲಿಹಳೆನ್ನುತೀಕ್ಷಿಸು |
ತಿರುವ ಸಮಯದೆ ರಾಮ ರಾಮೆಂಬುಲಿಯು ಕೇಳಿಸಿತು || ೪೫ ||

ಹಿಗ್ಗಿದನು ಮನದೊಳಗೆ ರೆಂಬೆಯು |
ನೆಗ್ಗಿತೆನೆ ಕುಣಿದಾಡುತಮೃತದ |
ಸುಗ್ಗಿ ಕರ್ಣಕ್ಕಹುದು ಲಭಿಸಿತಿತ್ತಾವಪುಣ್ಯವಿದೊ ||
ಸಗ್ಗಸೊಗಕೆಣೆಯಾದ ಸೌಖ್ಯವ |
ನೊಗ್ಗುಗೂಡಿಸುತಿತ್ತರಾರೆಂ |
ದಗ್ಗಳೆಯರಗ್ರಣಿಯು ಪವನಜನೀಕ್ಷಿಸಿದನಂದು || ೪೬ ||

ಒಲಿದು ಕೇಡನು ಶಿಂಶುಪಾತರು |
ತಲದೆ ರಾಮಾ ರಾಮ ರಾಮೆಂ |
ದುಲಿಯುತೇಕಾಂಬರವನುಟ್ಟಿರೆಕೊರಗಿ ಕೃಶೆಯಾಗಿ ||
ನೆಲದೆ ಮಂಡಿಸಿ ದುಃಖಿಸುತ್ತಿಹ |
ಲಲನೆಯೊರ್ವಳಸಹಜ ತಾನೀ |
ಜಲಜಮುಖಿಯಾಸೀತೆಯಾಗಿರವೇಳ್ಕುಮೆಂದೆನುತೆ || ೪೭ ||

ಮೆಲ್ಲನಿರದೀಕ್ಷಿಸುತೆ ಧರಣೀ |
ವಲ್ಲಭನ ರಘುರಾಮಚಂದ್ರನ |
ವಲ್ಲಭೆಯು ನಿಜವಿವಳು ಪುನ್ಮಸಕೇವಳತಿಮುದವ ||
ಖುಲ್ಲರಕ್ಕಸಿಯರಿದೊ ಸುತ್ತಲು |
ಘಲ್ಲಣೆಯ ಗೈಯುತ್ತಮಿರ್ಪರು |
ನಿಲ್ಲಿಸುವೊಡಿದಕೇನುಪಾಯವೆನುತ್ತೆ ಚಿಂತಿಸಿದ || ೪೮ ||

ಮೊದಲನೆಯ ಸಂಧಿ ಸಂಪೂರ್ಣಂ.

ಎರಡನೆಯ ಸಂಧಿ.

ಸೂ || ಕಾಮಿರಾವಣನುಕ್ತಿಗಂಜಿದ |
ಭೂಮಿಜೆಯ ಕಂಡಾಂಜನೇಯನು |
ರಾಮಮುದ್ರಿಕೆಯಿತ್ತು ಪೇಳ್ದನು ದೌತ್ಯಸಂಗತಿಯ ||

ಪರಿಪರಿಯುಪಾಯಗಳನನಿಲಜ |
ನೊರೆಯನಿಕ್ಕುತ್ತಿರ್ದಸಮಯ |
ಕ್ಕರುಣನುದಯದೊಳೆದ್ದು ರಾವಣನಂಗಜಾಶುಗದ ||
ಪರಿಬವಣೆಗೆದೆಗೊಟ್ಟು ಮದಿಸಿದ |
ಕರೆಯೊ ಎನಲಾಮನೆಯನುಳಿದಾ |
ಧರಣಿನಂದಿನಿಯಿಪ್ಪಶೋಕೋದ್ಯಾನದೆಡೆಗಾಗಿ || ೧ ||

ಸುತ್ತಲೈತರಲಖಿಳಸತಿಯರು |
ಚಿತ್ತಜಾತನಪಳಿವ ಸೊಬಗನು |
ಬಿತ್ತರಿಸುತಮರಿಯರಮಧ್ಯದ ಸುರಪನಂತೆಸೆದು ||
ಕಸ್ತುರಿಯಗಂಧವನು ತನುವಿಂ |
ಗೊತ್ತಿ ಪರಿಮಳಪುಷ್ಪಮಾಲೆಯ |
ನುತ್ತಮಾಂಗದೆ ಧರಿಸಿ ನಡೆತರುತಿರ್ದನೊಲವಿನಲಿ || ೨ ||

ದೂರದೊಳೆ ಕಂಡಿವನ ಬರವನು |
ಮಾರುತಾತ್ಮಜನೆಲೆಯ ಮರೆಯನು |
ಸಾರಲವನಿಜೆ ರಾವಣೇಶ್ವರನೆಂದು ಭಯದಂದು ||
ತೋರಲಾಗದೆನುತ್ತುಮುದರವ |
ನೂರುಯುಗಳದಿನೊಡನೆ ಮರೆಗೈ |
ದಾರು ತನಗಿಲ್ಲಿಹರು ಗತಿಯೆಂದಾರಿ ಬಾಯಾರಿ || ೩ ||

ಮೊರೆವ ಬಿರುಗಾಳಿಯಲಿ ಸಿಲುಕಿದ |
ತರುಣಕದಳೀತರುವಿನಂದದೆ |
ಸುರವಿರೋಧಿಯ ಬರವಿಗಬಲೆಯು ನಡುಗಿ ತಡಬಡಿಸಿ ||
ಪರಮಸತ್ಯವ್ರತನೆ ರಘುಕುಲ |
ಶರಧಿಸೋಮನೆ ರಾಮಚಂದ್ರನೆ |
ಮರೆಯದೆನ್ನನು ಸಲಹಿಕೊಳ್ಳೆಂದೆರಗಿ ನುತಿಸಿದಳು || ೪ ||

ಬಂದನಾಗಳೆ ದಾನವೇಂದ್ರನು |
ಮುಂದೆ ನಿಂದನು ಮಾಸೆಯುನು ಬೆರ |
ಳಿಂದೆ ತಿದ್ದುತ್ತಿಂತು ನುಡಿದನು ಸೀತೆ ಮತ್ಪ್ರೀತೆ ||
ಬಂದಿಹೆನು ನಿನಗಾಗಿ ಮನ್ಮಥ |
ನಿಂದೆ ಪೀಡಿತನಾಗಿ ರಾತ್ರಿಯು |
ದೊಂದುಯುಗಕೆಣೆಯಾಗೆ ನೂಂಕಿದೆನವನ ಕಣೆ ತಾಗೆ || ೫ ||

ಒಲಿದು ಬಂದಿಹ ತನ್ನನೀಗಳೆ |
ಸಲುಗೆಯಿಂ ತಕ್ಕೈಸಿ ನಿನ್ನಯ |
ವಿಲಸದಂಗಾಲಿಂಗನಾಮೃತಸುಖವ ಕರುಣಿಸುತೆ ||
ಲಲನೆಯುರಿಗಸದಳದ ರಾವಣ |
ನೊಲುಮೆಯಮೃತಾಬ್ಧಿಯೊಳು ಮಾಯುತೆ |
ಜಲಜಸಖನುದಯಕ್ಕೆ ಮುನ್ನಿಳಿಪತನುತಾಪವನು || ೬ ||

ಏಳು ನೀನೇಳರಸಿ ನಿನ್ನಯ |
ತೋಳಮಾಲೆಯನೆನ್ನ ಕೊರಲೊಳು |
ಮೇಳವಿಸಿ ವರಕುಂಕುಮಾಂಕಿತತನುವ ಬಿಸುಪಿನಲಿ ||
ಕಾಳಿಜದ ಕಡುನೋವ ನಿಲಿಸಿ ಕೃ |
ಪಾಳುಭಾವವ ಬೀರಿ ತನ್ನಯ |
ಮೇಲೆ ನಿನಗಿರ್ಪಾಸೆಗೇರಿಸು ಕನಕಕಲಶವನು || ೭ ||

ಎಂದು ನುಡಿಯಲು ದಾನವಾಧಿಪ |
ನಿಂದುಮುಖಿ ಪಡಿಮಾತನಾಡುವು |
ದಂದವಲ್ಲವು ಪರಮಸಾಧ್ವೀಮಣಿಗೆ ಪೆರನೊಡನೆ ||
ಇಂದು ತಾನದರಿಂದೆ ತೃಣವಿದ |
ನೊಂದ ಪಿಡಿದಿದರೊಡನೆ ಭಾಷಿಪೆ |
ನೆಂದು ಥಟ್ಟನೆ ತೆಗೆದುಕೊಂಡಳಕೆಂದಳೀಹದನ || ೮ ||

ತೃಣವೆ ಕೇಳೆಂದೆಣಿಸಿ ನಿನ್ನನು |
ಗಣನೆಮಾಡದ ಸತಿಯರಲ್ಲೀ |
ಬಣಗುನುಡಿಗಳು ಶೋಭಿಪುವೆ ಫಡ ತೆರಳು ಪಥವಿಡಿದು ||
ದನುಜರಿಗೆ ಕೀಳ್ನುಡಿಯೆ ಸಹಜವು |
ತನಗೆನೋವಿದರಿಂದಮಿಲ್ಲವು |
ಶುನಕ ಬಗುಳಲು ಹಾನಿಯುಪ್ಪುದೆ ವಿವಲವಹ ದಿವಕೆ || ೯ ||

ಜಡನೆ ನಡೆನಡೆ ನಿನ್ನ ಭವನ |
ಕ್ಕೆಡಹಿ ಬೀಳದಿರಂಧನಂದದೆ |
ಬಡವಗೇಕಕಟಾನೆಯೆಂಬಾನುಡಿಯು ಕೇಳ್ದರಿಯಾ ||
ಕಡೆಯುದಿದು ತೊಲಗೆಂದು ಗಜರಿಸಿ |
ನುಡಿವ ಸತಿಗಸುರೇಂದ್ರನೆಂದನು |
ಕಡೆಗೆ ತನ್ನನು ಬಡವನೆಂದೇ ಬಗೆದೆಯೇನೆಲೆಗೆ || ೧೦ ||

ಸುರಪನನು ನೆರೆ ಬಡಿದು ಸಗ್ಗದ |
ತರುವುಮಂ ಪೋಣ್ ತರುವುಮಂ ಸಲೆ |
ತರಿಸಿ ತನ್ನರಮನೆಯೊಳಿರಿಸಿಹ ಭಟನು ಬಡವನಲೆ ||
ಮೆರೆವ ಕೈಲಾಸವನು ಶಶಿಶೇ |
ಖರನು ಚೀರಿಡಲೆತ್ತಿ ತೋಳ್ಗಳಿ |
ನಿರದೆ ಪುಟಚೆಂಡಾಡಿದಾಬಲುಭಟನು ಬಡವನಲೆ || ೧೧ ||

ಸಾಕುಸಾಕೆನಿಸಾಕುಬೇರನ |
ನೂಕಿ ಬಡಿದವನುರುವಿಮಾನವ |
ನಾಕೆವಾಳಿಕೆಯಿಂದೆ ತಂದಾಭಟನು ಬಡವನಲೆ ||
ನಾಕಿನಾಥನು ಜೊಮ್ಮನಂತು ಪಿ |
ನಾಕಿವಿಷ್ಣುಗಳಾವನಾಜ್ಞೆಯ |
ನೇಕಭಾವದೆ ಸಲಿಸಲಾಪಟ ಭಟನು ಬಡವನಲೆ || ೧೨ ||

ತರುಣಿ ನಿನ್ನ ವಿವೇಕವೆನಗ |
ಚ್ಚರಿಯ ಬೀರುವುದಿದಕೆ ನಗುವೆನೆ |
ಬರಿದೆ ಕೆಟ್ಟಪಳೆಂದು ಮರುಗುವೆನೇಸು ಮನದೊಳಗೆ ||
ಅರಿಯುದಂಗನೆಗೊರೆದು ಬುದ್ಧಿಯು |
ಸರಿಪಡಿಪ ವೃದ್ಧೆಯರು ಸನಿಹದೊ |
ಳಿರದ ಬಳಿಕೇನವಳವಸ್ಥೆಯನೊರೆವುದವನಿಯೊಳು || ೧೩ ||

ಒರೆವನೇನನೊ ಕಾಮುಕತ್ವದಿ |
ನರಿಯುದವಳೊಡನೆಂದುಬಗೆವೆಯು |
ಪರಕಿಸಲು ಯೌವನದ ಸೊಬಗದು ನಾಡೆ ಚಂಚಲವು ||
ಪರಿದುಪೋದಾ ನದಿಯು ಜಲ ಪಿಂ |
ದಿರುಗದಂದದೆ ಕಳೆದ ಹರೆಯವು |
ಮರಳಿ ಬಾರದು ಖಳನೆ [illegible] || ೧೪ ||

ರಾಮರಾವಮಾಎನುತೆ ನೀಂ ನಿ |
ರ್ನಾಮನಾಗಿರುವವನ ನೆನೆಯುತೆ |
ಕೋಮಲಾಂಗವನಿದನು ಕೊರಗಿಪುದಂದವೇ ನಿನಗೆ ||
ಭೂಮಿಯಾಸೆಯು ತೊರೆದು ದುರ್ಗಮ |
ಭೂಮಿಯಲಿ ಪಗಲಿರುಳು ತೊಳಲುತೆ |
ಭಾಮಿನಿಯಸ್ಸೀಗಾಡಿದಾಪುಬುಸರನು ಬದುಕಿಪನೆ || ೧೫ ||

ಕ್ಷೋಣಿಯೊಳು ಬದುಕಿರಲುಮಿನ್ನಾ |
ಪ್ರಾಣಿಯಿಂದೇಸಹುದು ಲಂಕೆಯ |
ಕಾಣುವಾಬಗೆಯೆಂತು ದಾಂಟುವುದೆಂತು ಬಲುಗಡಲ ||
ಏಣಲೋಚನೆಯಿನಿತನರಿಯದೆ |
ಕೇಣದಿಂ ನೀಂ ಕೆಟ್ಟುಪೋಗದೆ |
ರಾಣಿಯೆನಿಸೀಸಾರ್ವಭೌಮಂಗಾಳು ಲೋಕಗಳ || ೧೬ ||

ಎಂದು ದಶಶಿರಸಾಡೆ ಮನದೊಳು |
ನೊಂದು ಸತಿ ಕೋಪಿಸುತೆ ನುಡಿದಳು |
ಹಂದೆ ನೀನೀತೆರದೊಳಾಡಲು ಮಂದಿಯೊಪ್ಪುವುದೆ ||
ಅಂದು ತನ್ನೊಡೆಯನನು ವಂಚಿಸಿ |
ತಂದು ತನ್ನನು ಬಾಯ್ಗೆ ಬಂದಂ |
ತಿಂದು ಗಳಪಿದೊಡೇನು ಪೌರುಷದಂದವಿದು ನಿನಗೆ || ೧೭ ||

ನಿಲಿಸುನಿಲಿಸಾ ನಿನ್ನ ಬಾಯನು |
ಕಲಿಕುದೆಲ್ಲವ ಗಳಪಿ ಕೆಡದಿರು |
ಹಲವು ನಿನ್ನೀತಲೆಗಳಿವನುಳುಹಿಸುವುಪಾಯವನು ||
ತಿಳಿದ ಮಂತ್ರಿಗಳಿಂದಮರಿಯುತೆ |
ಮಲಿನಹೃದಯವನಿದನು ತೊಳೆಯುತೆ |
ಸಲಹುನೀನೆಂದೆರಗುತೆನ್ನರಸಂಗೆ ಸಲಿಸೆನ್ನ || ೧೮ ||

ಸರಳನೆನ್ನಯ ಪತಿಯು ನಿನ್ನಯ |
ದುರುಳತನವನು ಮರೆದು ಮನ್ನಿಸಿ |
ವರಕೃಪಾರಸದಿಂದೆ ನನೆಯಿಸಿ ಪಾಲಿಪನು ನಿನ್ನ ||
ಶರಣಮಾರ್ಗವಿದೊಂದೆ ಗತ್ಯಂ |
ತರವು ನಿನಗಿದನುಳಿಯೆ ಕಾಣೆನು |
ಕಠಿಣದಾಕ್ಷರ ಮಳೆಯು ಶುಗಳುಂ ಬದುಕುವುದಲ್ಲಿನ್ನು || ೧೯ ||

ಮತ್ತೆ ಕೇಳಿದು ಸತ್ಯವೆಲೆ ನಿನ |
ಗುತ್ತರವನಿನ್ನೀಯೆನೆನ್ನುತೆ |
ಮತ್ತಕಾಶಿನಿಯುಡ್ಡ ಮೊಗವಿಡಲಾಗ ರಾವಣನು ||
ಮಿತ್ತುವಿನ ಸೆರಗೆಳೆವನೋ ಎನ |
ಲೆತ್ತಿ ಖಡ್ಗವ ಸನಿಹಕೈತರ |
ಲೊತ್ತಿನೊಳಗಿಹ ಕಾಪಿನಸುರಿಯ-ರಾಗದಾಗದೆನೆ ||೨೦||

ನೋಡಿದನು ಕಡು ಮುಳಿದು ನೀವಿಂ |
ತಾಡಬಹುದೇನೀಕೆ ನಾಡಿನ |
ಗಾಡಿಕಾತಿಯೆನುತ್ತೆ ಬಗೆದಿರ ನಿಮ್ಮ ಮನದೊಳಗೆ ||
ಜೋಡಿಸುತೆ ಮಾಯೆಯನು ಬಗೆದಂ |
ತಾಡಿಸುತ್ತಿಹಳೆನ್ನ ನೀಂಗಳು |
ಬೇಡಿದುದರಿಂನಿಮ್ಮ ವಚನದಿನಿವಳ ಬಿಟ್ಟಿಹೆನು ||೨೧||

ಗಡುಬವಿತ್ತಿಹೆನೊಂದುತಿಂಗಳ |
ನೊಡಒಡಿಸಿ ನೀವಿವಳನದರೊ |
ಳ್ಬಿಡದೆಯೊಪ್ಪಿಸಲೆನಗೆ ಪಡೆ೦ರಿ ಪಾರಿತೋಷಿಕವ ||
ತಡೆದಿರಾದೊಡೆ ನಿಮ್ಮ ನಿವಳೊಡ |
ನಡಿಗೆಮನೆಯೊಳಗೈದೆ ಜೇ೦ಯಿಸಿ |
ಯಡಗನಾರೋಗಿಸುವೆನೆಂದರಮನೆಗೆ ತೆರಳಿದನು ||೨೨||

ನೆಮ್ಮಿ ತರುಶಾಖೆಯನು ಹನುಮನು |
ಸುಮ್ಮನೀಕ್ಷಿಸಿ ಖಲನ ಚೇಷ್ಟೆಯ |
ನುಮ್ಮಳಿಸುತಿರಲಸುರಿಯರು ಬಳಸುತ್ತೆ ಸೀತೆಯನು ||
ಹಮ್ಮನುಳಿಯಿನ್ನ ಬಲೆ ಕೆಡದಿರು |
ನಮ್ಮ ಮಾತನು ಕೇಳು ರಾಮನ |
ನೆಮ್ಮಿ ಬದುಕುವೆನೆಂಬ ದುರ್ಬುದ್ಧಿಯನು ನೀನುಳಿಯ ||೨೩||

ದೇವದಾನವಯಕ್ಷಕಿನ್ನರ |
ರಾವನಾರ್ಭಟೆಗಂಜಿ ನಿಜರಾ |
ಜೀವಮುಖಿಯರ ತಂದು ವಿನಯದಿನಿತ್ತು ಬದುಕಿಪರೊ ||
ಭಾವಲೀಲೆಗಳಿಂದೆ ಮನ್ಮಥ |
ನಾವಜೆನ್ನಿಗನೆನಿಸಿ ಮೆರೆವಾ |
ರಾವಣೇಶ್ವರನೊಡನೆ ಕೂಡುತೆ ಸುಖದೆ ನೀಂ ಬಾಳು ||೨೪||

ಕೇಳುನವಿಸ್ಮಾನುಡಿಯ ನಿನ್ನಯ |
ಚಾಳಿಯಿದು ನಮಗೊಪ್ಪದಕಹಾ |
ವೇಳನವು ದನುಜೇಶನೊಡನದು ನಿನಗೆ ವಿಷಮಾಯ್ತು ||
ಆಳಿದನ ಮಾತಿರಲಿ ಕೇಳವ |
ನೂಳಿಗದಭಟರೆಮ್ಮ ಕೂಡಿದೊ |
ಡೇಳುಜನುಮದ ಪಾಪವೆಮ್ಮನು ನೀಗಿ ತೊಲಗುವುದು || ೨೫ ||

ನಮಗಮಿಂತಹ ಪುಣ್ಯಮೆಲ್ಲಿಯು |
ದಮಮ ನೀನೇ ಧನ್ಯೆಯಸುರರ |
ರಮಣನೇ ತಾನೊಲಿದು ನಿನ್ನನು ಸೇರಲಿಚ್ಛಿಪನು ||
ಕುಮತಿ ನೀನಿದಕೊಪ್ಪಿ ಒಪ್ಪೆಯೊ |
ಯಮನಪಾಳಯದತ್ತ ಪೋಪೆಯೊ |
ತಮಗಿವೆರಡರೊಳೊಂದನೊರೆವುದು ಬೇಗ ನೀನೆನುತೆ || ೨೬ ||

ಗದರಿಗರ್ಜಿಸಿ ಮತ್ತೆ ನಾನಾ |
ವಿಧದ ಹಿಂಸೆಯ ನೀಯತೊಡಗ |
ಲ್ಕದನು ಕಂಡಾವೃದ್ಧೆಯೊರ್ವಳ್ ತ್ರಿಜಟೆಯೆಂಬವಳು ||
ಸದರವಿದು ನಿಮಗಿವಳೊಳುಚಿತವೆ |
ಸುದತಿಯಿವಳಾರಾಮಚಂದ್ರನ |
ಹೃದಯವಲ್ಲಭೆಯಿವಳು ಜಾತವನೊಂದನೊರೆದಪೆನು || ೨೭ ||

ಇರುಳ ಕೊನೆಯೊಳಗೊಂದುಕನಸನು |
ಪರಮಸಂಭ್ರಮಮಾಗೆ ಕಂಡೆನು |
ಮೆರೆಯುವಾಕಾಶದಲಿ ಜಾನಕಿಯೊಡನೆ ರಘುವರನು ||
ಧರಿಸಿ ಧವಳಾಂಬರವ ಪಾಂಡುರ |
ಕರಿಯನೇರಿ ಸುಪುಷ್ಪಮಾಲೆಯು |
ಕೊರಲೊಳೆಸೆಯಲ್ಕುತ್ತರದ ದೆಸೆಗಾಗಿ ಪೋಪುದನು || ೨೮ ||

ಒಡನೆ ಕಂಡೆನು ವಿಗಡರಕ್ಕಸ |
ಗಡಣದೊಡನೆಮ್ಮೊಡೆಯನಂಗಕೆ |
ತೊಡೆದು ತೈಲವ ರಕ್ತವರ್ಣದ ಪುಷ್ಪಗಳ ಧರಿಸಿ ||
ಬಿಡದೆ ಗರ್ದಭವೇರಿ ತೆಂಕಣ |
ಕಡೆಗೆ ತೆರಳುತ್ತಲ್ಲಿ ಗೋಮಯ |
ವಿಡಿದಮಡುವೊಳು ಮುಳುಗಿ ಮೇಲಕ್ಕೇಳದಿರ್ದುದನು || ೨೯ ||

ಅಳಿದರೆಮ್ಮವರೆಲ್ಲರವರೊಳ |
ಗುಳಿದನೊರ್ವವಿಭೀಷಣನು ನೆರೆ |
ಬೆಳುಗೊಡೆಯ ನೆಳಲಿನೊಳು ರತ್ನಾಂಬರದೆ ಶೋಭಿಸುತೆ ||
ಅಳಲುಗಡಲೊಳು ಮುಳುಗಿದಸುರರ |
ಲಲನೆಯರ ಸಂತೈಸುತೊಪ್ಪಿದ |
ನೆಳೆಯನೇಸರನೇಳಿಸುವವೊಲ್ಸಿಂಹಪೀಠದೊಳು || ೩೦ ||

ಕನಸಿದೀಕೆಗೆ ಪುಂದೆಯೊದವುವ |
ಘನಶುಭಂಗಳ ಸೂಚಿಪುದು ನೀಂ |
ಮನಕೆ ತಂದಿದನಿನ್ನು ಮುಂವಾದೊಡೆಯುಮಳಲಿಸದೆ ||
ವಿನಯವನು ಕೋರುತ್ತೆ ವನಿತೆಯು |
ನನುಸರಿಸಿಕೊಂಡಿರ್ಪರಾದೊಡೆ |
ಮನುಕುಲೇಶನು ನಿಮ್ಮ ಪಾಲಿಪನೆಂದಳಾತ್ರಿಜಟೆ || ೩೧ ||

ಇನಿಯನೆಡೆಯುಳಿದಿರ್ಪುದಲ್ಲದೆ |
ಮನುಜರೆಂಬರ ಸೆಲೆಯು ಕಾಣದೆ |
ಘನಸಮುದ್ರದ ಮಧ್ಯದೇಶದೊಳಸುರರೆಡೆಯಲ್ಲಿ ||
ತನಗೆ ಹಿತರಾರವರ ಕಾಣುವೆ |
ನೆನಿಪ ಭಯವನೆಯಿಲ್ಲದಿರ್ಪ |
ವನಿತೆಯನು ಬಗೆ ನೋಯಲಾಡಿದೊಡೆಂತು ಸೈರಿಪನು || ೩೨ ||

ಖುಲ್ಲರಾವಣನೊರೆದ ಕೀಳ್ನುಡಿ |
ಭಲ್ಲೆಯದವೋಲೆದೆಗೆ ನಾಟಿರೆ |
ಹುಲ್ಲಿಗುಂ ಕಡೆಯೆನಿಪ ರಕ್ಕಸಿವಿಂಡು ಹೇವರಿಸಿ ||
ಜೆಲ್ಲನುಡಿಗಳನಾಡಿ ಬೆದರಿಸೆ |
ಕೊಲ್ಲಲೈತರಲಾಗ ಸಹಿಸದೆ |
ವಲ್ಲಭನ ನೆನೆನೆನೆದು ಹಲುಬಿದಳಿರದೆ ಜಾನಕಿಯು || ೩೩ ||

ಕಮವು ಮನದೊಳಗಡಸು ಬುದ್ಧಿ |
ಭ್ರಮೆಯನೊದವಿಸೆ ಮೆಲ್ಲನೇಳು |
ತ್ತಮಮ ತನಗಿನ್ನೇಕೆ ಬದುಕೆನುತಾಗ ಶಿಂಶಪೆಯ ||
ನಮಿತಶಾಖೆಗೆ ತನ್ನ ಕಂಠವ |
ನಮರಿಸುತ್ತಿರೆ ಕೇಶಪಾಶದಿ |
ನಮಿತಬಲನಾಹನುಮನೀಕ್ಷಿಸಿ ರಾಮರಾಮೆನಲು || ೩೪ ||

ಬೆಚ್ಚಿದಳು ಲಲಿತಾಂಗಿ ತನ್ನಯ |
ಮೆಚ್ಚಿನಿನಿಯನ ಪೆಸರ ಕೇಳ್ದೊಡ |
ನೆಚ್ಚರಿಕೆ ಮನಕೊದವಲುಳಿದೊಡನಾತ್ಮಹತ್ಯೆಯನು ||
ಸಚ್ಚರಿತೆಯೆಂದೆನಗೆ ಹೃದಯುದೊ |
ಳುಚ್ಚಸೀತವನಿತ್ತು ತನ್ನನೆ |
ನೆಚ್ಚಿದರಸಂಗೆರಡಬಗೆದಂತಾಗುತಿರ್ದಲಾ || ೩೫ ||

ಏನಿದಚ್ಚರಿ ತನ್ನ ಪುಣ್ಯವು |
ಭಾನುಕುಲಪನ ದಿವ್ಯನಾಮವು |
ಹೀನಭಾಗ್ಯೆಗದೆಂತು ಲಭಿಸಿತ್ತಾರು ಪಠಿಸಿದರು ||
ಮಾನವರಿಗರಿದೆನಿಸುವೀಲಂ |
ಕಾನಗರಿಯನು ಪೊಕ್ಕು ಪರಮ |
ಜ್ಞಾನಸಾಧನನಪ್ಪ ರಾಮನ ಭಜಿಸುವವರಿಹರೆ || ೩೬ ||

ಇರುವುದೆಂತಹನೋರ್ವಪುರುಷನು |
ದುರುಳತನಕಿಂಬುಂಟೆ ಲಂಕೆಯೊ |
ಳರಿಯಲಭ್ರದ ಸುದಿಯಿದಾಗಿರವೇಳ್ಕುಮಿಂದಲ್ತೆ ||
ಸುರರು ತನ್ನಯ ಮರೆವೆಯನಪರಿ |
ಹರಿಸಲೀಯುಪಕೃತಿಯಗೈದರು |
ಕರವಮುಗಿವೆನೆನುತ್ತೆ ನೋಡಿದಳಾಗಳಾಗಸವ || ೩೭ ||

ಸಮಯವೆಂದನಿಲಜನುತಾನಾ |
ದ್ರುಮದಿನಿಳಿದನು ಸೀತೆಯಿದಿರೊಳು |
ವಿಮಲೆ ನತಜನಪಾಲೆ ಸದ್ಗುಣಮಾಲೆ ಶುಭಶೀಲೆ ||
ಕಮಲೆ ಪಾರ್ವತಿ ಶಚಿ ಸರಸ್ವತಿ |
ನಮಿಸುವೆಶ್ರೀರಾಮದೂತನ |
ಮಮತೆಯಿಂ ನೀಂ ಬಿಡದೆ ರಕ್ಷಿಪುದೆಂದು ನಮಿಸಿದನು || ೩೮ ||

ಬಳಿಕಮರುಹಿದನಿಂತಯೋಧ್ಯೆಯ |
ನಿಳೆಯರಮಣನು ದಶರಥೇಂದ್ರನು |
ನಲವಿನಿಂ ಪಾಲಿಸುವ ಸಮಯದೊಳವನ ಕಿರಿಯರಸಿ ||
ಕಳುಹಿದಳು ತಾಂ ಹಿರಿಯನಾದೊಡ |
ವೊಲಿದು ನಿಮ್ಮಯ ಪತಿಯನಡವಿಗೆ |
ಚಲದೆ ನಿಲಿಸಿದಳಣುಗಭರತನನೆಸೆವರಾಜ್ಯದಲಿ || ೩೯ ||

ಭರತನೊಪ್ಪದೆ ಚಿತ್ರಕೂಟದೊ |
ಳಿರುವ ನಿಮ್ಮೆಡೆಗೈದಿ ಕರೆದೊಡೆ |
ಬರುವೆವವಧಿಯು ಮುಗಿದನಂತರವೆಂದೊಡಂಬಡಿಸಿ ||
ಪರಮಧಾರ್ಮಿಕ ರಾಮನಾತಂ |
ಗಿರದೆ ಪಾದುಕೆಯಿತ್ತು ಕಳುಹಿಸಿ |
ಗಿರಿಯನಿಳಿದಾದಂಡಕಾವನದತ್ತ ಸಾರಿದನು || ೪೦ ||

ಖಳವಿರಾಧನ ಕೊಂದು ಋಷಿಗಳಿ |
ಗೊಲಿದು ರಾಕ್ಷಸಕುಲವನಳಿಯಿಪ |
ಛಲದ ಭಾಷೆಯನಿತ್ತು ಶರಭಂಗಾಶ್ರಮವ ಪೊಕ್ಕು ||
ತಳುವದಲ್ಲಿಂ ಮುಂದಗಸ್ತ್ಯರ |
ನಿಳಯದೊಳಗಾತಿಥ್ಯಮಂ ಕೊಂ |
ಡೆಳಸಿ ನೆಲಸುತೆ ದಂಡಕಾವನದಲ್ಲಿ ಸುಖದಿನಿರೆ || ೪೧ ||

ಬಂದಳಲ್ಲಿಗೆ ಶೂರ್ಪಣಖಿ ಕಾ |
ಮಾಂಧೆಯಾಗುತ್ತಿವಳ ಶಿಕ್ಷಿಪು |
ದೆಂದು ರಾಘವನೊರೆಯೆ ಲಕ್ಷ್ಮಣನವಳ ಮೂಗರಿಯೆ ||
ಮಂದಮತಿಗಳನೇಕರಾಕ್ಷಸ |
ರೊಂದುಗೂಡುತ್ತೈದಲವರನು |
ತಿಂದುತೇಗಿದುವಂದು ರಾಮಾಸ್ತ್ರಗಳು ಬಗೆ ತಣಿಯೆ || ೪೨ ||

ಕೇಳಿ ತಂಗಿಯ ಮಾನಭಂಗವ |
ಖೂಳರಾವಣ ಯತಿಯ ರೂಪನು |
ತಾಳಿ ವಂಚಿಸಿ ರಾಘವರನರೆ ನಿಮ್ಮನೆಳೆದುಯ್ದು ||
ಲೋಲಭಾವದಿನಿತ್ತಲೈತರೆ |
ಪಾಳುಮನೆಯೊಳ್ನಿಮ್ಮ ಕಾಣದೆ |
ತಾಳಲಾರದೆ ಬನದೊಳತ್ತವರಳಲಿ ಮಿಗೆ ತೊಳಲಿ || ೪೩ ||

ತೆರಳುತಲ್ಲಿಂ ಮುಂದೆ ಸಿರುಕಿಸಿ |
ಜರಿದರೆಕ್ಕೆಯ ವರಜಟಾಯುವ |
ನರಿದರವನಿಂ ನಿಮ್ಮನಸುರನು ಕದ್ದ ಸಂಗತಿಯ ||
ಒರಸುತಲ್ಲಿಂದುರುಕಬಂಧನ |
ತರಿದು ಮುಂದಿಹ ಋಶ್ಯಮೂಕದ |
ಹರಿಯನವನಿಂ ಕೇಳ್ದು ಸುಗ್ರೀವನಲಿ ಸಖ್ಯವನು || ೪೪ ||

ಅನಲನಿದಿರೊಳು ಬೆಳಸಿ ವಿಕ್ರಮ |
ವನಧಿಯುಹ ವಾಲಿಯನು ಕೊಂದವ |
ನನುಜಸುಗ್ರೀವಂಗೆ ಕಿಷ್ಕಿಂಧಾಧಿಪತ್ಯವನು ||
ಮನುಕುಲಾಧಿಪರಿತ್ತು ನಿಮ್ಮನು |
ವನವನಂಗಳೊಳೈದೆ ಹುಡುಕಿಸ |
ಳನುವಿನಿಂದಾಣತಿಯನೆಸಗಲು ಬಳಿಕ ರವಿಸುತನು || ೪೫ ||

ಕರೆದು ಮಂತ್ರಿಗಳೆನಿಪ ನಮ್ಮನು |
ಪರಿಪರಿಯೊಳಾದರಿಸಿಯರಸು |
ತ್ತರಸಿಯೆಲ್ಲಿಹಳೆಂಬ ಸುದ್ದಿಯನರಿದು ತಿಂಗಳೊಳು ||
ಒರೆವುದೆಂದಪ್ಪಣೆಯನೀಯು |
ಲ್ತರಳಿತೊಡನೆಯೆ ಪಲವುಕೋಟಿಯ |
ವಳಕಪೀಂದ್ರರ ಪಡೆಯು ನಾನಾದೇಶಗಳ ಕಡೆಗೆ || ೪೬ ||

ಇತ್ತ ದಕ್ಷಿಣದಿಶೆಗೆ ಪಯಣಗೊ |
ಳುತ್ತೆ ಯುವರಾಜಾಂಗದನು ತಾಂ |
ಮತ್ತೆ ಜಾಂಬವದಾದಿಕಪಿವರರಾನುಮೈದಿದೆವು ||
ಸುತ್ತಿದೆವು ದಿಗ್ದೇಶವೆಲ್ಲವ |
ನೆತ್ತಲುಂ ಕಾಣದೆಯೆ ಮನಬೇ |
ಸತ್ತು ಜೀವವ ನೀಗಿದಪೆವೆಂದನಶನವ್ರತವೆ || ೪೭ ||

ಇರುವ ನಮ್ಮನು ನೋಡಿ ಪಕ್ಷಿಗ |
ಳರಸನಾಸಂಪಾತಿ ಕನಿಕರ |
ವೆರಸಿ ಪೇಳಿದನಿತ್ತ ನೀವಿಲ್ಲಿರುವ ಸಂಗತಿಯ ||
ಹರುಷವಾಂತೆವು ಮನದೆ ಬಳಿಕಿರ |
ದರೆಗಳಿಗೆಯಲಿ ಕಡಲ ಸೇರ್ದು |
ತ್ತರಿಸಲರ್ಹತೆಯಾರಿಗುಂಟೆಂಬುದನು ನಿರ್ಧರಿಸಿ || ೪೮ ||

ಎಲ್ಲರಭಿಮಾನಿಸುತೆ ಪೋಗೆಂ |
ದಿಲ್ಲಿಗೆನ್ನನು ಕಳುಹೆ ಬಂದೆನು |
ಖುಲ್ಲೆ ಲಂಕಿಣಿ ತಡೆಯೆ ಕೆಡಹಿದೆನವಳ ಬಾಗಿಲಲಿ ||
ನಿಲ್ಲದೂರೊಳು ಪೊಕ್ಕು ರಕ್ಕಸ |
ಮಲ್ಲರಾಲಯಗಳಲಿ ಹುಡುಕು |
ತ್ತೆಲ್ಲ ಮರಿಯದೆ ನಿಮ್ಮೀಬನದತ್ತ ಸಾರಿದೆನು || ೪೯ ||

ಬಂದು ತಾನಿಂದಿಲ್ಲಿ ನಡೆದುದ |
ನೊಂದುಮಂ ಬಿಡದಂತೆ ನೋಡ |
ಲ್ಸಂದಿತೆನ್ನಯ ಮನಕೆ ನಂಬುಗೆ ದೇವಿ ನೀವೆಂದು ||
ಸಂದೆಗಳೆ ತೆರಪುಂಟೆ ಸಾಧ್ವೀ |
ವೃಂದಚೂಡಾಮಣಿ ಸಮಸ್ತಾ |
ನಂದಕಾರಿಣಿ ರಾಮಚಂದ್ರನ ರಾಣಿ ನೀವಲ್ತೆ || ೫೦ ||

ಎನುತುಮಿದಿರಲಿ ಕರವ ಜೋಡಿಸಿ |
ಹನುಮ ನಿಂದಿರಲವನಿತನುಜೆಯು |
ಮನದೆ ಬೆದರಿದಳಮಮ ರಾಕ್ಷಸಮಾಯೆಯೆಂದೆನುತೆ ||
ವನುಜಸಾಮಾನ್ಯನಿಗೆ ಮೀರಿದ |
ಘನಸುಭಾಷಿತವಿದನು ಕೇಳಗ |
ವೆನಿಳು ಕಲಿತೊಡನೊರೆಯಲಹುದೇ ಚೋದ್ಯವಿದು ಜಗದೆ || ೫೧ ||

ನುಡಿವುದಿದು ನಾವೆಂದರಣ್ಯದೆ |
ನಡೆಯಿಸಿದರೀತಿಗಳನಿನಿಸುಂ |
ಬಿಡದಪರಿಯಲಿ ತಿಳಿದಬಗೆಯೆಂತಕಟ ಕಪಿಗಿದಕೆ ||
ಕಡಲನೆಂತಿದು ದಾಂಟಿ ಬಂದುದು |
ಬಡವಲೀಮುಖಕೆಂತಿದಪ್ಪುದು |
ತಡಿಯ ಕಾಣದ ನಾವೆಯಂತಿಹುದೆನ್ನ ಬುದ್ಧಿಯಿದು || ೫೨ ||

ಆರಿದೆಲ್ಲಿಂದೇತಕೆಂಬ ವಿ |
ಚಾರವೀಗಂತಿರಲಿ ಕಾಂತನ |
ಚಾರುಸಂಕೀರ್ತನವ ಗೈಯುತ್ತನಗೆ ತೋಷವನು ||
ಬೀರುತಿರ್ಪುದರಿಂದೆ ಘೋರಾ |
ಕಾರಕಾಲನೆ ಆಗಲಿಂದುಪ |
ಕಾರವನು ಗೈದಾಪ್ತನೆನಗಿವನೆಂದು ಭಾವಿಸೆನು || ೫೩ ||

ಅರಿಯೆನೇತಕೊ ಎನ್ನ ಮನದೊಳು |
ಹರುಷ ಪೆಚ್ಚುತ್ತಿರ್ಪುದೀಕಪಿ |
ಯರಿವೊಡಾಶ್ರೀರಾಮದೂತನೆ ಆಗವೇಳ್ಕುಮಲೆ ||
ಬರಿದೆ ಲಭಿಸುವುದೆಂತು ಮುದಮಿದು |
ಪರಿಕಿಸುವೆನಿದನೆನ್ನುತಾಸರ |
ಸಿರುಹಮುಖಿಯುಂದಿರದೆ ನುಡಿಸಿದಳಾಕಪೀಂದ್ರನನು || ೫೪ ||

ಎಲವೊ ನೀನಾರುಸಿರು ನಿಜವನು |
ಹಲವುತಲೆಗಳ ಮರಸಿ ಬಂದಿಹ |
ಖಳನೊ ರಾವಣನನುಚರನೊ ನೀನೇತಕಳೆಯುತಿಹೆ ||
ಕೆಲಸವೇಂ ನಿನಗಿನ್ನ ಸನಿಹದೊ |
ಕೆಲಸದೆಲ್ಲಮನೊರೆವುದೀಗಳೆ |
ಕುಲದ ಬೇರನು ಸುಡುವ ಕೃತ್ಯವ ಬಗೆಯದಿರು ಮನದೆ || ೫೫ ||

ದನುಜ ನೀನಲ್ಲದೊಡೆ ತಳುವದೆ |
ಮನದ ಸಂದೇಹವನು ತೊಲಗಿಸಿ |
ನನಗೆ ನಂಬುಗೆ ಪುಟ್ಟುವಂತಹ ಬಗೆಯನೆಸಗುವುದು ||
ವನದ ವಾನರ ನೀನು ನಿನ್ನೊಳು |
ಮನುಜಪತಿಗಳಿಗೆಂತು ಮೈತ್ರಿಯು |
ವಿನುತಶಾಸ್ತ್ರಾರ್ಥದಲಿ ಕೋವಿದನಾಗಿ ತೋರುತಿಹೆ || ೫೬ ||

ಲೋಕದೊಳು ಕೇಡರಿಯದಿನಿತು ವಿ |
ವೇಕ ನಿನಗೆಲ್ಲಿಂದೆ ಬಂದುದು |
ಸಾಕು ನೀನದನೊರೆಯಲೆನಗೆಂಬವನಿಜೆಯು ನುಡಿಯೆ ||
ನೂಕಬೇಕಲೆ ಸಂಶಯವನೀ |
ಲೋಕನಾಥನ ಸತಿಯ ಮನದಿಂ |
ದೀಗಳಿನ್ನೆನ್ನನುವನಾಲಿಸುವೆನೆಂದು ಪವನಜನು || ೫೭ ||

ತಾಯೆ ಕೇಳೌ ನಮ್ಮದಿಳೆಯೊಳ |
ಗಾಯತವು ಕಪಿಕುಲವು ಲೋಕ |
ನ್ಯಾಯವಿಡಿದು ವಿವೇಕಮಾರ್ಗದೊಳಾವು ಚರಿಸುವೆವು ||
ಕಾಯಮಾತ್ರದೆ ಕಪಿಗಳಲ್ಲದೆ |
ಹೇಯಗುಣಗಣವುಳ್ಳರಲ್ಲವು |
ದಾಯೆಗಿಡದಿಹುದೆಮ್ಮೊಳಾರ್ಯರ ಸತ್ಕುಲಾಚರಣೆ || ೫೮ ||

ಕೆಲವರೆಮ್ಮವರೊಳಗೆ ಸುರಪತಿ |
ಜಲಜಮಿತ್ರಬ್ರಹ್ಮದೇವಾ |
ನಲರಿನುದಯಿಸಿದವರು ತಾನಾಮನುಕಸಿಂದೋರ್ದೆ ||
ಹಲವು ವೇದಾಗಮಪುರಾಣಗ |
ಳೊಳಗೆ ಪರಿಚಯವುಂಟು ನಮಗಿಂ |
ದಿಳೆಯ ಜನದೊಳು ನಲುಗೆ ತಪ್ಪಿತು ಬಾಲಮಾತ್ರದಲಿ || ೫೯ ||

ಕೊರತೆಯಲ್ಲಿದು ನಮಗೆ ದೇಶದ |
ಪರಿಗೆ ತಕ್ಕಂತಿಹುದು ಚಲಿಸುವೊ |
ಡರಿದು ಮಿಕ್ಕಿನ ಸಾಧನಂಗಳ ಬಲದೊಳಡವಿಯಲಿ ||
ತರುಗಳೆಡೆಗುಡದಂತೆ ನಭವನು |
ತರುಬುವೋಲ್ಬೆಳೆಯುತ್ತೆ ನಿಂದಿಹು |
ವೆರಲ ಸಂಚಾರಕ್ಕಮಸದಳವೆಮ್ಮ ವಿಪಿನವದು || ೬೦ ||

ಮನಕೆ ತೋರಿದ ರೂಪನೊಂದುವ |
ಘನತರೋನ್ನತಮಾಗೆ ಬಳೆಯುವ |
ತನುವ ಸಂಕೋಚಿಸುವ ಕೌಶಲವುಂಟು ತನ್ನೊಳಗೆ ||
ಇನಕುಲಾಧಿಪನರಿವಿದೆಲ್ಲವ |
ನನಲನಿದಿರೊಳು ನಮ್ಮ ಮೈತ್ರಿಯ |
ನನುಗೊಳಿಸಿಯಿಂತೆನ್ನ ಕಳುಹಿದ ನಮಲೆ ನಿಮ್ಮೆಡೆಗೆ || ೬೧ ||

ರಕ್ಕಸರು ಮಾಯಾವಿಗಳು ಬಲು |
ದಕ್ಕಡಿಗರಂತವರ ಗೆಲುವೊಡೆ |
ತಕ್ಕರೀಕಪಿಭಟರು ಖುಲ್ಲರ ಮರ್ಮಭೇದವನು ||
ಇಕ್ಕೆಯೆಲ್ಲವನರಿವರಿವರೆಂ |
ದಕ್ಕರಿಂ ಶ್ರೀರಾಮಚಂದ್ರನು |
ಧಿಕ್ಕರಿಸದಲ್ಪಜ್ಞರೆನಿಸಿದ ನಮ್ಮ ಸಲಹುವನು || ೬೨ ||

ಚಿತ್ತವಿಪುದೆಲೆ ತಾಯೆ ಬಿನ್ನಪ |
ಮತ್ತದೊಂದಿಹುದುಂದು ನಿಮ್ಮನು |
ಮತ್ತನಹ ರಾವಣನು ಕೊಂಡೊಯ್ವಾಗಳಂಬರದೆ ||
ಉತ್ತಮಾಭರಣಗಳ ಕಳೆದೆ |
ಮ್ಮತ್ತ ಜಾರಿಸಿ ರಾಮನೈತರೆ |
ಬಿತ್ತರಿಪುದೆನ್ನೀಯವಸ್ಥೆಯನವನೊಳೆಂದೆನುತೆ || ೬೩ ||

ಗಿರಿಯ ಶಿಖರದೊಳಿರ್ದ ನಮಗಂ |
ದಿರದೆ ಮೊರೆಯಿಟ್ಟುದನು ಚಿತ್ತಕೆ |
ತರುವುದೌ ನಾವಂದು ತಿಳಿದಿರೆ ನಿಮ್ಮ ಚರಿತವನು ||
ದುಕುಳನನು ಪಿಡಿದೊಡನೆ ಪಿಂಗೈ |
ಮುರಿಯ ಕಟ್ಟಿಯೆ ರಾಮಚಂದ್ರನ |
ಚರಣದಿದಿರೊಳಗಿರಿಸುತಿರ್ದೆವು ನುಡಿದು ಫಲವೇನು || ೬೪ ||

ಅರಸನ್ನೈತರಲಾವು ನಿಮ್ಮಯ |
ಮೆರೆವ ತುಡುಗೆಯನೀಯಲೀಕ್ಷಿಸಿ |
ಕುರುಹಿಡುತ್ತದನಾಗ ನಿಮ್ಮನು ನೆನೆದು ಶೋಕಿಸುತೆ ||
ಕರೆಕರೆದು ಸುಗ್ರೀವಮೊದಲಾ |
ಗಿರುವ ನಮ್ಮೆಲ್ಲರಿಗೆ ತೋರಿಸಿ |
ಪರಿಪರಿಯೊಳುಮ್ಮಳಿಸಲಿತ್ತವು ಧೈರ್ಯವನು ವಿಭುಗೆ || ೬೫ ||

ಲೋಕ ಮೆಚ್ಚಲು ನಮ್ಮ ಸೇರ್ದಿಂ |
ದೇಕದೃಢತೆಯಿನಿರ್ದು ಕಾಲವ |
ನೂಕುತಿರ್ಪನುದಾರಗುಣಮಣಿಹಾರ ರಘುವೀರ ||
ಆಕಕುತ್ಸ್ಥಜನಾಜ್ಞೆಯಿಂದೀ |
ನಾಕಜಾರಿಯ ನಗರಿಗೈದಿ ವಿ |
ವೇಕದಿಂ ಶೋಧಿಸುತೆ ಕಂಡೆನು ನಿಮ್ಮ ಪದಯುಗವ || ೬೬ ||

ತಾಯೆ ನೀವಿದನೊಪ್ಪಿ ಕೊಳ್ವುದು |
ರಾಯನಿತ್ತನು ಕುರುಹನಿದ ಮನ |
ದಾಯಸವ ಕೆಲಕೊತ್ತಿ ತನ್ನನು ಬೇರೆ ಭಾವಿಸದೆ ||
ಕಾಯಬೇಕೌ ಭೃತ್ಯನೆನ್ನನ |
ಪಾಯವೆನ್ನಿಂದಿಲ್ಲವೆನ್ನುತ |
ಜೇಯಮಾರುತಿಯಿತ್ತನಾಶ್ರೀರಾಮಮುದ್ರಿಕೆಯ || ೬೭ ||

ಕಂಡಳವನಿಜೆ ಕಾಂತನಾಮಾ |
ಖಂಡಸೌಭಾಗ್ಯಾಬ್ಧಿಯೆನಿಸುವ |
ಪುಂಡರೀಕಾಂಬಕನ ಸುರುಚಿರಮುಂಗುಲೀಯಕವ ||
ಚಂಡಭಾಸ್ಕರರಮಿತಕೋಟಿಯು |
ನಂಡಲೆವ ಕಿರಣಗಳ ಪಸರಿಸಿ |
ತಾಂಡವವನಾಡುತ್ತೆ ರಂಜಿಪಮುಖ್ಯದುಂಗುರವ || ೬೮ ||

ಕೊಂಡು ಕರಗಳೊಳದನು ತವಕದೆ |
ಮುಂಡೆಗಿರಿಸಿ ಕಕುತ್ಸ್ಥಕುಲಮಾ |
ರ್ತಾಂಡನನೆ ಕಣ್ಣಾರೆ ಕಂಡಂತಾಗಲಿದಿರಿನಲಿ ||
ತಂಡತಂಡದೆ ಬಾಷ್ಪಜಲ ಮುಂ |
ಕೊಂಡು ದಿಟ್ಟಿಗೆ ಮಂಜಸೀವುದ |
ಕಂಡು ಪೀತಾಂಬರದ ಸೆರಗಿಂದದನುವಾರಿಸುತೆ || ೬೯ ||

ಅರಸ ನೀನಿಂದೇತಕಬಲೆಯು |
ದುರುಳನೆಡೆಯೊಳು ಬಿಟ್ಟು ತೊಳಲುವೆ |
ತರವೆ ನಿನಗಿದು ನೋಡಿದಾ ಜನ ನಗದೆ ನಾಚಿಸದೆ ||
ಮೆರೆವ ತೋಳ್ಗಳ ಸತ್ವಮುಡುಗಿತೆ |
ಅರಸಿಯೊಳಗಭಿಮಾನ ಸಡಿಲಿತೆ |
ಧರೆಯೊಳರ್ಕಾನ್ವಯಯಶೋಲತೆಗೊದವಿತೇ ಕೊರತೆ || ೭೦ ||

ನೀರ ನಿನ್ನನು ಕಾಣದಾನಿರ |
ಲಾರೆನೆಂಬುದ ಮನಕೆ ತಾರದೆ |
ಘೋರರಾಕ್ಷಸರೂರೊಳೊರ್ಗಳನೆನ್ನನುಳಿವಶಟ ||
ಶೂರಲಕ್ಷ್ಮಣನೊಡನೆ ಘನಕಾಂ |
ತಾರವಾಸದೆ ಸುಖದೊಳಿರ್ಪೆಯು |
ನೀರೆಗೊದವಿದ ಮಾನಹಾನಿಯುದಾರದಿದನುಸಿರ || ೭೧ ||

ದೇವಿಯಿಪ್ಪಳು ಜೋಕೆ ಬಳಿಯೊಳು |
ಕಾವಲಿರ್ಪುದೆನುತ್ತೆ ಲಕ್ಷ್ಮಣ |
ದೇವಗಾಣತಿಯಿತ್ತು ನಾಂ ಬೆನ್ನಟೆ ಹರಿಣವನು ||
ಆವನಾಂತರಕತ್ತ ತೆರಳೆ |
ಅಕ್ಕವಮಾಯೆಯೊ ಕಾಣೆನವನನು |
ಹೇವಳಿಸುತಟ್ಟುತ್ತೆ ರಾವಣನೊಡನೆ ಜಾರಿದಳು || ೭೨ ||

ಸ್ವೀಯವಲ್ಲದ ವಸ್ತುವವಳ |
ನ್ಯಾಯವೃತ್ತಿಯ ಬಳಸಿ ಕೆಟ್ಟಳು |
ಸಾಯಲವಳೆಂತಾನುಮೆನ್ನುತ್ತೆನ್ನ ನೀಗಿದೆಯ ||
ರಾಯ ರಾಘವ ನಿನ್ನ ದಯಿಕನ |
ವಾಯಿಕುಳಿಗಾಶಬರಗಂ ಸು |
ಶ್ರೀಯವಿತ್ತುದೆನಲ್ಕೆ ನಿನ್ನನೆ ಸರ್ವಕಾಲದೊಳು || ೭೩ ||

ಕಾಯಮಾನಸಗಳೊಳು ಪೂಜಿಸು |
ವೀಯನಾಥೆಗೆ ಪಾಪಲೇಪನ |
ದಾಯುಸವು ಸಮನಿಪುದೆ ನೀನಿದ ಮರೆವುದೇ ಪತಿಯೆ ||
ಹೇಯವಾಪತ್ಯಲ್ಪಮಾರ್ಗದೊ |
ಳೀಯಿಳಾತ್ಮಜೆ ಚರಿಸಬಲ್ಲಳೆ |
ರಾಯ ಮೇಣ್ಕೊಲು ಜೀವಿತೇಶನೆ ನಿನ್ನ ನಂಬಿಹಳು || ೭೪ ||

ಇಂತು ಹಲವಂದದಲಿ ಚಿತ್ರದೆ |
ಚಿಂತೆಗೆಡೆಗೊಟ್ಟವನಿಜಾತ್ಮಜೆ |
ಪಿಂತೆಯೊಡನೆಯನಾರುಮರಿಯದತೆರದೊಳೆಸೆದುದನು ||
ಎಂತು ತಾನಿವನರಿದ ಬಗೆಯಿದ |
ರಂತರವ ಪರಿಕಿಸಲು ನಾಂ ವಿಪಿ |
ನಾಂತರದೆ ಕಂಡೈವರೊಳಗಿವನೊರ್ವನೆಂದೆನುತೆ ||೭೫||

ನಂಬಿತೆನ್ನಯ ಹೃದಯ ನಿಶ್ಚಯ |
ವಿಂಬುಗೊಂಡುದು ಪವನಸುತ ನೀ |
ನಂಬುಧಿಯ ದಾಂಟಲ್ಕೆ ತಳೆದಾಕೃತಿಯ ತೋರ್ಪುದೆನೆ ||
ಅಂಬರವ ಮುಟ್ಟುವೊಲು ಬಳೆಯು |
ತ್ತಂಬ ನೀಂ ನೋಡೆಂದು ನಿಂದಿರೆ |
ಕುಂಭಿನೀಸುತೆ ಹೆದರಿ ಕಣ್ಗಳ ಮುಚ್ಚಿದಳು ಕರದೆ ||೭೬||

ಬೇಡಬೇಡೈ ಹನುಮ ಸಾಕಿದ |
ನೋಡಲಾರೆನು ನಿನ್ನ ಮೊದಲಿನ |
ರೂಢಮಾದಾರೂಪನಾನುತ್ತೆನಗೆ ಸಂತಸವ ||
ನೀಡು ನೀನೆನಲೊಡನೆ ಪೂರ್ವದ |
ರೂಢರೂಪವನಾಂತು ಕೈಗಳ |
ಜೋಡಿಸುತೆ ಪದಕೆರಗಲವನಿಜೆ ಪರಸಿಯೇಳೆನುತೆ ||೭೭||

ಮೆಚ್ಚಿದೆನು ಲೇಸಾಗಿ ನಿನ್ನಯ |
ಸಚ್ಚರಿತಕಾನಿಂದು ಲೋಕದೊ |
ಳಚ್ಚರಿಯ ಸಾಹಸವು ನಿನಗುಂಟೆಂದು ಮತ್ಪತಿಯು ||
ನಚ್ಚುತೀಘನಕಾರ್ಯಕಟ್ಟಿದ |
ನಚ್ಚುಮೆಚ್ಚಿನ ಕಿಂಕರನೆ ನೀಂ |
ನಿಚ್ಚಮುಂ ಜಯವಾಂತು ಮೆರೆಯೆಂದೊರೆದಳಬ್ಜಮುಖಿ ||೭೮||

ಎರಡನೆಯ ಸಂಧಿ ಸಂಪೂರ್ಣಂ.

ಮೂರನೆಯ ಸಂಧಿ.

ಸೂ || ಮರುತನಣುಗನಶೋಕವನವನು |
ಮುರಿದು ತರಿದಕ್ಷಯಕುಮಾರನ |
ನಿರದೆ ಸಿಲ್ಕಿದನಿಂದ್ರಜಿತ್ತುವಿನಜಮಹಾಶರಕೆ ||

ಕ್ಷೇಮವೇನೈ ಪತಿಗೆ ಪೇಳೈ |
ಪ್ರೇಮಸೋದರಲಕ್ಷ್ಮಣನು ಸು |
ಕ್ಷೇಮಿಯೇ ಸುಗ್ರೀವದೇವನು ಕುಶಲದಿಂದಿಹನೆ ||
ಭಾಮಿನಿಯನರಸನ್ನು ತಾಮು |
ತ್ಸ್ವಾಮಿಯೇ ನಿನಗಾಜ್ಞೆಯಿತ್ತನೆ |
ತಾಮರಸದಳನಯನನೇನೇನೆಂದನದನುಸಿರು ||೧||

ಕಾಂತನೇನೆನಗಾಗಿ ಸಂತತ |
ಚಿಂತಿಸುತೆ ಕಂಗೆಟ್ಟು ದೇಹದೆ |
ಕಾಂತಿಗುಂದುತೆ ಕೃಷ್ಣಪಕ್ಷದ ವಿಧುವವೋಲ್ಸವೆದು ||
ಸಂತಸವ ಪರಿದಿಕ್ಕಿ ಮಿಹಿರಕು |
ಲಾಂತಕಾರಿಣಿಯೆಂದು ತಿಳಿಯದೆ |
ಭ್ರಾಂತಿಗೆದೆಗೊಟ್ಟೆನ್ನನೇನಕಟರಸುವನೆ ಬನದೆ ||೨||

ಸುಡುಸುಡೆನ್ನಯ ಬಾಳನಿಂದೆ |
ನ್ನೊಡೆಯನಿಂತಳಲುತ್ತೆ ಬಳಲು |
ತ್ತಡವಿಯಲಿ ತಡಬಡಸಿ ಬೆಂಡಾಗುತ್ತೆ ಬೇಸರಿಸಿ ||
ಎಡಹಿ ಬೀಳುತ್ತಿರ್ಪಸಮಯದೊ |
ಳಿಡೆಯೊಳಿದಿರ್ದುಪಚರಿಸುವುದನುಳಿ |
ದೊಡಲೊಳಸುವನು ಪಿಡಿದು ಜತನವ ಹೊರೆಯುತಿರ್ಪನಲಾ ||೩||

ಏನು ಹದನಿನ್ನೆನಗೆ ಮುಂದಿ |
ನ್ನೇನು ಗತ್ಯಂತರವು ನೀನಿ |
ನ್ನೇನುಪಾಯವನೆಂಬೆಯನುಸರಿಸುವೆನು ನಾನದನು ||
ಜ್ಞಾನಿ ನೀನೆಂದರಿಯುತಿವಳತಿ |
ದೀನೆಯಾಗಿಹ ಸೀತೆಯರ್ಥಿಪ |
ಳೇನನೊರೆವೈ ಮುಂದೆ ಬುದ್ಧಿಯನೆಂದಳಿಂದುಮುಖಿ ||೪||

ಕೇಳಿದನು ಮಾರುತಿಯು ರಘುಕುಲ |
ಮೌಳಿಯಂಗನೆಯೆಂದ ನುಡಿಯನು |
ಕೋಳುವೋದುದು ಸತಿಯ ಚಿತ್ತವು ತಿದ್ದಬೇಕೆಂದು ||
ಸೋಲಲಾಗದು ತಾಯೆ ಧೃತಿಯನು |
ಮೇಳವಿಸುವುದು ಮನದೆ ದಾನವ |
ಕಾಲಭೈರವನೆನಿಪ ರಾಘವನಿಹನು ಕುಶಲದೊಳು || ೫ ||

ಎಂದುಮಗಲದೆ ರಾಮಚಂದ್ರನ |
ನೊಂದಿ ಸೇವಿಪ ಲಕ್ಷ್ಮಣನು ಸುಖ |
ದಿಂದಮಿರ್ಪನಮಂದಸತ್ವನು ವಾನರೇಶ್ವರನು ||
ಮುಂದಿಮಾರ್ಬಲದೊಡನರೋಗಿಯ |
ದೊಂದುಚಿಂತಾಮಾತ್ರಮಿವದಿರ |
ನಂದಗಿಡಿಸಿಹುದೆತ್ತಲೇನಾಗಿಹಿರೊ ನೀವೆಂದು || ೬ ||

ಕಾಮಮೋಹಾದಿಗಳ ನೆರೆ ತುಳಿ |
ದಾಮಹಾತ್ಮನು ರಾಮ ನಿಮ್ಮಯ |
ನಾಮವೊಂದನೆ ತಾನು ಪಗಲಿರುಳೆನ್ನದನವರತ ||
ಪ್ರೇಮದಿಂದುಲಿಯುತ್ತೆ ರಿಪು ನಿ |
ರ್ನಾಮನೆಂತಹನೆಂದು ಕಪಿಕುಲ |
ದಾಮಹೋನ್ನತರೊಡನುಪಾಯವ ಚಿಂತಿಸುತ್ತಿಹನು || ೭ ||

ತಾಯೆ ನಿಮಗಿನ್ನೇಕೆ ಚಿಂತೆಯು |
ವಾಯುತನುಜನು ನಿಮ್ಮ ನೆಲೆಯನು |
ರಾಯರಾಘವಗರುಹಿ ಬೇಗದಿನಾತನನೆ ತಹನು ||
ಮಾಯುವಪ್ಪರು ದನುಜರೆಲ್ಲರು |
ತೋಯಜಾಕ್ಷನ ಕಣೆಯ ಮೊನೆಯೊಳ |
ಗಾಯತವು ದುಷ್ಕೃತಕೆ ಫಲವಿದು ತಪ್ಪದಾಗುವುದು || ೮ ||

ಎಂದು ಫಲವೇನಿನ್ನು ಭೂಪತಿ |
ಯಂದು ನಿಮ್ಮನು ಕಂಡು ಬಾರೆಂ |
ದೆಂದಕಾಲದೊಳೊಯ್ಯಲಾಜ್ಞೆಯನೀವುದೆನ್ನದೆಯೆ ||
ಮಂದಮತಿಯಿಂ ಬಂದು ನಿಮ್ಮಾ |
ನಂದುಗವ ಕಣ್ಣಾರೆ ಕಂಡಾ |
ನಿಂದು ನಿಮ್ಮನು ಬಿಟ್ಟುಮಿಲ್ಲಿಯೆ ಮರಳಿ ಪೋಪೆನಲಾ || ೯ ||

ಆದುದಾಯಿತು ತಾಯೆ ನಾನಿಂ |
ದಾದಯಾಳುವ ಬೇಡಿ ತಿಳುಹುವೆ |
ನೀದುರಾತ್ಮನ ಪುರದೆ ನೀವಿನ್ನಿಹುದು ಮತವಲ್ಲ ||
ಮೇದಿನೀಸುತೆ ನೀವು ನಿಮಗೆ ವಿ |
ರೋಧವಿನಿತುಮದಿಲ್ಲ ಸುತನೆಂ |
ದಾದರಿಸುತೆನ್ನೀಭುಜಾಗ್ರವನೇರಲೀಕ್ಷಣವೆ ||೧೦||

ದೇವರಾಮನ ಬಳಿಯು ಸೇರಿಪೆ |
ನಾವಭೀತಿಯುಮಿಲ್ಲ ಸತ್ಯವು |
ದೇವಿ ಬಿಜಯಂಗೈವುದೆಂದೆನಲದಕೆ ಜಾನಕಿಯು ||
ಕೋವಿದನೆ ನೀನೆಂದ ನುಡಿಗಳು |
ಭಾವಕರ್ಪಿತವಮಾಡುವಾದೊಡೆ |
ಭೂವಿನುತ ಸಹ ಪತಿಯು ಜಸಕಿಂದೂಣೆಯುವ ತಹುವು || ||೧೧||

ಹನುಮ ನೀನೆನ್ನಳಲನೀಕ್ಷಿಸಿ |
ಯನಿತಕೀಪರಿ ನುಡಿವುದೇನೈ |
ಮನುಕುಲಾಧಿಪನಂತರಂಗದ ಬೇಗೆಗಿದು ಸಮವೆ ||
ಇನಿಯನಂತಃಕರಣದೊಳಗೇ |
ನೆನಿತುಬಗೆಯಳಲಿರ್ಪುದದರಿಂದಿ |
ರಿನೊಳು ನನ್ನಳಲಿನನ ಮುಂದಿಹ ಮಿನುಗುವುಳುವಲ್ತೆ ||೧೨||

ಶೂರನಾಗಿಹ ಪತಿಯು ತನ್ನಯ |
ನಾರಿಯನು ಪರಪುರುಷನೊರ್ವನು |
ಚೋರತನದಿಂದಪಹರಿಸಿ ಕೊಂಡೊಯ್ದೊಡಾಗಿರದೆ ||
ನೀರೆಯನು ಬಿಡಿಸಿದೊಡೆ ಸಾಕಾ |
ವೈರಿಯಿಂದೆನಗೇನೆನುತೆ ನಿ |
ಸ್ಸಾರವಿಕ್ರಮನೆನಿಸುತಾತನ ಸುಳುಹಿ ಸೈರಿಪನೆ ||೧೩||

ಖಳನ ಬೆನ್ನಂಟೆಕ್ಕಿ ಬೀಳಿಸಿ |
ಪಳಿದು ಮುಂದಲೆವಿಡಿದು ಖಡ್ಗವ |
ಸೆಳೆದು ಜಳಪಿಸಿ ಕೊರಲಿಗೇರಿಸಿಯರಿದರಿದು ಕುಣಿದು ||
ಬಳಿಯ ಮಂಡಿಗೆ ತೋರಿ ಪೌರುಷ |
ದಳವನಾಕ್ರೋಶವನು ಹಿಂಗಿಸಿ |
ಲಲನೆಯನು ಕೈಕೊಳ್ಳನಲ್ಲದೆ ಬರಿದೆ ಬಿಟ್ಟಪನೆ ||೧೪||

ಲೋಕನಾಯಕ ರಾಮಚಂದ್ರನು |
ನೇಕವೀರನುಮನಸಮಧೀರನು |
ಮೇಕಪತ್ನೀವ್ರತನುಮೆನಿಸುತೆ ತನ್ನ ಮಡದಿಯನು ||
ಸೋಕಲೆಳಸಿದ ನೀಚರಾವಣ |
ನಾಕೆವಾಳ್ತನವಂ ತೃಣೀಕರಿ |
ಸೇಕಬಾಣದಿನವನ ಕೊಲ್ಲದೆ ತೃಪ್ತನೆಂತಹನು || ೧೫ ||

ಅರಸನಭಿಮತವೇನದೆಂಬುದ |
ನರಿಯದೀಘನಕಾರ್ಯದೊಳು ಮುಂ |
ಬರಿಯಬಾರದು ಸ್ವೈರಿಸಿದೊಡೆ ವಿಶೇಷಫಲವುಂಟು ||
ಅರಿತವಂಗಿದನರುಹವೇಳ್ಕುಮೆ |
ಪರಮಕರುಣಿಯೆ ಬೇಗ ತೆರಳೆ |
ನ್ನೆರೆಯನೊಡನಾಂ ಪಡುವ ಕಷ್ಟಂಗಳನು ಬಿಡಪರುಹು || ೧೬ ||

ಕರೆದುತರೆ ನೀಂ ಪತಿಯನೆನ್ನಯ |
ಸೆರೆಯ ಬಿಡಿಸಿದ ತೆರದೊಳಹುದೆನ |
ಲರಿದನನಿಲಜನೀಕೆ ಸಾಧ್ವೀಮಣಿಗಳಗ್ರಣಿಯು ||
ಕೊರತೆಯುಪ್ಪುದು ತನ್ನ ಸೋಂಕಲು |
ಪರಮಪಾತಿವ್ರತ್ಯಗುಣಕೆಂ |
ದೊರೆವಳಿದು ತಾಂ ಸಾಧುವಹುದೀಂತಾಗಬಹುದೆಂದು || ೧೭ ||

ತಾಯೆ ನಿಮ್ಮಾಜ್ಞೆಯನು ರಾಘವ |
ರಾಯನಾಜ್ಞೆಯಿದೆಂದೆ ಬಗೆದೀ |
ವಾಯುಜನು ತಪ್ಪದೆಯೆ ಪಾಳ್ಪನು ನುಡಿಯುನ್ನೃತವನು ||
ತೋಯಜಾಕ್ಷಿಯೆ ಧೈರ್ಯದಿಂದಿಹು |
ದಾಯಸವ ಮನಕೀಯಲಾಗದ |
ಮೇಯಸತ್ವನ ರಾಮಚಂದ್ರನ ಬೇಗದಿಂ ತಹನು || ೧೮ ||

ಇಂದು ನೀವೆನಗೀವುದಾ ಕುರು |
ಪೊಂದನದರಿಂದಾನು ನಿಮ್ಮನು |
ಬಂದು ಶೋಡಿದ ಬಗೆಯ ನಂಬುತೆ ಮನವೆ ರಘುವರನು ||
ಒಂದಿ ಶೋಷವನೈದೆ ಮನ್ನಿಸಿ |
ಮುಂದೆ ಭಕದಿಂದೈದಿನಿಮ್ಮಾ |
ಬಂಧನವನುರೆ ಬಿಡಿಸಿ ತೋಷವನಿತ್ತಪನು ನಿಮಗೆ || ೧೯ ||

ನೀಡಿ ಕುರುಪನೆನಲ್ಕೆ ಹನುಮನ |
ಗಾಢಭಕ್ತಿಗೆ ಮೆಚ್ಚಿ ಜಾನಕಿ |
ಖೋಡಿಯಿಲ್ಲಲೆ ಮಗನೆ ನಿನ್ನಯ ನುಡಿಗೆ ಮೆಚ್ಚಿದೆನು ||
ಬೇಡಿದುದನಿತ್ತಪೆನು ನಿನಗಿದೊ |
ನೀಡೆ ನೀನಿದನೊಡೆಯಗಾತನು |
ನೋಡಿದೊಡನೆಯೆ ನಿನ್ನ ಮೆಚ್ಚುತ್ತೆನ್ನ ನೆನೆಯುವನು || ೨೦ ||

ಕುರುಹನಿದೊ ಕೊಳ್ಳೆಂದು ಸೀರೆಯ |
ಸೆರಗಿನಾತುದಿಗಂಟಸಡಲಿಸಿ |
ಮೆರೆವ ಚೂಡಾಮಣಿಯ ರತ್ನಾಗ್ರಣಿಯ ಬಹುಘೃಣಿಯ ||
ಹೊರಗೆ ತೆಗೆದಿದನೊಲಿದು ನನ್ನಯ |
ಪರಿಣಯೋತ್ಸವದಲ್ಲಿ ತಾತನು |
ಪರಸಿಯುಂದೆನಗಿತ್ತನೊಯ್ದಿದನೀವುದರಸಂಗೆ || ೨೧ ||

ಪಿಂತೆ ಮಂದಾಕಿನಿಯ ತಡಿಯೊಳ |
ಗಂತರಂಗದೊಳಿರ್ಪ ಸಮಯದೊ |
ಳಂತರಾತ್ಮಕನೆನ್ನ ತೊಡೆಯುನೆ ನೆಮ್ಮಿ ಮಲಗಿರಲು ||
ಅಂತಕನ ಸತಿಗಳಿಪಿದಂಗೇ |
ನಂತವಿಲ್ಲದೆ ಬದುಕದೆಲ್ಲಂ |
ಬಂತೆ ಕಾಕಾಸುರನು ನನ್ನನು ಕೆಣಕಲಂದಿರದೆ || ೨೨ ||

ಅಕಸನಧಿಕಕ್ರೋಧವಾನುತೆ |
ಭರದೊಳಲ್ಲಿರ್ದೊಂದು ದರ್ಭೆಯ |
ನುರುವಿರಂಚಾಸ್ತ್ರವನು ಗೈದದನೆಸೆಯಲವನೋಡಿ ||
ಮೆರೆವ ಮೂಜಗಗಳನು ಸುತ್ತಿ |
ತ್ತಿರದೆ ಕೊನೆಯೊಳು ಶರಣನೊಂದ |
ಲ್ಕರುಣದಿಂದುಳುಹಿದನು ಮರೆಯದೆ ಪೇಳು ನೀನದನು || ೨೩ ||

ಎಂದು ನೀಡಲು ಕೊಂಡು ಹನುಮನು |
ಮುಂದೆ ತಾನಿನ್ನೊಂದನರ್ಥಿಪೆ |
ನಿಂದು ತನ್ನನು ಪಸಿವು ಮಿಗೆ ಬಾಧಿಸುವುದೀವನದೆ ||
ಚಂದದಿಂ ಜೋಲ್ದಿಸೆವ ಪಣ್ಗಳೊ |
ಳೊಂದೆಡನಾಂ ಸವಿಯಲಾಜ್ಞೆಯ |
ನೊಂದಷೇಕೆಂದಿಹನು ಕರುಣಿಸು ತಾಯೆ ನೀವೆನಲು || ೨೪ ||

ಶಿವಶಿವೇನೀವ್ರತವು ತಕ್ಕುದೊ |
ಹವಣಿಸಿರಲುತ್ಕಟದ ಕಾರ್ಯವು |
ಭುವನದೊಳಗಿನ್ನುಂಟೆ ಭಕ್ತರು ನಿನ್ನವಂದಿಗರು ||
ಪವನಜನೆ ನೀನಿನ್ನು ತಡೆಯದೆ |
ಸವಿದು ಪಣ್ಗಳನೊಂದಿ ತೃಪ್ತಿಯು |
ನವನಿಪನ ಬಳಿಗೈದಿ ಬೇಗದಿನವನ ಕರೆತಹುದು || ೨೫ ||

ನಿನಗೆ ಮಾರ್ಗದೊಳಕ್ಕೆ ಶುಭಗಳು |
ವಿನುತಗುಣ ನೀಂ ಪೋಗಿ ಬಹುದೆಂ |
ದಿನಕುಲೇಂದ್ರನ ರಾಣಿ ಬೆಸಸಲು ಭಕ್ತಿಯಿಂದೆರಗಿ ||
ವನವ ಪೊಕ್ಕಲ್ಲಿರ್ಪ ಪರಿಪರಿ |
ಯಿನಿದುಪಣ್ಗಳಸಕ್ತಿಯಿಂ ಕೊಂ |
ಡಣಿಯರಂ ಭುಂಜಿಸುತೆ ತರುಗಳ ನೆಳಲ ಬಳಿಸಾರ್ದು || ೨೬ ||

ಮನದೊಳಾಲೋಚಿಸಿದನಿಂದಾ |
ನಿನಿತು ದೂರಕೆ ಕಷ್ಟದಿಂ ಬಂ |
ದನಿಮಿಷಾರಿಗಳಾರು ಮೇಣವರದಟದೆಂತಿಹುದು ||
ಎನಿಪುದನು ತಿಳಿಯದೆಯೆ ಪೋಪುದು |
ತನಗಯುಕ್ತವಿದದರಿನೀಗಳೆ |
ಕೆಣಕಿ ಕಲಹಕ್ಕವರನೆಳೆದಪೆನೆನ್ನುತನಿಲಜನು || ೨೭ ||

ರಕ್ಕಸರು ತಾಂ ಬಿಕ್ಕುವಾಯಕೆ |
ಡಕ್ಕರಿವರಿಗೆ ಕೊನೆಯುಪಾಯವೆ |
ತಕ್ಕುದದರಿಂದೀಗಳೀವುದ್ಯಾನವನು ಮುರಿಯೆ ||
ಉಕ್ಕುವಾಕೋಪದೊಳು ರಾವಣ |
ನೆಕ್ಕತುಳರೆನಿಪವರ ಕಳುಹುವ |
ನೊಕ್ಕಲಿಕ್ಕಲ್ಕವರನೊಡನೆಯೆ ರಥಿಕರ್ರೈತಹರು || ೨೮ ||

ಅಂದು ತಾನವರಿಂದೆ ಗಾಯವ |
ನೊಂದಿ ಮೈಮರೆದಂತೆ ಮಲಗಿರೆ |
ಬಂಧಿಸಿಯೆ ಕೊಂಡೊಯ್ವರೆನ್ನನು ರಾವಣನ ಬಳಿಗೆ ||
ಸಂದು ಸಿಕ್ಕುವುದೆನಗೆ ನಾಂ ಬಗೆ |
ಬಂದ ತೆರದೊಳಗವರ ಶಕ್ತಿಯ |
ನಂದ ಮಿಗಲರಿಯುವೆನು ಬಳಿಕಮೆನುತ್ತೆ ಬಿಡದೆಳ್ದು || ೨೯ ||

ಸುರಕುಜಗಳ್ಕಿಡಿಹುವು ಸುರಪನ |
ಮೆರೆವ ನಂದನವನದೆ ದನುಜೇ |
ಶ್ವರನ ವನದೊಳಗಿಹುವು ಸಾಸಿರಕುಜಗಳಂತಹುವು ||
ಅರರೆ ಭಾಪುರೆ ಭಾಪು ದಶಕಂ |
ಧರಸೆ ನಿನ್ನಯ ಸಿರಿಗೆ ಸರಿಯದ |
ನರಿಯೆನೆಂದಾರಾಮಚರಣವ ಭಜಿಸುತಾರ್ಭಟಿಸಿ || ೧೦ ||

ತರುಗಳನು ಕೀಳುತ್ತೆ ಬುಡದೊಡ |
ನುರುಳಿಸುತ್ತಪ್ಪಳಿಸಿ ನೆಲದೊಳು |
ನತನರೆನ್ನಲು ರೆಂಬೆಗಳ ಮುರಿಮುರಿಯುತೆಸೆಯುತ್ತೆ ||
ಮೆರೆವ ಶೃಂಗಾರಾಲಯಂಗಳ |
ನಿರದೆ ಪತ್ತುತೆ ಬಲಿದ ಮುಷ್ಟಿಯಿ |
ನೆರಗಿ ಕೆಡಹುತೆ ಚರಣದಿಂ ತುಳಿತುಳಿದು ಪುಡಿಗೈದು || ೧೧ ||

ಅಲಿದನು ಸುಮ್ಮಾನದೊಳು ದಶ |
ಮೌಳಿ ನಿನ್ನಯ ನಂದನವ ಕೇ |
ಡಾಳಿ ಹಸುಮನು ರಾಮದೂತನು ಪಾಳುಗೈದಪನು ||
ಕೊಳುವೋಗದ ಮುನ್ನ ಬಲುಗೈ |
ಯಾಳುಗಳ ನಿಂದಟ್ಟಿ ರಕ್ಷಿಸು |
ವೇಳೆ ಮುಂಚಿದ ಬಳಿಕ ಕಳುಹಲ್ಫಲವದೇನೆನುತೆ || ೧೨ ||

ಹಾವಳಿಯನಿದ ಕಂಡು ಬೆನರುತೆ |
ಕಾವಲಿರ್ದವರಕಟ ತಮಗಿ |
ನ್ನಾವಗತಿಯೆಂದೆನುತೆ ಪೇಳ್ದರು ಕಾಲ್ಗೆ ಬುದ್ಧಿಯನು ||
ರಾವಣೇಶ್ವರನೋಲಗಕೆ ಬಂ |
ದಾವಶೋಕಾರಾಮಪಾಲಕ |
ರೋವುದೆಮ್ಮನು ಕೃಪೆಯಿನೆಂದಡಗೆಡೆದರಿದೀನಲಿ || ೧೩ ||

ವಿಗಡಕಪಿಯೊಂದೈದಿ ನಮ್ಮನು |
ಬಗೆಗೆ ತಾರದೆ ರೋಷವಾನು |
ತ್ತಗರುಚಂದನಕಲ್ಪತರುಗಳನೆಲ್ಲ ಮುರಿದೊತ್ತಿ ||
ಜಗವ ನುಂಗುವ ಕಾಲರುದ್ರನ |
ನಗುವ ರೂಪಿಂದೆಸೆವುದಿದರಿಂ |
ದಗಲಿತೈಸಿರಿ ನಿನ್ನ ಮೆಚ್ಚಿನಶೋಕವನದೆಡೆಯ || ೧೪ ||

ರಾಮದೂತನು ತಾನು ಹನುಮ |
ನ್ನಾಮವಿದಿತನು ವನವ ಮುರಿಯು |
ಲ್ನೇಮವಾಂತಾನಿಲ್ಲಿಗೈದಿಹೆನೆಂದು ಕೂಗುವುದು ||
ಸ್ವಾಮಿಯಿಂತಹ ಕಪಿಯ ಕಾಣೆವು |
ಭೀಮವಿಕ್ರಮವಾಂತು ಮೆರೆವುದು |
ಪಾಮರರು ಕಂಡನಿತನರಿಪಿದೆವೆಂದರವರಂದು || ೧೫ ||

ಮಾತು ಹಿಂಚಿತ್ತಸುರಭಟತತಿ |
ಯಾತುಕೊಂಡೆಂಬತ್ತುಸಾಸಿರ |
ವೇತಕೆಮ್ಮನು ಬರಿಸಿದೈ ಜೀಯಾಜ್ಞೆಯಾವುದೆನೆ ||
ಕೌತುಕದ ಕಪಿಯೈದಿತುಪವನ |
ಕೇತೆರದೊಳಂ ಬಿಡದೆ ಬಂಧಿಸಿ |
ಘಾತಿಸದೆ ತಹುದೆನ್ನು ತಾಣತಿಯಿತ್ತನಸುರಪತಿ || ೧೬ ||

ನಾನು ತಾನೆಂದೆನುತೆ ದನುಜರ |
ಸೇನೆ ಜವದಿಂ ವಿವಿಧಶಸ್ತ್ರವಿ |
ತಾನವನು ಕೈಕೊಂಡಶೋಕವನಕ್ಕೆ ತೆರಳಿದುದು ||
ಏನಮಾಡಲು ಬಲ್ಲರೆನ್ನನು |
ಹೀನಬಲರಿವರೊಳ್ಳಿತಾಗಲಿ |
ಮೌನವನು ನಟಿಸುತ್ತುಮಿರ್ದನೆನುತ್ತೆ ಮಾರುತಿಯು || ೧೭ ||

ಎವೆಯ ಮಿಡುಕದೆ ಸುಮ್ಮನಿರ್ಪುದ |
ನವರು ಕಂಡರು ಕಾಹಿನವರೀ |
ಶವಕೆ ಭಯಪಟ್ಟೋಡಿದರೆ ತಾವಕಟ ಬಲ್ಲಿದನು ||
ಹವಣಿಸುವುದೇನಿದಕೆ ಬೇಗದೊ |
ಳವಚಿ ಕೊರಲನು ಬಿಗಿದು ಪಿಡಿದೀ |
ಗಿವನನೊಪ್ಪಿಪೆವೆಮ್ಮ ದಣಿಗೆಂದೊಡನೆ ಬಳಸಿದರು || ೧೮ ||

ಧರಣಿಜಾದೇವಿಯ ಹಸಾದವ |
ನಿರದೆ ರಾವಣ ಬಯಸಿ ಹರಕೆಯ |
ಕುರಿಗಳೆನಿಸಿದ ನಿಮ್ಮನಿಂದಟ್ಟಿದನು ಬಲಿಗೆಂದು ||
ದೊರೆವುದೈ ನಿಮಗೀಗಳೇ ಸುರ |
ಪುರದ ಸೌಖ್ಯವು ನಿಮ್ಮ ದಶಕಂ |
ಧರನಿಗಾಟಳಿಕಹುದು ನೀವೆ ಮೇಲುಗೈಯೆನುತೆ || ೧೯ ||

ಮುರಿದು ಮೆಯ್ಯನು ಕರೆಯುತೊಡಲನು |
ಕಿರಿದು ಪಲ್ಗಳ ಗುರ್ರುಗುರ್ರೆಂ |
ದಿರದೆ ಪುಟನೆಗೆದೆದ್ದು ಹೊಯ್ದನು ಕೆಲಬಲನು ಕರದೆ ||
ಮರವನೊಂದನು ಕೊಂಡು ವಿಕ್ಕರ |
ನಿರಿಯೆ ಮಾರುತಿಯವರು ಬೆದರು |
ತ್ತಿರರೆ ಕಪಿ ಸಾಮಾನ್ಯವಲ್ಲೆಂದಾಗಳೊಗ್ಗುಡಿಸಿ || ೪೦ ||

ಮೆರೆವ ನಿಖಿಲಾಯುಧಗಳಿಂದುರೆ |
ಬೆರಸಿ ಹೊಯ್ದೊಡೆ ನಗುತೆ ಪವನಜ |
ನೆರಗಿ ಬಂಡೆಗಳಿಂದಮವರನು ಹೊಟ್ಟುಗುಟ್ಟುತ್ತೆ ||
ದುರುಳರಿರ ನಿಮ್ಮಲ್ಲಿ ಕೆಲರನು |
ಕರುಣದಿಂದುಳುಹಿದೆನು ನೀವಿ |
ಲ್ಲರದೆ ಭರದಿಂ ಪೋಗಿ ದೂರುವುದಸುರಪತಿಗಿದನು || ೪೧ ||

ಎನುತೆಯಾಡಿದಮಾತು ಹಿಂಚಿತು |
ದನುಜಪತಿಗೀವಾರ್ತೆ ಮುಂಚಿತು |
ಕನಲಿಯೊಡನೆಯೆ ಜಂಬುಮಾಲಿಯನಟ್ಟೆ ರಣಕವನು ||
ಅನಲಕಣಗಳನುಗುಳ್ವ* ಕಣೆಗಳ |
ನನಿಲಜನ ಮೇಲೆಚ್ಚೊಡಾತನು |
ಮನಕೆ ತಾರದೆ ಕರದಿನವನಡಗಟ್ಟೆ ಹೊರೆಸೂಂಕೆ || ೪೨ ||

ಅಲಿ ಕಿತ್ತಾವನದಬಾಗಿಲ |
ಅಳಮುಂಡಿಗೆಯಡನು ತಿರುಗಿಸಿ |
ತೋಳುಕಾಲೆದೆಗಳನು ಗುರಿಗೈದಪ್ಪಳಿಸಲಾಗ ||
ಬಾಳದಕ್ಕರ ಮಸುಳಿತಸುರನು |
ಕಾಲನೂರಿಗೆ ಪಯಣಗೋಡನು |
ಕೇಳಿದನು ರಾವಣನು ತನ್ನಯ ಮಂತ್ರಿಸುತನಳಿವ || ೪೩ ||

ತಾಳಿ ರೌದ್ರಾವೇಶವನು ರಿಪು |
ಶೂಲಿಯೆನಿಪಕ್ಷಯಕುಮಾರಂ |
ಗೂಳಿಗಂಗುಡಲವನು ಜೀಯೆಂದೆರಗಿ ಪಿತಸಡಿಗೆ ||
ಲೀಲೆ ಮಿಗಿಲೆನೆ ತೆರಳಿತಾಂಲಯ |
ಕಾಲಯಮನವೊಲೆಸೆವ ಭಟವರ |
ನಾಳಿಹನುಮನ ಕಂಡು ಬೆಚ್ಚುತೆ ಮಂಗನಲ್ಲೆಂದು || ೪೪ ||

ಘಡಘಡೆಲೊ ನೀನಿಂದು ರಕ್ಕಸ |
ಪಡೆಯ ಪಾರಣೆಗೆಂದು ನಡೆತಂ |
ದಡವಳನ ಕೈಗಿಂತು ಸಿಲ್ಕದೆ ಬರಿದೆ ತಡಗೈದೆ ||
ಕೊಡೆದುದಲೆ ನಿನ್ನಾಯುವೀದಿನ |
ಬಿಡಿಸಿಕೊಳ್ವವರಾರೊ ಕಾಣೆನು |
ಕಡಿದು ನಿನ್ನನು ತನ್ನ ಬಾಣಸದೆಡೆಗೆ ಕಳುಹುವೆನು || ೪೫ ||

ಕೀಶಮಾಂಸವ ಸವಿಯಬೇಕೆಂ |
ಬಾಶೆಗೇರಿಪೆನೀಗ ಕಲಶವ |
ನೀಶರೌಘವೆ ದೂತನೊಯ್ವುದು ನಿನ್ನನಡುವನೆಗೆ ||
ಲೇಶವುಂ ಪುಸಿಯಿಲ್ಲವೆಂದಾ |
ಕ್ರೋಶದಿಂದಂಬುಗಳನೆಚ್ಚೊಡೆ |
ಕೇಶಗಳ್ಕಿಲವುದಿರೆ ಮಾರುತಿ ರೋಷವನು ನಟಿಸಿ || ೪೬ ||

ಎರಗಿದನು ಮಣಿರಥಕೆ ಕಟ್ಟಿದ |
ತುರಗದೊಡನದು ಕೆಡೆಯಲವನಿಯೊ |
ಳರರೆ ಕಪಿ ಸಾಮಾನ್ಯವಲ್ಲೆಂದಸುರಪತಿಸೂನು ||
ಇರದಡರ್ದನು ನಭವನಲ್ಲಿಂ |
ಸುರಿಸಿದನು ಕಣೆವಳೆಯನನಿಲಜ |
ನರಿಯಲೇನಸಮರ್ಥನೇ ಬಿಡದೇರ್ದನಂಬರವ || ೪೭ ||

ಅತುಲಬಲಯುತನಾಂಜನೇಯಂ |
ಗತಿಶಯವೆ ರಿಪುವಿಜಯವಸುರನ |
ಗತಿಯ ಬಣ್ಣಿಪರಾರು ಬಿಳ್ದನು ಭೂಮಿಗಸುವಳಿದು ||
ಜತೆಯೊಳಿರ್ದವರಿದನು ತಾಂಕಂ |
ಡತಿಜವದೊಳೋಡಿದರು ನಿಶಿಚರ |
ಪತಿಗೆ ನಿಮ್ಮಯ ಕುವರನಳಿದನೆನುತ್ತೆ ತಿಳಿಪಿದರು || ೪೮ ||

ಅದ್ದಿದನು ದುಃಖಾಂಬುನಿಧಿಯಲಿ |
ಬಿದ್ದು ಹೊರಳಿದನಿಳೆಯ ಮೇಲೊಡ |
ನೆದ್ದು ಪುತ್ರನ ನೆನೆದು ಮಿಗೆ ಹಮ್ಮೈಸಿಯಸುರೇಂದ್ರ ||
ಕ್ರುದ್ಧನಾಗುತೆ ತನ್ನ ಬೆಸನಂ |
ಶ್ರದ್ಧೆಯಿಂ ಕೈಕೊಂಡು ನಡೆಯಿಪ |
ಮುದ್ದಿನಣುಗಂಗಿಂದ್ರಜಿತ್ತುವಿಗೆಂದನೀಪದನ || ೪೯ ||

ತಿಳಿಯಲಸದಳವಾಗಿ ತೋರ್ಪೀ |
ಪ್ರಳಯಕೇಂಕಾರಣವೊ ಬಗೆಯಲ್ |
ಕಳೆದುಪೋಪಂತಿಹುದು ರಾಕ್ಷಸಕುಲದ ಪೇರದಟು ||
ಬಲುಹಿನಿಂದದನುಳುಹಿ ನೆಲೆಗೊಳಿ |
ಪಳವು ನಿನಗಿಂದಲ್ಲದಾರಿಗು |
ಮಿಳಿಯೊಳಸದಳಮದರಿನ್ನೆದುವದೀಗ ಬನದೆಡೆಗೆ || ॥ ೫೦ ॥

ಕೋತಿಯದು ನಾಡಾಡಿಯಲ್ತು ವಿ |
ಜಾತಿಯಾಗಿರ್ಪಂತೆ ತೋರ್ಪುದು |
ಭೀತಿಗೆಡೆಗುಡದೆಚ್ಚರಿಕೆಯಿಂ ತೊಡಗು ಕಾಳಿಗವ ||
ಖ್ಯಾತಿಯಾಂತಮರರ್ಕಳನು ಪುರು |
ಹೂತಸಹಿತರನಟ್ಟಿ ಜಯಿಸಿದ |
ರಾತಿಭೀಕರನೆಂದು ಮೈಮರೆದಿರದೆ ಕಾದುವುದು ॥ ೫೧ ॥

ಪೋಗು ಜಯಸಿರಿಗೊಡೆಯನಾಗೆಂ |
ದಾಗಳಾಶೀರ್ವದಿಸಿ ಕಳುಪ |
ಲ್ಬೇಗಮೇರ್ದನು ರಥವ ಪಾಯ್ದುಳಕಾಗ ಕೈವೀಸಿ ||
ಆಗಲೊಳ್ಳಿತು ಕಪಿಯು ಸತ್ಪ್ರೋ |
ದ್ಯೋಗವನು ತನ್ನಲ್ಲಿ ತೋರಲಿ |
ಸಾಗಲಟ್ಟುವೆನಂತಕನ ಬಳಿಗೆಂದು ಗರ್ಜಿಸುತೆ ॥ ೫೨ ॥

ಎತ್ತಲಿಹುದಾಕಪಿಯು ಬೇಗದೊ |
ಳತ್ತ ಹರಿಸೈ ರಥವನೆನ್ನು |
ತ್ತೊತ್ತಿ ಸಾರಥಿಗಿರದೆ ಬೆಸಸತ್ತಲ್ಲಿಗಿರದೈದಿ ||
ಇತ್ತಲಿತ್ತಲು ನಿನಗೆ ಮಿತ್ತುವ |
ಹತ್ತಿರ್ದೈದಿಕು ತಿಮ್ಮ ನೀನಿ |
ನ್ನೆತ್ತಲಡಗುವೆಯೆನ್ನ ತಂಬುಗಳಿಂದೆ ಬಿಡದಿಸಲು ॥ ೫೩ ॥

ನೋಡಿದನು ಮಾರುತಿಯು ತಾನೀ |
ಗಾಢಿಗಮುಕದ ವೀರನಾರೆಂ |
ದೌಡುಗಚ್ಚುತ್ತುಗ್ರಕೋಪಾಟೋಪಮಯನಾಗಿ ||
ಕೂಡೆ ಬಳೆಯುತ್ತಂಬರಂಬರ |
ಮಾಡತೊಡಗಿದನವನ ಕಣೆಗಳೊ |
ಳಾಡಲೇನಿರದಿಂದ್ರಜಿತ್ತದ ಕಂಡು ಬೆರಗಾಗಿ ॥ ೫೪ ॥

ಅವುವು ಸಾಹಸಿಯಹುದು ತಪ್ಪ |
ಲ್ಲವಿತಬಲವೀವಾನರಂಗಿಹು |
ದಮರರೊಳಗಂ ಕಂಡುಕೇಳಿದುದಿಲ್ಲವಿನಿತದಟ ||
ಕ್ರಮದೆ ಕಪಿಯಿಡನಖಿಲಭೀಕರ |
ವಿಮಲಸುಬ್ರಹ್ಮಾಸ್ತ್ರದಿಂ ಬಿಗಿ |
ದವುರ್ದಬಂಧನವೆರಸು ಜನಕಂಗೊಪ್ಪಿಸುವೆನೆನುತೆ || ೫೫ ||

ಚಳಕದೊಳು ತೂಣೀರದಿಂದದ |
ನೆಳೆದು ನೆರೆಯಭಿಮಂತ್ರಿಸಿಯೆ ಬಿಡೆ |
ಪಳಿವನೊಂದಿಸಲಾಗದಜಗಿತ್ತಿಹೆನು ಭಾಷೆಯನು ||
ಸಿಲುಕುವೆನು ಮೂಗಳಿಗೆಯನ್ನೆಗ |
ಮಲುಗೆನಾದುದರಿಂದಮಿದಕಿಂ |
ದಳುಕದೊಡವಾಂ ಸೋಲ್ವುದುಚಿತಮೆನುತ್ತೆ ಪವನಜನು || ೫೬ ||

ನೆಲದೊಳೊರಗಿರೆ ಕಂಡು ದನುಜನು |
ಭಳಿರೆ ಬಿಳ್ದುದು ಕೋತಿ ರಜ್ಜುವ |
ನಳವಡಿಸಿ ಬಿಗಿವುದೆನುತಾಜ್ಞೆಯನೀಯಲಸುರರ್ಗೆ ||
ಬಳಿಗೆ ಬಂದರು ಮುಟ್ಟಲಂಜಿದ |
ರಳವುಗೆಟ್ಟರು ರಾಜನಾಜ್ಞೆಯ |
ಒಲುಹನೆನೆದರು ಬಳಿಕ ಕಟ್ಟಿದರೆಂತೊ ಕಷ್ಟದಲಿ || ೫೭ ||

ಸುಮ್ಮನಿರಲಾಹನುಮನಲುಗದೆ |
ಕೆಮ್ಮಿದರು ಕೇಕರಿಸಿದರು ಬಲು |
ಹೆಮ್ಮೆವಾತುಗಳೆತ್ತಲಡಗಿದುವೆಂದು ಮೂದಲಿಸಿ ||
ಹಮ್ಮು ಮೆರೆಯದು ರಕ್ಕಸರ್ಕಳೊ |
ಳೆಮ್ಮನಾರೆಂದರಿದೆ ಬಾಬಾ |
ತಿಮ್ಮ ಬಾರೆಂದೆಳೆದು ತಂದರು ದನುಜಪತಿಯೆಡೆಗೆ || ೫೮ ||

ಮೂರನೆಯ ಸಂಧಿ ಸಂಪೂರ್ಣಂ.

ನಾಲ್ಕನೆಯ ಸಂಧಿ.

ಸೂ || ಬಾಲಕಿಕ್ಕಿದಬೆಂಕಿಯಿಂ ಲಯ |
ಕಾಲನೆನೆ ಲಂಕೆಯನು ಬೇಯಿಸಿ |
ಯಾಲಿ ಕಡಲನು ಮರಳಿ ದಾಂಟಿದನನಿಲನಂದನನು ||

ಬಂದನೊಡನಿರದಿಂದ್ರಜಿತ್ತುವು |
ತಂದೆಯಡಿಗಳಿಗೆರಗಿ ತಂದೆಯೆ |
ತಂದೆನಿದೊ ನಾಂ ಕಪಿಯನೊಪ್ಪಿಸಿಕೊಳ್ಳುದಿಂದೆನಲು ||
ಬಂಧನಕ್ಕೊಳಗಾಗಿ ಮುಂಗಡೆ |
ನಿಂದು ತನ್ನನೆ ನಿಟ್ಟಿಸುತ್ತಿಹ |
ಕುಂದುವಡೆಯದ ಕಪಿಯ ನೋಡಿದನಾಗ ರಾವಣನು || ೧ ||

ಈತ ನೋಡಲಭೀತ ಸತ್ತ್ವೋ |
ಪೇತನೆಮ್ಮ ವಿರೀತನನು ದಿಟ |
ಕೋತಿಯೆಂದೇ ಬಗೆದು ಕೆಟ್ಟರು ಮೊದಲು ಚಿಂತಿಸದೆ ||
ರೀತಿಗಳನೀಕ್ಷಿಸಲು ವಾನರ |
ಜಾತಿಗೊಪ್ಪುವ ನಡೆಗಳಿಲ್ಲವು |
ಮಾತನಾಡಿಸಲರಿಯಬಹುದೆಂದಾಪ್ರಹಸ್ತನನು || ೨ ||

ಕರೆದು ದನುಜಾಧಿಪನು ಬೆಸಸ |
ಲ್ಕೆರಗಿ ಜೀಯೆನುತೆದ್ದು ಮಂತ್ರೀ |
ಶ್ವರನು ವಿನಯದಿನವನ ನುಡಿಸಿದನಾರೆಲೈ ನೀನು ||
ಬರವದೆಂತಾಯ್ತಿಲ್ಲಿಗಾರನು |
ಚರನು ನೀನಿಂದೆಮ್ಮ ವನವನು |
ಮುರಿದ ಕಾರಣವೇನು ವಿಸ್ತರದಿಂದಮೊರೆಯೆಂದು || ೩ ||

ಕೇಳಿದನು ಪವನಜನು ಸಚಿವನು |
ಪೇಳಿದುದನೆಲ್ಲವನು ದಾನವ |
ಮೌಳಿಯತ್ತಲು ತಿರುಗಿಯಿಾಪರಿಯೆಂದನವನೊಡನೆ ||
ಆಲಿಸೈ ದನುಜೇಂದ್ರ ದುಷ್ಟ |
ವ್ಯಾಳಗಾರುಡಮಣಿಯು ರಾಘವ |
ನಾಳುಗಳಿಗವನಿಜೆಯ ನೆಲೆಯರಿಯಲ್ಕೆ ಬೆಸನೀಯೆ || ೪ ||

ಪಾವನಾತ್ಮಕನಾಜ್ಞೆಯನು ಸಂ |
ಭಾವಿಸುತೆ ನಲವಿಂದೆ ರವಿಸುತ |
ನೇಮವೀಯಲನಂತಕಪಿಕುಲದಗ್ರಗಣ್ಯರಿಗೆ ||
ಭೂವಲಯದೊಳಗಿರ್ಪ ಪಲವುಂ |
ಠಾವುಗಳೊಳವರರಸುತಿರ್ಪರು |
ಪಾವಮಾನಿಯುಂ ತಾನುಮಾವುದ್ದೇಶವಿಂದೀಗ || ೫ ||

ಬಂದೆನಿಲ್ಲಿಗಶೋಕವನದೊಳ |
ಗಿಂದುಮುಖಿಯುಸುರಿಯುರ ಮಧ್ಯದೆ |
ಕಂದಿ ಕುಂದಿರ್ಪುದನು ಕಂಡಿತ್ತಾತೆಗಭಯವನು ||
ಹಂದೆ ರಕ್ಕಸನಾವನೀಯುರ |
ವಿಂದಲೋಚನೆಗಿಂತು ಕಷ್ಟವ |
ತಂದನೋ ತಾನವನ ನೋಡಲೆಬೇಕು ನಾನೆಂದು || ೬ ||

ಮುರಿದೆನಾರಾಮವನು ನಿನ್ನವ |
ರಿರದೆ ಕೈಮಾಡಲ್ಕೆ ಸವರಿದೆ |
ನರಿಯಲೇನಪರಾಧವೆನ್ನೊಳಗೊರೆಯ ನೀನದನು ||
ಸುರಪಜಿತ್ತ್ರಿಜ್ಜಜಶರವ ಧಿ |
ಕ್ಕರಿಸದಂಗೀಕರಿಸಿ ನಿನ್ನಯ |
ವರೆಗೆ ಬಂದೆನು ಕಂಡೆನೊಂದಿದೆನಿಷ್ಟವನು ಮನದ || ೭ ||

ನನ್ನ ಕಾರ್ಯವದೆಲ್ಲಮುಗಿಯಿ |
ತ್ತಿನ್ನುಮರಳುವೆನರಸನಲ್ಲಿಗೆ |
ಸನ್ನುತಾಂಗಂಗಿಲ್ಲಿ ನಡೆದುದನರಿಕೆಮಾಡುವೆನು ||
ನಿನ್ನ ಮತವೇನುಸಿರು ನೀನೇಂ |
ಮುನ್ನಿನಂದದೆ ಹಟವ ಸಾಧಿಪೆ |
ನೆನ್ನುವಾತನೊ ಮೇಣು ಶರಣಾಗತನೊ ರಾಮಂಗೆ || ೮ ||

ಮಾಡಬಾರದ ಕೃತ್ಯವೆಸಗಿದ |
ಕೇಡುಗನು ಕಾಕಾಸುರನು ಕೈ |
ಜೋಡಿಸುತೆ ಶರಣೆಂದಮಾತ್ರಕೆ ಮನ್ನಿಸಿದನರಸ ||
ಖೋಡಿಯುಳಿದವನಂತೆ ಶರಣವ |
ಬೇಡಿ ಧರಣೀತನುಜೆಯನು ನೀಂ |
ದೂಥಿಮೆಚ್ಚುವ ತೆರದೊಳಿತ್ತೊಡೆ ಕಾವನಾಕರುಣಿ || ೯ ||

ರಾಮನಾರೆಂದರಿವೆ ಸಾಕ್ಷಾ |
ನ್ಮಾಮನೋಹರನಾಶನೊಲವಿಗ |
ನೇ ಮಹಾಕೃತಿಯಾತನೊಲವಿಲ್ಲದನೆ ತಾನಕೃತಿ ||
ನೇಮದಿಂ ಶ್ರುತಿಯರಿತವನು ಮೇಣ್ |
ಸಾಮವೇದವಿಶಾರದನು ನೀಂ |
ಭೂಮಿಯೊಳು ಜಪವಾಂತ ನಿನಗಿಂತೇಕೆ ದುರ್ಬುದ್ಧಿ || ೧೦ ||

ವಾಲಿಯಾ ತೋಳ್ಗಳಲಿ ಸಿಲ್ಕು |
ಯ್ಯಾಲೆಯಾಡಿದೆ ನೀನು ರಾಮನು |
ಲೀಲೆಯಿಂದವೆ ಕೊಂದನವನನು ಕೇಳ್ವು ನೀನರಿಯ ||
ಶೂಲಿಮೆಚ್ಚಲು ತಪವನೊಡರಿಸಿ |
ಕಾಲಪಾಶಕೆ ಸಿಲುಕದಂದದ |
ಮೇಲುವರಗಳ ಪಡೆದಗರ್ವವು ನಾಡೆ ಪಾಳಹುದು || ೧೧ ||

ಸುರರ ದನುಜಾದಿಗಳ ದೆಸೆಯಿಂ |
ಹರಣವಳಿಯದ ವರವ ಪಡೆದೈ |
ಮರೆತೆ ಗಡ ವಾನರರನಡವಿಯ ಬಡಮಿಗಗಳೆಂದು ||
ಬರುವನೈ ಸುಗ್ರೀವ ಕಪಿಬಲ |
ವೆರಸಿ ನಿನ್ನನು ಕೊಲಲು ಗಳಿಸಿದ |
ವರಗಳವು ನಿಷ್ಫಲವು ನೀನಿನ್ನುಳಿವುದಸದಳವು || ೧೨ ||

ಅರಸಿಯನು ಕಳ್ಳಂಕೆಯಿಂದವ |
ಹರಿಸಿದವನನು ತನ್ನ ಕನದಿಂ |
ದರಿವಭಾಷೆಯು ರಾಮಚಂದ್ರಂಗದರಿನುಳುಹಿದೆನು ||
ಧರೆಯೊಳಧಮಾಧಮರುಮೆಸಗದ |
ದುರಿತಕೆಳಸಿದ ನಿನ್ನನೀಕ್ಷಿಸಿ |
ತರಿಯೆ ತವಕಿಪುದೆನ್ನ ಮನವಾಳ್ದಂಗೆ ಬೆದರುವೆನು || ೧೩ ||

ನುಡಿದು ಫಲವೇನೆಂದು ತೆರಳ |
ಲ್ಸಡಗರಿಪ ಮಾರುತಿಯ ನಿರುಕಿಸಿ |
ಕುಡಿಯುಮಿಸೆಯು ಕುಣಿಯೆ ವೀರಾವೇಶವಾವರಿಸೆ ||
ಕಿಡಿಯನುಗುಳ್ವ*ಕ್ಷಿಗಳು ಮರಳ |
ಲ್ಸಿಡಿಲು ಬೊಬ್ಬಿಡುವಂತೆ ಗರ್ಜಿಸಿ |
ಮುಡುಹುಗಳ ತಿರುಹುತ್ತುಮೆಂದನು ಮಂತ್ರಿಗಸುರೇಂದ್ರ || ೧೪ ||

ಏಸರದು ತಾನೀಮೃಗಾಧಮ |
ವೀಸುನಾಲಗೆಯುಂಟೆ ನೀನುಂ |
ಸೈಸಿದಾಜ್ಞೆಯೆಂತು ಬಿಡುವಿದನಿಲ್ಲಿ ಕಡಿಸ್ತುದೆನೆ ||
ಐಸಲೇ ಅಹುದಹುದಿದೆಂದಾ |
ಸಾಸಿಯುನು ಪಿಡಿಯಲ್ಕೆ ಪೋಪರ |
ನಾಸಭಾಮಧ್ಯದ ವಿಭೀಷಣನಾಗದಾಗದೆನೆ || ೧೫ ||

ಏತಕಾಗದು ಮರಣದಂಡನೆ |
ಪಾತಕಿಗೆ ಸಲ್ಲುವುದು ನೀಂ ಸಹ |
ಜಾತನಾಗಿಯುಮೆನಗೆ ದುಷ್ಟನ ಶಿಕ್ಷೆಗಿಡರಹುದೇ ||
ನೀತಿಗಿದು ಕುಂದಲ್ಲವೆಂದವು |
ರಾತಿಭೀಕರನೆನೆ ವಿಭೀಷಣ |
ಸೋತವೊಲ್ ಕ್ಷಣಮಿರ್ದು ಬಳಿಕಂತೆಂದನಣ್ಣಂಗೆ || ೧೬ ||

ಸಹಿಸು ಸಹಿಸೆಂದಗ್ರಜಾತನೆ |
ದಹಿಸಲಾಗದು ರಾಜಧರ್ಮವ |
ನಹಿತರಾಜನ ದೂತನಾಗೈದಿಹನು ನಮ್ಮೆಡೆಗೆ ||
ವಿಹಿತವೆನಿಸದು ದೂತವಧೆ ನಿ |
ರ್ವಹಿಸಿ ಕಾರ್ಯವ ಗೆಲ್ಲ ಬಲ್ಲಂ |
ಗಹಹ ಸಹಸವೆ ಶಸ್ತ್ರನಿರಿಂದಪ್ಪುದರಿವಿಜಯ || ೧೭ ||

ಈತ ಸತ್ವೋಪೇತ ರಾಘವ |
ದೂತನಬುಧಿಯ ದಾಂಟಿದತಿವಿ |
ಖ್ಯಾತನೀತಂಗಲ್ಲದಿತರರಿಗಂಜದಾಜಲಧಿ ||
ಈತನಿರ್ದೊಡೆ ದಾಶರಥಿಗಳ |
ನಾತು ಪೆಗಲಿಂದಿತ್ತ ತರ್ಪನು |
ಭೀತರಹ ಪೆರರಿಂದೆ ಸಾಗದು ಸಾಸವೀಸರಿಯ || ೧೮ ||

ಆದರೀತನನುಳುಹಿದೊಡೆ ಸ |
ಮ್ಮದದೊಳವರನುತರ್ಪನಿಲ್ಲಿಗೆ |
ಕೆದಕಿನೀನಾಜಳಿಕನುವನು ಪೊಯ್ಯಬಹುದಲ್ತೆ ||
ವಿದಿತವಿದು ಮನ್ಮನಕೆನೀನಿ |
ನ್ನಿದರಮೇಲೇಂಬೆಸಸಿದೊಡವರಾಂ |
ಪದುಳದಿಂ ನಡೆಸುವೆವು ಜೀಯೆಂದಲಾಗ ರಾವಣನು || ೧೯ ||

ತಮ್ಮ ನಿನ್ನದು ಧರ್ಮಮಾರ್ಗವು |
ಸಮ್ಮತವು ಮನಮೊಪ್ಪಿತಾದೊಡೆ |
ಹಮ್ಮಿನಿಂದೀಕಪಿಯು ಲೆಕ್ಕಿಸದೆಮ್ಮನೆಂಗುವಕೆ ||
ಸುಮ್ಮನಿದನಾಂ ಕಳುಹಲಾಗದು |
ನಮ್ಮ ನೆನಪಿರುವಂತೆ ವಾಲಧಿ |
ಗೊಮ್ಮೆ ಹುತವಾಹನನನಂಟಿಸಿಯಟ್ಟುವುದು ಮತವು || ೨೦ ||

ಬೇಗದಿಂದಿಂತೆಸಗಿ ನೀವೆಂ |
ದಾಗಳಾಣತಿಯೀಯಲಸುರರು |
ಪೋಗಿ ವಸ್ತ್ರಂಗಳನು ತಂದರು ನನೆಯಿಸೆಣ್ಣೆಯಲಿ ||
ಈಗಳೇನ್ನೈ ಗತಿಯು ನಿನ್ನಯ |
ಲಾಗವೇಗಕ್ಕಾದಿಕಾರಣ |
ನೀಗ ಪೋಪುದು ಬೆಂದು ದಾಂಟುವೆಯೆಂತು ಬಲುಗಡಲ || ೨೧ ||

ಹೋದೆ ಹೋಗಿನ್ನೆನುತೆ ರಾಕ್ಷಸ |
ಯೋಧರಾಲಾಂಗೂಲಕತಿಸ |
ಮೋದದಿಂ ಬಟ್ಟೆಗಳ ಸುತ್ತಲ್ಕೈದಲಾಹನುಮ ||
ಈದುರಾತ್ಮಕರೇಸು ವಸನವ |
ನೈದೆ ಯೊದವಿಪರೀಕ್ಷಿಸುವೆನೆಂ |
ಬಾದಶಾನನನದ್ಭುತಂಗೊಳೆ ಬಾಲವನು ಬೆಳಸೆ || ೨೨ ||

ಎಲವೊ ಬಳೆಯಿಸು ಬಳೆಯಿಸಾವಳೆ |
ಜಳಗೆ ತೊಗಲನು ಹೊದೆದು ಕಾಲವ |
ಕಳೆವರಾಯನೆ ರಾವಣೇಶ್ವರನುಂಟು ವಸನಗಳು ||
ನೆಲನಿದೆಲ್ಲವ ತುಂಬುವನಿತಿವೆ |
ಪುಳುವೆ ನಿನ್ನೀಬಾಲಕಿಲ್ಲವೆ |
ಬಳೆಯಿಸೆಂದಸುರರ್ಕಳಬ್ಬರಿಸುತ್ತೆ ಸುತ್ತಿದರು || ೨೩ ||

ಒಡನೆ ಯಜ್ಞೇಶ್ವರನ ಹತ್ತಿಸಿ |
ಪಿಡಿದು ನಗರದ ರಾಜಮಾರ್ಗದೆ |
ನಡೆಯಿಸುತೆ ಸಾರುತ್ತೆ ರಾಮನ ದೂತನಿವನೆಂದು ||
ಕಡೆಯ ಕೇರಿಯ ದಾಂಟಿಸಿಯೆ ತಾ |
ಪಿಡೆಯ ಸೇರಿನ್ನೆನುತೆ ಬಿಟ್ಟೊಡೆ |
ಯೊಡನೆ ಮಾರುತಸುತನು ಬಳೆದನು ಕಟ್ಟು ಪುಡಿಯಾಗೆ || ೨೪ ||

ಹರಡಮುಳಿವುದೆ ವಾರ್ತೆಯಸುರಿಯ |
ಕೊರೆದರಿದನಾಸೀತೆಗವಳುರೆ |
ಮರುಗಿ ಹುತವಾಹನನನರ್ಚಿಸಿ ಬೇಡಿದಳು ವರವ ||
ಅರಸನನು ರಘುವರನನಲ್ಲದೆ |
ಪೆರರನೀಮನದಲ್ಲಿ ನೆನೆಯದ |
ಪಠಮಸಾಧ್ವೀವ್ರತವು ತನಗಿರೆ ವಾಯುಪುತ್ರಂಗೆ || ೨೫ ||

ಉರಿವ ಬೆಂಕಿಯು ತಣ್ಣಿತಾಗಲಿ |
ಪೊರೆವ ಜಲಧಿಯು ಸುಪಥವಾಗಲಿ |
ಸರಸಿಜಾಕ್ಷನ ದರ್ಶನವು ತಾಂ ಒಭಿಸಲತಿಜವದೆ ||
ಕರುಣಿಸ್ಯೆಯಿದನೆಂಡಮಾತ್ರದೊ |
ಳರರೆ ಸಂದಿಕು ಬಿಸುಪು ಪವನಜ |
ನರಿದನಿದು ಜಗದೇಕಜನನಿಯ ಕೃಪೆಯ ಫಲಮೆಂದು || ೨೬ ||

ಊರ ಮನೆಗಳ ಮೇಲೆ ತಿರುಗುತೆ |
ತೋರುತಗ್ನಿಯ ಸೂರಿನೆಡೆಯೊಳು |
ವಿಾರಿ ಬೊಬ್ಬಿಡುತೇರಿ ಗೋಪುರಗಳನು ಪುಡಿಗೈದು ||
ಹಾರಿ ರಾವಣಕುಂಭಕರ್ಣರ |
ಚಾರುವಾಡರಮನೆಗೆ ಬೆಂಕಿಯ |
ನೂರಿ ಹನುಮನು ರಾಮಚಂದ್ರನು ವಿಜಯಿಯೆನುತಿರ್ದ || ೨೭ ||

ತೆರಳಿಯಲ್ಲಿಂ ವರವಿಭೀಷಣ |
ಪರಮಭಕ್ತನ ರಾಜಭವನವ |
ನಿರುಕಿಸುತ್ತವನದನು ಸೋಂಕಲು ಬಾರದೆಂದುಳುಹಿ ||
ಪುರದೊಳಿರ್ಪಖಿಳಾಲಯಂಗಳ |
ನಿರದೆ ವನಮುಮನಂತೆ ಭಸ್ಮೀ |
ಕರಿಸಿ ಹರಿಸದಿನಂಜನಾಸುತನಂಬುಧಿಯ ಸೇರಿ || ೨೮ ||

ಅದ್ದಿ ಬಾಲವನುರಿಯ ನಂದಿಸಿ |
ಗದ್ದದಲಿ ಕರವಿಟ್ಟು ಶಿವಶಿವ |
ಬುದ್ಧಿಶೂನ್ಯತೆವೆತ್ತು ನಾನಕಟೇನಮಾಡಿದೆನೊ ||
ಹೊದ್ದೆ ಸುಟ್ಟೆನಶೋಕವನು ತಾ |
ನಿದ್ದಳಲ್ಲಿಯೆ ದೇವಿ ಬಗೆಯದೆ |
ಯುದ್ದುರುಟುತನದಿಂದೆ ಗೈದೆನು ಮಾತೃಹತ್ಯೆಯನು || ೨೯ ||

ಎನುತೆ ಚಿಂತಿಸಿ ತನ್ನ ಬಾಲವ |
ನನಲ ಸುಡದಿರ್ದುದನು ನೆನೆದಾ |
ಜನನಿ ಬದುಕಿರವೇಳ್ಕುಮಿದರೊಳಗಿಲ್ಲ ಸಂದೆಗವು ||
ತನುವಿದಾವಳ ದಯದೆ ತಣ್ಣಿ |
ತ್ತೆನಿಸಿತಂತಹ ಪರಮಸಾಧ್ವಿಗ |
ಮನಲಭಯವೇನಿದನು ತಿಳಿಯದೆ ಪೋದೆನಾನೆಂದು || ೩೦ ||

ಭರದೆ ವನವನು ಸಾರ್ದು ಸೀತೆಗೆ |
ಪರಮಸಂಭ್ರಮದಿಂದೆ ವಂದಿಸಿ |
ಸುರರಿಪುಪುರನಾಶನವಾರ್ತೆಯನೆಲ್ಲ ಬಿತ್ತರಿಸಿ ||
ಅರಸನಲ್ಲಿಗೆ ಪೋಗಲಾಜ್ಞೆಯ |
ಕರುಣಿಸಲುಬೇಕೆಂದು ಯಾಚಿಸಿ |
ಹರಕೆಗೊಂಡುರೆ ರಾಮರಾಮೆಂದಾರ್ದು ಪಾರಿದನು || ೩೧ ||

ನಾಲ್ಕನೆಯ ಸಂಧಿ ಸಂಪೂರ್ಣಂ.

ಐದನೆಯ ಸಂಧಿ.

ಸೂ || ಬಸಿವ ಹರಿಸದ ರಸದಿ ಪವನಜ |
ನೊಸಗೆಯುಸಿರ್ದಂಗದಗೆ ನುಹಿಜೆಸು |
ವಿಸುಸ ಚೂಡಾಮಣಿಯನಿತ್ತನು ಮಿಹಿರಕುಲಮಣಿಗೆ ||

ಸ್ವಾಮಿಕಾರ್ಯವ ಸಾಧಿಸಿದೆನೆಂ |
ಬಾಮಹೋತ್ಸಹವೆ ಪಡಂಗೆನೆ |
ಭೀಮಸತ್ವಗಳಿಂದೆ ರಂಜಿಸ ಶರಧಿಯನು ದಾಂಟಿ ||
ಆಮಹೇಂದ್ರಾಚಲದ ಶಿಖರದೆ |
ರಾಮರಾಮೆಂದಾರ್ಭಟಿಸಿ ನಿ |
ಸ್ಸೀಮವಿಕ್ರಮನೆಳಿಯೆ ನೋಡಿದರಂಗವಾದಿಗಳು || ೧ ||

ಒಡನೆ ಬಂದುದು ವಾನರೇಂದ್ರರ |
ಗಡಣ ಚಡಿಗಳನೆತ್ತಿ ಹೋಹೋ |
ತಡೆಯ ತಡಮಿವೇನುತ್ತೆ ಗರ್ಜಿಸುತಾಗ ಕಪಿಗಳನು ||
ಒಡೆಯನಾಳ್ವಿಬಾನಿಬಂಧನೆ |
ಗೆಡೆಮಿದಲ್ಲೆಂಬುದನು ಬಗೆಯದೆ |
ತಡೆಮ ತೊಡಗುತೆ ಬರಿದೆ ಕೋಳಿತು ಬಳಲಿ ಬಾಯಾರಿ || ೨ ||

ಜಾಣನೆಂಜಾಂಬವನು ಮುಂದಿದ |
ಕೇನುಪಾಯವದೆಂದು ಮಾರುತ |
ಸೂನುವಿನ ಕೈವಿಡಿಯುತಂಗದಸಹಿತನುನ್ನತದ ||
ತಾಣವೊಂದಿಲ್ಕೈದಿ ಸಕಲರು |
ಕಾಣುವಂದದೆ ಕುಳಿತು ಭುವನ |
ಪ್ರಾಣತನುಜನೆ ಜಾನಕಿಯ ವೃತ್ತಾಂತವೇನೆನಲು || ೩ ||

ಸದ್ದಡಂಗಿತು ರಾಮಸೇವಕ |
ನೆದ್ದು ನುಡಿದನು ಕೇಳ್ವುದೆಲ್ಲರು |
ಸುದ್ದಿವೇಳ್ವೆನು ಲೋಕಜನನಿಯ ಘನಪತಿವ್ರತೆಯ ||
ಬದ್ಧಕಂಕಣನಾಗಿ ಗಗನವ |
ಹೊದ್ದಿ ಗಮಿಸುವ ನನಗೆ ಜಲಧಿಯಿ |
ನೆದ್ದು ಮೈನಾಕಾದ್ರಿರಾಜನು ಗೈದನತಿಹಿತವ || ೪ ||

ಮುಂದೆ ಸಾದರಮರೇಂದ್ರನಟ್ಟ |
ಲ್ಬಂದು ಕೆಣಕಿದ ಸುರಸೆಯನು ಬ |
ಲ್ಪಿಂದೆ ಸೋಲಿಸಿ ಬಳಿಕ ಸಿಂಹಿಕೆಯೆಂಬ ರಕ್ಕಸಿಯು ||
ಬಂದು ತನ್ನಯ ನೆಳಲ ನುಂಗಲು |
ಮುಂದಕೈದಲ್ಕಾರದವಳನು |
ಕೊಂದು ಜಲಧಿಯ ದಾಂಟಿ ಕಂಡೆನು ಮೆರೆವ ಲಂಕೆಯನು || ೫ ||

ನಗರಿಯದು ಪೆಣ್ಣೊಡಲ ಧರಿಯಿಸಿ |
ಪುಗಲುಮೆಡೆಗುಡದೆನ್ನ ತಡೆಯೊಡೆ |
ಬಗೆಯಪವಳನು ಬಡಿದು ನಗರದೊಳುಳ್ಳ ಮನೆಮನೆಯ ||
ಪುಗುತುಮರಸುತೆ ಜಾನಕಿಯ ಸಂ |
ಗತಿಯನೇನುಮರಿಯದೆಂದುಂ |
ಬಿಗಿದ ಬಿಚ್ಚಿದ ಕತ್ತಿಯಾಳ್ಗಳ ರಾವಣನ ಮನೆಯ || ೬ ||

ಸೇರಿಯಾತನ ಶಯನಮಂದಿರ |
ದೇರುಜೌವನದಬಲೆಯರ್ಕಳೊ |
ಳಾರಯುತೆ ಬೇಸತ್ತು ಕಾಣದೆ ರಾಮನರಸಿಯನು ||
ಊರಹೊರಗಣಶೋಕವನದೊಳ್ |
ಕ್ರೂರೆಯರ ಮಧ್ಯದಲಿ ದುಃಖಿಸು |
ತಾರುಮಿಲ್ಲದನಾಥೆಯಂದದೆ ಶಿಂಶುಪೆಯ ತಳದೆ || ೭ ||

ರಾಮನಾಮಸ್ಮರಣಬಲದಿಂ |
ಕೋಮಲಾಂಗದೊಳಸುವನಿಲ್ಲಿಸಿ |
ಕಾಮಿತಂಗಳನೆಲ್ಲವರ್ಜಿಸಿ ಕೊರಗಿ ಕೃಶೆಯಾಗಿ ||
ಆಮಹಾಸತಿದೇವಿಯಿರೆ ಶ್ರೀ |
ರಾಮದೂತನೆನುತ್ತುಮುರುಕುತೆ |
ನೇಮವಾಂತಲ್ಲಿರ್ದಶೋಕೋದ್ಯಾನವನು ಮುರಿದು || ೮ ||

ರಕ್ಕಸರ್ಕಳನಟ್ಟಿ ರಾವಣ |
ನೊಕ್ಕಲಿಕ್ಕಿದೆನವರ ಬಳಿಕಾಂ |
ಸೊಕ್ಕನಟಿಸುತಸಿಕ್ಕಿ ರಾವಣಿಯೊಯ್ದನರಮನೆಗೆ ||
ರಕ್ಕಸಾಣ್ಮನನುಜ್ಞೆಯಿಂ ಬಾ |
ಲಕ್ಕೆ ಬೆಂಕಿಯನಿಕ್ಕೆ ಸುಟ್ಟೆನು |
ಚೊಕ್ಕಟಮೆನಲ್ ಪುರಿಯನಾ ಬಳಿಕಿತ್ತ ಸಾರಿದೆನು || ೯ ||

ಎಂದು ನುಡಿಯಲ್ತೋಷಘೋಷದೊ |
ಳಂದು ಕೊಂಡಾಡಿದರು ಸಕಲರು |
ಮುಂದೆ ಸುಗ್ರೀವಂಗೆ ಬೇಗದೊಳರುಹಬೇಕೆಂದು ||
ನಿಂದ ಬಳಿಯೊಳು ನಿಲ್ಲದೈದುತೆ |
ಬಂದರೆಲ್ಲರು ಪುರದ ಬಳಿಯಿ |
ಪೊಂದುಸುಂದರವನಕೆ ಕಂಡರಮೋಘಫಲಗಳನು || ೧೦ ||

ಇದಲೆ ಸುಗ್ರೀವನದು ನಮಗಿಂ |
ದೊದವಿದೀಯುತ್ಸವದೆ ಪಣ್ಗಳ |
ಮುದದೆ ಕಿಳ್ತೊಡೆ ಮನ್ನಿಸುವಪದನಲ್ಲದಿಲ್ಲೆಂದು ||
ಬೆದರದೆಲ್ಲೆಡೆಸುಗ್ಗಿ ಬೇಕಾ |
ದುದನು ಮಿಗೆ ಕಿತ್ತಡಸಿ ಬಾಯೊಳ |
ಗಧಿಕಘೋಷವನೆಸಗಿ ಪಲವುಂತೆರದೆ ವರ್ತಿಸುತೆ || ೧೧ ||

ಕಾವಲಿನ ಕಟ್ಟಳೆಯ ವಿಾರ |
ಲ್ಕಾವನವ ಕಾವವರು ತಮ್ಮಯ |
ದೇವನಾಬಳಿಗೈದಿಯುದುಹಲ್ಕೇಳಿಯದನವನು ||
ಪಾವಮಾನಿಯು ಜಯದ ಕುರುಹಿದು |
ಭಾವಿಸಲ್ಬೇರಲ್ಲವೆಂದುರೆ |
ತೀವಿದಾನಂದಾಂಬುನಿಧಿಯೊಳಗೈದೆ ಮುಳುಗಿದನು || ೧೨ ||

ಕೆಲದೊಳಿರ್ದಾಲಕ್ಷ್ಮಣಂಗಿದ |
ತಿಳಿಪುತಿರೆ ಜಲಜಾಪ್ತಪುತ್ರನು |
ಜಲಜಮಿತ್ರಕುಲಾಬ್ಧಿಶಶಿ ಕೇಳಿದನು ರಘುವರನು ||
ಕಳೆಯುದೇಂತು ಮುಖದೆ ಮೊಖವರು |
ವಿಳೆಯತನುಜೆಯ ವಾರ್ತೆಯಾಲಿಸ |
ಲೊಲವಿನಿಂ ಹಾರೈಸುತಿರ್ದರು ಪವನಜನ ಬರವ || ೧೩ ||

ನೋಡೆ ತೆಂಕಲದೊಂದು ತೇಜವು |
ಮೋಡಕವಿದಂಬರದ ಮಧ್ಯದೆ |
ಮೂಡಿದರ್ಕನ ಪೋಲುಟಿಬ್ಬರಿಗೊಂಡರೇನೆಂದು ||
ನಾಡೆ ಒರೆಬರೆ ಸನಿಹಕರಿದರು |
ಕೋಡಗಗದ ಪಡೆಯೊಡನೆ ಮಾರುತಿ |
ಪೂಡಿದುತ್ಸವದಿಂದನೈದುವ ಗಾಡಿಯೆಂದೆನುತೆ || ೧೪ ||

ಕ್ಷೇಮದಿಂದಿಹಳವನಿಜಾತೆಯು |
ರಾಮಚಂದ್ರನೆ ನಿನ್ನ ರಾಣಿಯು |
ತಾಮರಸಸಮಮುಖಿಯು ಸಾಧ್ವೀಮಣಿಯು ಜಾನಕಿಯು ||
ನೇಮವೇ ತನಗಿನ್ನು ತಪ್ಪದ |
ಕಾಮಹಿಳೆಯನು ಬೆಸಸು ಬೆಸಸೆಂ |
ದಾಮರುತ್ಸುತನಿಳಿದು ಬಿಳ್ದನು ಪದಕೆ ರಾಘವನ || ೧೫ ||

ಎತ್ತುತಿರೆ ರಘುವರನು ಭಕ್ತನ |
ನುತ್ತಮಾಂಗವ ಪಿಡಿದು ನೋಳ್ಪರು |
ಚಿತ್ತವಿಭ್ರಾಂತಿಯಲಿ ನಿಂದರು ನಟ್ಟದಿಟ್ಟಿಯಲಿ ||
ಎತ್ತಣದೊ ಈಸುಕೃತ ಹನುಮಂ |
ಗುತ್ತಮೋತ್ತಮನೊಡಲ ಸೋಂಕಿಂ |
ದುತ್ತರಿಸಿದನು ಭವಜಲಾಬ್ಧಿಯನೆಂದು ಪೊಗಳಿದರು || ೧೬ ||

ಪವನನಂದನನೆಳ್ದು ಲಕ್ಷ್ಮಣ |
ಗವನತನು ತಾನಾಗಿ ಕಪಿಪುಂ |
ಗವಗೆ ತಲೆವಾಗೆರಗಿ ಕೈಗಳ ಕಟ್ಟಿ ನಿಂದಿರಲು ||
ಅವನಿಜಾತೆಯ ಕಥೆಯ ಕೇಳ |
ಲ್ತವಕಿಪುದು ಮನ್ಮನವು ಹನುಮನೆ |
ಲವಮುಮಂ ಬಿಡದೊರೆವುದೆಂದನು ರಾಮಚಂದ್ರಮನು || ೧೭ ||

ದೇವ ನಿನ್ನಾಜ್ಞಾನುವರ್ತಿಗ |
ಳಾವದ್ವೆಸಕ್ಕಂಜಿ ನಿಲುವೆವು |
ಪಾವಮಾನಿಯೆ ಪೋಗಿ ಬಾರೆಂದೆಂದ ವಚನವದು ||
ನಾವೆಯಾದುದು ತನಗೆ ತನ್ನಯ |
ಭಾವಭಕ್ತಿಯ ವಾಯುಬಲದಿಂ |
ದಾವನಧಿಯಂ ದಾಂಟಿ ಲಂಕಾದ್ವೀಪಕೈದಿದೆನು || ೧೮ ||

ಅಲ್ಲಿ ಮೆರೆವಾ ರಾಜಧಾನಿಯೊ |
ಳೆಲ್ಲುಮಿಲ್ಲದಶೋಕವೆಂದೆಂ |
ಬುಲ್ಲಸಿತವನದಲ್ಲಿ ಪರಶಿಂಶಪೆಯ ತಳದಲ್ಲಿ ||
ಖುಲ್ಲೆಯಸುರಿಯರಾರ್ಭಟೆಗೆ ಮನ |
ದಲ್ಲಿ ಬೆದರುತೆ ರಾಮರಾಮೆಂ |
ದಲ್ಲಿಗಲ್ಲಿಗೆ ಧೈರ್ಯಗೊಳ್ಳುತೆ ಸೊರಗಿ ಕೃಶೆಯಾಗಿ || ೧೯ ||

ಏಕವೇಣೀವಸನಧಾರಿಣಿ |
ಲೋಕಪೋಷಿಣಿ ಮಂಜುಭಾಷಿಣಿ |
ಶೋಕಿಸುತ್ತಿರೆ ನಿನ್ನ ರಾಣಿಯನು ಕಂಡು ನಮಿಸಿದೆನು ||
ಆಕಕುತ್ಸ್ಥಾನ್ವಯದ ಚರಿತೆಯ |
ನಾಕೆ ಮನಮೊಪ್ಪುವವೊಲೊರೆಯ |
ಲ್ಕೇಕಭಾವದೆ ಭಕ್ತನಿವನೆಂದೆನ್ನ ನಂಬಿದಳು || ೨೦ ||

ಭೇದವಿಲ್ಲದೆ ತನ್ನ ನುಡಿಗಳ |
ನಾದರಿಸಲೆಂದೆನುತೆ ನಿಮ್ಮಯ |
ಮೋದದುಂಗುರವೀಯಲೊಡನದನಿರಿಸಿ ಮಸ್ತಕದೆ ||
ಹಾದಯಾಸಾಗರನೆ ನಾಥನೆ |
ಹೋದಳಿವಳೆಂದೆನ್ನ ಮರೆಯದೆ |
ಕಾದಲನೆ ಕಾವಾಸೆಯುಳ್ಳವನಾಗಿ ವರ್ತಿಪೆಯು || ೨೧ ||

ಅರಸನೆಂತಿಹನೆತ್ತಲಿರ್ಪನು |
ಪರಮಕರುಣಾರ್ಣವನ ನೀನನು |
ಸರಿಸಿದಾ ಒಗೆಯೆಂತು ನಿನ್ನೊಳಗೆಂತು ಕೆಳೆತನವು ||
ಸ್ಮರಿಸುವನೆ ಪಾಪಿನಿಯನೆನ್ನುಮ |
ಸರಿದನೆಂತಾ ನಿರ್ಪ ತಾಣವ |
ಸೊರೆಯ ನೀನೆಂದೆನ್ನನವನಿಜೆ ಕೇಳ್ದಳತಿಮುದದೆ ||೨೨||

ಕೇಳಿದಾ ಪ್ರಶ್ನೆಗಳಿಗುತ್ತರ |
ವೇಳುತಿರ್ದೊಡೆ ತಾನು ಮಧ್ಯದೆ |
ತಾಳು ತಾಳೆಂದೆನ್ನ ತಡೆಯುತ್ತತ್ತು ಬೇಸತ್ತು ||
ಪೇಳು ಮುಂದೆನ್ನುತ್ತೆ ಯಾಚಿಸಿ |
ಪೇಳತೊಡಗಲ್ಮತ್ತೆ ತಡೆಯುತೆ |
ಗೋಳಿಡುತೆ ಮತ್ಪ್ರಾಣನಾಥಂಗೆಲ್ಲಿ ಸುಖಮೆನುತೆ ||೨೩||

ಉಗುವ ಕಣ್ಣೀರಿಂದಮೆನ್ನಯ |
ಮೊಗವನೋಡುತ್ತಾನು ಮುಗಿಯಿಸೆ |
ಮಗುಳೆ ನುಡಿ ಮತ್ಪ್ರಾಣಕಾಂತನ ಸವಿಯನುಡಿಗಳನು ||
ಬಗೆಯಿದಾನಂದಿಸಲಿ ಬಹುದಿನ |
ದಗಲಿಕೆಯ ಸಂತಾಪ ನೀಗಲಿ |
ಮುಗಿವೆ ಕೈಗಳನೆನ್ನುತ್ತಡಿಗಡಿಗೆನ್ನ ಯಾಚಿಸುತೆ ||೨೪||

ಏಸು ನಾಂ ಪೇಳಿದೊಡಮದನು |
ಲ್ಲಾಸದಿಂದಿನ್ನೈಸು ಪೇಳೆಂ |
ಬಾಸುಶೀಲೆಯ ನುಡಿಯ ನಿಲಿಸಲ್ಕಿಂತು ಪೇಳಿದೆನು ||
ದಾಶರಥಿ ತಾನೊಲಿದು ಸೀತಾ |
ವಾಸದೆಡೆಯನು ತಿಳಿದು ಹನುಮನೆ |
ಲೇಶಮುಂ ನೀಂ ಪೊತ್ತುಗಳೆಯದೆ ಬರ್ಪುದೆಂದೆನುತೆ ||೨೫||

ನೀಡಿಹನು ತನಗಾಜ್ಞೆಯನು ಕೃಪೆ |
ಮಾಡಿ ನೀವಿಂದೆನ್ನ ಕಳುಪಲು |
ಕೂಡಿಕೊಂಡವದಿರನು ಬರ್ಪೆನು ತಾಯೆ ಶೀಘ್ರದಲಿ ||
ಬೇಡ ನಿಮಗೀಚಿಂತೆಯಿನಿತುಂ |
ಬಾಡಬಾಗ್ನಿಸಮಾನಭೂಪಂ |
ಗೀಡೆ ಹುಲುರಕ್ಕಸರು ಸುಡುವನು ಖುಲ್ಲರನ್ವಯವ ||೨೬||

ಎನಿತು ಕಾಲವನಿಲ್ಲಿ ಕಳೆವೆನೊ |
ದನುಜರಾಯುವದನಿತು ಬಳೆವುದು |
ಮನುಕುಲೇಶ್ವರಿ ನಿಮ್ಮ ಬಿಡುಗಡೆಗನಿತು ತಡವಹುದು ||
ನನಗೆ ಕುರುಪನದೇನನಾನುಂ |
ಜನನಿ ನೀವಿಂದಿತ್ತಿರಾದೊಡೆ |
ಜನಪಗಿತ್ತದನಿತ್ತ ಬರಿಪೆನು ತಳುವದಾತನನು ||೨೭||

ಎಂದು ನುಡಿಯಲು ದೇವಿಯಾಲಿಸಿ |
ಯೆಂದಳೆನ್ನರಸಂಗೆ ಪೇಳ್ವುದು |
ಬಂಧನದೆ ಬಹುಕಷ್ಟವಾಂತಿಹಳೆಂಬ ಸಂಗತಿಯ ||
ತಂದು ಕೃಪೆಯನು ತನ್ನೊಳತಿಜವ |
ದಿಂದಮೈದಿಯೆ ಸೆರೆಯ ಬಿಡಿಸುವು |
ದೊಂದುತಿಂಗಳ ಗಡುಬವಿತ್ತಿಹನೆನಗೆ ರಾಕ್ಷಸನು ||೨೮||

ಮುಗಿಯೆ ಗಡುಬವು ಕೂಡೆಯೆನ್ನಸು |
ಮುಗಿದುದೆಂದೇ ಬಗೆದು ಮುನ್ನು |
ಜ್ಜುಗವನೆಲ್ಲವನುಳಿದಯೋಧ್ಯೆಗೆ ತೆರಳುವುದು ಮತವು ||
ಹಗೆಯತೀರಿಪ ಚಲವದಿರ್ದೊಡೆ |
ಹಗರಣವಿದಪ್ಪುದಕೆ ಮುನ್ನವೆ |
ತೆಗೆಸಿ ಸೆರೆಯನು ನನ್ನ ಸಲಹುವನಾಗು ನೀನೆಂದು ||೨೯||

ಒರೆದು ಬಳಿಕಮದೊರ್ಮೆ ವನದೊಳ |
ಗಿರುವಕಾಲದೆ ಚಿತ್ರಕೂಟದೆ |
ದುರುಳಕಾಕಾಸುರನು ಗೈದನ್ನೆಯದ ಕಜ್ಜವನು ||
ಅರುಹುವುದು ನೀನೆಂದು ಮಲಿನಾಂ |
ಬರದ ಸೆರಗಿನ ಕೊನೆಯ ಮಿರುಮಿರು |
ಮಿರುಪಚೂಡಾಮಣಿಯನಿತ್ತಳು ನೀಡು ಪತಿಗೆಂದು ||೩೦||

ದೇವ ನೀವಿದನೊಪ್ಪಿ ಕೊಳ್ವುದು |
ನಾವಕಾಶತೆಯೆಸಗಲಾಗದು |
ಭಾವಶುದ್ಧಿಯೊಳಿರ್ಪ ದೇವಿಯು ಸೆರೆಯ ಬಿಡಿಸುವುದು ||
ಆವುದಭಿಮತವದನು ಬೆಸಸುವು |
ದೀವನೇಚರನೊಡನೆ ಮಾಳ್ಪನು |
ಪಾವನಾತ್ಮಕ ಕರುಣೆಸೆಂದೆನುತಿತ್ತನಾಮಣಿಯ ||೩೧||

ಕೇಳಿದನು ರಾಘವನು ಹನುಮನು |
ಪೇಳಿದಾವೃತ್ತಾಂತವೆಲ್ಲವ |
ನಾಲಿಯಲಿ ನೀರ್ದುಂಬಿ ಮನದೊಳಗಳಲಿ ಬಲುಬಳಲಿ ||
ಹಾಲತಾಂಗಿಯೆ ಸತಿಯೆ ನಿನ್ನನು |
ಖೂಳರಾವಣನೆಳೆಯುತೊಯ್ವಾ |
ಕಾಲದಲಿ ನೀನೆನಿತು ಬೆದರ್ದೆ*ಯೊ ಎಂತು ಕೂಗಿದೆಯೊ ||೧೨||

ಅಲ್ಲಿ ಸನಿಹದೊಳಿರ್ದು ಬಿಡಿಸದೆ |
ಪಲ್ಲುಗಿರಿಯುತ್ತಿಲ್ಲಳಲ್ದೊಡೆ |
ಫುಲ್ಲಲೋಚನೆ ನಿನ್ನ ಕಷ್ಟಕ್ಕೊದವಿದೆನೆ ನಾನು ||
ವಲ್ಲಭೆಯ ಸಂಕಟದೆ ಮನವನು |
ಕಲ್ಲುಗೈದದಕೊದವದಾಬರಿ |
ನಲ್ಲನಿರಲೇಂ ಫಲವು ಫಡ ಸುಡಲೆನ್ನ ಜೀವಿತವ ||೧೩||

ಪತಿಯ ಕಷ್ಟದೊಳೈದೆ ಕುಗ್ಗುತೆ |
ಪತಿಯ ತುಷ್ಟಿಯೊಳವಮ ಹಿಗ್ಗುತೆ |
ಪತಿಯ ಹರಣವು ತೊಲಗಲೊಡನೇರ್ದುಗ್ರತರಚಿತಿಯ ||
ಮೃತಿಗೆ ತಾವೇ ತುತ್ತೆನಿಸಿ ಸ |
ದ್ಗತಿಯ ಪಡೆವಾ ಸತಿಯರೆಡರಿಂ |
ವ್ಯಥೆಗೊಳುತ್ತಿರೆ ಕಂಡುಪೇಕ್ಷಿಪ ಗಂಡರೇಕವರು ||೧೪||

ಹೃದಯವಲ್ಲಭೆ ನೀನು ರಾಮನ |
ಸುದತಿಯಾದುದಕಾಯ್ತೆ ಫಲವಿಂ |
ತಧಮನೆಂಬುದನರಿಯದೇಕೆನಗಾದೆಯೆಲೆನುಗುದೆ ||
ಎದೆಯೊಳಕ್ಕದನೆಂದು ಜನಕನು |
ಪದುಳದಿಂದೆನಗೀಯೆ ನಿನ್ನನು |
ಬೆದರಿಯಸುರಂಗಿತ್ತ ಬಳಿಕಿನ್ನೆತ್ತಣದಟೆನಗೆ ||೧೫||

ಎಂದು ತನ್ನನು ತಾನೆ ನಿಂದಿಸಿ |
ದಂದುಗಂಬಡುತಿರ್ಪ ಭೂಪನ |
ಸಂದು ಸುಗ್ರೀವಾದಿಮುಖ್ಯರು ತಿಳುಹಿ ಸಂತಪಡೆ ||
ತಂದು ಧೃತಿಯನು ಮನಕೆ ಹನುಮಂ |
ಗೆಂದನಾರಾಜೇಂದ್ರಚಂದ್ರನು |
ಮುಂದೆ ನಡೆಪಿದ ಕಾರ್ಯಭಾಗವನೊರೆಯನೀನೆಂದು ||೧೬||

ಪೇಳತೊಡಗಿದನಾಗಳನಿಲಜ |
ನಾಲತಾಂಗಿಯ ಭಯವ ತಗ್ಗಿಸಿ |
ಸಾಲಸಂತತಿಯಿಂದೆ ಶೋಭಿಪಶೋಕವನವದನು ||
ಪಾಳುಗೈದೊಡೆ ರಾವಣನ ಬ |
ಲ್ಲಾಳುಗಳು ಕೈಮಾಡಲಂತಕ |
ನಾಲಯಕ್ಕವರಿರನು ಕಳುಹಲು ಕೇಳಿಯಾ ಖಲನು ||೩೭||

ಶೂರನಾದಕ್ಷಯಕುಮಾರನ |
ನಾರು ಧುರಕೆಂದಟ್ಟಿದೊಡೆ ನಲ |
ವೇರಿ ಬಂದನು ಹೋರಿದನು ಬಳಿಸಾರಿದನು ಜವನ ||
ಧೀರನಸುರಾಧಿಪನ ಹಿರಿಯಕು |
ಮಾರನೈತಂದಾಗ ಕಣಕ |
ಲ್ತೋರಿ ಸತ್ವವನಜನ ಶರಕಾಂ ಸೋತವೋಲಿರಲು ||೩೮||

ಕೊಂಡು ಪೋದರು ಸಭೆಗೆ ನನ್ನನು |
ಕಂಡು ದನುಜೇಶ್ವರನನೆಂದೆನ |
ಖಂಡಲಕ್ಷ್ಮಯನಾದಿಮಾಯೆಯನವನಿತನುಜೆಯನು ||
ಕಂಡಮಿವಳೆಂದರಿಯದಾನು |
ದ್ದಂಡನದಿಂ ಕೆಣಕಿದೆನು ಭೂ |
ಮಂಡಲಾಧಿಪ ರಕ್ಷಿಸೆಂದಡಿಗೆರಗಿ ರಾಘವನ ||೩೯||

ಈಮಹೀಜೆಯನೊಪ್ಪಿಸಲು ಸು |
ಪ್ರೇಮದಿಂ ನಿನಗೀವನಾನು |
ತ್ರಾಮಪದವಿಯನಕ್ಕರಿಂ ಕೇಳೆನ್ನ ನುಡಿಗಳನು ||
ಕಾಮುಕತ್ವದೆ ಕೆಡಲುಬೇಡೆನೆ |
ಭೂಮಿ ನಡುಗುವ ತೆರದೆ ಗರ್ಜಿಸಿ |
ನೇಮವಿತ್ತನು ಕಪಿಯ ಕೊಲ್ಲುವುದೆಂದು ದನುಜರ್ಗೆ ||೪೦||

ಒತ್ತಿ ಪೇಳಲ್ಕಾವಿಭೀಷಣ |
ಮಿತ್ತು ತಪ್ಪಿತು ಬಳಿಕ ಬಾಲಕೆ |
ಹತ್ತಿಸಿದರಗ್ನಿಯನು ಪುರನೊಳಗಾಯ್ತು ಮೆರೆವಣಿಗೆ ||
ಕುತ್ತಿ ನೂಕಿದರೂರಿನಾಚೆಗೆ |
ಮತ್ತೆ ನಾನ್ನೈದತ್ತಲಗ್ನಿಯ |
ಪೊತ್ತಿಸುತ್ತಲ್ಲಿರ್ಪ ಮನೆಗಳನೆಲ್ಲ ದಹಿಸಿದೆನು ||೪೧||

ದುರುಳರಸುರರ್ಗೆಲ್ಲ ರಾಮು |
ಸ್ಮರಣೆಯಿರ್ಪಂತನಲಮುದ್ರೆಯ |
ನಿರದೆ ಹಾಕಿ ಬಳಿಕ್ಕೆ ದೇವಿಯ ಪದಕೆ ಬಿನ್ನವಿಸಿ ||
ಭರದೆ ನಿಮ್ಮನು ಕರೆದು ತಹೆನೆಂ |
ದೊರೆದು ಭಾಷೆಯನಿತ್ತು ಬಂದೆನು |
ಕರುಣಿ ಮನ್ನಿಪುದೆಂದು ರಾಮನ ಚರಣಕೆರಗಿದನು ||೪೨||

ಎರಗಿದಾತನ ಶಿರವನೆತ್ತುತೆ |
ಪರಸಿ ಹನುಮನೆ ಧರೆಯ ಸಿರಿಯನು |
ತೊರೆದ ರಾಮನು ನಿನ್ನಯುಪಕೃತಿಗೇನನಿತ್ತಪನು ||
ಇರುವುದೊಂದೀಪ್ರೀತಿಯೆಂಬಾ |
ಭರಣವಿದನಾಂ ನೂರೆಗೊಟ್ಟೆನು |
ಧರಿಸು ನೀನೆಂದರಸನಪ್ಪಿದನಂದು ಭಕ್ತನನು ||೪೩||

ಅರಳಿತಾತನ ಮಾನಸವು ರಘು |
ವರನು ಬೇರಾಂ ಬೇರೆನಿಪ ಪೊದ |
ಲರಿವು ಮಸುಳಿಸಿತೆರಕವಾಂತುದು ಮನವು ರಾಮನೊಳು ||
ಸುರರು ಸುಮಗಳ ಸರಿಯ ಸುರಿದರು |
ಸರಿಯೆ ಸನಕಾದಿಗಳು ಹನುಮಂ |
ಗರರೆ ಧನ್ಯನು ಧನ್ಯನೆಂದಂಬರದೆ ನುತಿಸಿದರು ||೪೪||

ಸುಂದರಾಂಗಿಯ ಸೆಲೆಯನರಿತೆನು |
ಬಂಧನವನಿನ್ನಿರದೆ ಬಿಡಿಪೆನು |
ಸಿಂಧುವೆಂಬಾಗೋಷ್ಪದಾಂಬುವ ಹೀರಿ ತೇಗುವೆನು |
ಸಂದಿತೆನ್ನಯ ಶೋಕಶಿಖಿಯಾ |
ಸಂದವಾಂತುದು ಮನವು ವಾನರ |
ವೃಂದದಧಿಪನ ಮೈತ್ರಿಗಿದು ಫಲವೆಂದನಾ ರಘುಜ ||೪೫||

ವಿದಿತಘನಕರ್ಣಾಟರಾಜ್ಯದ |
ಪದಕೊಡೆಯನಹ ಕೃಷ್ಣಭೂಪನ |
ಪದದ ಸೇವಕನೆನಿಪ ಚಿಕಲಿಂಗಾಖ್ಯಪಾರ್ಥಿವನು ||
ಪದೆದು ಸುಂದರಕಾಂಡವೆಂಬುದ |
ನಿದನು ನುಡಿದನು ಭಾಮಿನೀಷ |
ಟ್ಪದಿಯೊಳಿದು ರಾಜಿಸುಗೆ ಸುಜನರ್ಗೊಲವನೊಡರಿಸುತೆ ||೪೬||

ಸುಂದರಕಾಂಡಂ ಸಂಪೂರ್ಣಂ

ಯುದ್ಧಕಾಂಡ

ಸೂಚನೆ || ಒರೆದ ನೀತಿಯನಗ್ರಜನು ನೆರೆ |
ಜರೆಯೆ ಬಂದೆರಗಿದ ವಿಭೀಷಣ |
ಗರಸರಾಘವನೆಸಗಿದನು ಲಂಕಾಭಿಷೇಕವನು ||

ಕೇಳಿದನು ರಘುಪತಿಯು ಹನುಮನೆ |
ಪೇಳು ವಿಸ್ತರದಿಂದೆ ಲಂಕಾ |
ಪಾಲಕನ ಭುಜದಳವನಾತನ ಸುತರ ಸತ್ವವನು ||
ಆಳುವೇರಿಗಳೆಂತು ಕಾವಲಿ |
ನಾಳುಗಳ ಬಲವೆಂತು ಮೇಣವ |
ರಾಳುತನದನುವೆಂತಿವೆಲ್ಲವನೊರೆವುದೆನಗೆಂದು ||೧||

ಅರಸನಿಂತೆನೆ ಜೀಯ ಬೆಸನೆಂ |
ದರಿಕೆಗೈದನು ಪಾವಮಾನಿಯು |
ಶರಧಿಮಧ್ಯದೊಳಾತ್ರಿಕೂಟವೆನಿಪ್ಪ ನಾಮದಲಿ ||
ಮೆರೆವ ಗಿರಿಯಿಹುದದರ ನೆತ್ತಿಯೊ |
ಳರಿಭಯಂಕರಮಧಿಕವಿಸ್ತರ |
ಪರಿವಳಯದೊಳು ತೋರ್ಪ ಕೋಟೆಯದೊಂದು ರಂಜಿಪುದು ||೨||

ಅದರಮಧ್ಯದೊಳಿಹುದು ಲಂಕೆಯು |
ತ್ರಿದಶನಾಯಕದತ್ತಶಂಕೆಯು |
ಮದಿಸಿದಸುರರ ಬಲದೆರಂಕೆಯು ಕಾಪು ತನಗೆನಿಸೆ ||
ವಿದಿತವೇದಾಧ್ಯಯನ ಶಂಕರ |
ಪದಸರೋರುಹಭಜನವಾಪುರ |
ಸದನನಿಚಯದೆ ತುಂಬಿತುಳುಕುವುದಿರುಳುಪಗಲೊಳಗೆ ||೩||

ಸಾಧುವೃತ್ತಿಯನಿಂತು ತೋರುತೆ |
ಕ್ರೋಧಮದಗಳನೆದೆಯೊಳಾನುತೆ |
ಬಾಧಿಸುತ್ತಿಹರಿರದೆ ಪರಿಪರಿಯಿಂದೆಸಜ್ಜನರ ||
ಈದುರಾಚಾರಗಳ ದೆಸೆಯಿಂ |
ದಾದನುಜರೆಮಗಿಂದು ಸಾಧ್ಯರು |
ಸಾಧುವೃತ್ತಿಯೆ ಸಹಜವೆನಿಸಿರಲೆಮ್ಮ ಹವಣೇನು ||೪||

ಕಡುಭಯಂಕರರೆನಿಸಿದಸುರರು |
ದೃಢಪರಾಕ್ರಮದೃಪ್ತರನಿಶವು |
ಪಿಡಿದ ಮುಷ್ಟಿಯ ಗದೆಯ ಜಡಿಯುತೆ ಮಸಕದಿಂದಿಹರು ||
ಒಡೆಯನವರಿಗೆ ರಾವಣನು ದ |
ಕ್ಕಡಿಗನಿವನೆನಲೇನು ಚೋದ್ಯವೆ |
ನುಡಿಗೆ ನಡುಗುವುದಿಳೆಯು ಪೌರುಷಕಿಲ್ಲ ಪಾಸಟಿಯು ||೫||

ಆರು ಸರಿ ರಾವಣನ ವಿಭವ |
ಕ್ಕಾರಪಡಿಯಿಡಬಹುದು ಸತ್ವ |
ಕ್ಕಾರು ಮಾರ್ಮಲೆವವರು ಸಮರಕ್ಕೀತನಿದಿರಿನಲಿ ||
ಸಾರಿ ಕೆಣಕುವರಿಲ್ಲವಾಜ್ಞೆಯ |
ಮೀರಿ ಬದುಕುವರಿಲ್ಲವಮೃತವ |
ಪೀರಿದಮರರಸುರನಿಕರವಿಗಂಜುತೆ ನಿಲ್ಲದಿದಿರಿನಲಿ ||೬||

ಅನುಜರಿವನಿಗೆ ವರವಿಭೀಷಣ |
ಘನಶರೀರದ ಕುಂಭಕರ್ಣನು |
ಮನುವರದೊಳಿವರಗ್ರಜನ್ಮನ ಸರಿಗೆ ತೂಗುವರು ||
ತನುಜರಿರ್ಪರನೇಕರವರೊಳ |
ಗನಿಮಿಷರ ಗೆಲ್ದಾತ ಸುಭಟಾ |
ಗ್ರಣಿಯು ಪೆಸರವಗಿಂದ್ರಜಿತ್ತುವು ಪಿರಿಯನೆನಿಸಿಹನು ||೭||

ಈಸು ಬಲ್ಲಿದರೊಡನೆ ಸೆಣಸುವ |
ವಾಸಿಯೆಮಗೇಕೆಂದು ಚಿತ್ತಕೆ |
ಬೇಸರಾನದೆ ಸೇವಕಂಗಿದನೆಲ್ಲ ವಹಿಸಿದೊಡೆ ||
ಗಾಸಿವಡೆಯದೆ ಕಡಲಸಿಂಗಿಸಿ |
ಭೂಸಮವ ಗೈದಸುರಪುರವನು |
ಪೇಸಬಡ್ತಿಯೊಳೀಗಳಸುವನು ಕೊಳ್ವೆನಾಖಿಳರ ||೮||

ಎಂದ ಮಾರುತನಂದನನ ನುಡಿ |
ಗಂದು ರಘುನಂದನನು ಮೆಚ್ಚು |
ತ್ತೆಂದನಾ ರವಿನಂದನಾದ್ಯರಿಗಿನ್ನು ತಡವೇಕೆ ||
ಮುಂದಿನಾಸನ್ನಾಹವೆಲ್ಲವ |
ನೊಂದುಗೂಡಿಸಿ ಬೇಗ ತೆರಳುವ |
ದಿಂದು ಸಮುಚಿತವೆನುಗೆ ನೀಡುವುದಾಜ್ಞೆಯನು ಪಡೆಗೆ ||೯||

ಏಳಿರೈ ನೀವಂಗದಾದಿಗ |
ಳೇಳಿರೈ ನಳನೀಲರಿರ ಮು |
ನ್ನೇಳಿರೈ ಜಾಂಬವನೆ ಕುಮುದನೆ ಗಜಸುಷೇಣರಿರಾ ||
ಏಳಿರೈ ದಧಿಮುಖಗವಾಕ್ಷರೆ |
ವೇಳೆಯಲ್ಲವೆ ಗವಯ ಶತಬಲಿ |
ಕೀಳುಬಲದವರಲ್ಲಲಾ ನೀವೇಕೆ ತಡೆಯುವಿರಿ ||೧೦||

ಕೊಂದು ಮಂದೇಹರನು ವಿಜಯವ |
ನೊಂದಿ ಸೂರ್ಯನು ಗಗನಮಧ್ಯಕೆ |
ಬಂದೊಡಭಿಜಿಲ್ಲಗ್ನವೆಂಬರು ಶತ್ರುನಿಗ್ರಹಕೆ ||
ಮುಂದೆ ಪಯಣವ ಬೆಳಸಲದರೊಳ |
ಗೊಂದಬಹುದೈ ಜಯವ ನೀವದ |
ರಿಂದಮೀಗಳೆ ಜೈತ್ರಯಾತ್ರೆಗೆ ಹೊರಡುವುದು ಮತವು ||೧೧||

ಪ್ರಾಣಸಖಸುಗ್ರೀವಪಯಣ |
ಕ್ಕಾಣತಿಯನಿಂದಿತ್ತು ತೆರಳ |
ಲ್ಕಾಣೆಯಿಟ್ಟವೊಲರಿಯ ಜಯಿಸುವೆ ನೀನು ಸತ್ಯವಿದು ||
ತ್ರಾಣಿಯಹ ನೀಲಂಗೆ ನಿನ್ನಯ |
ಸೇನೆಯೊಡೆತನವಿತ್ತು ಮುಂಗಡೆ |
ಜಾಣೆನೆಯ್ದುವುದೆನುತೆ ಥಟ್ಟನೆ ಕಟ್ಟನೀನೆಸಗು ||೧೨||

ತಕ್ಕ ಕಪಿನಾಯಕರಿಗೆಮ್ಮಯ |
ಪಕ್ಕದಾರೈಕೆಯನು ನೇಮಿಪು |
ದಕ್ಕತುಳಬಲಜಾಂಬವಂತನ ನಿಲಿಸು ಪಿಂದೆಸೆಗೆ ||
ರಕ್ಕೆಯಂದದೊಳೆನ್ನ ರಕ್ಷಣೆ |
ಗೊಕ್ಕಡೆಯೊಳನುಜಾತನಿರ್ಪನು |
ಮಿಕ್ಕಕಡೆಯೊಂದರಲಿ ನೀನಿಹುದಕ್ಕರೆಯು ತನಗೆ ||೧೩||

ತೆರಳಲಿನ್ನೇನೆಂದು ರಾಘವ |
ನೊರೆದೊಡೊಡನೆಯೆ ಕಪಿಗಳರಸನ |
ಬೆರಲ ಸನ್ನೆಯೊಳಮಿತಕೋಟಿಯ ವಾನರರ ಪಡೆಯು ||
ಧರಣಿಯೀದುದೊ ಮೋಹರವನಿದ |
ನರರೆ ತಾನಿನ್ನಾವನಿದಿರಿಸಿ |
ಮುರಳಬಲ್ಲವನೆಂಬವೋಲೊಗ್ಗಾಯ್ತು ಪೊರಮಡಲು ||೧೪||

ಕಂಡಿದನು ದಾಶರಥಿ ತಾಂ ಕೋ |
ದಂಡವನು ಜೀವೊಡೆಯಲಾ ಭುವ |
ನಾಂಡವೆಲ್ಲವ ತುಂಬಿ ಕಿವುಡೇಳಿಸಿತು ತನ್ನಿಸದ ||
ಚಂಡದನುಜರ ಗಂಡ ರಿಪುಭೇ |
ರುಂಡ ರಾಮನಖಂಡಲಕ್ಷ್ಮಿಯ |
ಪುಂಡರೀಕಾಂಬಕೆಯ ತಹೆನೆಂದಾರ್ದ ಭಾಷೆವೊಲು ||೧೫||

ಸಾರಲೀವಾರ್ತೆಯನು ಲೋಕಕೆ |
ಭೂರಿಭೇರೀಧ್ವನಿಯು ಸಾಲದು |
ನಾರಿಯರ ಮುಖದಿಂದೆ ಪೊರಮಡೆ ಹರಹಿಕೊಂಡವುದು ||
ದಾರಿಯಿದು ಸರಿಯೆಂದು ಚಾಪದ |
ನಾರಿಯಿಂ ನುಡಿಯಿಸಿದನೋ ರಘು |
ವೀರನೆಂಬಂತೊಗೆವ ನಿನದವು ಕೇಳಿತಮರರಿಗೆ ||೧೬||

ಕೇಳಿದೊಡನೆಯೆ ಸುರರು ನಭದಲಿ |
ಮೇಳವಿಸಿದರು ಹರಿಯು ರಾಕ್ಷಸ |
ಮೌಳಿಯನು ತರಿವುದನು ನೋಡುವೆವೆಂಬ ಸಂಭ್ರಮದೆ ||
ತಾಳಿದುತ್ಸವದಿಂದೆ ಭುಜಬಲ |
ಶಾಲಿಗಳ್ ಶ್ರೀರಾಮಲಕ್ಷ್ಮಣ |
ರಾಲಲಿತಭುಜಶಿರದೊಳೆಸೆದರು ಪವನಜಾಂಗದರ ||೧೭||

ನೀಲನಬ್ಬರವಖಿಲಸೇನಾ |
ಜಾಲದುಬ್ಬರ ಸಕಲಲೋಕವ |
ಘೀಳಿಸಿತು ಸುಗ್ರೀವನಾಳುಗಳುಬ್ಬಿಸಿಂ ನಡೆಯೆ ||
ಧೂಳು ಮುಸುಕಿತು ಪೊಡವಿ ನವೆದುದು |
ಶೈಲವದಿರಿತ್ತಬುಧಿ ಕಲಕಿತು |
ಕಾಲನೂರೊಳಗಿರದೆ ಪೇಳ್ದನು ಕಾಲ್ಗೆ ಬುದ್ಧಿಯನು ||೧೮||

ಘೋರರಿಪುಸಂಹಾರ ಭುವನೋ |
ದ್ಧಾರ ಪಗೆವರ ಸೂರೆಗಾರ ಪು |
ರಾರಿಸಮಬಲ ಮೇದಿನೀಶ್ವರ ಬಾಳು ರಘುವೀರ ||
ವಾರಿಜೋದ್ಭವಮುಖ್ಯವಿಬುಧರೊ |
ಳಾರ ಪಡಿಯಿಡಬಹುದು ನಿನ್ನಯ |
ಭೂರಿಭುಜಬಲಕರರೆ ಬಾಳೆಂದಾಲಿದನು ಹನುಮ ||೧೯||

ಆವದಿಕ್ಕಿನೊಳಿಲ್ಲ ಕಪಿವರ |
ರಾವತರುಗಳೊಳಿಲ್ಲ ವಾನರ |
ರಾವಫಲಗಳನುಣ್ಣದುಳಿದರು ಬಾಲದಣ್ಣಗಳು ||
ಆವಗಿರಿಗಳನೇರಿ ಬಳಸರ |
ದಾವನದಿಗಳೊಳೀಸರೆಂದೆನೆ |
ದೇವರಾಘವನುಬ್ಬಿ ನಲಿದನು ನೋಡಿ ಕಪಿಬಲವ ||೨೦||

ವಿಹಿತನೀಲವಲವಿಕೆ ಬಲದೊಳ |
ಗಹಿತಸೇನೆಯ ಗೆಲ್ವ ಭಟರಿಂಗೆ |
ಸುಹಿತವಾಗಿದೆ ಮನಕೆ ನಿಸ್ಸಂಶಯವು ರಿಪುವಧೆಯು ||
ದಹಿಸಿಪೋಪುದು ದೈತ್ಯಸಂತತಿ |
ಮಿಹಿರವಂಶದ ಜಸವು ಪಸರಿವು ।
ದಹಹ ಜೀವೇಶ್ವರಿಯನೀಕ್ಷಿಪೆನೆಂಬ ಸಂಭ್ರಮದೆ ||೨೧||

ಮುಂದೆ ಪಯಣವ ಬೆಳಸಿ ಕಪಿಗಳ |
ಸಂದಣಿಯ ಕೂಡುತ್ತ ನಿಲ್ಲದೆ |
ಬಂದು ಮೆರೆವ ಮಹೇಂದ್ರಪರ್ವತದಗ್ರ ಭಾಗದಲಿ ||
ನಿಂದು ನಾನಾದಿಶೆಯನೀಕ್ಷಿಸು |
ತೊಂದುತಾನಂದವನು ದಕ್ಷಿಣ |
ಕಂದು ತಿರುಗಿನೃಪಾಲನಂಜಿದನೇನು ಹದನೆಂದು ||೨೨||

ಸಿರಿಯನೆನ್ನಯ ಮುದ್ದಿನಣುಗಿಯ |
ನಿರದೆ ಕೈವಿಡಿದಾಳಲಾರದೆ |
ಪೆರರಿಗೊಪ್ಪಿಸಿ ಬರ್ಪ ಹರಿಗಿದು ತಕ್ಕುದೆಂದೆಣಿಸಿ ||
ಕೆರಳಿ ಕರಗಳೊಳಪ್ಪಳಿಪವೋ |
ಲ್ತುರತರದೆ ನೆಗೆದೆಳ್ದು ಬೀಳ್ವಾ |
ತೆರೆಗಳಿಂ ಭಯಗೊಳಿಪ ಸಾಗರಮೆಸೆದುದಿದಿರಿನಲಿ ||೨೩||

ಏನು ಹದನಿದಕಕಟ ತನ್ನಾ |
ಮಾನಿನೀಮಣಿದರ್ಶನೋತ್ಸವ |
ಕೇನು ಭಂಗವೊ ಕಡಲ ದೆಸೆಯಿಂದೇನನೆಸಗುವೆನು ||
ಕಾಣದೆನಗಿನ್ನಿದಕುಪಾಯವು |
ವಾನರಾಧೀಶ್ವರನೆ ನೀನಿದ |
ಕೇನನೆಂಬೈ ಮುಂದೆ ಪಯಣವ ನಿಲಿಸು ನೀನೆಂದು ||೨೪||

ದೇವನಾಣತಿಯಿಾಯಲಹುದೆಂ |
ದಾವನೇಚರರರಸು ನೀಲಂ |
ಗೀವಿಧಾನವನೆಲ್ಲ ಬೆಸಸಿದೊಡವನು ಸಾರಿಸುತೆ ||
ಆವನಧಿತಟದೊಳಗೆ ಪಡೆಗೆ |
ಲ್ಲಾವಭೀತಿಯುಮೆನ್ನಲಿಳಿಯಿಸಿ |
ಕಾವಲಿಗೆ ಮೈಂದವನ ನಿಲ್ಲಿಸಿಯಿಂತು ಸುಖದಿನಿರೆ ||೨೫||

ಸುದ್ದಿಯಿದು ತಾನೊಡನೆ ಪರ್ಬಿ |
ತ್ತದ್ದಿದನು ಭಯಸಾಗರದೆ ತ |
ನ್ನುದ್ದುರುಟತನದಿಂದಮಿಂತಾಯ್ತೆನುತೆ ರಾವಣನು ||
ಬುದ್ಧಿಯುತರನಮಾತ್ಯಮುಖ್ಯರ |
ನಿದ್ದವೊಲೆ ಕರೆತರಿಸಿ ನಡೆದಾ |
ವಿದ್ಯಮಾನವನರಿಪಿ ಮುಂದಿದಕೇನನುಸಿರುವಿರಿ ||೨೬||

ಅಂದು ಕಪಿಯೊಂದಿಲ್ಲಿಗಿರದೈ |
ತಂದು ನಮ್ಮಯಶೋಕನಂದನ |
ದಂದಗಿಡಿಸುತೆ ಸೀತೆಯನು ಕಂಡುತ್ಸವದೆ ಪೆರ್ಚಿ ||
ನಂದನನನಕ್ಷಯಕುಮಾರನ |
ಕೊಂದು ದಾಳಿಟ್ಟೆಮ್ಮ ನಗರಿಯ |
ಮಂದಿರಂಗಳನಗ್ನಿಗಾಹುತಿಯಿತ್ತು ಜಾರಿದುದು ||೨೭||

ಇಂದು ರಾಘವನಾಮರುತ್ಸುತ |
ನಂದದೆನಿತೋಕೋಟಿವಾನರ |
ವೃಂದದೊಡನೈತಂದು ಕಡಲಾಚೆಯಲಿ ದಂಡಿಳುಹಿ ||
ಮುಂದೆ ಜಲಧಿಯ ದಾಂಟಿ ಲಂಕೆಗೆ |
ಬಂದು ಮುತ್ತಿಗೆಯಿಂದೆ ನಮ್ಮನು |
ಬಂಧನಕ್ಕೊಳಪಡಿಸಿ ಕೊಲ್ಲಲ್ಕೆಂದು ಕಾದಿಹನು ||೨೮||

ಏನನೆಂಬಿರುಪಾಯವಿದಕೆ |
ನ್ನೇನು ರಾಘವಚಂಡಮಾರುತ |
ವೇನನೆಸಗದು ಮುಳಿದು ತೀಡಿದೊಡಸುರರುಳಿಯುವರೇ ||
ಆನಲಮ್ಮುವರುಂಟೆ ಜಲಧಿ |
ತ್ರಾಣವೇನಹುದಾತನಿದಿರೊಳ |
ಸೂನಶಕ್ತಿಂಗಂಜಿ ಬಟ್ಟೆಯ ಬಿಟ್ಟುಕುಡದಿಹುದೆ ||೨೯||

ವಿಷಮಕಾರ್ಯವಿದೊದವಿತುದು ನ |
ಮ್ಮ ಸುರಬಲವೆರಸಿರ್ಪ ಲಂಕೆಯ |
ಜಸವು ಕುಂದದ ತೆರದೆ ಕಾವ್ರದು ನಿಮಗೆ ಸೇರಿಹುದು ||
ಅಸಮವೀರರಭಿಜ್ಞರಿದಕೀ |
ಗುಸಿರಿಮಾಲೋಚನೆಯನೆನ್ನುತೆ |
ಬೆಸಸಲದಕಂದಾ ಪ್ರಹಸ್ತನು ನುಡಿದನೀತೆರನ ||೩೦||

ಜೀಯ ನೋಂಕಿತಿದೇಕೆ ಭೀತಿಯ |
ಜೇಯುನಲ್ಲವೆ ನೀನು ಮನಕಿಂ |
ತಾಯಸಂಗುಡಲಾರ್ಪರೇ ವಾನರರುಮಾನರರು ||
ಸಾಯಕದೊಳತಿನಿಪುಣರದ್ಭುತ |
ಕಾಯುಬಲರೆಮ್ಮಲ್ಲನೇಕರ |
ಪಾಯವರಿಯದ ಶೂರರಿರಲಿಂತೇಕೆ ಚಿಂತಿಪುದು ||೩೧||

ಕಳುಹೆ ನೀನಿವರೊಳಗದೊರ್ವನ |
ನೆಳೆದು ತರ್ಪನು ನಿನ್ನ ಬಳಿಗಾ |
ಹುಲುನರೇಂದ್ರರನವನು ವಾನರಸೇನೆಯೊಡನೀಗ ||
ಬಳಿಕ ನಿನ್ನಯ ಮನಕೆ ತೋರ್ದಂ |
ತುಳುಹು ಮೇಣ್ಕೊಲು ದಿವ್ಯಚಿತ್ತದೊ |
ಳಳುಕಲೇಕೀಯಲ್ಪಕಾರ್ಯಕ್ಕೆಂದನಾಸಚಿವ ||೩೨||

ದೇವ ನಿನಗಿದಿರುಂಟೆ ಲೋಕದೆ |
ದೇವಕಿನ್ನರನಾಗಯಕ್ಷರು |
ಜೀವಭಯದಿಂ ನಿನ್ನ ನಾಮವನೆತ್ತದಡಗಿಹರು ||
ಭೂವಿನುತವಹ ಶಿವನ ಗಿರಿಯನ |
ದಾವನೆತ್ತಿದನೆತ್ತಿದಾತನ |
ದಾವನೈ ತಾನಾಕುಬೇರನ ಗೆಲ್ದ ಪಟುಭಟನು ||೩೩||

ಈವಿಚಾರವನೆಲ್ಲವನು ಮರೆ |
ದೀವನೇಚರಬಲಕೆ ಬೆದರುತೆ |
ಕೋವಿದನೆ ನೀನಿಂತು ನುಡಿವುದೆ ತೆಗೆಯದಂತಿರಲಿ ||
ನಾವಕಾಶತೆಗೆಯ್ಯದೆನಗಿಂ |
ದೀವಿರೋಧಿಗಳಸುವ ತೆಗೆಯಲು |
ದೇವ ನೀಂ ಬೆಸೆನಿತ್ತೆಯಾದೊಡೆ ತೋರ್ಪೆನತಿಶಯವ ||೩೪||

ಮರೆತೆಯೇನೈಯಿಂದ್ರಜಿತ್ತುವು |
ಸುರರ ಸೇನಾಂಬುಧಿಯ ಕಲಕಿಂ |
ದಿರಸನೀಲಂಕೆಯಲಿ ಸೆರೆಯೊಳಗಿಟ್ಟ ಸಂಗತಿಯ ||
ಕರವ ಜೋಡಿಸುತಜನು ಬೇಡಲು |
ಕರುಣದಿಂ ಬಿಡುಗಡೆಯ ಗೈಯನೆ |
ಸುರಪಜಿತ್ತುಗೆ ರಾಮನುಂ ಕಪಿಬಲಮುಮೇಸಿದಿರೆ ||೨೫||

ಕೇಳುತಿರ್ದನು ಸಚಿವಮುಖ್ಯನ |
ಕಾಲಕೊಪ್ಪುವುದೆಸಿಪ ನುಡಿಗಳ |
ನಾಳಿದನ ಮನಮೆಚ್ಚಲನೃತವನೊರೆವನಿವನೆಂದು ||
ತಾಳಿದನು ರೋಷವನು ಮನದೊಳ |
ಗಾಳಿನಂದವನರಿಯದಾಡುವ |
ಬೀಳುನುಡಿಗಳಿವೇತಕೆಂದನು ವರವಿಭೀಷಣನು ||೨೬||

ಅಣ್ಣ ನಿನ್ನಿದಿರಿನಲಿ ಸುಮ್ಮನೆ |
ಬಣ್ಣಗಟ್ಟಿದ ಮಾತನಾಡುವ |
ರನ್ನು ನಂಬಿಯೆ ನಿನ್ನ ಬುದ್ಧಿಯ ನೂಕಿಕಳೆಯದಿರು ||
ಉನ್ನತಾನ್ವಯದಲ್ಲಿ ನೀನು |
ತ್ಪನ್ನನಾಗಿ ಸಮಸ್ತಶಾಸ್ತ್ರಗ |
ಳನ್ನು ತಿಳಿದೀಪೊಳ್ಳುನುಡಿಗಳಿಗೀವುದೇನೆಡೆಯ || ೭||

ಹತ್ತಿರಿರ್ಪವರೆಲ್ಲ ನಿನ್ನಯ |
ಚಿತ್ತದನುವೆಂತೆಂಬುದನು ತಿಳಿ |
ದೊತ್ತುವರು ತಾವದನೆ ಒಪ್ಪಿಗೆಯಹುದು ಸರಿಯೆನುತ ||
ಸತ್ವವಿಹುದಿವರುಕ್ತಿಯೊಳಗೇ |
ದೊತ್ತಿನೂಕಿ ವಿವೇಕವನು ನೀಂ |
ಮಿತ್ತುವಿಗೆ ಬಾಯ್ತುದ್ದಿತ್ತಾಗದಿರಣ್ಣ ಸಾರಿದೆನು ||೨೮||

ಏಸೊ ದೇವಾಸುರರ ಪಡೆಯಂ |
ಜೈಸಿಯವರರಸಿಯರ ಕೂಡಿದ |
ಸಾಸಿ ನೀನಿಂದೇಕೆ ರಾಮನ ಪಟ್ಟಮಹಿಷಿಯನು ||
ಮೋಸವೆಸಗಿಯೆ ತಂದೆ ನಿನಗಾ |
ಭಾಸುರಾರ್ಕಕುಲೇಂದ್ರನಿದಿರಿಸೆ |
ಗಾಸಿಯಹಸುಪೆನೆಂಬ ಭಯವಲೆ ಮುಚ್ಚುಮರೆಯೇನು ||೨೯||

ಇಂತು ಹೃದಯದೊಳಳುಕು ನೆಲಸಿರ |
ಲೆಂತು ಜಯವಹುದರಸ ಲಕ್ಷ್ಮೀ |
ಕಾಂತನಾತನು ನಿನಗೆ ಸಿಕ್ಕುವನೆಂದು ಬಗೆಯದಿರು ||
ಅಂತಕೋಪಮುಖರನು ಸೆಣಸು |
ತ್ತಂತು ದುರ್ಗತಿವಡೆದನೆಂಬುದ |
ನಿಂತು ಕಾಣದನಂತೆ ಕೆಣಕಿಯೆ ಕಿಡುವುದನುಚಿತವು ||೪೦||

ನೂರುಯೋಜನದಬುದಿ ಗೋಷ್ಪದ |
ವಾರಿಯಾಯ್ತೆನಲದನು ಲಂಘಿಸಿ |
ಭೂರಿಭಯವನು ಬೀರಿ ರಾಕ್ಷಸಕುಲವ ತಾಂ ಸವರಿ ||
ಊರಿಗಗ್ನಿಯನೂರಿ ಬೇಯಿಸಿ |
ಕಾರಿಯವ ತನ್ನದನು ಸಾಧಿಸಿ |
ವೀರರಾಘವನೆಡೆಗೆ ಮರಳನೆ ಹನುಮ ಘನಮಹಿಮ ||೪೧||

ದೂತಕಾರ್ಯಕ್ಕೈದಿದಾತನೊ |
ಳೀತೆರದ ಕಟ್ಟದಟು ನೆಲಸಿರ |
ಲೀತನಿಗೆ ಮೇಲ್ಪಟ್ಟಪದವಿಯೊಳಿರ್ಪರದಟೆನಿತೊ ||
ಆತಗಳ ಕಟ್ಟಾಳ್ತನ ಭಾಸ್ಕರ |
ಜಾತನನಂಗದನ ಬಲವಿ |
ನ್ನೇತೆರನೊ ನಾವಿವರಿಗೀಡಲ್ಲೆನ್ನ ದುಡುಕದಿರು ||೪೨||

ನಿನ್ನ ಭಯದಿಂ ಕೆಣಕಿ ಹನುಮನ |
ಮುನ್ನ ಕೆಲಬರು ಮಡಿದರಲ್ಲದೆ |
ಮನ್ನಣೆಯ ನಿನ್ನೀಭಟರ್ಕಳ ಕಂಡರಾರಂದು ||
ತನ್ನ ದೇಶವು ತನ್ನ ದೊರೆಯೆಂ |
ದೆನ್ನುವಭಿಮಾನಿಯನೆ ಪಡೆಯದ |
ನಿನ್ನ ರಾಜ್ಯವು ನಿಲುವ ಬಗೆಯೆಂತಿದನು ಚಿಂತಿಸೆಯ ||೪೩||

ಕಪಿಗಳೇ ನಮಗಧಿಕರೆಂದೆನೆ |
ತಪನಕುಲಜರ ರಾಮಲಕ್ಷ್ಮಣ |
ರಪರಿಮಿತಶೌರ್ಯಾಗ್ನಿಗಾಹುತಿಯಾಗದುಳಿಯುವೆವೆ ||
ಚಪಲಮತಿಯನು ನೀಗಿ ನನ್ನೊಳು |
ಕುಪಿತನಾಗದೆ ರಾಮಚಂದ್ರನ |
ಕೃಪೆಯ ಸಾಧಿಪುಪಾಯವರಿವುದು ನಿನಗೆ ನೀತಿಯಿದು ||೪೪||

ಅಣ್ಣ ನೀನೇನಜ್ಞನೇ ತಾ |
ನುಣ್ಣಬಾರದ ಕೂಳಿದೆನ್ನುತೆ |
ನನ್ನು ತಾಂಗಿಯ ಕೂಡಲಳುಕುವೆ ಸತಿಯ ಜಾನಕಿಯ ||
ಮುನ್ನ ನೀಂ ಪಿಡಿತಂದ ಸುದತಿಯ |
ರನ್ನು ಸೇರಲ್ಕಿಂತು ಬಗೆದೆಯ |
ಭಿನ್ನವಾದುದು ಭಾವವಿವಳೊಳಗೇತಕೆಂದರಿಯಾ ||೪೫||

ಆದಿನಾರಾಯಣನೆ ರಾಮನು |
ಮೇದಿನೀಸುತೆಯಾದಿಲಕ್ಷ್ಮಿಯು |
ಭೇದಭಾವನೆಗೆಡೆಯದೆಲ್ಲಹುದಾದಿಮಾತೆಯೊಳು ||
ಈದುರಾಗತಮತಿಯನುಳಿದಿ |
ನ್ನಾದಯಾಂಬುಧಿರಾಮಚಂದ್ರನ |
ಪಾದಪದ್ಮಕ್ಕೆರಗಿಯೊಪ್ಪಿಸಿ ಸೀತೆಯನು ಬದುಕು ||೪೬||

ತಾಕಿದೊಡನೆಯೆ ನುಡಿಯು ಕಿವಿಗೆ ತ |
ಲಾಕೆ ನಷ್ಟಂತಾಗಲಾಖಿಳ |
ಲೋಕಕಂಟಕರಾವಣೇಶನು ಖತಿಯನೊಡನಾಂತು ||
ಸಾಕುಮಾಡೆಲೊ ತಮ್ಮ ನಮ್ಮನು |
ನೂಕಿ ಕಳೆವೀಕೀಳುನುಡಿಗಳ |
ನೇಕೆ ಗಳಹುವೆ ತೋರ್ದ ಪರಿಯೊಳಗೆಂದು ಗರ್ಜಿಸುತೆ ||೪೭||

ಸುತ್ತ ನೋಡಲ್ದನುಜರರಸನು |
ಕತ್ತಿಯಾಳುಗಳೊಡನೆ ನಿಲ್ಲುತೆ |
ಚಿತ್ತದನುವೇನಾಜ್ಞೆಯೇನದರಂತೆ ನಡೆಸುವೆವು ||
ಮಿತ್ತುಸಮನಿಸಿದಾತಗಲ್ಲದೆ |
ಮತ್ತದಾವಂಗೀಪರಿಯ ನುಡಿ |
ಯುತ್ತರವ ನೀನಿತ್ತೊಡಿವನಸುಗೊಳ್ವೆವೀಗಳೆನೆ ||೪೮||

ತಮ್ಮ ಬಾರೈ ಕುಂಭಕರ್ಣನೆ |
ನಮ್ಮಳವನೀನರಿಯದವನೇ |
ನೊನ್ನು ಮುಳಿದಾಂ ನೆಣಸೆ ನಿಲುವರೆ ಶ್ರೀರಾಮಲಕ್ಷ್ಮಣರು ||
ನಮ್ಮತವೆ ನಿನಗೀವಿಭೀಷಣ |
ನುಮ್ಮದದೆ ನುಡಿವುಕ್ತಿ ರಿಪುವನು |
ನೆಮ್ಮಿ ಬದುಕೆಂದೆಮಗೆ ಪೇಳ್ದಪನೀಗಳೊಕ್ಕಣೆಯ ||೪೯||

ವಿಹಿತವಾವುದು ನಿನ್ನ ಮನದೊಳ |
ಗಹಿತರನು ಶರಣೆಂಬುದೋ ವಿ |
ಗ್ರಹದೆ ನಿಗ್ರಹಿಸುವುದೊ ಪೇಳೆಂದಸುರಪತಿ ನುಡಿಯೆ ||
ಕುಹಕತನದಿಂ ಕೆಣಕಿ ಭುಜಗನ |
ಸಹಿಸಿಕೊಳ್ಳೆಂದೆರಗೆ ಬಿಡುವುದೆ |
ಸುಹಿತವೆನಗಿಂದಹಿತನಿಗ್ರಹವೆಂದು ವಿನಮಿಸಿದ ||೫೦||

ಒಪ್ಪಿತೆನ್ನಯ ಮನವು ದುಡುಕಿಂ |
ತಪ್ಪನೆಸಗಿದಬಳಿಕ ವೈರಿಯೊ |
ಳೊಪ್ಪಿಕೊಂಡದನವನ ಸೇರ್ದೊಂ ಒದುಕುವರೆ ಭಟರು ||
ಬಪ್ಪುದಲೆ ಸಾವಿಂದೊ ನಾಳೆಯೊ |
ತಪ್ಪಿ ಪೋಪುದೆ ತಿಳಿದುಮಿಂತಿದ |
ನಪ್ಪಲೇತಕಕೀರ್ತಿಯನು ಚಲದಿಂದೆ ಕಾದುವೆನು ||೫೧||

ದುರುಳರಗ್ರಣಿಯಿಾವಿಭೀಷಣ |
ನರಿಯ ಸೇರ್ದೊರೆ ಬದುಕಲಿವನಿಗೆ |
ಮೆರೆವ ಲಂಕಾಧೀಶಪದವಿಯೆ ತಪ್ಪದಪ್ಪುದಲೆ ||
ಹರಣವುಳಿದಿರಲಾವುವಿಾತನ |
ನೆರೆಯನನುಸರಿಸುತ್ತೆ ಬಾಳ್ವೆವು |
ತೆರಳಲಿವನಿನ್ನೆಮ್ಮನುಳಿದಿಂದೆಂದನಸುರೇಂದ್ರ ||೫೨||

ಕರಿಯು ಕಾಯವ ತೊಳೆಯೆ ದೂಳಿಯ |
ನೆರಚಿ ಕೊಳ್ಳುವೊಲೊಲವಿನಿಂದವೆ |
ಪಿರಿದು ಸನ್ಮಾನಿಸಲು ಬಿಡನಾ ಜ್ಞಾತಿಕಪಟವನು ||
ದುರುಳಗೆನಿತುಪಕೃತಿಯ ಗೈದೊಡ |
ಮಿರದೆ ಪೋಗನೆ ಕಷ್ಟದಶೆಯೊಳ |
ಗರರೆ ಕುಲಘಾತಕನನೀಗಳೆ ತೊಲಗಿಸುವುದೆನಲು ||೫೩||

ಕೇಳಿದನು ಕಠಿನೋಕ್ತಿಯನು ಕ |
ಣ್ಣಾಲಿಯಲಿ ನೀರ್ದೊಂಬಿ ಸನ್ಮತಿ |
ಶಾಲಿ ನಿಜಮಂತ್ರಿಗಳನೊಡಸೇದಾ ವಿಭೀಷಣನು ||
ಮೇಲೆ ಗಗನಕ್ಕಾಗ ಪಾರು |
ತ್ತಾಲಿದನು ಕೇಳಣ್ಣ ದೇವನೆ |
ಖೂಳರೊಡನಿಂದಾಡಿ ಕೆಡದಿರು ಕೇಳು ಬುದ್ಧಿಯನು ||೫೪||

ಹಿರಿಯ ನೀನೆನಗಂತುಮಲ್ಲದೆ |
ದೊರೆಯು ನೀನಹೆ ನೀನು ನಿಂದಿಸೆ |
ಕೊರತೆಯೆನಗಿಲ್ಲಿನಿಸುಮಾದೊಡಮುಚಿತಮಾರ್ಗವನು ||
ತೊರೆದು ಸೀತಾರಾಮನನು ಮಿಗೆ |
ಜರಿದು ನುಡಿವೀನಿನ್ನ ಸಚಿವರೊ |
ಳಿರಿಸಿ ನಂಬುಗೆಯನ್ನು ದುರ್ಮಾರ್ಗದಲಿ ಸಂಚರಿಸಿ ||೫೫||

ಕಾಲನರಮನೆಗತಿಥಿಯಪ್ಪುದ |
ನಾಲಿಯಲಿ ನಾಂ ನೋಡಲಾರದೆ |
ಕಾಲಿಗೀಪರಿ ಬುದ್ಧಿವೇಳ್ದೆನು ತಾಳುವುದು ನೀನು ||
ಮೇಲುಬುದ್ಧಿಯು ನಿನ್ನೊಳಿರಲೀ |
ಗೇಳು ರಾಘವನಂಘ್ರಿಕಮಲಕೆ |
ಬೀಳು ರಕ್ಷಿಪನೆಂದು ತೆರಳಿದನಾವಿಭೀಷಣನು ||೫೬||

ಅಂತರಿಕ್ಷದೊಳಾವಿಭೀಷಣ |
ನಿಂತು ತೆರಳಿ ಪಯೋನಿಧಿಯನೋ |
ರಂತೆ ಲಂಘಿಸಿ ರಾಮಚಂದ್ರನ ಸೇನೆಯಿರ್ಪೆಡೆಗೆ ||
ಚಿಂತೆಯನು ನೀಗಾಡಿ ಸೀತಾ |
ಕಾಂತನಾಮವ ಪಾಡುತೈತರ |
ಲಿಂಕು ಬರ್ಪವರಾರೆನುತೆ ಸುಗ್ರೀವಕಪಿವರರು ||೫೭||

ಮನದೊಳಾಲೋಚಿಸಿ ವಿಲೋಕಿಸಿ |
ಯನುಪಮಿತಗಾತ್ರರನು ತಪ್ಪದು |
ದನುಜರಿವದಿರು ನಮ್ಮ ನೀಗಳು ಸದೆಯಲೈತಹರು ||
ಎನುತವರು ಕಳಿಯೇರಿಯೊಡನಂ
ದನುವರಕೆ ಸನ್ನದ್ಧರಾಗ |
ಲ್ವಿನಯಪರನಾದಾವಿಭೀಷಣನರಿದನವರನುವ ||೫೮||

ನಿಂದನಾಕಾಶದಲಿ ಕೈಮುಗಿ |
ದೆಂದನತಿಗಂಭೀರವಾಕ್ಯವ |
ನಿಂದು ರಾವಣನನುಜನೈದಿಹೆನಾರ್ತನೆಂದೆನಿಪಿ ||
ಒಂದಿಹೆನು ಪೆಸರನು ವಿಭೀಷಣ |
ನೆಂದು ಮಂತ್ರಿಗಳಿವರು ತನಗೈ |
ತಂದೆವಿಲ್ಲಿಗೆ ರಾಮಚಂದ್ರನನಿಂದು ಮರೆವುಗಲು ||೫೯||

ಕಳವಿನಿಂ ಶ್ರೀರಾಮನಸರಸಿಯ |
ನೆಳೆದು ತಂದುದು ನಿನಗೆ ತಕ್ಕುದೆ |
ಕಳುಹಿ ನೀನಿಂದಿವಳನಾತನ ಸೇರಿ ಬದುಕೆಂದು ||
ತಿಳುಹಲಾನದಕಾದಶಾಸ್ಯನು |
ಚಲವ ಬಿಡೆನೆಂದಿನಿಸುಮುಳುಕದೆ |
ಬಲುಹಿನಿಂ ಬಿಡದೆನ್ನ ಸಟ್ಟಿದೊಡಿಲ್ಲಿಗೈದಿದೆನು ||೬೦||

ಸತಿಯನಣುಗರನುಳಿದು ನಿಲ್ಲದೆ |
ಗತಿವಿಹೀನನು ಬಂದೆನಿಲ್ಲಿಗೆ |
ಹಿತರನಾರುಮನರಿಯೆನಾಂ ರಾಘವನೆ ಗತಿಯೆನಗೆ ||
ಮತಿಯುತರೆ ನೀವಿಂದು ನನಗಾ |
ಕ್ಷಿತಿಪನಂಘ್ರಿಯ ತೋರೆ ನಿಮ್ಮುಪ |
ಕೃತಿಯ ಮರೆಯದೆ ನೆನೆಯುತಿರ್ಪೆನು ಜೀವವಿಹವರೆಗೆ ||೬೧||

ಕೇಳಿ ರವಿಸುತನದನು ಬೇಗ ಕೈ |
ಪಾಳುವಿರ್ದೆಡೆಗೈದಿ ರಾಕ್ಷಸ |
ಮೌಳಿ ರಾವಣನನುಜನೆನಿಸಿರ್ಪವಿಭೀಷಣನು ||
ಖೂಳನೆಂದಗ್ರಜನ ತಾನುಳಿ |
ದೋಲಗಿಸಲಿದೊ ನಿಮ್ಮನೈದಿಹ |
ನಾಲಿಪುದು ಚಿತ್ತವಿಸಿ ತನ್ನದನೊಂದುಬಿನ್ನಪವ ||೬೨||

ಕ್ರೂರಕರ್ಮಿಗಳಸುರರವರೊಳು |
ವೈರಿರಾವಣನನುಜನೀತನು |
ಕೋರಿ ಮಿಗೆ ನಂಬುಗೆಯ ಮೊದಲೊಳು ಬಳಿಕ ಮೋಸದೊಳು ||
ಕಾರಿಯವ ಗೆಲಲೆಂದು ಬಂದಿಹ |
ಸಾರೊ ನಾಲ್ವರು ಜತೆಯೊಳಿರ್ಪರು |
ದಾರಗುಣವಿಹುದಿವನೊಳೆಂದೆಲೆದೇವ ಬಗೆಯದಿರು ||೬೩||

ಮೋಸದಿಂದಮೆ ನಮ್ಮ ಕೊಲಲೆಂ |
ದಾಸುರಾರಿಗಳರಸನಟ್ಟಲು |
ವೇಸವನು ತಾಳ್ದಿಂತು ಬಂದಿರವೇಳ್ಕುಮಿದು ದಿಟವು ||
ದಾಸನಾದೆನಗಾಜ್ಞೆಯಿತ್ತೊಡ |
ದೇಸರವರೀದನುಜರಿವರೆ |
ಕೈಸು ಮಿಡುಕದ ತೆರದೊಳಸುವನು ಸೂರೆಗೊಳ್ಳುವೆನು ||೬೪||

ದಿನಪಸುತನಿಂತೆನಲು ಕೇಳ್ದಾ ।
ಮನುಕುಲಾಗ್ರಣಿ ಮೆಚ್ಚಿದವೊಲಿ ।
ರ್ದನಿಲಜಾದಿಕಪೀಂದ್ರರಾನನಗಳನು ನೋಡುತ್ತೆ ॥
ತನಗೆ ಹಿತವನು ಬಯಸಿಯಿಾತನು ।
ಏನಮಿಷದನಿಂತಿದುವೆ ಸತ್ಯವು ।
ವಿನುತಮತಿಗಳೆ ನಿಮ್ಮ ಬಗೆಯೇನೊರೆವುದೀಗೆನಲು ॥೬೫॥

ಹೇಳಿದರು ತಮತಮಗೆ ತೋರ್ದುದ ।
ನಾಳಿದನ ಸಮ್ಮುಖದೆ ಕಪಿವರ ।
ರಾಳುಗಳೊಳತ್ಯಧಿಕನನಿಲಜನೊರೆದನಾಬಳಿಕ ॥
ಕೇಳುವುದು ಸರ್ವೇಶ ನಿನಗೇಂ ।
ಪೇಳಬಲ್ಲೆವೆ ಮಂತ್ರವನು ನಿ ।
ಸ್ನೂಳಿಗಿಗರಾವ್ರೊಲ್ದು ನೇಮವ ಶಿರದೊಳಾಂತಪೆವು ॥೬೬॥

ದೇವರಾಜ್ಞಾಪಿಸಲು ತನ್ನಯ ।
ಭಾವದಾಶಯವನ್ನು ಪೇಳ್ವೆನು ।
ಕೋವಿದನೆ ದಾಸನನು ಮನ್ನಿಸಿಯಾಲಿಸುವುದಿದನು ॥
ರಾವಣಾಸುರನನುಜನೆನಿಸುವ ।
ನೀವಿಭೀಷಣನತಿವಿಚಕ್ಷಣ ।
ನಾವುದುಂ ಭಯವಿಲ್ಲ ನಮಗಿವನಲ್ಲನುಗ್ರಹಿಸು ॥೬೭॥

ಅಂದು ಸಭೆಯೊಳಗೆನ್ನ ಕೊಲ್ಲ ।
ಲ್ಬಂದ ದನುಜರ ಗದರಿಗರ್ಜಿಸಿ ।
ಯೊಂದುಪಾಯವನಗ್ರಜಂಗೊರೆದೆನ್ನನುಳುಹಿದನು ॥
ಎಂದುಮರಿಯದ ಶತ್ರುವೆನಿಸಿಯೆ ।
ದಂದುಗವ ಗೆಯ್ದೆನ್ನೊಳಾದರ ।
ದಿಂದೆ ನಡೆದುದೆ ಸುಜನನೀತನೆನಲ್ಕೆ ಕುರುಪಲ್ತೆ ॥೬೮॥

ಪೆರರೊಳಿಹ ಗುಣದೋಷಗಳ ನಿ ।
ರ್ಧರಿಸಿ ಗುಣಿಯನು ಸೇರಿ ದೋಷಿಯೊ ।
ಳಿರಕಗೊಳ್ಳದೆ ದೂರಸಾರನೆ ಜಾಣನಾದವನು ॥
ಪರನುಸದ್ಗುಣನಿಧಿ ಪರಾಕ್ರಮ ।
ಶರಧಿ ನೀನೆಂದರಿತು ನಿನ್ನನು ।
ಶರಣುಹೊಕ್ಕನು ಬಿಟ್ಟನಸುರಾಧಿಪನ ಖಳನೆಂದು ॥೬೯॥

ವಾಲಿಯನು ಸಂಹರಿಸಿ ರಾಜ್ಯದ |
ಮೇಲೆ ಸುಗ್ರೀವನನು ನಿಲ್ಲಿಸಿ |
ಪಾಲಿಸಿದ ತೆರದಿಂದೆ ರಾಘವನಸುರವೈರಿಯನು ||
ಕೋಲ ಮೊನೆಯಿಂದಿರಿದು ತನ್ನನು |
ಮೇಲೆನಿಪ ಲಂಕಾಧಿಪತ್ಯದೆ |
ಮೇಳವಿಪನೆಂಬಾಶೆ ಬಲಿದಿಹುದೀತನಲಿ ನೋಡೆ ||೨೦||

ಇಂತುಪ್ರಘನತರಮಾದ ರಾಜ್ಯದ |
ಚಿಂತೆಯಿಂ ಶರಣೆಂದು ಬಂದವ |
ನಂತರಂಗವಿಶುದ್ಧನಾಗಿಯೆ ನಡೆದುಕೊಳ್ಳುವನು ||
ಸಂತಸದೊಳೀತನನು ಕೈವಿಡಿ |
ದಂತರಾತ್ಮನೆ ಸಲಹೆ ರಾಕ್ಷಸ |
ರಂತರವನರಿಯಲ್ಕೆ ಸಾಧನವಹನು ನಮಗಿವನು ||೨೧||

ಎಂದುಮಾರುತಿ ನುಡಿಯೆ ರಾಘವ ।
ನಂದು ಮೆಚ್ಚುತ್ತಿಹುದು ಬರಹೇ ।
ಳೆಂದೊಡವನೈತಂದು ವಂದಿಸಿ ನೃಪತಿಗಿಂತೆಂದ ||
ಮಂದಮತಿಯಾದಣ್ಣನಿರವೆನ |
ಗಂದಮಾಗದೆ ಬಂದೆನಿಲ್ಲಿಗೆ |
ತಂದೆ ರಕ್ಷಿಸನಾಥಬಂಧುವೆ ಕಾವರಿಲ್ಲೆನಗೆ ||೨೨||

ರಾವಣಾನುಜನೆನಗೆ ಪೆಸರಿಹು |
ದೈ ವಿಭೀಷಣನೆಂದು ನನ್ನಯ |
ಭಾವಭಕ್ತಿಯು ವಿಷ್ಣುದೇವನೊಳಧಿಕಮಾಗಿಹುದು ||
ದೇವ ನಿನ್ನ ಚರಿತ್ರೆಯಾಲಿಸಿ |
ಪಾವನಾತ್ಮಕ ಹರಿಯೆ ನೀನೆಂ |
ಬೀವಿವೇಕವನಾಂತು ಬಂದೆನು ನಿನ್ನ ಸನ್ನಿಧಿಗೆ ||೨೩||

ಇಂದುಮೊದಲಾಗರಸ ನಿನ್ನನೆ |
ಹೊಂದಿ ಬಾಳ್ವೆನು ನಿನ್ನನುಜ್ಞೆಗೆ |
ಕುಂದುಕೊರತೆಗಳೀನುವೈದದ ತೆರದೆ ನಡೆದಪೆನು ||
ಮುಂದೆ ಲಂಕೆಗೆ ಮುತ್ತಿಗೆಯನನು |
ವಿಂದಮೊಡರಿಸಿಯಾನಿಶಾಚರ |
ವೃಂದವನು ಸದೆಬಡಿದು ತೋರ್ಪೆನು ಭಕ್ತಮಾಳ್ಪನುವ ||೨೪||

ಎಂದು ನುಡಿದವಿಭೀಷಣನನೊಲ |
ವಿಂದೆ ತಕ್ಕೈಸುತ್ತೆ ನಿಜ ನಿ |
ನ್ನಿಂದೆ ನಮ್ಮಯ ಕಾರ್ಯಸಾಧನವುಹುದು ತಪ್ಪದಿದು ||
ತಂದೆಯೇಪರಿಯಿಂದೆ ತನ್ನಯ |
ನಂದನನ ಪೊರೆದಪನೊ ಆಪರಿ |
ಯಿಂದೆ ನಿನ್ನನು ಪೊರೆವೆನಂಜದಿರೆಂದು ರಾಘವನು ||೭೫||

ಕರೆದು ಸೌಮಿತ್ರಿಯನು ಬೇಗದೆ |
ತರಿಸಿ ಸಾಗರಜಲವ ಲಂಕೆಯ |
ಸಿರಿಯ ಸಾಮ್ರಾಜ್ಯಾಭಿಷೇಕವನೀವಿಭೀಷಣಗೆ ||
ನೆರೆದನವ್ಮೀಸೇನೆಯಿದಿರೊಳು |
ಭರದೆ ತಕ್ಕಂತೆಸಗೆನಲು ಸಡ |
ಗರದೆ ಲಕ್ಷ್ಮಣನಾತನಿಗೆ ಕಟ್ಟಿದನು ಪಟ್ಟವನು ||೭೬||

ಜಯಜಯೆಂದುದು ನಿಖಿಲವಾನರ |
ಚಯವು ತವುಗಿವನತಿಸಹಾಯನು |
ಭಯವದಿನ್ನೆಮಗಿಲ್ಲ ಕಾಣ್ಬೆವು ಲೋಕಮಾತೆಯನು ||
ದಯೆಯೊಳೀತನು ಕಡಲ ದಾಂಟಿಸೆ |
ಬಯಸೆವಿತರವನಿನ್ನು ತಡೆಯದೆ |
ಹೊಯಿದು ದಶಕಂಠನನು ರಾಕ್ಷಸಕುಲವ ಸವರುವೆವು ||೭೭||

ಕರುಣೆಸೆಮುಗಿದನಸುರವರ್ಯನೆ |
ಹರಿಯಭಕ್ತನು ನೀನೆನಲು ಸಾ |
ಗರದ ತರಣವದರಿದು ಪೆರರಿಗೆ ರಾಮನಿಗೆ ಸಾಧ್ಯ ||
ತರಣಿವಂಶದ ಸಗರಭೂಪತಿ |
ಶರಧಿಯನು ನಿರ್ಮಿಸಿದಕಾರಣ |
ವರಸು ರಾಘವನಿಂದು ಸಾಗರರಾಜನನು ಬೇಡೆ ||೭೮||

ಕರುಣದಿಂ ಪಥವೀವನಾತನು |
ಸರಳಮಾರ್ಗವಿದೆನೆ ವಿಭೀಷಣ |
ನರಸನದಕನುಮತಿಸಿ ಚಿಂತಿಸಿ ದರ್ಭೆಯನು ತರಿಸಿ ||
ಹರಹಿ ಧರಣಿಯೊಳದರ ಮೇಲಿರ |
ದೊರಗಿ ಪಜ್ಜ್ವಳಿಪಗ್ನಿಯಂದದೆ |
ವರುಣಮಂತ್ರವ ಜಪಿಸುತೆಸೆದನು ನಿರಶನವ್ರತದೆ ||೭೯||

ಮೊದಲನೆಯಸಂಧಿ ಸಂಪೂರ್ಣಂ

ಎರಡನೆಯ ಸಂಧಿ.

ಸೂಚನೆ || ಕಟ್ಟಿಯಬುದಿಗೆ ಸೇತುವನು ಹುಡಿ |
ಗುಟ್ಟಿ ರಾವಣಮುಕುಟವನು ತಾಂ |
ಕೆಟ್ಟಿತೆನಲಂಗದನ ಸಂಧಿಯು ರಾಮ ಖತಿಗೊಂಡ ||

ಅತ್ತಲಸುರಾಧಿಪನು ನಿಜದು |
ರ್ವೃತ್ತವನು ಬಗೆಯುತ್ತೆ ದುಗುಡಕೆ |
ತೆತ್ತು ಮನವನು ರಾಮನದಟನು ನೆನೆದು ಕಳವಳಿಸಿ ||
ಸುತ್ತಲೀಕ್ಷಿಸಿಯೊರ್ವದೂತಂ |
ಗಿತ್ತನಾಜ್ಞೆಯ ಬೇಗದಿಂ ಪೋ |
ಗತ್ತ ರಾಮನ ಪಾಳೆಯದ ಪರಿಯರಿದು ಬಾರೆಂದು ||೧||

ಪೋಗಿ ಚರನರಿದೊಡನೆ ಬಳಿಸಾ |
ರ್ದಾಗದಾಗದು ದೇವ ಕಪಿಗಳ |
ತಾಗಿ ಬದುಕುವರುಂಟೆ ನೆರೆದಿದೆ ಸೇನೆಯಪರಿಮಿತ ||
ಹೋಗಲದರಿಂದೇನು ಸೀತೆಯ |
ನೀಗಳನುವಿಂ ಕಳುಹಿ ನೀನತಿ |
ವೇಗದಿಂ ರಾಘವನ ಮೈತ್ರಿಯ ಬಳೆಯಿಸುವುದೆನಲು ||೨||

ಪೊಳ್ಳಿದೆಯನಿವನಂಜಿದನು ಫಲ |
ವಿಲ್ಲವಿವನಿಂದಿನ್ನು ಶುಕ ನೀಂ |
ನಿಲ್ಲದೀಗಳೆ ಪೋಗಿ ಸುಗ್ರೀವಂಗೆ ಪೇಳುವುದು ||
ಎಲ್ಲಕಪಿಯಂತಲ್ಲ ನೀಂ ಮಿಗೆ |
ಬಲ್ಲಿದನು ಸದ್ವಂಶಜಾತನು |
ಸಲ್ಲುವುದೆ ನಿನಗೆಮ್ಮೊಳೀಪರಿ ಕಲಹವುಳಿಯಿದನು ||೩||

ಫಲವದೇನಹುದೆಮ್ಮ ಸೆಣಸ |
ಲ್ಕಳಿಯಲಿಡನೇಂಕೊರತೆ ನಿನಗಹು |
ದೊಲುಮೆಯಿಂದಾವಿಹುದು ಸುಹಿತವು ನಮಗಿದಭಿಮತವು ||
ಲಲನೆಯೊರ್ವಳನೊಂದುಕತದಿಂ |
ಚಲದೊಳಾನಪಹರಿಸೆ ನಿನ್ನಯ |
ಕುಲಕೆ ಕುಂದೇನುಳಿದು ರಾಮನ ಮರಳು ಪುರಕೆಂದು ||೪||

ಅರುಹಿಯಿಂತಿದನರಿಯ ಬಲವಿ |
ಸ್ತರಣದಳೆತೆಯನರಿದು ಬಹುದೆಂ |
ದೊರೆಯಲಸುರಾಧಿಪನ ವಂದಿಸಿ ಪಕ್ಕಿರೂಪಾಂತು ||
ತೆರಳಿದನು ಶುಕನಂದು ವಾನರ |
ರರಸನಿರ್ಪೆಡೆಗಾಗಿ ಗಗನಾಂ |
ತರದೆ ನಿಂದನು ಪೇಳ್ದನಸುರಕುಲೇಂದ್ರನಾಣತಿಯ ||೫||

ಕೇಳುತೀನುಡಿಗಳನು ಕಪಿಕುಲ |
ದಾಳುಗಳು ನಭಕಡರಿಯೊಡನಾ |
ಖೂಳನನು ಪಿಡಿದೊತ್ತಿ ಕೊಲ್ಲಲು ಯತ್ನಗೈಯುತಿರೆ ||
ಪಾಲಿಸೆನ್ನನು ರಾಮ ಪರಮಕೃ |
ಪಾಳು ದೂತನ ಕೊಲುವುದನುಚಿತ |
ಪೇಳಿ ಬುದ್ಧಿಯನಿವರ್ಗೆ ನನ್ನನು ಸಲಹು ನೀನೆಂದು ||೬||

ಮೊರೆಯಿಡಲು ತಾಂ ಕೇಳಿ ರಘುಪತಿ |
ಕರುಣದಿಂದವನನ್ನು ಮನ್ನಿಸಿ |
ಮರಳಿ ಶಯನಂಗೊಂಡು ಭಜಿಸಲ್ಕಂಬುಧೀಶನನು ||
ಬರಲು ತಳುವಿದೊಡವನು ಕೋಪಿಸಿ |
ಯುರಿಯನುಗುಳ್ವಕ್ಷಿಗಳಿನೀಕ್ಷಿಸಿ |
ಮೆರೆವ ಕೋದಂಡವನು ಕೊಂಡೊಡನಂಬುಜೋಡಿಸುತೆ ||೭||

ಎಲವೆಲವೊ ಸಾಗರನೆ ನನ್ನನು |
ಬಲವಿಹೀನರೊಳೆಣಿಕೆಗೈದೆಯ |
ಚಲವ ಮಾಳ್ಪೆಯ ತನ್ನ ಪರಿಯನು ತೋರ್ಪೆಸಿನಗೆಂದು ||
ತಳಮಳಂಗೊಂಡಬುದಿ ಕುದಿಯಲು |
ಜಲಚರಂಗಳು ಬೆಂದು ಬೇಗುದಿ |
ಗೊಳುತೆ ತೇಲಲು ಕಣೆಯನೆಚ್ಚನು ದಾಶರಥಿ ಮುಳಿದು ||೮||

ಇನಿತು ಗೈದೊಡಮಿದಿರೊಳೈದದೆ |
ವನಧಿರಾಜನು ಮರಸಿಕೊಂಡಿರ |
ಲಿನಕುಲೇಂದ್ರನು ಮತ್ತೆ ರೋಷಾವಿಷ್ಟಮನನಾಗಿ ||
ಅನುಪಮಾನಬ್ರಹ್ಮಶರವನು |
ಧನುವಿಗೇರಿಸಿಯಿವನನಿಂಗಿಪೆ |
ನೆನುತೆ ಗರ್ಜಿಸೆ ಬಂದು ನಿಂದನು ಬೆದರಿ ಸಿಂಧುಪತಿ ||೯||

ಜಯಜಯಾನತರಕ್ಷ ರಾಘವ |
ಜಯಜಯಾಮರಪಕ್ಷ ಮಾಧವ |
ಜಯಜಯಾಹಿತಶಿಕ್ಷ ಕೇಶವ ಜಯ ಮಹಾದೇವ ||
ನಯವಿದೂರನು ನಾನು ನತಜನ |
ಭಯವಿದಾರನು ನೀನು ನನ್ನನು |
ದಯದೆ ರಕ್ಷಿಪುದೆಂದು ಕೆಡೆದನು ರಾಮಸಂಘ್ರಿಯೊಳು ||೧೦||

ಒಡನೆ ನುಡಿದನು ದೇವ ಮೊರೆವೀ |
ಕಡಲು ನೆಲದಂತಹುದು ಕೋಡಗ |
ಗಡಣ ನಡೆಗಿದರೊಳಗೆ ಭಯವಣಮಿಲ್ಲ ಮುಂದಿದಕೆ ||
ಕುಡುವುದಾಜ್ಞೆಯ ನಿಮ್ಮ ನಳನಿಗೆ |
ತಡೆಯದೀಗಳೆ ಸೇತುವನು ನೀ |
ನೊಡರಿಸೆಂದಾನಾತನಿಟ್ಟುದನೆಲ್ಲ ತೇಲಿಪೆನು ||೧೧||

ಎಂದು ವರುಣನು ನುಡಿದು ತೆರಳ |
ಲ್ಕಂದು ರಘುಪತಿಯಾಜ್ಞೆಗುಡೆ ನಳ |
ನಿಂದೆ ಬಳೆದುದು ನೂರುಯೋಜನದುದ್ದದಲಿ ಸೇತು ||
ತಂದುತಂದಡಕಿದುದು ವಾನರ |
ವೃಂದ ಪರಿಪರಿಗುಂಡುಗಲ್ಗಳ |
ನೊಂದಿಗೊಡ್ಡಿತು ಪರ್ವತಂಗಳ ಕಿತ್ತು ತಳದೊಡನೆ ||೧೨||

ಇಂತು ಸೇತುವನೊಪ್ಪುವಂತೆ ಸ |
ಮಂತು ನಿರ್ಮಿಸಿ ಬಳಿಕ ತನ್ನಯ |
ಕಾಂತೆಯನು ತಳುವಿಲ್ಲದೀಕ್ಷಿಸೆನೆಂದು ರಘುಪತಿಯು ||
ಸಂತಸವನಾಂತಾವಿಭೀಷಣ |
ಮುಂತೆ ನಡೆಯುತೆ ತೋರೆ ಪಥವನು |
ಪಿಂತೆ ನಡೆದನು ಜಯಜಯೆಂದುಲಿದಾಡೆ ಸುರನಿಕರ ||೧೩||

ರಾಮಸೇತುವೊ ರಾಕ್ಷಸಾನ್ವಯ |
ಧೂಮಕೇತುವೊ ರಾವಣನ ಸಿರಿ |
ಕಾಮಿಸುತೆ ರಾಮಂಗೆ ನೀಡಿದ ಕರವೊ ತಾನೆನಿಪ ||
ಆಮಹೋದಧಿಯಡ್ಡಗಟ್ಟೆಯ |
ನೇಮಹತ್ತ್ವದೆ ಕಟ್ಟಿನಡೆದರೊ |
ರಾಮಕಿಂಕರರೇನನಾಗಿಸರವನ ಕೃಪೆಯಿರಲು ||೧೪||

ನಡೆಯುತೀಪರಿ ಮೂರುದಿನಗಳು |
ತಡಿಯ ಸೇರಿತು ವಾಳೆಯವು ಬಳಿ |
ಕೊಡನೆನಿಲ್ಲದೆ ಮುಂದೆ ತೆರಳಿತು ವೈರಿಜನಪದಕೆ ||
ಬಡವ ಭಾಗ್ಯವ ಕಂಡವೊಲು ಮುಂ |
ಗಡೆಯೊಳೆಸೆವಾ ರಾಜಧಾನಿಯ |
ಬೆಡಗನೀಕ್ಷಿಸಿ ಬೆರಗುಗೊಂಡಿತು ಕೋಡಗದ ಗಡಣ ||೧೫||

ನಿಲಲಿ ಪಯಣವು ದೇವರೀಕ್ಷಿಪು |
ದಲಗಣಸು ಸುರತತಿಗೆ ಲಂಕೆಯು |
ಚೆಲುವಬೀರುತೆ ತನ್ನ ಸೊಬಗಿಂ ಪಳಿಯುತಿತರವನು ||
ಗೆಲವನಲ್ಲದೆ ಸೋಲನರಿಯದ |
ಚಲವು ತನಗಿಹುದೆಂಬುದನು ನೆರೆ |
ನೆಲಕೆ ತೋರ್ಪಂತೆಸೆವುದೆಂದನು ರಘುಜಗಸುರೇಂದ್ರ ||೧೬||

ಭಾನುವಂಶಲಲಾಮನಾಗಳೆ |
ವಾನರೇಶಂಗೀಯಲಾಜ್ಞೆಯ |
ಸೇನೆ ಬಿಟ್ಟುದು ಬೀಡನಲ್ಲಿಯೆ ಧರಣಿಯಗಲದೊಳು ||
ಮೌನವನು ಕಡೆಗೊತ್ತಿ ಪಡೆ ಸು |
ಮ್ಮಾನದಿಂದಬ್ಬರಿಸೆಯಾಲಿಸಿ |
ದಾನವೇಶ್ವರನಾರಯಲು ಕಳುಹಿದನು ಸಾರಣನ ||೧೭||

ಹಳಿಯ ವೇಷದೊಳವನು ಬಲದೊಳು |
ಬೆರೆದನೆಂಬುದನಾ ವಿಭೀಷಣ |
ನರಿದು ಸೆರೆಗೈದವನ ನಿಲಿಸಲು ರಾಮನಿದಿರಿನೊಳು ||
ಕರುಣದಿಂ ಮನ್ನಿಸಿ ನೃಪಾಲನು |
ಮೆರೆವ ಕಪಿಸೇನೆಯನು ತೋರಿಸಿ |
ಬರಿಸಿ ಶುಕನನು ಪೋಗಿಮಿನ್ನೆಂದಿರ್ವರಸು ಕಳುಹೆ ||೧೮||

ಕಂಡರೊಡ್ಡೋಲಗದೆ ಲಂಕಾ |
ಮಂಡಲೇಶನನವರು ಸಾಕಿದು |
ಕೆಂಡದೊಡನಿನ್ನಾಟ ಕಳುಹಿಸು ಜೀಯ ಜಾನಕಿಯು ||
ಗಂಡುಗಲಿಗಳು ಸುರರು ವೇಷಂ |
ಗೊಂಡು ಕೋತಿಗಳಂತೆ ಬಂದಿಹ |
ರಂಡಜಧ್ವಜನಿಂದು ರಾಮಾಕೃತಿಯೊಳೈದಿಹನು ||೧೯||

ಜೇಯ ಭುಸಿಯಲ್ಲೆಮ್ಮ ನುಡಿ ನಿ |
ದಾರ್ಯದದಲಿ ನಮ್ಮೆಲ್ಲರಸು ಗೆ |
ಲ್ದಾಯತಾಕ್ಷಿಯ ಸೆರೆಯ ಬಿಡಿಸುವನಾರಘೂದ್ವಹನು ||
ನೋಯಲಾಗದು ದೇವ ನಾವ |
ನ್ಯಾಯನುಡಿವವರಲ್ಲ ನಿಮಗ |
ಶ್ರೇಯವಲ್ಲದೆ ಲೇಸು ಕಾಣಿಸದೆಂದರಾಚರರು ||೨೦||

ಹೊಯಿರಿ ಬಾಯನು ಕಲಿತುದೆಲ್ಲವ |
ನಯವಿಹೀನರು ಗಳಹುತಿರ್ಪರು |
ಭಯವು ತನಗಲೆ ವಾನರರ ಹುಲುನರರ ದೆಸೆಯಿಂದೆ ||
ಜಯವು ರಾಮುಂಗಹಹ ದನುಜ |
ಕ್ಷಯವು ಕೋತಿಗಳಿಂದೆ ತನಗುಂ |
ಲಯವು ಮಾಮಾ ಸತ್ಯವಾದಿಗಳಿವರು ದಿಟವೆಂದು ||೨೧||

ಕರೆದು ಸಚಿವನನಾ ಪ್ರಹಸ್ತನ |
ನಿರದೆ ನೀನಿಂದೆಮ್ಮ ಬಲವನು |
ಧುರಕೆ ತೆರಳಿಸು ಭದ್ರಪಡಿಸುವನಾಗು ಕೋಟೆಯನು ||
ಇರುವೆ ನಾನುತ್ತರದ ಬಾಗಿಲೊ |
ಳಿರಿಗಳಾರ್ಭಟಿಯತ್ತ ಘನಮಿಹು |
ದಿರಲಿ ಸುರಪಜಿದಾದಿಸುಭಟರು ಮಿಕ್ಕ ದೆಸೆಗಳೊಳು ||೨೨||

ಕಳುಹು ಶಾರ್ದೂಲನನು ರಾಮನ |
ಬಳಿಗೆ ಕರೆಯಲಿ ಯುದ್ಧಕವನನು |
ತಳುವದೀಗಳೆ ಪೋಗಲೆಂದಸುರೇಂದ್ರನಾಣತಿಸೆ ||
ಬಲವ ಜೋಡಿಸಿಯಾ ಪ್ರಹಸ್ತನು |
ನಿಲದೆ ಪೋಗೆಂದಟ್ಟಲಾ ಖಳ |
ತಿಲಕ ನಡೆದನು ಕೂಡೆ ನುಡಿದನು ರಾಮಚಂದ್ರಂಗೆ ||೨೩||

ರಾಯ ದನುಜರ ದೇವನಾಣತಿ |
ನೋಯಲಾಗದು ಮನದೆ ನೀನ |
ಬ್ಜಾಯತಾಕ್ಷಿಯ ಮೇಲಣಾಶೆಗೆ ಬಿಡು ಜಲಾಂಜಲಿಯ ||
ಗಾಯವಡೆಯದೆ ನಿನ್ನ ಕೋಮಲ |
ಕಾಯದೊಡನೀಗೈದಯೋಧ್ಯೆಗೆ |
ಕಾಯಿಶಮ್ಮಂದಿರನು ಸೇರ್ದತಿಸುಖದೆ ನೀಂ ಬಾಳು ||೨೪||

ಕೇಳದೊಡೆ ನೀನೀಹಿತೋಕ್ತಿಯ |
ನೇಳು ಕಾಳಿಗಕಲ್ಲಿ ರಕ್ಕಸ |
ರಾಳುಗಳ ಕೈಬಾಯ್ಗೆ ಸಿಲುಕಿಯೆ ಸಾವೆ ಸತ್ಯವಿದು ||
ಕೀಳುಮೇಲಿವುಗಳೊಳದಾವುದೊ |
ಕೇಳಿ ನಿನ್ನವರಿಂದಮದುನುರೆ |
ಪೇಳಬಡಕಿನ್ನೇನು ತಕ್ಕುದೊ ಗೈವೆವಾವದನು ||೨೫||

ರಾವಣೇಶ್ವರನಾಜ್ಞೆಯಿಂತಿದ |
ಕಾವುದುತ್ತರವೆಂಬ ಚರನನು |
ಪಾವನಾತ್ಮನು ಲೆಕ್ಕಿಸದೆ ಸುಗ್ರೀವನನು ಕರೆದು ||
ಈವಿಕಾರಿಯ ನುಡಿಗಿದುತ್ತರ |
ವೀವನೇಚರತತಿಯ ನಡೆಯಿಸಿ |
ಯಾವಿರೋಧಿಯ ಪುರಕೆ ಮುತ್ತಿಗೆಯಿಡುವುದಿನ್ನೆನಲು ||೨೬||

ಜಗವಿದೆಲ್ಲವು ನಡುಗಿತೆನಲಾ |
ವಿಗಡಕೋಡಗವಡೆಯು ನಡೆದುದು |
ಬಗೆಬಗೆಯ ಕಲ್ಗುಂಡುಮರಗಳನಾಂತು ಕೈಗಳೊಳು ||
ನಗರವನು ಮುತ್ತಿದುದು ಮದದಾ |
ನೆಗಳೊ ತಾವೆನೆ ಕಿಳ್ತು ಸಕಲವ |
ನಗಳುಗಳ ತುಂಬುತ್ತೆ ಕಾಪಿನ ದಡಿಗರನು ಬಡಿದು ||೨೭||

ತಡೆವರಾರಿದನಕಟ ಲೋಕಕೆ |
ಕಡೆಯದಿನವಿಂದಾಯ್ತು ಕಪಿಗಳ |
ಪಡೆಯೊ ದಡವನು ಜಡಿದು ವಿಾರ್ರೈತರ್ಪ ಪೆರ್ಗಡಲೊ ||
ಪೊಡವಿಯಿಾದುದೊ ಮೋಹರವನೆಮ |
ಗೊಡೆಯರಿನ್ನಾರಿಹರು ರಕ್ಷಕ |
ರೆಡೆಯ ಕಾಣದೆ ಕೆಟ್ಟೆವೆಂದುದು ಕರ್ಬುರರ ಪಡೆಯು ||೨೮||

ದೂರು ಕೇಳಿಸಿತಸುರರಾಣ್ಮಂ |
ಗೇರಿದನು ಪುರದಾಳುವೇರಿಯ |
ವೀರಕಪಿಸಾಗರವ ಕಂಡನು ಬೆಚ್ಚಿಬೆದರಿದನು ||
ತೋರಿಸದೆ ಮನದನುವನರಿಪರಿ |
ವಾರದಲಿ ಸತ್ತ್ವೈಕದೃಢರನು |
ತೋರೆನಲ್ ಶುಕನಿತ್ತ ತೋರುತ್ತಿರಲು ಬಳಿಕತ್ತ ||೨೯||

ಇಡಿದ ಕಹಳೆಗಳುಪ್ಪಡಿಸುತಿರೆ |
ಪಿಡಿದ ಬೆಳ್ಗೊಡೆ ಸಾಲ ನೆಳಲೊಳು |
ಪಡಿಯಿವಕ್ಕಿಲ್ಲೆನಿಸಿ ಬೆಳಗುಪ ಮಕುಟಗಳ ಧರಿಸಿ ||
ಕಡುಪರಾಕ್ರಮವುಳ್ಳರೊಳು ದ |
ಕ್ಕಡಿಗನಿವನೆಂದೆಂಬ ಬಿಂಕದ |
ಬೆಡಗಿನವನಾರೆಂದು ರಾಘವರರಸ ಬೆಸಗೊಂಡ ||೧೦||

ದೇವರೀಕ್ಷಿಪುದೀತನೇ ಖಳ |
ರಾವಣನು ಮೂಲೋಕದಲ್ಲಣ |
ನಾವಿರಂಚಿಪ್ರಮುಖಸುರರನು ಗೆಲ್ದ ಪಟುಭಟನು ||
ಹೇವರಿಸದಿಂದಿವನು ನಿಮ್ಮಯ |
ದೇವಿಯನು ಕಳ್ದೊಯ್ದ ಪಾಪಿಯು |
ಸಾವು ಸಮನಿಸೆ ಬಂದನೆಂದನು ನರವಿಭೀಷಣನು ||೧೧||

ಈತನಂತಹ ಸತ್ವಶಾಲಿಯೆ |
ಭೀತಿಯರಿಯದ ಭಟನೆ ನಾವಿ |
ನ್ನೀತನನು ಗೆಲುವಾಶೆ ಬೀತುದೆ ಇರಲಿ ನೋಡುವೆನು |
ಪೂತೆಯಾದಾ ಸೀತೆಯೊಳು ಬಗೆ |
ಸೋತ ಪಾಪಿಗೆ ಜಯವದೆಂತಹು |
ದೇತಕಿಂ ತಡಮಿವನ ಗರ್ವವ ಮುರಿವೆನೆಂದೆಂದು ||೧೨||

ಒದರಿದನು ನಿಜಧನುವನದಕುರೆ |
ಹೆದೆಯನೇರಿಸಿ ಕಣೆಯನೆಚ್ಚನು |
ಮದಿಸಿದಸುರಾಧಿಪನ ಸತ್ತಿಗೆ ಮುರಿಯೆ ರಾಘವನು ||
ಅದುಬುತವನೇನೆಂಬೆನನಿತರೊ |
ಳೊದೆದ ಭಾನುಜನಡಿಯ ಹತಿಯಿಂ |
ದುದುರಿ ಕೆಡೆದುವು ನೆಗ್ಗಿ ರಾವಣಶಿರದ ಮಕುಟಗಳು ||೧೩||

ಬೆದರಿದನು ರಾವಣನು ರಾಕ್ಷಸ |
ರೆದೆಯು ನಡುಗಿತು ಸಟ್ಟಮೌನದ |
ಕೆದರುದಲೆಯಾದೈತ್ಯ ದುಗುಡದೊಳೈದಿಯುರಮನೆಗೆ ||
ಪದುಳವಲ್ಲೀಭಂಗವೆನಗರಿ |
ಯದಟು ಘನವಾ ವಾನರಾಧಿಪ |
ನಧಮುಬಲನಲ್ಲಿವರ ವೈರದೆ ಕೆಟ್ಟೆನಕಟೆಂದು ||೧೪||

ಬಲಿದ ಚಿಂತೆಯೊಳಸುರನಿರುತಿರೆ |
ಬಲಿಲಲಾಮನು ಕಪಿಗಳರಸನು |
ನೆಲದೊಡೆಯನಿದಿರಿನೊಳು ತಂದರಿಮುಕುಟಗಳನಿಳುಹಿ ||
ಖಳನ ತಲೆಗಳನೊಪ್ಪುಗೊಳುವುದು |
ನೆಲದ ರಿಣವಿಂದಿವಗೆ ಕಳೆದುದು |
ಮುಳಿಯಲಾಗದನುಜ್ಞೆವಡೆಯದೆ ಗೈದ ತಪ್ಪಿತಕೆ ||೩೫||

ಎಂದು ನುಡಿದಡಗೆಡೆದು ವಿನಯದೆ |
ನಿಂದು ಮುಕುಟಂಗಳೊಳು ಮಸ್ತಕ |
ಮೊಂದುಮಂ ನೆರೆ ಕಾಣದೇನಿಂತಾದುದೀಗೆಂದು |
ಬೆಂದ ಬಿದಿ ನಗೆಗೇಡನಿಂದೆನ |
ಗೊಂದಿಸಿತೆ ರಿಪುಶಿರಗಳಿಲ್ಲಕ |
ಟೆಂದು ಪುಸಿದೆನೆ ರಾಘವಾಂಘ್ರಿಯೊಳೆಂದು ಮನನೊಂದು ||೩೬||

ಒಪ್ಪದಿನ್ನಿಲ್ಲಿಹುದು ಖಳಪತಿ |
ಯಿಪ್ಪೆಡೆಗೆ ಮಗುಳ್ದೈದಿ ಶಿರಗಳ |
ನೊಪ್ಪದಿಂ ತಂದೊಡೆಯಗೊಪ್ಪಿಸದಿರ್ದೊಡೆನಗುಳಿವೆ ||
ತಪ್ಪನೀಗಳೆ ತಿದ್ದಿಯನೃತವ |
ತಪ್ಪಿಸಲುಬೇಕೆಂದು ನಭಕುರೆ |
ಕುಪ್ಪಳಿಸುತಿರಲರಿದು ಭಕ್ತನ ಮನದ ಸಂಶಯವ ||೩೭||

ಏನಿದೇನಿದು ಸಖನೆ ಮನದೊಳ |
ಗಾನುವುದೆ ನೀನಾಯಸವನಿಂ |
ದೇನುಕೊರತೆಯು ನಿನ್ನ ಸಾಹಸಕೇಕೆ ಚಿಂತಿಸುವೆ ||
ದಾನವೇಂದ್ರನ ವರಕಿರೀಟಕೆ |
ಹಾನಿಯಾಯ್ತೆನಲವಗೆ ಸಾವದು |
ನೀನು ಭಾವಿಸು ಕೊಲೆಯೊಳಪ್ಪ ವಿಶೇಷವಿನ್ನೇನು ||೩೮||

ಎಂದು ರಾಘವನವನ ಕರವನು |
ಚಂದದಿಂ ನೆರೆ ಪಿಡಿದು ನೀನಕ |
ಟೆಂದು ಪೇಳದೆ ತನಗೆ ವಂಚನೆಗೈದು ಪೋಂದೆಯಲಾ ||
ಮುಂದಿಮಾರ್ಬಲಬೆರಸಿದಹಿತನ |
ಮುಂದೆ ನೀನೇಕಾಂಗಿಯೈದಿದು |
ಧಂದವೇನೈ ರಾಜನಾದಂಗಲ್ಲ ನೀತಿಯಿದು ||೩೯||

ಉಳಿದು ಭವತಂಗಿಳೆಯ ಸಿರಿಯನು |
ತೊಳಲುತಡವಿಯೊಳಿರ್ಪಕಾಲದೆ |
ಕಳವಿನಿಂ ಬಳನೊಯ್ಯಲರಸಿಯ ನಿಲ್ಲದಿರೆ ಸೆರವು ||
ಬಲಯುತನು ನೀಂ ನಿನ್ನದೆಸೆಯಿಂ |
ಲಲನೆಯನು ಮಗುಳೊಂದಬೇಕೆಂ |
ದೆಳಸಿ ಕಾದಿರ್ಪೆನ್ನ ಕಜ್ಜವನಕಟ ಭಾವಿಸದೆ ||೪೦||

ದುಡುಕಿ ಸೀನಿಂದಸುವ ನೀಗ |
ಲ್ಕೊಡನೆ ಶತ್ರುವ ಕೊಂದು ಲಂಕೆಯ |
ಪೊಡವಿಗೊಡೆಯನನೆಸಗಿ ಜಡದೆ ವಿಭೀಷಣನ ಬಳಿಕ ||
ಒಡಲ ನೀಗುವೆನಲ್ಲದಿರಿಸೆನು |
ಮಡದಿ ಸೋದರರೆಲ್ಲ ನೀನಿರ |
ದೆಡೆಯೊಳೇಕಿನ್ನವರ ಸೊಲ್ಲೆನು ನಂಬು ನೀನಿದನು ||೪೧||

ಇಂತು ನುಡಿದರಸಂಗೆ ಪಡಿವಾ |
ತೆಂತುಪೇಳುವುದೆಂದು ಭಾನುಜ |
ನಂತರಂಗದೆ ಚಿಂತಿಸುತ್ತಿರಲವನ ಹುರಿಗೈದು ||
ಚಿಂತೆಯೇಕಿದಕಿನ್ನು ಮುಂದ |
ತ್ಯಂತಘನಕಾರ್ಯಂಗಳುಳಿದಿಹು |
ವೆಂತು ನಿರ್ವಹಿಸುವೆವು ಮುಂದಣ ಹವಣದೇನೆನಲು ||೪೨||

ಮಂಗಳಾಂಗನೆ ನಿನ್ನ ಬೆಸನನು |
ಡಿಂಗರಿಗನಾದಾನು ನಡೆಯಿಪು |
ದಂಗವೆನಗದು ಬೇರೆ ಮತವೆನಗಿಲ್ಲ ಬೆಸಸೆನಲು ||
ಡಂಗುರವ ಪೊಯಿಸಿನ್ನು ಸಕಲರು |
ಸಂಗರಕೆ ಸನ್ನದ್ಧರಾಗಿರ |
ಲಂಗದನ ನೀಂ ಬರಿಸು ಕಳುಹಲುಬೇಕು ಪಗೆಯೆಡೆಗೆ ||೪೩||

ಎಂದು ನುಡಿದಾರಾಮಚಂದ್ರನ |
ಮುಂದೆ ನಿಂದಂಗದನು ಕೈಮುಗಿ |
ದೆಂದನೊಡೆಯನೆ ಪೇಳ್ವುದೂಳಿಗವೇನು ತನಗಿಂದು ||
ಕೊಂದು ರಾವಣಕುಂಭಕರ್ಣರ |
ನಿಂದು ಮರುಳುವುದೆಂದೊ ಬೆಸನಾ |
ಮುಂದಿಮಾರ್ಬಲವೆರಸವಂದಿರ ಪಿಡಿದು ತಹುದೆಂದೊ ||೪೪||

ಒರೆವುದೆನಗೆಂದೆಂಬ ವಾಲಿಯ |
ತರುವಲಿಯ ತಾಂ ನೋಡಿ ರಘುಕುಲ |
ವರನು ಮೆಚ್ಚುತ್ತಹುದು ಮಗನೇ ದಿಟ ಸಮರ್ಥನಹೆ ||
ಧುರನ ತೊಡಗದ ಮುನ್ನ ಪಗೆಗದ |
ಗರುಹಿ ಗೈವುದು ಶಾಸ್ತ್ರಸಮ್ಮತ |
ವರಸುಗಳಿಗಿದು ನೀತಿ ನೀನದರಿಂದಮಾಗಿರದೆ ||೪೫||

ತೆರಳಿ ಲಂಕಾಪುರಿಗೆ ದಾನವ |
ರರಸನೊಡನೀಮಾತನೆಂಬುದು |
ಹರಣದಾಸೆಯದಿರಲು ಜನಕಾತ್ಮಜೆಯನೊಪ್ಪಿಸಿಯೆ ||
ಶರಣುವುಗು ನೀನಲ್ಲದಿರ್ದೊಡೆ |
ಧುರಕೆ ನಿಲ್ಲೆಂದವನನೆಚ್ಚರಿ |
ಸಿರದೆ ಮರಳುವನಾಗು ಬುದ್ಧಿಯಿನೆಸಗು ಕಾರ್ಯವನು ||೪೬||

ರಾಯಗಜ್ಜವಿದೆಣಿಸಲಿತರರಿ |
ಗಾಯವೆನಿಸದು ನಿನಗೆ ಸುಲಭವು |
ಪಾಯದಿಂ ನೀನಿದನು ಸಾಧಿಪೆಯೆಂಬ ಭರವಸವು ||
ಆಯುವಂತನೆ ನಿನ್ನೊಳೆನಗುಂ |
ಟಾಯತೋದ್ಯಮನೆನಿಸಿ ನೀನನ |
ಪಾಯದಲಿ ಜಯವೊಂದಿ ಮರಳೆಂದರಸ ನೇಮಿಸಿದ ||೪೭||

ಏತರತಿಶಯವರಸ ನಿನ್ನ ಕೃ |
ಪಾತಿಶಯಮಿರಲಾವುದಸದಳ |
ವೈತಹೆನು ಚಣದೊಳಗೆ ಕಾರ್ಯವನೆಸಗಿ ನಾನೆಂದು ||
ಜೋತು ಶಿರವನು ನಮಿಸಿ ಲೋಕ |
ಖ್ಯಾತವಾಲಿಸುಜಾತನಹಿತ |
ವ್ರಾತವೈದ್ಯುತಜಾತವೇದನು ಲಂಕೆಗಭಿಗಮಿಸಿ ||೪೮||

ತಡೆಯಲೈದಿದ ಕಾಹಿನವರನು |
ಪಿಡಿದಘನತರುಶಿಲೆಗಳಿಂ ಸದೆ |
ಬಡಿದು ಮೇಲಾರೈಕೆಯಸುರರಸಿರದೆ ಮರ್ದಿಸುತೆ ||
ಕಡೆಯ ಕಾಲದ ರುದ್ರನಂದದೆ |
ಕಿಡಿಯನಕ್ಷಿಗಳಿಂದಮುಗುಳುತೆ |
ಫಡಫಡೆಲವೋ ತೋರು ನಾರೀಚೋರನಾರೆನುತೆ ||೪೯||

ಕಂಡಕಂಡರನಿರದೆ ಕೇಳುತೆ |
ಗಂಡುಗಲಿಯಾವೂರೊಳೈತರೆ |
ಕಂಡು ಮತ್ತಂ ಹಿಂದಿನಾತನೆ ಬಂದನಿಂದೆನುತೆ ||
ಮಂಡೆಗಳ ಮರೆಯಿಸುತೆ ಪೌರರು |
ದಿಂಡುಗೆಟ್ಟೊಡೆ ಕಂಡು ಹೋಃಹೋಃ |
ಕೆಂಡದೂಳಿಗದಾತ ತಾನಲ್ಲಂಜದಿರಿವೆಂದು ||೫೦||

ತೋರಿರೈ ನಿಮ್ಮೊಡೆಯನನು ರಘು |
ವೀರನೆಂದುದನಾಡಿಪೋಪೆನು |
ಬೇರೆ ಕಾರ‍್ಯದ ನೇಮವೆನಗಿಂದಿಲ್ಲವೊಪ್ಪೆಯನನು ||
ತೋರಲೇನೋಃ ಎಂಬ ಭೀತಿಯು |
ಕೌರುವಂತಿದೆ ನಿಮ್ಮ ವದನದೆ |
ಸಾರಿಮಿನ್ನೆಂದಸುರರರಸನ ಮನೆಯನರಸುತ್ತೆ ||೫೧||

ಮೂರುಲೋಕದ ಗಂಡನಾವನೊ |
ವಾರಿಜೋದ್ಭವವಿಷ್ಣುಶಂಕರ |
ರಾರನುಜ್ಞೆಯ ಮೀರಿ ನಡೆಯಲ್ಕಂಜಿ ವರ್ತಿಪರೊ ||
ವೀರನಾದಶಶಿರನು ಸಭೆಯೊಳ |
ಗೇರುಗದ್ದುಗೆಯಲ್ಲಿ ಮಂಡಿಸಿ |
ಭೂರಿವೈಭವದಿಂದೆ ಮೆರೆದಿರೆ ಕಂಡನಾತನನು ||೫೨||

ವಿಗಡರಕ್ಕಸರಿವನ ತಡೆಯಲು |
ಬಗಲೊಳವರಸಿರ.ಂಕಿಯೌಂಕಿಯೆ |
ಬಗೆಯದಾರುಮನಸುರನಾಥನ ಪೀಠದಿದಿರಿನೊಳು ||
ಬಿಗಿದು ಕುಂಡಲಿಯಂತೆ ಬಾಲದೆ
ಜಗುಲಿಯನು ಮೇಲೇರಿ ನಗುನಗು |
ತೊಗುಮಿಗೆಯ ಸುಮ್ಮಾನದೊಳು ನುಡಿಸಿದನು ಖಳಪತಿಯ ||೫೩||

ಮರೆಯನೀತನು ಬಾಲಮೈತ್ರಿಯ |
ನಿರುವೆನಿವನೊಳು ಕೆಲವುದಿನವೆಂ |
ದರಿತು ನಾಂ ಬರಲೆನ್ನತಡೆಯಿಸಿ ನೂಕಿಸಿದೆ ನೀನು ||
ಅರಿಯದಾಳ್ಗಳ ದೋಷವೆಂದದ |
ನರಕುಗೈಯದೆ ನಿನ್ನ ಬಳಿಗೈ |
ತರಲದೇತಕೆ ಮೌನಿವೊಲ್ಮಾತಾಡದಿಹೆಯೆನಲು ||೫೪||

ಅರಸನಿದಿರೊಳು ಕುಳಿತು ತೋರ್ದಂ |
ತರಚುವೀಕಪಿಯಾವುದೋ ಕೇ |
ಳ್ದರಿವೆನೆಂದೆನುತಾ ಪ್ರಹಸ್ತನು ಮಂತ್ರಿಪುಂಗವನು ||
ಕೆರಳಿ ನುಡಿದನದಾರು ನೀನೆಲೊ |
ಮರಣದಂಡನೆಗಂಜದೈತಂ |
ದಿರದೆ ಗಳುಹುತ್ತಿರ್ಪೆ ನಿನ್ನಯ ಪರಿಯದೇನುಸಿರು ||೫೫||

ಹಲುಗಿರಿಯಿಸಿಂದ್ರನನು ಪಾವಕ |
ನಳವನಡಗಿಸಿ ವಾಯುವಿನ ಬಲು |
ಚಲನೆಯನು ಬಂಧಿಸಿ ಕೃತಾಂತನ ಜೈಸಿ ಶಂಕರನ ||
ನೆಲೆಯನಲುಗಿಸಿ ಧನದನುಜ್ಜ್ವಲ |
ಬಲವ ಭಂಗಿಸಿ ಮೆರೆವನಿದಿರೊಳ |
ಗುಲಿವೆ ಹುಲುಕಪಿ ನಿನ್ನ ಹವಣೇನುಸಿರು ನಿಶ್ಚಯವ ||೫೬||

ಎಂದ ಮಂತ್ರಿಯ ಮಾತ ಬಗೆಯದೆ |
ಮುಂದೆ ಕುಳಿತಿಹ ದಾನವೇದ್ರಂ |
ಗೆಂದನನೃತವನಿವನು ಗಳಹಿದೊಡೇಕೆ ಸುಮ್ಮನಿಹೆ ||
ಪಿಂದಿನಾ ಡಳಿತಗಳನರಿಯದೆ |
ಮಂದಮತಿಯಿವನಾಡುತಿರ್ದೊಡೆ |
ಚಂದವಲ್ಲೆಂದೆನ್ನದಸುರರನೆಲ್ಲ ವಂಚಿಪುದೆ ||೫೭||

ಮರೆದು ನೀನಿರಲೆಚ್ಚರಿಪೆನದ |
ನರಿಗೆ ನಿನ್ನೀಸಭಿಕರೆಲ್ಲರು |
ಹರೆಯದಿಂ ನೀನುಬ್ಬಿ ತೋಳ್ಗಳ ತೀಂಟೆಗಳೆಯಲ್ಕೆ ||
ಅರಿಯದಿಂದ್ರನ ಸುತನ ಸತ್ವವ |
ನರಿಯದಂದದೊಳವನ ಕಿಬ್ಬದಿ |
ಗೆರಗಿ ಕಕ್ಷದೆ ಸಿಲುಕಿ ನಾಯವೊಲಲ್ಲಿ ಸರಲುತಿರೆ ||೫೮||

ಇರುಬಿನೊಳು ನೀನಿಹುದನೆಣಿಸದೆ |
ಪರಮಸಾಹಸಿ ವಾಲಿ ನಾಲ್ಕುಂ |
ಶರಧಿಗೊಳು ಮುಳುಮುಳುಗಿ ಸಂಧ್ಯಾದಿಗಳನಾಚರಿಸಿ ||
ಮರಳಿ ಪುರಕೆಂದಭ್ರಮಾರ್ಗದೆ |
ಚರಿಸುತಿರೆ ನೀಂ ಪಟದ ಬಾಲದ |
ತೆರದೊಳಿತ್ತತ್ತೊಲೆಯುತುಬ್ಬಸವಾಂತು ಕಣ್ಗೆಟ್ಟು ||೫೯||

ಪರಿದ ಕರುಳಿನ ಮರಿಗೆ ಕರುಣದ |
ಪರಮಸಂಜೀವನವ ನೆರೆಯೈ |
ಹರಣ ತೆಗೆಬಗೆಯಾಂತುದುಳಿಸೈ ಶರಣು ನೀನೆಸುತೆ ||
ಮೊರೆಯಿಡಲು ನೀನಾಗಳೀಕ್ಷಿಸಿ |
ಯುರಿದು ದಿಟ ಪೊಸಪುಳುವಿದೆನ್ನುತೆ |
ಕಲದೊಳಾಂತ್ಯೆತಂದು ಶಿಶುವಿನ ತೊಟ್ಟಿಲಿಗೆ ಬಿಗಿದು ||೬೦||

ಆದಯಾಂಬುಧಿ ತೆರಳಲೊಡನಾ |
ದಾದಿಯರು ಬಳಸುತ್ತೆ ದಣಿವಿಂ |
ದೇದುತಿಹುದನು ಕಂಡು ಕನಿಕರಗೊಂಡು ಪಾಲೂಡಿ ||
ಆದರಂಮಿಗೆ ಬಿಜ್ಜಿ ನಿನ್ನನು |
ಮೋದದಿಂದಾಡಿಸುವ ಸಮಯದೊ |
ಳೈದಿ ದೂರಕೆ ಚಿಗಿದು ಭೋಂಕನೆ ನಭಕೆ ನೀಂ ಸರಿದೆ ||೬೧||

ಈತನಾರೆನ್ನಂದಿನೆಸಕವ |
ನೇತಕೆತ್ತಾಡುವನು ವಾಸವ |
ಜಾತನಲ್ಲದೆ ಮಿಕ್ಕರರಿಯರು ತನ್ನ ಪರಿಭವವ ||
ಭೀತಿಗೊಳ್ಳದೆ ನುಡಿವನೆನ್ನುತೆ |
ಖಾತಿದಾಳದಿರಸುರನಾಥ ವಿ |
ನೀತನಾಗಿಯೆ ಕೇಳೆ ಪೇಳ್ವೆನು ತನ್ನ ಸಂಗತಿಯ ||೬೨||

ನಿನ್ನ ಪೂರ್ವವನಸ್ಯರರಿವರೆ |
ರನ್ನದೊಟ್ಟಿಲೊಳೆಸೆದು ಮಲಗಿದ |
ಚಿಣ್ಣನೊರ್ವನೆ ಬಲ್ಲನಾಗಿರಬೇಕು ಹಗರಣವ ||
ಎನ್ನನಾರೆಂದರಿವೆ ನಾನೇ |
ಚಿಣ್ಣನಾಗಿರ್ದವನು ನಿನ್ನೀ |
ಕಣ್ಣ ಮುಂದಿಹೆನೀಗಳಂಗದನೆಂಬ ಪೆಸರೆನಗೆ ||೬೩||

ಬಂದುದೇಸ್ಯೆ ಸ್ಮೃತಿಗೆ ಪೂರ್ವದೊ |
ಳೊಂದಿದಾದಶೆ ತನ್ನ ಬರವಿಂ |
ಗಿಂದು ಕಾರಣವದುವೆ ಬಾಲ್ಯಸ್ನೇಹದನುಬಂಧ ||
ಬಂಧುಬಳಗಗಳೊಡನೆ ಕಾಲನ |
ಮಂದಿರಕಕಾಲದೊಳು ಪಯಣವ |
ನೊಂದಿಸುವ ದುಷ್ಕಾರ್ಯವೊಂದನು ಗೈದೆ ನೀನೆಂದು ||೬೪||

ಕೇಳಿದೆನು ನಾನಲ್ಲದೆನಗಿಂ |
ದೂಳಿಗವು ಬೇರುಂಟು ರಾಮನ |
ದೇಳು ಬೇಗದೊಳದರಿನೊಡತಿಯ ಸೆರೆಯ ಬಿಡಿಸಿನ್ನು ||
ಖೂಳತನದಿಂದರಿಯದೆಸಗಿದ |
ಕೀಳುಗಜ್ಜವನೆಣಿಸಲಾಗದು |
ಪಾಲಿಸೆಂದವನೀಶನಡಿಗಳಿಗೆರಗು ಭಕ್ತಿಯೊಳು ||೬೫||

ಆದಿನಾರಾಯಣನೆ ನರನಾ |
ಗೈದಿ ದುಷ್ಟರನಿರಿಯುತಿಹನಳಿ |
ವಾದುದಾರಿಂದಾಖರಾದಿಮಹಾಬಲಾಢ್ಯರಿಗೆ ||
ಆದರದೆ ನಿನ್ನಸುವನುಳಿಸಿದ |
ಭೂಧರೋಪಮಬಲನು ಕಿಷ್ಕಿಂ |
ಧಾಧಿಪನದಾರಿಂದೆ ಮಡಿದನು ಕೇಳ್ದು ನೀನರಿಯಾ ||೬೬||

ಹಿಂದೆ ಕಾರಾಗೃಹದೆ ನಿನ್ನನು |
ಬಂಧಿಸಿದಾರ್ಕಾರ್ತವೀರ್ಯನ |
ಕೊಂದ ಘನಬಲಪರಶುರಾಮನ ಭಂಗಿಸಿದರಾರು ||
ಬಂದು ಶರಣೆನೆ ವರವಿಭೀಷಣ |
ನಂದೆನಿನ್ನೀಪಟ್ಟವಿತ್ತವ |
ಗಿಂದು ಶರಧಿಗೆ ಸೇತುವನು ನೆರೆ ಬಂಧಿಸಿದರಾರು ||೬೭||

ಇನಿತುಮಂ ನೀನರಿತು ಸಂಧಿಯ |
ನನುಮತಿಸದಿರೆ ನಿನ್ನ ಬಂಧುಗ |
ಳನುಜಪುತ್ರಜ್ಞಾತಿಮಿತ್ರರುವೆರಸಿ ನೀನ್ಸೈದೆ ||
ಮಿನುಗುತಿಹ ರಘುರಾಮನಂಬಿನ |
ಕೊನೆಯ ಸವಿಯನು ನೋಳ್ಪೆಯರಿದಿರು |
ನಿನಗೆ ತಿಳಿಪಿದೆನಿಂತು ರಾಮನು ಬೆಸಸಿದರ್ಥವನು

ತಿಳಿವು ನಿನ್ನಯ ಮನದಭೀಷ್ಟವ |
ನುಳಿವುಪಾಯವೊ ಕೊಳುಗುಳವ ಹೊ |
ಕ್ಕಳಿವುಪಾಯವೊ ನುಡಿವುದೆನಲಾರಾವಣನು ಮುಳಿದು ||
ಎಲೆಲೊ ಹೊಯ್ದೊಯ್ಯಲಿತುದೆಲ್ಲವ |
ಗಳಹುತಿರ್ಪುದು ದುಷ್ಟಕಪಿಯಿದ |
ಕಲಲೆ ಚಕ್ರಾಧೀಶವಾರ್ತೆಯೆ ಎನುತೆ ಗರ್ಜಿಸಿದ ||೬೯||

ಹುಲುನರಾಧಮನಗ್ಗಳಿಕೆಯನು |
ಹಲುಗಿರಿದು ಬೆರೆತಾಡುತಿರ್ಪುದು |
ನಿಲಲಿ ಸಾಕೀಕೀಳುಪಾಳದಕಿಲ್ಲಿ ಠಾವಹುದೆ ||
ನಿಲಲು ನೆಳಲನು ಕಾಣದಲ್ಲ |
ಲ್ಲಲೆದು ಕಪಿಗಳ ಸೇರಿ ಜೀವಿಪ |
ಖಳನ ರಾಮನ ಸಭೆಯಿದೆಂದರಿದಿಂತು ಪೇಳುವುದು ||೭೦||

ಪೊಸತು ರಾವಣದಿಗ್ವಿಜಯಕಥೆ |
ವಸುಧೆಗಿದು ಸೋಜಿಗವು ವಾನರ |
ರಸಮುಕಾವ್ಯಗ್ರಥನರೀತಿಯನಿಂದುಕೇಳಿದೆವು ||
ಹುಸಿಯುಮಂ ಹಸನೆನಿಸಿ ಮೆರೆವವೊ |
ಲುಸಿರುತಿರ್ಪುದು ಕೋತಿಗೀಪರಿ |
ಯೆಸೆವಕುಶಲತೆಯುಂಟೆ ಕಲಿಸಿರಬೇಕು ರಾಘವನು ||೭೧||

ಎಲವೊ ನಿಮ್ಮಯ ರಾಮನನ್ವಯ |
ದೊಳಗೆ ಪೆರರಿಗೆ ಸೆರಗನೊಡ್ಡಿದ |
ಲಲನೆಯರೊಳೇನೆಗ್ಗನೆಣಿಸರೆ ಪುರುಷರಾದವರು ||
ಪಲವುಕಾಲದೆ ಸನ್ನ ಮನೆಯೊಳು |
ಮಲಗಿನಿದ್ರಿಪ ಸೀತೆಯನು ನಿ|
ರ್ಮಲಿನಭಾವದೊಳೊಂದಲೆಳಸಿತುನೇನೊ ರಾಘವನು ||೭೨||

ಆದೊಡಂ ತಾನಾಗಬಹುದಿದು |
ಸೋದರರು ನಿಮ್ಮಯ್ಯಗಳು ತಾಂ |
ಭೇದವಿರದಂತೊರ್ವನರಸಿಯನೊರ್ವನನುಭವಿಸಿ ||
ಹಾದಿದೋರಿಹರವರ ಮಾರ್ಗವೆ |
ಮಾದರಿಯು ತನಗೆಂದು ರಾಮನು |
ಭೇದವಿಡನಾಸತಿಯ ಶುದ್ಧಾಶುದ್ಧಚರಿತದೊಳು ||೭೩||

ದಿಟ್ಟಗಂಡಸುತನವಿದಮಮಾ |
ಹುಟ್ಟದಿತರರಿಗಾದೊಡೊಳ್ಳಿತು |
ಬಿಟ್ಟುಕಳುಹಿದೊಡಲ್ತೆ ಮಡದಿಯ ಮತ್ತೆ ಕೂಡುವುದು ||
ಇಟ್ಟಣಿಸಿ ಮೇಲೆಸೆವ ತಾರೆಗ |
ಳೊಟ್ಟುಗೂಡೀನೆಲಕುರುಳ್ದಂ |
ದಿಟ್ಟುಕೊಂಡಿಹ ಸೀತೆಯನು ಜಗಜಟ್ಟಿಯುಳಿಯುವನು ||೭೪||

ಕೇಳಿದನು ತಾಂ ವಾಲಿಜನು ಕೇ |
ಡಾಳಿಕಾಮುಕನಾದುರುಕ್ತಿಯ |
ನಾಳಿದನ ಸೌಭಾಗ್ಯದೇವಿಯೊಳೀದುರಾತ್ಮಕನು ||
ಕೀಳುನುಡಿವನು ಕೇಳಿಯಿನ್ನಾಂ |
ತಾಳಲಾಗದೆನುತ್ತೆ ಪೀಠದಿ |
ನೇಳದಿದ್ದಂತೊದೆಯೆ ಬಿದ್ದನು ರಾವಣನು ನೆಲಕೆ ||೭೫||

ಕಂಡು ರಕ್ಕಸರೊಡನೆ ಕೋಪಂ |
ಗೊಂಡು ತಮತಮಗುಳ್ಳತೋಮರ |
ಭಿಂಡಿವಾಳಗದಾಯುಧಂಗಳಿನೆಚ್ಚರರಿಭಟನ ||
ಕೊಂಡು ತಾನವನೆಲ್ಲ ದಿಟಪುಟ |
ಚೆಂಡಿನಂದದೆ ಹಾರಿ ಸಾಕಲೆ |
ಷಂಡರಿರ ಬಲ್ಗೈದುಬಿಜ್ಜೆಯಿದೇಕೆ ನಿಮಗೆಂದು ||೭೬||

ಘುಡುಘುಡಿಪ ಕೋಪದಲಿ ಕಂಗಳ |
ಕಿಡಿಗೆದರುತತ್ಯುಚ್ಚತರುವನು |
ಜಡಿಯುತೋಲಗದುಬ್ಬಿನಾಳ್ಗಳ ಬಡಿದು ಕೊಬ್ಬಿಳುಹಿ ||
ಬಿಡದೆ ಮತ್ತೆ ದಶಾಸ್ಯನಾಮುಡಿ |
ವಿಡಿಯುತೆತ್ತುತುಮಿಳುಹುತೌಂಕುತೆ |
ಫಡಫಡೆಲವೋ ಸುಳ್ಳನಾಡಿದುದಕ್ಕೆ ಫಲವಿದೆಕೊ ||೭೭||

ಕೆಂಡಮೆನ್ನದೆ ತಂದು ಬಲುಹಿನ |
ಖಂಡಲಕ್ಷ್ಮಿಯ ಮುಟ್ಟಲಂಜಿಕೆ |
ಗೊಂಡು ಬರಿಯಪಮಾನಕಾಸ್ಪದವಾಗಿ ಜೀವಿಸುತೆ ||
ಬಂಡುನುಡಿಗಳನಾಡೆ ನಿನ್ನೀ |
ಬಂಡವಾಳವನರಿತ ಜನಗಳು
ಕಂಡು ನಂಬುವರೆಂದು ಬಗೆದೆಯ ಬಂಡರಕ್ಕಸನೆ ||೭೮||

ಇದೆಕೊ ಪೋಪೆನು ಮರೆಯಬೇಡೆಂ |
ದೊದೆದು ಭೋಂಕನೆ ಚಿಗಿದು ಗಗನಕೆ |
ಪದುಮನಾಭನ ರಾಣಿಯಿರವನು ಕಾಣ್ಬುದಭಿಮತವು ||
ಬೆದರುವೆನು ರಘುರಾಮನಾಜ್ಞೆಗೆ |
ವಿಧಿಸಲಿಲ್ಲದನೆನಗೆ ತಾನಿ |
ನ್ನಿದಕೆ ಚಿಂತಿಸಿ ಫಲವದೇನೆಂದರಸನಿದ್ದೆಡೆಗೆ ||೭೯||

ಚಂಡದನುಜರ ಗಂಡನರಿಭೇ |
ರುಂಡಸಂಗದನೈದಿ ತನ್ನಯ |
ಮಂಡೆಯನು ಚಾಚುತ್ತೆ ರಾಘವಸಂಘ್ರಿಕಮಲದೊಳು ||
ಚಂಡನಾದಸುರನನು ಸಭೆಯಲಿ |
ಕಂಡು ಬುದ್ಧಿಯನೊರೆಯೆ ತನ್ನಯ |
ಖಂಡೆಯದಲುತ್ತರವಸಿತ್ತನು ದೇವರರಿವುದೆನೆ ||೮೦||

ಕೂಳರಕ್ಕಸನವನು ತಾಂ ಕ |
ಟ್ಟಾಳೆನುತ್ತುರೆ ನಂಬಿ ನಮ್ಮನು |
ಕೀಳುಗಂಡನೆ ಕೊರತೆಯೇನೆಂದರಸು ಕೈವೀಸೆ ||
ಮೇಲುವರಿದತ್ತಬುದಿಯೆನೆ ಕಪಿ |
ಜಾಲವೆಳ್ದುದು ಮೊರೆಯುತಿರ್ದುದು |
ಶೈಲತರುಗಳ ಕರದೊಳಾಂತುದು ಮುತ್ತಿದುದು ಪುರವ ||೮೧||

ಎರಡನೆಯಸಂಧಿ ಸಂಪೂರ್ಣಂ

ಮೂರನೆಯ ಸಂಧಿ.

ಸೂಚನೆ || ರಿಪುತಿಮಿರಮಾರ್ತಾಂಡ ರಾವಣಿ |
ಕುಪಿತನಾಗಾನಾಗಶರದಿಂ |
ತಪನಕುಲಜರ ಕೆಡಹಲಹಿರಿಪುವವರನುಳುಹಿದನು ||

ಲೆಕ್ಕವಿಲ್ಲದ ವಾನರರು ಮದ |
ಸೊಕ್ಕಿ ಲಂಕಾಪುರಿಗೆ ಮುತ್ತಿಗೆ |
ಯಿಕ್ಕಿದಾವಾರ್ತೆಯನು ಕೇಳಿ ನಿಶಾಚರಾಧಿಪತಿ ||
ಉಕ್ಕುವತಿಕೋಪದಲಿ ನಾಲ್ಕುಂ |
ದಿಕ್ಕುಗಳ ಬಲಪಡಿಸಿ ರಕ್ಕಸ |
ರುಕ್ಕಿನಾಳ್ಗಳುವೆರಸು ಬಂದನು ರಾಮನಿಹ ದೆಸೆಗೆ ||೧||

ಒತ್ತಿದುದು ಬಲವೆರಡು ಕೈಕೈ |
ಹತ್ತಿದುದು ರಕ್ಕಸರು ಬಲುಗೈ |
ಗತ್ತಿಗಳನೆತ್ತೆತ್ತಿ ಹೊಯ್ದೊಡೆ ಶೂರವಾನರರು ||
ಮತ್ತೆತರುಗಳನೆಸೆಯುತಸುರರ |
ನೆತ್ತಿಗಳ ಪೋಳ್ಗೈದು ಗಿರಿಗಳ |
ಕಿತ್ತು ಮೇಲಿಡಲಂಜಿ ಸರಿದುದು ಹಿಂದಕರಿಬಲವು ||೨||

ಸೋಡಿ ತನ್ನವರಾಂತ ಹಾನಿಯ |
ನಾಡಲಸದಳವೆನಿಪ ರೋಷದೊ |
ಳಾಡುಗಚ್ಚುತುಮೆಲವೊ ಕೋಡಗವಿಂಡಿಗಿಸಿತದಟಿ ||
ಪಾಡೆ ನೀವಸುರರಿಗೆ ನಿಮ್ಮನು |
ಕೂಡಿ ಬದುಕಲು ಬಂದಯೋಧ್ಯೆಯ |
ಹೇಡಿಗಳ ಬರಹೇಳಿ ನೀವೆಂದಿಂದ್ರಜಿತ್ತೆರಗೆ ||೩||

ಕಂಡನಿದನಂಗದನು ಕೋಪಂ |
ಗೊಂಡು ಮೇಲ್ವಾಯ್ದಲವೊ ನಿಲುನಿಲು |
ಬಂಡದಾನವ ಬರಿದೆ ಸೇನೆಯನೇಕೆ ಬೆದರಿಸುವೆ ||
ಗಂಡುಗಲಿ ನೀನಾದೊಡೆನ್ನು |
ದ್ದಂಡಸತ್ವದ ಸವಿಯ ಸೋಡಿದ |
ಸುಂಡು ಬದುಕಿದೊಡೆಂದುಮುಳಿವಿಲ್ಲಕಟ ಸಿಸಗೆಂದು ||೪||

ಸಾಗಿ ಬೊಬ್ಬಿರಿದೊಡನೆ ಮುಷ್ಟಿಯ |
ತೂಗಿ ಲಂಘಿಸಿ ತಾಗಿ ಹೊಯ್ಯ |
ಲ್ಕಾಗ ಮುರಿದುದು ರಥವು ಕುದುರೆಗಳೊರಗಿದುವು ನೆಲಕೆ ||
ಬೇಗನಿರದಿಂದ್ರಾರಿ ಸರಳಿನ |
ವೇಗದಿಂದಾ ವಾಲಿಸೂನುವ |
ನಾಗ ನೆಲದೊಳಗೊರಗಲೆಚ್ಚಸು ಕೂಡೆ ಬೊಬ್ಬಿರಿದು ||೫||

ಹೋದನಿವನೆಂದಸುರನೊಡನಾ |
ಮೇದಿನೀಶರ ಮೇಲೆ ಶರಗಳ |
ನೈದೆ ಸುರಿಯಲು ಕಂಡು ಲಕ್ಷ್ಮಣನಸಾಗಳಿದಿರಾಂತು ||
ಹೋದೆ ಹೋಗಿನ್ನೆಲವೊ ನಿನ್ನನು |
ಕಾದುಕೊಳ್ವವರಾರು ಸಜ್ಜನ |
ಬಾಧೆ ಸಿಂದುದು ಜಗದೊಳೆಂದಾರ್ದೆಚ್ಚನುರುಶರವ ||೬||

ಎಚ್ಚ ಲಕ್ಷ್ಮಣಸಂಬನಾಗಳೆ |
ಕೊಚ್ಚಿ ರಾವಣಿಯೆಲೆಲೊ ಲಕ್ಷ್ಮಣ |
ಬಚ್ಚಣೆಯ ಬರಿಕೋಲಿಸೆಮ್ಮನು ಗೆಲಲು ಬಗೆಯುವೆಯ ||
ಎಚ್ಚ ಮಂತ್ರಾಸ್ತ್ರಂಗಳಿರಲಿವ |
ಸುಚ್ಚುಬಿಲ್ಲಿಂದೆನ್ನುತವಸನು |
ಮುಚ್ಚೆ ಬಾಣಂಗಳಲಿ ಲಕ್ಷ್ಮಣನವನು ತರಿದೊಟ್ಟಿ ||೭||

ಹಿಂದೆ ಸುರಪನನಂಜಿಸಿದ ಕೊ |
ಬ್ಬಿಂದೆ ಕೈಕೊಂಡೆಮ್ಮ ಸರಿಸದೆ |
ಬಂದು ಸಿಂಪೈ ಸಲ್ಲದೆಲೆ ನಿನಗೆವ್ಮೊಳತಿಮಥನ ||
ಮಂದಮತಿಯಾಗಕಟ ಕೆಡದಿರು |
ಸಂದೆಗವೆ ನಮ್ಮಿಂದೆ ಶರವಿ |
ಸ್ನೊಂದು ಹೊರವಡಲುಸಿರು ನಿಲುವುದೆ ನಿನ್ನ ದೇಹದಲಿ ||೮||

ಗಾರುಗಿಡದಿರೆನುತ್ತೆ ಲಕ್ಷ್ಮಣ |
ನಾರುಶರಗಳಿನವನ ಬಿಲ್ಲಿನ |
ನಾರಿಯನು ಹರಿಗಡಿಯಲಭ್ರಕೆ ಹಾರಿ ಮಾಯೆಯಲಿ ||
ತೋರಗಿಡಿಗಳ ಮಳೆಯ ಕರೆಯುತೆ |
ಕೂರಸಿಡಿಲಸು ಬಿಡದೆಯೊಡರಿಸು |
ತಾರುಭಟೆಯಿಂದಾಗಳಂಜಿಸುತಸುರಪತಿಸೂನು ||೯||

ಮಾರಿ ವಿಸ್ಮಯಗೊಳಿಸುತಿರಲಸು |
ರಾರಿ ರಾಘವನದನು ಕಾಣುತೆ |
ಭೂರಿಸತ್ವನರಾತಿ ಪುಸಿಯಲ್ಲೆಂದು ಹೊಗಳುತಿರೆ ||
ಘೋರವಿಷವುಗುಳ್ವಹಿಯ ಶರವನು |
ದಾರಸಾಹಸನಿಂದ್ರಜಿತ್ತುವು |
ಪಾರಣೆಯ ಗೈಯರಬಲವನೆಂದೆಸೆಯಲಾಕ್ಷಣದೆ ||೧೦||

ಉಕ್ಕಿಹಾಯ್ದುವು ಶರದಿನದರಿಂ |
ಲೆಕ್ಕವಿಲ್ಲದಫಣಿಗಳಹಿತರೊ |
ಳೆಕ್ಕತುಳರನು ಬಿಡದೆ ಮುತ್ತುತೆ ಕಚ್ಚಿ ಕೆಡಹಿದುವು ||
ಮಿಕ್ಕನುಸಿಗಳ ಪಾಡನಾರಕ |
ಟೊಕ್ಕಣಿಸುವರು ವಿಷದ ಗಾಳಿಗೆ |
ಸೊಕ್ಕಿ ಮಲಗಿದರರಿಯದೇನುಮಸಿದ್ಧರಾವಿನೊಳು ||೧೧||

ಸೋಡಿದರು ರಾಘವರು ಕಪಿಗಳು |
ಕೇಡುಗೆಟ್ಟುದನದನು ಸೈಸದೆ |
ಹೂಡಿದರು ಗರುಡಾಸ್ತ್ರವನು ತಾವೊಡನೆ ಕಾರ್ಮುಕಕೆ ||
ಜಾಡಿಸುತ್ತದನಸುವನಿತರೊಳ |
ಗಾಡಲೇನದನಹಿಗಳೊಗುಮಿಗೆ |
ಗೂಡಿದುವು ಮೆಯ್ಗಲುಗಲೀಯದೆ ನೃಪರ ಕೀಲ್ಗಳನು ||೧೨||

ತ್ರಾಣಗುಂದಿದ ನೃಪನನಸುರನು |
ತಾನು ಕಂಡಿವರಳಿದರೆಂದ |
ಜ್ಞಾನದಿಂ ಏಗೆ ಸಂಭ್ರಮಂಗೊಂಡರಮನೆಗೆ ನಡೆದು ||
ರಾಣಿವಾಸದೊಳಿರ್ದ ತಾತಂ |
ಗಾಣೆಯಿಟ್ಟಪೆನನೃತವಣುವಿ |
ಲ್ಲಾನರಾಧಮರೆನ್ನ ಕೈಯಿಂದಳಿದರೆಂದೆಸುತೆ ||೧೩||

ಪರಮಸಂಭ್ರಮದಿಂದಮರುಹಲು |
ಖರಯವೇನಿದು ಮಗನೆ ಹಗೆಯದು |
ಹರಿದು ಪೋದುದೆ ತಂಗಿಗಿತ್ತಿಯ ಪರಿದ ನಾಸಿಕವ ||
ತರಣಿವಂಶದ ಮೂಗ ಕೊರೆದೈ |
ಧರಣಿಜೆಯ ನೀನಿಲ್ಲೆ ಬಲಿದೈ |
ತರಳ ನಿನ್ನಿಂದೆನ್ನ ಚಲ ತಾಂ ದಕ್ಕಿತಿಳೆಯೊಳಗೆ ||೧೪||

ಸತ್ಯವೀನುಡಿ ಕುವರ ಕೇಳಿ |
ನ್ನೆತ್ತಲಾದೊಡಮೆಯ್ದಲಾದು |
ವೃತ್ತಸಂಗನೆ ಮಾದುದಿಂದೆನ್ನೆದೆಯ ಗಾಯವದು |
ಹೊತ್ತು ಮೀರಿತು ಮಗನೆ ನಿಜಗೃಹ |
ದತ್ತ ತೆರಳೈ ಶ್ರಮವ ಕಳೆಯೆಂ |
ದುತ್ತಮಾಂಗವ ಸವರಿ ಕಳುಹಿದನವನನಸುರಪತಿ ||೧೫||

ಬಳಿಕ ಕರೆಯಿಸಿ ಜಾನಕಿಯ ಕಾ |
ವಲಿನ ಸರಮೆಯನವಳೊಳೆಂದನು |
ಜಲಜಮುಖಿಯನು ಕೊಂಡು ಪೋಗಿಯೆ ಕಳದೊಳಸುವಳಿದು ||
ನೆಲದೊಳೊರಗಿರ್ಪವಳ ರಮಣನ |
ಹಳಸಿದೊಡಲನು ತೋರು ಮುಂದಿ |
ನ್ನೆಳಸದಿರಲಾಮನುಜಮಾತ್ರನನಾವಗಂ ಮನದೆ ||೧೬||

ಒಳ್ಳಿತಾಗಲೆನುತ್ತೆ ಸರಮೆಯು |
ನಿಲ್ಲದೈದಿ ವಿಮಾನದೊಳು ರಘು |
ವಲ್ಲಭನ ಸತಿಯೊಡನೆ ಕುಳ್ಳಿರ್ದಾಗಸಕ್ಕಡರಿ ||
ಎಲ್ಲಿ ರಾಮನ ಮೋಹರವೊ ತಾ |
ಸಲ್ಲಿ ನಿಲ್ಲಿಸಿ ವರವಿಮಾನವ |
ನೆಲಿಹನೊ ಬಿಡದರಸಿ ತೋರಿದಳರಸಿಗರಸನನು ||೧೭||

ಕಂಡಳಂಗನೆ ಚಂಡಕರಕುಲ |
ಮಂಡಲಾಧಿಪರೆನಿಸಿ ಬಾಳಿಯೆ |
ದಂಡದಂದದಿನೊರಗಿ ನೆಲದೊಳು ತಮ್ಮ ಮೈಗಳೊಳು ||
ಕುಂಡಲಾಕೃತಿಗೊಂಡು ಕೀಲ್ಗಳ |
ನಂಡಲೆದು ಪೆಣೆದಿರ್ಪ ಫಣಿಗಳ |
ತಂಡದಿಂ ಕಳೆಯುಡುಗಿ ಮೌನದೊಳಿರ್ಪ ತನ್ನವರ ||೧೮||

ಅಕಟ ಕೆಟ್ಟೆನು ಕೆಟ್ಟೆನೌ ಸಲೆ |
ಯುಕುತಿಯಿನ್ನೇನೆನಗೆ ಪೇಳೌ |
ಮುಕುತಿರಾಜ್ಯಕ್ಕಧಿತಿಯೌ ಮತ್ಪತಿಯು ರಘುಪತಿಯು |
ವಿಕಳಮತಿಯಾದೆನ್ನ ಕೈವಿಡಿ |
ದಖಿಲಸಾಮ್ರಾಜ್ಯವನು ವರ್ಜಿಸಿ |
ಸುಖವನರಿಯದೆ ನನ್ನ ಕಜ್ಜದೊಳಸುವ ಸೀಗಿದನು ||೧೯||

ಗತಿಯದಾರೌ ಸರಮೆ ತನಗಿ |
ನ್ನಿತರವೇನಿರ್ದೇನು ಫಲವೆ |
ನ್ನತುಳವೆಂದೆನಿಪೋಲೆಯೈಸಿರಿಯಕಟ ಜಾರಿದುದು ||
ಮತವು ತನಗಿನ್ನರಸನೊಡನಾ |
ಚಿತಿಯ ಪುಗುವುದು ನಿಲ್ಲಲಾಗದು |
ಪತಿಯೆ ಗತಿ ಸತಿಗೆನುತೆ ಪುಷ್ಪಕದಿಂದಮುರುಳಿದಳು ||೨೦||

ಇಂದು ಕಾಂತನ ಬಳಿಯ ಸೇರಿದೆ |
ನೆಂದು ಮೇಲಕ್ಕೆಳ್ದು ನಿಲ್ಲು |
ತ್ತಂದು ಕಂಡಳು ಮೊದಲ ಪುಷ್ಪಕದಲ್ಲೆ ತಾನಿಹುದ ||
ಸಂದೆಗವು ಮನಕಾಗೆ ಸರಮೆಯ |
ನಂದು ಕೇಳಿದಳೇನಿದಚ್ಚರಿ |
ಯಂದವಾಗಿದೆ ಕಾಂತನೆಡೆಯೊಳು ಬೀಳದೆಂತುಳಿದೆ ||೨೧||

ಎಂದ ಮಾತಿಗೆ ಸರಮೆ ನುಡಿದಳು |
ಕುಂದಲಾಗದು ತಾಯೆ ಮನದೊಳ |
ಗಿಂದು ಜೀವಕ್ಕುಂಟೆ ಕೊರತೆಯು ನಿನ್ನ ರಮಣಂಗೆ ||
ಇಂದ್ರವೈರಿಯ ಸರ್ಪಶರದಿಂ |
ದೊಂದಿರಲುಬೇಕಿವರು ಮೂರ್ಛೆಯ |
ನೊಂದೆರಡುಚಣವಿರ್ದೊಡಿಲ್ಲಿಯೆ ಕಾಣ್ಬೆವತಿಶಯವ ||೨೨||

ಆದಿಮಾತೆಯು ನೀವಲಾ ನಿಮ |
ಗೈದುವುದೆ ವೈಧವ್ಯವನೃತವಿ |
ದಾದೊಡಂ ಬೇರೊಂದು ಕುರುಪುಂಟದನು ಪೇಳುವೆನು ||
ಐದೆತನವಿರದಬಲೆಯನು ತಾ |
ನೈದೆ ಪುಷ್ಪಕವಾನಲವ್ಮ್ರದು |
ಭೇದವಿಲ್ಲೀಸುಡಿಯೊಳೊಪ್ಪುವುದೆನ್ನ ಬಿನ್ನಪವ ||೨೩||

ಈವಿಮಾನದ ಮಹಿಮೆಯತಿಶಯ |
ವಾವುದೆನೆ ಕೇಳ್ ತನ್ನೊಳಿರ್ಪುದ |
ನಾವಗಂ ತಾಂ ದೂರಗೈಯದೆ ಸೆಳೆದು ಕೊಂಡಪುದು ||
ಈವಿಧದೊಳಿದು ಮಹಿಯ ಪೋಲ್ಪುದು |
ದೇವಿಯಿಾಯಾಕರ್ಷಣದ ಬಲ |
ವೇ ವಿಮಾನದಿನಿಳೆಗೆ ಬೀಳಿಸದುಳಿಸಿದುದು ನಿನ್ನ ||೨೪||

ಎನುತಿವರು ಮಾತಾಡುತಿರಲ |
ತ್ತಿನತನೂಜವಿಭೀಷಣಾದಿಗ |
ಳೆಣಿಕೆಯಾನುತುಪಾಯವೇನೆಂದಾ ಸುಷೇಣನನು ||
ಜನಪರುಳಿವಿಂಗೌಷಧವನುಸಿ |
ರನಿಮಿಷೋತ್ತಮವೈದ್ಯಸೂನುವೆ |
ನಿನಗೆ ತಿಳಿಯದುದುಂಟೆ ಲೋಕದೊಳೆನುತೆ ಬೆಸಗೊಳಲು ||೨೫||

ಮೆರೆವ ಚಂದ್ರದ್ರೋಣಪರ್ವತ |
ಕಿರದೆ ಬೇಗನೆ ಪೋಗಿತರ್ಪುದು |
ವರಮಹೌಷಧವಿರ್ಪುದಲ್ಲಿಯೆನುತ್ತುಮವನುಸಿರೆ ||
ಭರದೊಳನಿಲಜನೀಗಳೇ ತಾಂ |
ತರುವೆನೆಂದಾಗಸಕೆ ನೆಗೆಯಲು |
ಗರುಡನೀಕ್ಷಿಸಿಯವನನೊಡಗೊಂಡಿಳಿದನಿಳೆಗಾಗಿ ||೨೬||

ರಕ್ಕೆಯಿಂ ಬಿಡದೆಳ್ದ ಗಾಳಿಗೆ |
ಸೊಕ್ಕಿಯುಳಿದುವು ಕಟ್ಟಿಸಹಿಗಳು |
ದಿಕ್ಕುದಿಕ್ಕಿಗೆ ಪರಿದುಪೊಕ್ಕುವು ಕಂಡಬಿಲಗಳನು ||
ಅಕ್ಕಟೀನೀಗರುಡನಾಗಮ |
ವಕ್ಕಜವು ಹರಿಲೀಲೆಯೆನುತಂ |
ದುಕ್ಕುವಾಸಂದದೊಳು ಮುಳುಗಿತು ಸಕಲಕಪಿಬಲವು ||೨೭||

ತಿಳಿದುದಾಗಳೆ ಮೂರ್ಛೆ ರಾಮಂ |
ಗೊಲಿದುಸುಡಿಸಿದನಂದು ಗರುಡನ |
ನಿಳೆಗೆ ನೀನೈತಂದು ಸಮ್ಮಸು ಕಾದೆ ಕಷ್ಟದೊಳು ||
ಸಲವಿನಿಂ ನೀನೈದಿ ನಿನ್ನಯ |
ನೆಲೆಯ ಸೇರೆಂದವನ ಕಳುಹಿಸಿ |
ಯುಲಿದನೊಸೆದು ವಿಭೀಷಣಾದಿಪ್ರಮುಖರನು ಕರೆದು ||೨೮||

ಬಾಧೆ ತನಗಾಯ್ತೆನುತುವಿನಿತಕೆ |
ಖೇದವಾಂತುವೆ ನಿಮ್ಮ ಹೃದಯಗ |
ಳೇಧುರಕ್ಕೈತಂದ ಭಟರೇನೆಲ್ಲರುಳಿದಪರೆ ||
ಹೋದವರು ಹೋಗಲ್ಕೆ ಮತ್ತಿನ |
ಯೋಧರರದಕೆದೆಗೆಟ್ಟು ಸಮರದೆ |
ಕಾದದುಳಿವರೆ ತಮ್ಮ ಕಾರ್ಯಕ್ಕೊಣೆಯವ ತಹರೆ ||೨೯||

ಬಿದ್ದೊಡಾನಿಂದೊರ್ವನೀಜಗ |
ವದ್ದಿ ಪೋಪುದೆ ಮುನ್ನ ದೊರೆವಡೆ |
ದಿದ್ದದೊರೆಗಳುಮಳಿದರವರೊಡನೈದಿತೇನಿಳೆಯು ||
ಬುದ್ಧಿಯಲಿ ಸುರಗುರುವ ಗೆಲ್ದೀ |
ಯುದ್ಧದಲಿ ಶತ್ರುಗಳ ನಿಗ್ರಹಿ |
ಪುದ್ಧತರು ನೀವಿರಲು ಕೊರತೆಯೆ ಜಯಕುಲಾಂಗನೆಗೆ ||೩೦||

ದುಷ್ಟದಶಕಂಧರನ ಶಿಕ್ಷಿಸಿ |
ಶಿಷ್ಟೆಯಹ ಸೀತೆಯನು ರಕ್ಷಿಸು |
ವಿಷ್ಟದೃಢಸಂಕಲ್ಪದಿಂದೈತಂದು ನೀವಿಂದು ||
ನಷ್ಟನಾದೊಡದೊರ್ವನೆಲ್ಲರು |
ಮಷ್ಟುಮಾತ್ರಕೆ ಧರ್ಮಮಾರ್ಗ |
ಭ್ರಷ್ಟರೆನಿಸುವುದೊಪ್ಪಿತವೆ ರಣಧೀರರೆನಿಪರಿಗೆ ||೩೧||

ಇಂತು ಹುರಿಗೊಳಿಸುತ್ತೆ ಕಪಿಗಳ |
ನಂತಕಾಂತಕನುಗ್ರಚಾಪಕ |
ನಂತಶರಗಳ ಪೂಡಿಯಿಸಲಂದಹಿತಸೇನೆಯೊಳು ||
ಅಂತ ಬಿರುದರ ಲಕ್ಷವಳಿದುದು |
ಪಿಂತೆ ಬೆಂಬಲಕಿರದೆ ಬಂದವ |
ರಂತು ಮಡಿಯುತ್ತಿರಲಸಂಖ್ಯರು ಮತ್ತೆ ಗಗನದೊಳು ||೩೨||

ತಾಯೆ ನೋಡೌ ನಿಮ್ಮ ರಾಯನು ।
ಮಾಯದಾನರನಲ್ಲವೇನೌ ।
ನೋಯಿಸುವುವೇನಲ್ಪಸರ್ಪಗಳೀತನಂಗವನು ॥
ಶ್ರೀಯರಸನಿವನದಿರಿಸಿಲ್ಲಿಗ ।
ಜೇಯವಿನತಾಪುತ್ರಸೈತಂ ।
ದಾಯಸವ ಹರಿಸಿದನು ಮಿಕ್ಕರಿಗಂಟೆ ಪುಣ್ಯವಿದು ॥೩೩॥

ಇಂದಿನಾಕ್ರೋಶದಲಿ ರಾವಣ ।
ನಂದಗಿಡದೇನುಳಿಯಲಾರ್ಪನೆ ।
ಕೊಂದಪನು ನಿಮ್ಮರಸನವನನು ಬನ್ನಿ ಪೋಗುವೆವು ॥
ಎಂದು ಸರಮೆಯು ಧೈರ್ಯವೀಯು ।
ತ್ತಿಂದುಮುಖಿಸೀತೆಯನು ಮರಳಿಸಿ ।
ತಂದು ಬಿಟ್ಟಳಶೋಕವನದೆಡೆಗಾಗಳಸುನಯದೆ ॥೩೪॥

ಮೂರನೆಯಸಂಧಿ ಸಂಪೂರ್ಣಂ.

ನಾಲ್ಕನೆಯ ಸಂಧಿ.

ಸೂಚನೆ ॥ ನದೆದು ವಾನರರಗ್ರಗಣ್ಯರ ॥
ನೊದೆದು ಶಕ್ತ್ಯಾಯುಧವ ಲಕ್ಷ್ಮಣ ।
ನೆದೆಯನೋಯಿಸಿದ ಸುರಪತಿಯನು ರಾಮ ಭಂಗಿಸಿದ ॥

ಒಂದುಕಡೆಯೊಳಗೆರಡುಕೋಟಿ ।
ಸ್ಯಂದನವ ನೆಗ್ಗಿದನು ಲಕ್ಷ್ಮಣ ।
ನೊಂದೆಡೆಯ ಮುಕ್ಕೋಟಿಗಜಗಳ ಕೊಂದನನಿಲಜನು ॥
ಹಿಂದುಮುಂದಾಯ್ತುಸುರಸೇನೆಯು ।
ಮುಂದುವರಿದೈತರ್ಪುದಡಗಿತು ।
ಬಂದು ಮುಟ್ಟಿತು ವಾರ್ತೆಯಿದು ರಾವಣನ ಕಿವಿಯ ॥೧॥

ಎಲೆಲೆ ಸುರಪನ ಜೈಸಿದಾತನ ।
ಗೆಲವದೇನಾಯ್ತರಿಗಳುಳಿದರೆ ।
ಫಲಿಸದಾದುದೆ ಬೊಮ್ಮನಿತ್ತಂಬವರೊಳಿಂದಕಟ ॥
ಅಳವುಗೆಟ್ಟಿಮ್ಮವರು ತಾವುರೆ ।
ಬಳಲುತೋಡುವರಿದುವೆ ಚೋದ್ಯವು ।
ಭಲರೆ ರಾಮನ ಮೈಮೆಯಸದಳವೆಂದನಸುರೇಂದ್ರ ॥೨॥

ಅಸುರವಲ್ಲಭನಾ ಮುಖಾವಳಿ |
ಮುಸುಕಿದತಿಚಿಂತೆಯೊಳು ಕಂದಿರ |
ಲಸಮವೀರರು ಕಂಡು ಪೀಳೆಯಗೊಂಡು ಮುಂಕೊಂಡು ||
ವಸುಧೆ ಕಂಪಿಸಲೊದೆದು ನೆಲಸಸು |
ವಿಷಮರಣವಿಂದೆಮಗೆ ತಮಗಂ |
ದುಸಿರು ಮಗುಚದ ತೆರದೊಳಾರ್ಭಟಿಸುತ್ತೆ ತೆರಳಿದರು ||೩||

ಮುರಜಡಿಂಡಿಮಪಟಹರಭಸದೆ |
ಪರಿಪರಿಯೊಳಬ್ಬರಿಸಿ ದಾನವ |
ರುರುಚತುರ್ಬಲವ್ಮೈದೆಕಂಡದನಾವಿಭೀಷಣನು |
ಕರೆದು ಸುಗ್ರೀವಂಗೆ ನುಡಿದನು |
ವರಮಹಾರಥರೈದುವಂತಿವೆ |
ಬರುತುಮಿರ್ಪೀಸೇನೆಯನರದು ನಮ್ಮ ಬಲಕರಿದು ||೪||

ಬೀಳುಕುಡು ನಾಯಕರನಿವರೊಡ |
ನಾಳುತನವಿತರರಿಗೆ ಹರಿಯದು |
ಮೇಳವಿಸು ಬೇಗೆನಲು ಹೊಕ್ಕರು ವಾನರೇಶ್ವರರು ||
ಸೀಳಿದರು ಕರಿತುರಗತತಿಯನು |
ಹೋಳುಗಳೆದರು ನಿಖಿಲರಥವನು |
ಬೀಳಹೊಯ್ದರು ಬಹುಪದಾತಿಯನಿರದೆ ಮುಷ್ಟಿಯೊಳು ||೫||

ಗಜರಿಗರ್ಜಿಸಿ ಹೊಯ್ದ ಮರುದಾ |
ತ್ಮಜನ ಬಿಂಕವ ನಿಲಿಪೆನೆಂದುರು |
ಭುಜಬಲನು ಧೂಮ್ರಾಕ್ಷನೆಂಬವನೈದಿ ರಥದೊಳಗೆ ||
ಗಜತುರಂಗಪದಾತಿಗಳ ಸಜು |
ಗಿಜಿಯಗೈದಾಪೌರುಷಾದ್ರಿ |
ವ್ರಜವ ಭೇಧಿಪ ವಜ್ರವಿದೆಕೊಳ್ಳೆನ್ನುತಾರ್ಭಟಿಸಿ ||೬||

ಸರಲ ಸರಿಯನು ಸುರಿಯೆ ಮಾರುತಿ |
ಸರಕುಗೈಯದೆ ಹಾಯ್ದು ರಿಪುವನು |
ಭರದೆ ಪಿಡಿದಂದೆತ್ತಿಯೊಗೆದನು ಧರೆಯಮೇಲಿರದೆ ||
ಸರಿಯಲವನಸುವದನು ಕಂಡೊಡ |
ನುರುಪರಾಕ್ರಮಿ ವಜ್ರದಂಷ್ಟ್ರನು |
ಕರೆದು ಕೆಣಕಿದನನಿಲಜನನಾಹವಕೆ ನಿಲ್ಲೆಂದು ||೭||

ಕಂಡಸದನಂಗದನು ನಿಲುನಿಲು |
ಭಂಡ ದನುಜಾಧಮನೆ ತನ್ನನು |
ಕಂಡು ಮೊದಲಲಿ ಬದುಕಿದಾ ಬಳಿಕತ್ತ ಪೋಗೆಸುತೆ ||
ಕೊಂಡು ಬಂಡೆಯನೊಂದನವನನು |
ದಿಂಡುದರಿವೆನ್ನೆನುತ್ತುಮೆಸೆಯಲ |
ಖಂಡಶಂಗಳ ಸುರಿದು ದಾನವನದನು ಪುಡಿಗೈದ ||೮||

ಫಡಫಡೆನುತಂಗದನು ತರುವನು |
ಬುಡದೊಡನೆ ಕಿಳ್ತೊಂದನಾತನ |
ಮುಡಿಗೆ ಗುರಿಗಟ್ಟುಗ್ರಕೋಪದಿನಿಡಲು ತಲೆಯೊಡೆದು ||
ಕೆಡೆಯಲವನಿಳೆಯೊಳಗೆ ಸೈಸದೆ |
ದೃಢಪರಾಕ್ರಮನಾದಕಂಪನ |
ನೊಡನೆ ಮುಳಿದೈತಂದು ಕೆಣಕಿದನಂದು ಪವನಜನ ||೯||

ಅಂಕದೊಳು ರಥವೇರಿ ಮಿಗೆ ನಿ |
ಶ್ಶಂಕನಾಗವನೈದಿಯಂಬನು |
ಬಿಂಕದಿಂದೆಸೆಯಲ್ಕೆ ಕಂಡುರೆ ಮಸಗಿ ಮನದೊಳಗೆ ||
ಹೂಂಕರಿಸಿ ಹುರಿಯೇರಿ ಬಾಲದ |
ಸಂಕಲೆಯೊಳಾತನನು ಬಂಧಿಸಿ |
ಲಂಕೆಗಿದು ಬಲಿಯೆಂದು ಮಾರುತಿ ಗುದ್ದಲವನಳಿದ ||೧೦||

ಜಗಳದಲಿ ಧೂಮ್ರಾಕ್ಷನಳಿದನು |
ಚಿಗಿದುದಸುವಾ ವಜ್ರದಂಷ್ಟ್ರನ |
ನಗಲಿ ಹಾ ಹತವಿಧಿಯಕಂಪನ ನೆಳಲಸೂರೆಸಿದುದು ||
ನಗುವರೆಡೆಯೊಳಗೆಡಹಿಬಿದ್ದೆವು |
ವಿಗಡರಕ್ಕಸರಾಟ ನಿಂದುದು |
ಹಗೆಗಳುನ್ನತದಶೆಯನಾಂತರೆನುತ್ತೆ ಮರುಮರುಗಿ ||೧೧||

ಮರುಗಿ ಫಲವೇನೊಡೆಯನನುವಿಂ |
ಗೆರಡ ಬಗೆಯದೆ ಶಿರವನೀವುದು |
ಪರಮನೀತಿಯೆನುತ್ತುಮೊರೆವರು ಬಲ್ಲಕೋವಿದರು ||
ಅರರೆ ನಾನಂತಲ್ಪಬಲನೇ |
ನಿರಿವೆನಾ ಹರಿಭಟರು ಬಂದೊಡ |
ಮೊರೆಯಲೇಕೆಂದಾ ಪ್ರಹಸ್ತನು ಸಮರಕನುವಾದ ||೧೨||

ಮೊಳಗಿದುವು ನಿಸ್ಸಾಳಪಟಹಗ |
ಳಳುಕಿದುದು ವಾನರರ ಸೇನೆಯು |
ಖಳನ ರಥವಡ್ಡೈಸಿ ನಿಂದುದು ಕಣದ ಮಧ್ಯದಲಿ ||
ಎಲೆಲೆ ರಾಕ್ಷಸರಾಜಕಟಕವ |
ಗೆಲುವವನ ಹೆಸರೇನು ತಾನವ |
ನಳವುದೋರಲದೇಕೆ ತಡವೆಂದಸುರ ಗರ್ಜಿಸಿದ ||೧೩||

ಅದಟಿದೊಳ್ಳಿತು ಬಂದುದಾಯಿತು |
ಕದಲಬೇಡಿಲ್ಲಿಂದೆ ನೀನೆಂ |
ದೊದರಿಯಾರ್ಭಟಿಸುತ್ತ ಸುಗ್ರೀವನುರೆ ಕೆರಳಿ ||
ಪದದ ಘಾತಕೆ ಕುಸಿಯೆ ಫಣಿಪತಿ |
ಯೆದೆಗಳದಿರಲ್ದಿಗ್ಗಜಂಗಳಿ |
ಗಿದಿರೊಳೈದಿ ರಥಾಶ್ವವನು ಜಿಡದೊದೆದನಂಘ್ರಿಯೊಳು ||೧೪||

ಸೊಕ್ಕಿ ಯೊರಗಿದುವಿಳೆಗೆ ಬಾಯಿಂ |
ದುಕ್ಕಿ ಸುರಿದುದು ರುಧಿರವದನಾ |
ರೊಕ್ಕಣಿಸುವರು ಮೃತಿಯನೊಂದಿದುವಿರದೆ ತೇಜಿಗಳು ||
ಅಕ್ಕಜದ ಭಟನಾರೊ ಈತನ |
ಸೊಕ್ಕ ಮುರಿಯುವೆನೆಂದು ಶರಗಳಿ |
ನಿಕ್ಕಲಸುರನು ತನುವ ಮರೆದನು ವಾನರಾಧಿಪನು ||೧೫||

ಫಲ್ಗುಣೆಯ ನಿಲಿಸೆಲವೊ ನೀನಿ |
ನ್ನೆಲ್ಲಿಗೈದುವೆ ನಿನ್ನ ಪೌರುಷ |
ವಿಲ್ಲಿ ಕೊಳ್ಳುವದೆ ಬೀರಪಡೆವಳನೆನ್ನನೇನರಿಯಾ ||
ಖುಲ್ಲ ನೀನಿಂದೆಮ್ಮ ಪತಿಯನು |
ಮೆಲ್ಲನೊರಗಿಸಿ ಜಾರಲೆಳಸುವೆ |
ನಿಲ್ಲು ಕೊಳ್ಳಿದನೆಂದು ರಥಪಡೆ ನೀಲನಡಹಾಯ್ದು ||೧೬||

ಅಂದು ತಾಗಿದೊಡರಿಯ ಸಾರಥಿ |
ಸಂದುಪೋದನು ಬೆದರಿದಸುರನು |
ಮುಂದುಗೆಟ್ಟನು ಬಳಿಕ ಧುಮ್ಮಿಕ್ಕಿದನು ಧಾರಿಣಿಗೆ ||
ಇಂದು ನಿನಗಾಯ್ತಿಳೆಯ ಋಣಸಂ |
ಬಂಧವೆಲವೋ ಕೋತಿ ಕೊಳ್ಳಿದ |
ನೆಂದು ಗದೆಯಿಂದಂದು ಹೊಯ್ಯಲು ನೊಂದನಾ ನೀಲ ||೧೭||

ಕೆರಳಿದನು ಕಪಿವರನು ದೈತ್ಯನ |
ಶಿರಕೆ ಲಂಘಿಸಿ ಬಂಡೆಯೊಂದನು |
ಭರದಿನಿಡಲದು ತಾಕೆ ಖಳನಸು ಜಾರಿತಾಕ್ಷಣದೆ ||
ಮರಳಿ ತರುಗೊಂಡೆಲವೊ ರಕ್ಕಸ |
ನೊರಜುಗಳೆ ಘಡ ತೊಲಗಿ ನೀವೆಂ |
ದೆರಗಿ ಹಾಯ್ದನು ಬಟ್ಟಬಯಲಾಯ್ತಸುರಸೇನೆಯೊಳು ||೧೮||

ಚೆಲ್ಲಿ ಕಳೆದುಳಿದಸುರರೆಣ್ದೆಸೆ |
ಗಲ್ಲಿಗಲ್ಲಿಗೆ ಚಿಗಿದುಪೋದರು |
ತಲ್ಲಣಿಸುತಾಗಜಹಯಾವಳಿಯೆಲ್ಲೊ ಸೇರಿದುವು ||
ಬಲ್ಲಿದರು ಸುಗ್ರೀವನಾಳ್ಗಳು |
ನಿಲ್ಲಲರಿದಸುರರ್ಕಳೆಂಬಾ |
ಘಲ್ಲಣೆಯು ಕೇಳಿಸಿತು ರಾವಣ ಬೆಚ್ಚಿಬೆದರಿದನು ||೧೯||

ಹುತವಹನಸುತನಿಂ ಪ್ರಹಸ್ತನು |
ಗತಿಸಿಪೋದಾವಾರ್ತೆ ಹಬ್ಬಿತು |
ಚತುರರಣಮಲ್ಲಂಗವಿಾದುರ್ಗತಿಯೆ ಶಿವ ಎನುತೆ ||
ರಥವ ಮುಂಡಿಸಿ ತನ್ನ ಮೆಚ್ಚಿನ |
ರಥಿಕರನು ಕೂಡುತ್ತುಮಪ್ರತಿ |
ಹತನು ರಿಪುಹುತವಹನು ನಡೆದನು ರಣಕೆ ದಶಶಿರನು ||೨೦||

ಕೊಳುಗುಳದ ನಿಸ್ಸಾಳಭೇರಿಗ |
ಳಳವಿಗುಡುವವರಿದ್ದೊಡೈದಲಿ |
ತಲೆಯನುಳುಹಿಸಿ ಕೊಳ್ಳರೆರಗಲಿ ಭೂಪನಡಿಗಳಿಗೆ ||
ತಳುವಲಾಗದು ಬೇಗಬಹುದೆಂ |
ದುಲಿವುವೆಸೆ ಮೊಳಗಿದುವು ದಾನವ |
ಬಲವು ಬಿಗೆ ಕಲಿಯೇರಿ ಬಂದುದು ದೊರೆಯ ಬೆಂಬಲಕೆ ||೨೧||

ಘಡ ನಿಶಾಚರಕುನ್ನಿ ನಿನ್ನಯ |
ಪಡೆಗೆ ಬೆದರುವೆವೆಂದು ಬಗೆದೆಯ |
ಕಡೆಯ ಕಾಲವು ನಿನಗೆ ನಿನ್ನಯ ಪಡೆಗವೊದವಿದುದು ||
ದುಡುಕಿನಿಂ ನೀನೈದಿ ನಮ್ಮಯ |
ನಡುವೆ ಸಿಕ್ಕಲುಬಹುದೆ ನಿನ್ನನು |
ಬಿಡಿಸಿಕೊಳ್ಳವರಿಲ್ಲಲಾಎಂದನಿಲಜಾದಿಗಳು ||೨೨||

ಒಂದುಕಡೆಯೊಳಗೆಂಟುಕೋಟಿ |
ಸ್ಯಂದನಂಗಳ ನೆಗ್ಗಿ ಗರ್ಜಿಸು |
ತೊಂದುಕಡೆಯೊಳಗೈದುಕೋಟಿಯ ಗಜವ ಕೆಡಹಿದರು ||
ಸಂದಹಯಶತಿಯಾರುಕೋಟಿಯು |
ಕೊಂದಕಾಲಾಳೆಣಿಕೆಯಿಲ್ಲವು |
ಮುಂದುವರಿದುರೆ ಬೀದಿವರಿದರು ಮಿತ್ತುರೂಪಿಸಲಿ ||೨೩||

ಉಂಟೆ ನಿಮಗಿನಿತದಟು ನೀಂ ಬೆ |
ನ್ನಂಟುವದಟೆಗರಹಿರೊ ನಮ್ಮೊಳ |
ಗುಂಟು ದಿವ್ಯೌಷಧವು ತವಿಸಲ್ ಮದವನಿದನೆಂದು ||
ಎಂಟುದಿಕ್ಕುಗಳಲುಗೆ ಕೆದರು |
ತ್ತೆಂಟುಸಾಸಿರಕಣೆಗಳನು ದಶ |
ಕಂಠನಾಲಿದನಾಗಳವನೀತಲವು ಬಿರಿವಂತೆ ||೨೪||

ಬಿದ್ದನನಿಲಜನದಿರಿ ಜಾಂಬವ |
ನದ್ದನಂಬಿನ ಸರಿಯೊಳಂಗದ |
ನಿದ್ದನಲುಗದೆ ನೀಲಗವಯಗವಾಕ್ಷರೊರಗಿದರು ||
ಸುದ್ದಿಯೇನೋಕಪಿಗಳರಸನ |
ಸದ್ದುಕೇಳಿಸದಾಯ್ತು ರಾವಣ |
ಗೆದ್ದನೆಂಬಬ್ಬರವ ಕೇಳ್ದನು ಕಪಿಕುಲಾಧಿಪನು ||೨೫||

ಎಲೆಲೆ ರಘುರಾಜೇಂದ್ರವಾಹಿನಿ |
ಬಳಲಿತೇ ರಿಪುವಹಹ ಗೆಲಿದನೆ |
ಬಲಿದ ಮೂರ್ಛೆಯೊಳೆನ್ನನೊರಗಿಸುತಿಂತು ಗೈದನಲಾ ||
ಖಳನ ಮೂಳೆಯು ಮುರಿವೆನೆಂದುರೆ |
ಮುಳಿದು ರಭಸದಿನೆದ್ದು ಹಗೆಯನು |
ಕಳದೊಳರಸುತೆ ತಾಗಿ ಹೊಯ್ದನು ರಥವ ಬೊಬ್ಬಿರಿದು ||೨೬||

ತೇರುಮುರಿಯಲ್ಕಾ ದಶಾಸ್ಯನು |
ಹಾರಿದನು ಪಡಿದೇರ್ಗೆ ಮಾಮಾ |
ಶೂರನೀತನು ಸತ್ವಮುಂಟಿವಗೆಂದು ಬಿಲ್ದುಡುಕಿ ||
ಕೂರಲಗಿನಿಸಲಾತನದಸುರೆ |
ಜಾರಿಸುತೆ ಮೇಲ್ವಾಯ್ದು ರಿಪುಶಿರ |
ಮೇರುವಡೆಯಲ್ಕರದೊಳಪ್ಪಳಿಸಿದನು ಬೀಳೆನುತೆ ||೨೭||

ಮರೆದನಂಗವನಾಗಳಸುರನು |
ಭರದಿನಾಗಳೆ ಚೇತರಿಸಿಯಾ |
ಸರಸಿಜೋದ್ಭವ ಮಂತ್ರಪೂರಿತಬಾಣವನು ಹೂಡಿ ||
ಬಿರುನುಡಿಯ ಗಡಣದಲಿ ಭಂಗಿಸಿ |
ಜರಿಯುತಿಸಲದು ಭಾನುನಂದನ |
ನುರವಪೊಕ್ಕದು ಮರವೆಯಿತ್ತುದು ಕೆಡಹಿತುರ್ವಿಯೊಳು ||೨೮||

ಕಂಡನಿದನಗ್ನಿಜನು ವಿಲಯದ |
ಖಂಡಪರಶುವಿನುಗ್ರಕೋಪವ |
ಕೊಂಡು ಬಾಲವ ಬೆಳಸಿಯಸುರನಕಟ್ಟೆರಥದೊಡನೆ ||
ಚಂಡಬಲನಾದೊಡಿದನಿಂದೆಲೆ |
ಭಂಡ ದನುಜಾಧಮನೆ ಬಿಡಿಸಿಕೊ |
ಗಂಡತನವನು ಕಾಣ್ಬೆನೆಂದಿರದೆಸೆದನಂಬರಕೆ ||೨೯||

ಮರಳಿ ನೆಲಕದು ಬೀಳುವನಿತರೊ |
ಳಿರದೆ ಪೊಸರಥದೊಳಗೆ ಕಾಣಿಸು |
ತುರುವ ಶರಗಳಿನಿಸುತುಮಿರ್ದನು ರಾವಣನು ಕಪಿಯ ||
ಅರುಹಲಪ್ಪುದೆ ನೀಲನೇಂ ಸಂ |
ಗರದರಿದ್ರನೆ ಪಗೆಯ ಪೆಗಲೊಳು |
ಮೆರೆಯುತಣೆಕಲ್ಲಾಡಿದನು ತಚ್ಛಿರದ ಮಕುಟಗಳ ||೩೦||

ಪಿಡಿವೆನಿವನನೆನುತ್ತೆ ರಾವಣ |
ಹೆಡತಲೆಗೆ ಕೈನೀಡಲದನವ |
ನೆಡದ ಕೈಯಿಂ ಪಿಡಿದು ಮುಷ್ಟಿಯಿನೆರಗಿದೊಡೆ ಶಿರಕೆ ||
ಸಿಡಿಲುಬಡಿದವನಂತವನು ತಡ |
ಬಡಿಸಿ ತೇರಿಂದಿಳೆಗೆ ಬೀಳಲು |
ದೃಢಪರಾಕ್ರಮಿ ನೀಲನೊದೆದು ತಿರುಂಗಲಾಕ್ಷಣದೆ ||೩೧||

ಹೇಯವೆಂಬುದನರಿದು ಮೆಳಾ |
ಗ್ನೇಯಬಾಣದೆ ಖಳನು ನೀಲನ |
ಸೋಯಿಸಲು ಪಿಂದೆಸೆಯಿಸಿರದವನಿಳೆಯ ನೆಮ್ಮಿದನು ||
ಬಾಯ ಬಿಟ್ಟುದು ಪಡೆಯು ಸೇನಾ |
ನಾಯಕಂಗಳಿವೆಂದು ಕೇಳ್ದದ |
ವಾಯುನಂದನನಟ್ಟಿ ನಿಲಿಸಿದನಂದು ರಾವಣನ ||೩೨||

ಕೂಡೆ ಖಳ ಬೆರಗಾಗಿ ಸಿಡಿಲ ಸ |
ಗಾಢಕೆಯೊಳಾರ್ಭಟಿಸಿ ತಿರುವಿಗೆ |
ಜೋಡಿಸುತೆ ಮಾರ್ಗಣವನೆಸೆಯಲ್ಕಂಡು ಪವನಜನು ||
ನೋಡಲೀಹುಲುಗಣೆಯಿನೆನ್ನ ಸು |
ನಾಡಕೋಡಗವೆನ್ನು ತೆಚ್ಚ ಸು |
ಮೂಢನಂದಿನ ನಗರದಹನವ ಮರೆದನೆಂದೆನುತೆ ||೩೩||

ಎಸೆದ ರಾವಣನಂಬ ಮುರಿಯುತೆ |
ನಸುನಗೆಯೊಳಿಂತೆಂದನೆಲವೋ |
ಅಸಮಭುಜಬಲನೆಂಬ ಜಸಪಾಂತಿರ್ಪೆ ಲೋಕದೊಳು ||
ಪುಸಿಯೊ ನಿಜವೋ ನೋಳ್ಪೆನೆಮಗಿಂ |
ದೆಸೆವಬಲಮೆನಿತುಂಟದೆಲ್ಲವ |
ಪಸರಿಸಿರ್ಪರು ಮೂರುಮೂರುಂಗುದ್ದಸೀವುದೆನೆ ||೩೪||

ಒಪ್ಪಿತೊಪ್ಪಿತು ಮಾತು ಕಪಿ ನೀಂ |
ತಪ್ಪಲಾಗದು ಜೋಕೆ ಸಾರಥಿ |
ಯಿಪ್ಪನಿಲ್ಲಿಯೆ ಸಾಕ್ಷಿಯಪ್ಪನು ನಮ್ಮ ನಡೆವಳಿಗೆ ||
ಒಪ್ಪಿಕೊಳ್ಳೊದಲೆನ್ನದನು ನೀ |
ನಪ್ಪಿಕೊಳ್ಳೀನೆಲನನೆನುತಂ |
ದಪ್ಪಳಿಸಿದನು ಜಲಿದಮುಷ್ಟಿಯಿನಸುರನನಿಲಜನ ||೩೫||

ಕರಣ ಕಳವಳಗೊಳಲು ಹನುಮನ |
ಹರಣ ತೆಗೆಬಗೆಯಾಯ್ತು ಪವನನ |
ತರಳನಾದುದರಿಂದೆ ಬದುಕಿದನಲ್ತೆ ಬೇರುಳಿವೆ ||
ಮರಳಿದುವು ಸಕಲೇಂದ್ರಿಯಂಗಳು |
ತೆರದುವಕ್ಷಿಗಳಾಗ ನಿರುಕಿಸಿ |
ಕಿರುನಗೆಯ ರಾವಣನನೆದ್ದನು ಮುಷ್ಟಿಯನು ನೆಗಹಿ ||೩೬||

ಭಲರೆ ದನುಜೇಶ್ವರನೆ ನಿನ್ನಯ |
ಬಲಕೆ ನಾಂ ಮೆಚ್ಚಿದೆನು ಕಾಣೆನು |
ನೆಲದೊಳಾರುಮನಹಹ ನಿನಗೆ ಸಮಾನರೆನಿಪರನು ||
ಚಲವ ಗೈದೆನು ನಿನ್ನೊಳರಿಯದೆ |
ಫಲವದೇನಿನ್ನಾಡಲದನಿಂ |
ದುಲಿದತಪ್ಪಿಂಗಿದನು ಕೊಳ್ಳೆಂದಾರ್ದು ಗುದ್ದಿದನು ||೩೭||

ಸುರರುಘೋಯೆಂದುಬ್ಬಿ ನಲಿದರು |
ಮೊರೆದುವಗಣಿತವಾದ್ಯವಭ್ರದೆ |
ನಿರಿನಿಳಿಲು ನಿಟಿಲೆನಿಸಿತವಸಿಯೊಳದ್ದಸೆಂಬಂತೆ ||
ಸುರವಿರೋಧಿಯು ನೆಲದೆ ಪವಡಿಸಿ |
ಗೊರಗೊರೆಂಬುತ್ಕ್ರಮಣನಿಸದದೆ |
ಪರಿಯೆ ರಕ್ತದ ಧಾರೆ ಬಾಯಿಂದಳಿದನೆನಿಸಿರಲು ||೩೮||

ಹೆದರಿದನು ಚಿತ್ತದೊಳು ಹನುಮನು |
ಪದರಿದನು ಸರಿಯಲ್ಲೆನುತ್ತೀಂ |
ಗದರುವನೊ ರಘುಪುಂಗವನು ಮೇಣೊಪ್ಪುವನೊ ಮನದೆ ||
ಸದೆದೆನೇಕಿಂದಿವನನಿನಿತಕೆ |
ಚದರಲೇಕಿವನಸುವು ವಿಧಿಯಿದ |
ನೊದವಿಸಿತೆ ತನಗೆಂದು ಚಿಂತೆಯೊಳದ್ದಿ ಮುಳುಗಿದನು ||೩೯||

ಅನಿತರೊಳಗುಸ್ಸೆಂಬ ಸುಯ್ಲಿನ |
ನಿನದ ಕೇಳ್ದುದು ಕಣ್ಣೆಸೆವೆಗಳು |
ಚಣದೆ ತೆರೆದುವು ಕೀಲ್ಗಳಲ್ಲಾಡಿದುವು ಖಳಪತಿಯ ||
ಜನದರಿವು ಮನಸಕಾಯ್ತು ಮಾನಸದ |
ಘನಸರೋವರ ತುಂಬಿತುಳುಕಿ |
ತ್ತನಿಲಸುತನೆಲ್ಲೆನ್ನುತವನೆಲ್ಲೆಡೆಯನೀಕ್ಷಿಸಿದ ||೪೦||

ಕಂಡು ನುಡಿದನು ಹನುಮ ಬಾ ದೋ |
ರ್ದಂಡಬಲಿ ನೀನಹುದು ತನ್ನೊಳು |
ಚಂಡಿಸಿದ ಪಟುಭಟರನರಿಯೆನು ಮೂರುಲೋಕದೊಳು ||
ದಂಡಧರಭೈರವರ ಬಲ್ಲೆನು |
ಗಂಡತನವಿನಿತಿಲ್ಲವವರಲಿ |
ಗುಂಡಿಗೆಯ ಸತ್ರಾಣ ನಿನಗುಂಟೆದನು ಕೊಳ್ಳೆನುತೆ ||೪೧||

ಎಲೆಲೆ ಹೋದನು ಹನುಮನೀಬಲ |
ದೊಳಗೆ ಮಿಡುಕುಳ್ಳವರು ಬಿಡಿಸಿರೊ |
ತಳುವದಿರಿ ಬಳಿಕಳಲಿ ಫಲವಿಲ್ಲಕಟ ಸಾರಿದೆನು ||
ಉಳಿಯಲರಿಯನು ಚಲದ ಗುದ್ದಿದು |
ಭಳಿರೆಯೆಂದತ್ಯುಗ್ರರೋಷೋ |
ಜ್ಜ್ವಲನು ಮುಷ್ಟಿಯ ಬಲಿದು ಗುದ್ದಿದನವನನಿಳೆ ಬಿರಿಯೆ ||೪೨||

ಕೆಟ್ಟಿತಕಟಾ ಕಜ್ಜಮೆಂದಿರ |
ದಟ್ಟಿದೊಡೆ ವೈದ್ಯರನು ವಿಬುಧರು |
ದಿಟ್ಟನಿವನಿಂದೇಳೆ ತನ್ನಯ ಬಟ್ಟೆಯೇನೆಸುತೆ ||
ಗುಟ್ಟಿನೊಳು ರಾವಣನು ಜಾರಿದ |
ನಟ್ಟಹಾಸವ ತೋರಿದನು ಜಗ |
ಜಟ್ಟಿ ರಾಘವನಿರ್ದೆಡೆಗೆಗಂದಟ್ಟಿ ನಿಜರಥನ ||೪೩||

ಉರವಣಿಸಿಯೈತರ್ಪ ದಾನವ |
ನಿರವನೀಕ್ಷಿಸಿ ದೈತ್ಯರಿಪುವಂ |
ದಿರದೆ ತಾಂಕರೆದಾ ವಿಭೀಷಣನನ್ನು ಕೇಳಿದನು ||
ಬರುವದೈತ್ಯನದಾರು ಕಂಗಳು |
ಬೆರಗುಗೊಳುತಿವೆ ಹೆಸರದೇನೆನೆ
ಕರಗಳನು ಮುಗಿದಿಂತು ನುಡಿದನು ಭಕ್ತನೂಲವಿನಲಿ ||೪೪||

ಈತನಲ್ಲವೆ ಜೀಯ ದಿವಿಜ |
ವ್ರಾತವನು ಸೆರೆವಿಡಿದ ಭುವನ |
ಖ್ಯಾತನೀತನೆ ಕಳವಿನಿಂ ತ್ರೈಲೋಕ್ಯಜನನಿಯನು ||
ಭೀತಿಯಂ ತೊರೆದುಯ್ದ ಪಾತಕಿ |
ಯೀತನೇ ರಾವಣನು ನಿಸ್ಸಯ |
ಕೌತುಕದ ಮೊನೆಗಣೆಯೊಳೀತನ ಧಾತುಗಿಡಿವುದೆನೆ ||೪೫||

ಎಲೆಲೆ ರಾಮಗೆ ವಿಾಸಲೀತನು |
ತಿಳಿಯದಿಂತಿದನೇನಗೈದೆನು |
ಕೊಳುಗುಳದ ಭಂಗಿಯಲಿ ಕೈದಪ್ಪಾಯ್ತಲಾ ಎನುತೆ ||
ಘಳಿಲನಣ್ಣನ ಬಳಿಗೆ ನಡೆತಂ |
ದಳುಕುತಂಜುತೆ ನಡೆದ ಪರಿಯನು |
ತಿಳುಹುತಿರಲತ್ತೊಡನೆ ರಾವಣನೆಳ್ದು ಗರ್ಜಿಸಿದ ||೪೬||

ಎಲ್ಲಿ ನರಪಶುವೆತ್ತ ಜಾರಿತು |
ನಿಲ್ಲದೋಡಿತೆ ಭಲರೆಯೆಂದಾ |
ಖುಲ್ಲನಸುರನ ಪಳಿವ ಕೇಳ್ದಾಕ್ಷಣದೆ ಲಕ್ಷ್ಮಣನು ||
ನಿಲ್ಲದೈತಂದೆಚ್ಚು ಶರವನು |
ಬಿಲ್ಲ ಮುಕ್ಕಡಿಗೈದೊಡಾಗಳೆ |
ಹಲ್ಲಮೊರೆದವನಿಡಲು ಪಶುಪತಿದತ್ತಶಕ್ತಿಯೊಳು ||೪೭||

ಹೊದ್ದಿದುದೆ ಲಕ್ಷ್ಮಣಗೆ ದುರ್ಗತಿ |
ವೃದ್ಧಿಯಾದುದೆ ಪಾಪಿದನುಜಂ |
ಗದ್ದಿಪೋದುದೆ ಸುರರ ಕಾರ್ಯವು ಭೂತಳದೊಳಿಂದು ||
ಬಿದ್ದವೇ ನಾವೆನ್ನುತಮರರು |
ಸದ್ದುಗುಡಲಾಶಕ್ತಿಯಿಂದವೆ |
ಎದ್ದನಾಗುರುಳಿದನು ಲಕ್ಷ್ಮಣನಾಯು ತೀರಿತೆನೆ ||೪೮||

ಎಸೆವ ಭೂಸುರ ವಂಶದಲಿ ಬಂ |
ದಸುರಕೃತ್ಯವನಾಚರಿಸಲೀ |
ವಸುಧೆ ನಿನ್ನನದೆಂತು ಹೊರುವುದು ಜಾತಿಬಾಹ್ಯನನು ||
ಮುಸುಡನೀಕ್ಷಿಸಲಹುದೆ ನಿನ್ನಯ |
ಪೆಸರ ವಚಿಸಲುಬಹುದೆ ನಿನ್ನನು |
ಕುಸುರಿದರಿವೆನೆಸುತ್ತೆ ಲಕ್ಷ್ಮಣನಾಗಳಡಹಾಯ್ದ ||೪೯||

ಭಾಪುರೇ ಸೌಮಿತ್ರಿಭಲರೇ |
ಚಾಪವಿದ್ಯಾಭ್ಯಾಸನಿನಗಿರ |
ಲೀಪರಿಯ ದುರ್ಭಾಷೆ ಸಲುವುದೆ ನುಡಿಸು ಕಾರ್ಮುಕವ ||
ಭೂಪತಿಯ ವಂಶದಲಿ ಬಂದವ |
ರೀಪರಿಗೊಳಾಡುವರೆ ರವಿಕುಲ |
ದೀಪರೇ ನೀವೆಂದು ಸುರಿದನು ಸರಲನಸುರಪತಿ ||೫೦||

ದಿಟ್ಟನಹುದೋ ದೈತ್ಯಕುಲದಾ |
ಜಟ್ಟಿಯಹುದೋ ಶುಕ್ರಸಿಂಹನೀ |
ನಿಟ್ಟುಕಲಿತೆಯ ಬಾಣದಿಸುಗೆಯ ಜಾಣನಹೆ ನೀನು ||
ದಿಟ್ಟನಾದೊಡೆ ನನ್ನ ಬಾಣದ |
ಸೃಷ್ಟಿಯಂದವನೀಕ್ಷಿಸೆಂದಾ |
ದಿಟ್ಟಲಕ್ಷ್ಮಣನಂಬು ತಾಗಿತು ಬಿದ್ದನಸುರೇಂದ್ರ ||೫೧||

ತೀರಿತಿವನವತಾರವೀತನ |
ತೋರಿ ಜನಕಜೆಗಿಂದು ತನ್ನಯ |
ಪೌರುಷವ ಮೆರೆಯಿಸುತುಮಾಕೆಯ ಮನದ ಸಂಶಯವ ||
ಆರಿಸಲುಬೇಕದಕೆ ನಿಜರಥ |
ವೇರಿಸುವೆನೆಂದಾಗಳವನನು |
ತೋರತೋಳ್ಗಳಿಸೆತ್ತಲೇಳದೆ ಭಾರವಾಗಿರಲು ||೫೨||

೪೯,೫೦,೫೧ ನೆಯ ಪದ್ಯಗಳನ್ನು ಓದಿದನಂತರ ೪೬,೪೭,೪೮ ನೆಯ ಪದ್ಯಗಳನ್ನು

ಬೆರಗುಗೊಂಡನು ದಾಶರಥಿಗಳ |
ಪರಿಯು ಸೋಜಿಗವರಿಯಲಾಗದು |
ಬರಿಯ ಪೆಣನನು ನೆಗಹಲೆನ್ನಿಂ ಹರಿಯದಾದುದಲಾ ||
ಕಿರಿಯನೇ ನಾಂ ಬಲದೊಳೇನ |
ಚ್ಚರಿಯೊ ಕಾಣೆನೆನುತ್ತುಮಪನುರೆ |
ಶಿರವ ತೂಗುತ್ತಿರ್ಪ ಸಮಯಕೆ ಬಂದನಾ ಹನುಮ ||೫೩||

ಏನೆಲವೊ ಚೋರಾಗ್ರಗಣ್ಯನೆ |
ನಾನು ಮರೆದೊರಗಿರ್ಪ ಸಮಯದೆ |
ಮಾನವೇ ನೀಂ ಗೈದ ಪಂತದ ಗೋಣ ಮುರಿದೀಗ ||
ಕೇಣಸರವನು ನೀಗಿ ಪಿಂದೆಗೆ |
ದೇನುಮಂ ತಿಳಿಯದನವೋಲಿಹೆ |
ನಾನದಾರಿತ್ತೀಕ್ಷಿಸೆನ್ನುತೆ ಗುದ್ದಿದನುಖಳನ ||೫೪||

ದಡದಡಿಸಿ ಬಿಸಿರಕುತವೊಡನು |
ಗ್ಗಡಿಸಿ ಬಾಯ್ಮೂಗುಗಳದೆಸೆಯಿಂ |
ಬಿಡದೆ ಸುರಿಯಲು ರಥವನೇರಿಸಿ ಸೂತನಾತನನು ||
ಕಡುಜವದೆ ಜಾರಿದೊಡೆ ಹೋಗೆಲೊ |
ಬಡನರಿಯೆ ಹೋಗಿನ್ನು ನಿನ್ನನು |
ಕಡಿವವನು ಬೇರಿಹನು ನಾನಲ್ಲೆಂದು ಪವನಜನು ||೫೫||

ತಿರುಗಿ ಲಕ್ಷ್ಮಣನಿರವ ಕಂಡನು |
ಮರುಮರುಗಿದನು ಮನದೆ ತಾನೀ |
ಪರಿಯು ಸಹಜವೆ ರಾಘವೇಶ್ವರನನುಜಗೆಂದೆನುತೆ ||
ಕರವ ಮೂಗಿನ ತುದಿಯೊಳಿಟ್ಟ |
ಲ್ಲಿರಲ ಸಂಚಾರವನೆ ಕಾಣದೆ |
ಹರಣವನು ಸೆಳೆದಾತನೆಲ್ಲಿಹನಾವನೆನ್ನುತ್ತೆ ||೫೬||

ಬಡಿವೆನಿಂದಾ ಯಮನನಬ್ಜಜ |
ಮೃಡಮಧುದ್ವಿಷದಾದಿಸುರರನು |
ಕಡಲೊಳಗೆ ಮುಳುಗಿಪೆನು ಹರಣವನೀಯಲಿರದಿಂದು ||
ದುಡುಕದಿವನನು ಕೊಂಡುಪೋಗೆ |
ನ್ನೊಡೆಯನಿದಿರೊಳಗಿರಿಸಿಯಾಣತಿ |
ವಡೆದು ಬಳಿಕೆನ್ನಳವ ಮೆರೆವೆನೆನುತ್ತೆ ನಿಶ್ಚೈಸಿ ||೫೭||

ತಂದನವನನು ರಾಘವೇಶನ |
ಮುಂದೆ ಕಂಪಿಸುತಿಳುಹಿದನು ಜೇ |
ಯಿಂದು ತನ್ನನು ಕೊಲ್ಲು ಮೇಣಂತಲ್ಲದಿರೆ ಕಳುಪು ||
ತಂದು ನಾನಿವನಸುವನೀಗಳೆ |
ಚಂದದಿಂ ಬದುಕಿಸುವೆನೆಂದೆನ |
ಲಂದು ರಾಘವನಳುಕಿ ತಮ್ಮನ ಮುಖವ ನೋಡಿದನು ||೫೮||

ಅರಿದನಿಂದಿದು ಮೂರ್ಛೆಯಲ್ಲದೆ |
ಕೊರತೆಯಸುವಿಂಗಿಲ್ಲವೆಂಬುದ |
ನೊರೆದು ಸಕಲರ್ಗದನು ತಮ್ಮನ ಪರಿಯನಾರಯ್ದು ||
ಪರಮಕರುಣಾಕರನು ಮರುಗು |
ತ್ತಿರಿಯ ಮೇಲಂದಿರದೆ ಕೋಪಿಸಿ |
ಶರವ ಪೂಡಿದನೆತ್ತಲಿರ್ಪನು ಖಳನು ತೋರೆನುತೆ ||೫೯||

ಅದೆಕೊ ನೋಳ್ಪುದು ಖೂಳನಸುರನು |
ಬೆದರಿಯೋಡುತ್ತಿರ್ಪನಿಲ್ಲಿಯೆ |
ಕದನಗುಡುವುದು ತನ್ನ ಪೆಗಲಿದನೇರಿ ತಾವಿಂದು ||
ಹದಸಿದಲ್ಲವು ರಥದೊಳವನಿರೆ |
ಪದದೆ ತಾಂ ನಿಂದಿಹುದು ಕರುಣಿಪು |
ದಿದನೆನುತೆ ಮಾರುತಿಯು ಬೇಡಲ್ಕೊಪ್ಪಿದನು ನೃಪತಿ ||೬೦||

ಏಕೆ ತೊಲಗುವೆ ದಾನವೇಶ್ವರ |
ನೂಕು ನಿನ್ನಯ ರಥವನಿತ್ತಲು |
ಲೋಕರಕ್ಷಕನೈದಿಹನು ಬೆದರೇಕೆ ಚಿತ್ತದೊಳು ||
ಆಕಮಲೆಯನು ಕರೆಯಿಸೀಕರು |
ಣಾಕರನ ಪದಕಮಲಕೊಪ್ಪಿಸಿ |
ಸಾಕು ನೀನೆಂದೆರಗು ಬಾರೆಂದಾರ್ದನನಿಲಜನು ||೬೧||

ಕೇಳಿ ದಶಶಿರನದನು ರೋಷ |
ಜ್ವಾಲೆಯಂಗವ ಸುಡಲು ರಥವನು |
ಖೂಳರಾಘವನತ್ತ ತಿರುಗಿಸು ಸೂತ ನೀನೆಂದು ||
ಬಾಲೆ ಜಾನಕಿ ಲಕುಮಿ ದಿಟಮೆಂ |
ದಾಲಿಸಿದ ಬಳಿಕವಳನುಳಿವೆನೆ |
ಹೇಳು ಸಿರಿಗಂ ಬೇರೆ ವಸ್ತುವೆ ಎಂದನನಿಲಜಗೆ ||೬೨||

ಫಡ ನಿಶಾಚರಕುನ್ನಿ ನಿನ್ನೀ |
ಯಡಗಿಗಾಂ ತಾಮೆಂದು ಶರಗಳು |
ಸಡಗರಿಸಿ ಮುಂಬರಿದು ಹಾಯ್ದುವು ತಿನ್ನಲದಸೀಗ ||
ತಡವ ಮಾಡದೆ ಬೇಗ ನಿನ್ನೀ |
ಯೊಡಲನೊಪ್ಪಿಸು ಬರಿದೆ ಸಲ್ಲದ |
ನುಡಿಗಳೇಕೆಂದಿರದೆ ರಾಘವನೆಚ್ಚ ನಂಬುಗಳ ||೬೩||

ಇಟ್ಟಣಿಸುತಿವನೆಚ್ಚ ಶರವನು |
ತಟ್ಟನಾ ದಶಮುಖನು ಖಂಡಿಸಿ |
ಬಿಟ್ಟೊಡತಿಶಯಮೆನಿಪ ನೂತನಬಾಣಸಂತತಿಯ |
ಹುಟ್ಟುಗಿಡಿಪೆನೆನುತ್ತೆ ರಾಮನು |
ಸಿಟ್ಟನಿಂ ದಿವ್ಯಾಸ್ತ್ರದಿಂದದ |
ನಿಟ್ಟುಕೊಚ್ಚಿದೊಡಾಗ ರಾವಣನಿರದೆ ಖತಿಗೊಂಡ ||೬೪||

ಮೂರುಲೋಕದ ವೀರ ತಾಂ ಗಡ |
ಹೋರಿಕೊಂದನು ಮನುಜಮಾತ್ರನ |
ಧೀರತನಕಿದು ಸೊಗಸೆ ತೆಗೆಯೆಂದೆನ್ನ ನಾಡುವರು ||
ಕ್ರೂರ ನಿನ್ನಯ ಕೃತ್ಯವೆಣಿಸಲ |
ಪಾರರಾಕ್ಷಸವೀರರಳಿದರು |
ದೂರಿಗಾನಿನ್ನಂಜಿ ನಡೆದರೆ ಪಳಿವು ಪೊದ್ದುವುದು ||೬೫||

ಎಣಿಕೆಯಿನ್ನೇಕೆನ್ನುತರಸನ |
ತೃಣಕೆ ಬಗೆಯುತೆ ಕಲಿಸುರಾರಿಯು |
ಕಣೆಯ ಸರಿಯನು ಸುರಿಯೆ ಪೊಕ್ಕುವು ರಾಮನಂಗದೊಳು ||
ಹಣಿದಗಾಯವ ಬಗೆಯದರಸನು |
ಬಣಗುರಕ್ಕಸಕುನ್ನಿ ನಿನ್ನಯ |
ಪಣೆಯ ಬರೆಹವನೊರಸುವಂಬನು ನೋಡು ನೀನೆಂದು ||೬೬||

ಉತ್ತಮಾಸ್ತ್ರದಿನಾತನಾಬಿ |
ಲ್ಛತ್ರಳಿಕೆಗಳನಿರದೆ ಖಂಡಿಸಿ |
ಮತ್ತೆ ಬಿಡದೆಸೆದವನ ರಥವನು ಕತ್ತರಿಸಿ ಕೆಡಹಿ ||
ಮತ್ತಿಯವನಂಗದಲಿ ಸರಳನು |
ಬಿತ್ತಲೆಯು ನೀನಾದೆ ನಿನ್ನನು |
ಸತ್ತ ಪೆಣನನು ಬಡಿವನಲ್ಲಾನತ್ತ ತೊಲಗೆನಲು || ||೬೭||

ನೋಡಿದನು ದಶಶಿರನು ತನಗೀ |
ಪಾಡು ಸಮುವೇನಕಟ ಬೊಮ್ಮನ |
ಬೇಡದಾದೆನು ಮನುಜಪಶುವಿಂ ಸಾವು ಬೇಡೆಂದು
ಆಡಿ ಫಲವೇನಿನ್ನು ದೇಹವು |
ಬಾಡಿ ಕಂಗೆಟ್ಟಿಹುದು ಶಕ್ತಿಯು |
ಕೂಡಿ ನಾಳೆಯೊಳಿವನ ಕೊಲ್ಲುವೆನೆಂದು ತಿರುಗಿದನು ||೬೮||

ಒದರಿದುವು ನಿಸ್ಸಾಳವಭ್ರದೆ |
ಕದನಜಯದುತ್ಸವಕೆ ದಿವಿಜರ |
ಸುದತಿಯರು ಮಂಗಳವ ಪಾಡುತೆ ಚೆಲ್ಲಿದರು ಸುಮವ ||
ಒದವಿದನುವರದಲ್ಲಿಯುಂ ತ |
ನ್ನೆದೆಯೊಳಾಲಕ್ಷ್ಮಣನ ಚಿಂತಿಪ |
ಸದಯರರಸನು ಬಂದು ಕಂಡನು ಕುಶಲಿಯನುಜನನು ||೬೯||

ನಾಲ್ಕನೆಯಸಂಧಿ ಸಂಪೂರ್ಣಂ

ಐದನೆಯ ಸಂಧಿ.

ಸೂಚನೆ || ಮನದೊಳಂಜುತ್ತಸುರಪತಿ ತ |
ನ್ನನುಜಸಾದಾಕುಂಭಕರ್ಣನ |
ನನುವರಕ್ಕಟ್ಟಲ್ಕೆ ರಾಘವಶರದಿನವನಳಿದ ||

ಧುರದೆ ತನ್ನನು ಗೆಲ್ದೊಡಾಶಂ |
ಕರಗೆ ತೀರದು ಮನುಜನಿಂದಾಂ |
ಮುರಿದೆನೆಂಬುದು ಬಗೆಯಲಿಳೆಯೊಳಗಿದು ವಿಚಿತ್ರವಲಾ ||
ತರಣಿವಂಶದೆ ಜನಿಸಿದೀತನು |
ಸಿರಿಯರಸನಾಗಿರಲೆವೇಳ್ಕುಂ |
ಬರಿಯ ನರನಲ್ಲೆಂದು ದನುಜೇಶ್ವರನು ಬೆದರಿದನು ||೧||

ಮೊದಲು ಮಾವನು ಬಳಿಕಮೊಡವು |
ಟ್ಟಿದನು ಪರಿಪರಿ ಬುದ್ಧಿವೇಳಿದ |
ರದನು ಕೇಳದೆ ಕಾರ್ಯಗಿಡಿಸುತ್ತಿಂದು ಹಲುಬಿದೊಡೆ ||
ಕೆದರಿ ಮೇರುವಿಗಿಕ್ಕಿ ಕಿಚ್ಚನು |
ಬೆದರಿ ಮೊಗೆನೀರೆರಚಿ ನಂದಿಸ |
ಲದನು ಬರಿಯಾಯಾಸಗೊಳ್ವನ ತೆರವನಾಂತೆನಲಾ ||೨||

ಒಳ್ಳಿತಿದಕಿಂತೇಕೆ ಚಿಂತೆಯು ।
ಬಲ್ಲಿದರು ವಿಧಿಹರಿಮಹೇಶ್ವರ ।
ರೊಲ್ಲೆವೆಸ್ಗದೆ ತನ್ನ ಸೊಲ್ಲಿಂಗಂಜಿ ನಡೆಯುತಿರೆ ॥
ಪೊಳ್ಳುಮಾನಿಸರಾದಿವಂದಿರು ।
ಹುಲ್ಲಿಗಂ ಕಡೆಯಲ್ತೆ ತನ್ನಿದಿ ।
ರಲ್ಲಿ ನಿಲ್ಲುವ ಸತ್ವವೆಲ್ಲಿಹುದೆಂತು ಸಲ್ಲುವುದು ॥೩॥

ಎಂದು ಧೃತಿಯನು ತಂದು ಮತ್ತಂ ।
ಹಿಂದೆಹಿಂದಕೆ ಸೆಳೆವ ಚಿತ್ತವ ।
ನೊಂದುಗೂಡಿಸುವದಟು ಸಾಲದೆ ಹಂದೆ ತಾನಾಗಿ ॥
ನೊಂದನೋವನು ನೆನೆದು ಸನಿಹದ ।
ಬಂಧು ತನಗಾರೆಂದು ಚಿಂತಿಸಿ ।
ಯಂದು ತಮ್ಮನ ಕುಂಭಕರ್ಣನ ನೆನೆದನಸುರಪತಿ ॥೪॥

ಕರೆದು ತನ್ನಿರೊ ಕುಂಭಕರ್ಣನ ।
ಧುರದೊಳಾಂತರಸಿರಿವ ಭೀಮನ ।
ಮೆರೆವ ಮೇರೂಪಮಶರೀರನ ಬೇಗದಿಂದೆನಲು ॥
ಹರಿದರೊಡನೆಯೆ ಭೃತ್ಯರಾತನು ।
ಸರಸಿಜೋದ್ಭವನಿತ್ತವರದಿಂ ।
ದರೆವರುಷದುರುನಿದ್ರೆಯೊಳಗಿರಲಂದು ನೋಡಿದರು ॥೫॥

ಏಳಿಸುವೆವೆಂತಿವನನೆನ್ನುತೆ ।
ಮೇಳವಿಸಿದರು ಲಕ್ಷರಾಕ್ಷಸ ।
ರಾಳುಗಳನೊಡಗೊಂಡು ಕೂಗಿದರಳ್ಳೆಯೊಡೆವಂತೆ ॥
ಸಾಲಭೇರಿಯ ಹೊಡೆಸಿದರು ಮೈ ।
ಮೇಲೆ ನಿಂದರು ಜಗ್ಗಿತುಳಿದರು ।
ಸೋಲಲಿಲ್ಲವ ನಿದ್ರೆ ನೀಗಿತು ಮೊದಲಿಗಿಮ್ಮಡಿಸಿ ॥೬॥

ಬರಿಸಿ ಮತ್ತಗಜಂಗಳನು ಪೇ ।
ರುರದ ಮೇಲಂದಿರದೆ ತುಳಿಯಿಸ ।
ಲರೆದೆರೆದುವಕ್ಷಿಗಳು ಕೈಕಾಲಲುಗಿತಸುರಪನ ॥
ಅರಿವು ತಲೆದೋರಿದುದು ಸುತ್ತಲು ।
ನೆರೆದ ಪರಿವಾರವನು ನೋಡುತೆ ।
ಮುರಿದು ಮೈಯನು ಹಾಸಿಗೆಯ ಮೇಲೆದ್ದು ಕುಳ್ಳಿರ್ದು ॥೭॥

ಏನಿರೋ ನೀವೆನ್ನ ನಿದ್ರೆಯ |
ನೇಸುಕಾರಣ ತಪ್ಪಿಸಿದಿರಿಂ |
ದೇನರಿಷ್ಟವು ನಮ್ಮ ಲಂಕಾಪುರಿಗೆ ಸಮನಿಸಿತು ||
ದಾನವೇಶನು ಕುಶಲಿಯೇ ಸ |
ತ್ರಾಣನೆನಿಸಿರ್ಪಿಂದ್ರಜಿತ್ತುವ |
ಸೂನಸುಖದಿಂದಿಹನೆ ನುಡಿವುದು ಬೇಗದಿಂದೆನಲು ||೮||

ಜೀಯ ಕುಶಲಿಯು ನಮ್ಮ ರಾಯನ |
ಜೇಯನವನಾತ್ಮಜನು ಸುಖಿ ತಮ |
ಗಾಯುಸವನಿತ್ತೆಬ್ಬಿಸಿದೆವಿಂದೊಡೆಯನಾಜ್ಞೆಯಲಿ ||
ನೋಯಲಾಗದು ಬಿಜಯಗೈವುದು |
ರಾಯನೋಲಗಕೆನಲು ದೂತರ |
ಪಾಯಮಿಂದುಂಟೆನುತೆ ಬಂದನು ಕಂಡನಗ್ರಜನ ||೯||

ಬಂದ ತಮ್ಮನನಿದಿರುಗೊಂಡಾ |
ನಂದದಿಂ ಬಿಗಿದಪ್ಪಿ ಮನ್ನಿಸಿ |
ಯಂದು ತನಗೊದವಿರ್ಪ ಕಷ್ಟವನೆಲ್ಲವನು ತಿಳುಹಿ ||
ಮುಂದೆ ನಿನ್ನಿಂದಸುರವಂಶವಿ |
ದೊಂದಬೇಕಭಿವೃದ್ಧಿಯನು ಒಗೆ |
ದಂದು ಸಲಹುವುದೆಂದನನುಜಂಗಂದು ರಾವಣನು ||೧೦||

ಅಣ್ಣನಿಂತೆನೆ ಕೇಳ್ದು ದನುಜನು |
ಕಣ್ಣಿನಲಿ ನೀರ್ಮುಕ್ಕಳಿಸಿದನು |
ಹೆಣ್ಣಿಗೋಸುಗ ರಾಕ್ಷಸರ ಕುಲ ತಣ್ಣಗಾದುದಲಾ ||
ಇನ್ನು ನುಡಿವೆಂ ಬೆಂಕಿಯೆಡೆಯಣ |
ಬೆಣ್ಣೆ ಕರಗುತ್ತಳಿವತೆರದೊಳು |
ನನ್ನು ತಾಂಗಿಗೆ ಸೀತೆಗಳಿಪಿದನಳಿಯದುಳಿದಪನೆ ||೧೧||

ಆತನಾರೆಂದರಿದೆ ರಾಮನ |
ನಾತಳೋದರಿ ಸೀತೆ ಮನುಜೆಯೆ |
ಪಾತಕಿಯು ನೀನೆನಿಸೆ ನಿನ್ನನು ಘಾತಿಸಲು ಬಂದ ||
ಚೇತನಾತ್ಮಕನಾದಿಲಕ್ಷ್ಮಿಯು |
ಭೂತಳದೆ ಭಾರವನು ತಗ್ಗಿಸ |
ಲೀತೆರದೊಳೈದಿರ್ಪರವರಿದನರಿದು ನಡೆಯೆಂದ ||೧೨||

ಕುಲದೊಳೊರ್ವನು ಜನಿಸಿ ತನ್ನಯ |
ಕುಲವನಳಿಸಿದ ಪಾಪಿಯೆಂಬಾ |
ಪಳಿವಿಗಾಕರವಾಗಿ ಕಿಡದಿರು ಕಳುಹು ಸೀತೆಯನು ||
ನಳಿನನಾಭನ ವೈರವಾಗದು |
ಕಲಿಗಳೇ ನಾವಾತನಿದಿರೊಳ |
ಗುಳಿವುಪಾಯವ ಕಾಣ್ಬದೆನಲಿಂತೆಂದನಸುರಪತಿ ||೧೩||

ಫಡಫಡೆಲವೋ ತಮ್ಮ ನೀಂ ಬಾ |
ಯ್ಬಡಿಕನೆಂಬುದನರಿದೊಡಂ ತಾಂ |
ಕಡೆಯೊಳಾಪತ್ಕಾಲಕೊದವುವನೆಂದು ಬರಿಸಿದೆನು ||
ನುಡಿದು ಫಲವೇನಿನ್ನು ಪೋಗಾ |
ಬಡನರೇಂದ್ರನ ಸೇರಿ ಸೇವಿಸು |
ಪಿಡಿದ ಚಲವನು ಮಾತ್ರರಾವಣ ಬಿಡುವನಲ್ಲೆಂದ ||೧೪||

ಕಂಡನಣ್ಣನ ಮೂರ್ಖಬುದ್ಧಿಯ |
ನಂಡಲೆದು ಫಲವಿಲ್ಲವೆನ್ನು |
ದ್ದಂಡತನವನು ತೋರಿ ಹರಿಯೊಳು ಕಾದಿ ಮಡಿಯುವೆನು ||
ಕೊಂಡಪೆನು ವರಮುಕ್ತಿರಾಜ್ಯವ |
ಚಂಡಿಸುವುದೇಕೆನುತೆ ಬೆಸನವ |
ಕೊಂಡೆನಗ್ರಜ ನಮರಕೆನ್ನನು ಬಿಟ್ಟು ನೋಡೆಂದ ||೧೫||

ತಿಳಿವನಿದನಡಿಗೊತ್ತಿ ಮರವೆಯ |
ಕಳವಳದೆ ಮನವಿಕ್ಕಿ ಗಾಂಪರು |
ಬಳಸುವಾಹಾನಿಯಲಿ ನಡೆಗೊಂಡಾದ ಬಳಿಕೀಗ ||
ಬಲಿದತೋಳ್ಗಳ ಬಲವ ತೋರ |
ಲ್ಕೆಳಸಿದೆಯ ನತುಭವನೆ ರಿಪುಕುಲ |
ವಳಿದುದಿನ್ನೇಂ ಕೈದುಗೊಳ್ಳೆಂದಸುರಪತಿ ನುಡಿದ ||೧೬||

ಕೈದುವಿಂದೇಂ ಭುಜಗಳಿಂದವೆ |
ಮೋದಿ ಕೆಡಹುವೆನಹಿತರನು ಬಿಡು |
ಖೇದವಿದಕಿನ್ನೇಕೆ ನಿನಗೆಂದಗ್ರಜಂಗೆರಗಿ |
ಕ್ರೋಧವಶದಿಂ ದಾಂಟಿ ಕೋಟೆಯ |
ನೈದುತಿರಲಾಕುಂಭಕರ್ಣನು |
ಮೇದಿನೀಸುತೆಯರಸಕೇಳ್ದನಿದಾವನೆಂದೆನುತೆ ||೧೭||

ಅರಸ ಚಿತ್ತವಿಸಿವನು ರಕ್ಕಸ |
ರರಸನನುಜನು ಕುಂಭಕರ್ಣನು |
ಪಿರಿಯಮೆಯ್ಯವನುರುಪರಾಕ್ರಮಿ ಸತ್ವಯುತನಹನು ||
ಧುರದೊಳಿವನನು ಗೆಲಲು ಮಿಕ್ಕರಿ |
ಗರಿದು ನಿನ್ನಯ ಸರಳ ಮೊನೆಯಲಿ |
ಸಿರವನರಿಯೆಂದೆಚ್ಚರಿಸಿದನು ವರವಿಭೀಷಣನು ||೧೮||

ಘಡಘಡಾನಿರುತಿರಲು ರಕ್ಕಸ ||
ವಡೆಗೆ ಸೋಲಿಂದೆಂಬ ದುರುಳರ |
ಕಡಿದು ಭೂತಂಗಳನು ತಣಿಸುವೆನೀಗ ನೋಡೆನುತ ||
ಕಡುಭರದೊಳೈತಂದು ಕೋಡಗ |
ವಡೆಯನಡಿಗಳಿನೊದೆದು ಕೆಡಹು |
ತ್ತೊಡನೆ ಕರದಿಂ ಪಿಡಿದು ಬಡಿದನು ಕುಂಭಕರ್ಣಕನು ||೧೯||

ಕೇಳು ಸೇನಾನಾಥ ನೀಲನೆ |
ಕೇಳು ಜಾಂಬವ ಪಾವಮಾನಿಯೆ |
ಕೇಳು ನೀನಂಗದನೆ ಕೇಳೈ ಕೀಶಪತಿ ಕೇಳು |
ಹೇಳಲಾರೆವು ನೋವನಿದನಾಂ |
ತಾಳಲಾರೆವು ಬೇಗ ಬಂದೀ |
ಖೂಳನತ್ತಣಿನೆಮ್ಮ ಬಿಡಿಸುವುದೆಂದು ಪಡೆ ಮೊರೆಯೆ ||೨೦||

ನೊಂದರಕಟಾ ಕಪಿಗಳೆನುತ್ತೈ |
ತಂದು ಮುತ್ತಿದರಗ್ರಗಣ್ಯರು |
ಹಿಂದೆ ಮುಂದಿಕ್ಕೆಲದೊಳೆಸೆದರು ಬಂಡೆಮರಗಳನು ||
ನೊಂದನೇಸಿವನಿದಕೆ ಸನಿಹಕೆ |
ಬಂದು ಮುಷ್ಟಿಯೊಳೆರಗಿಯಿಪರನು |
ಬಂಧಿಸಿಯೆ ಕಕ್ಷದೊಳು ಲಂಕೆಗೆ ಸರಿಯಲನುವಾದ ||೨೧||

ಸರಿಯುತಿರೆ ಕಂಡಂದು ಲಕ್ಷ್ಮಣ |
ನುರುವಶರಗಳನಿಸಲು ಕೌಂಕುಳು |
ತೆರಹುಗೊಟ್ಟುದು ಭೂಮಿಗುರುಳಿದರಿವರು ಬುಳುಬುಳನೆ ||
ಉರುಳದೊಯ್ಯನೆ ಕಪಿಗಳರಸನು |
ಕರಗಳನು ನೀಡುತ್ತೆ ದಾನವ |
ನೆರಡುಕಿವಿಗಳ ಬಲಿದು ಪಿಡಿಯುತ್ತೇರಿ ಹಿಂದಲೆಗೆ ||೨೨||

ಭರದೆ ಮೂಗನು ಕಚ್ಚಿ ತುಂಡಿಸಿ |
ಯಿರದೆ ಕಿವಿಗಳ ಹರಿದು ನಭಕುರೆ |
ಪರಿದು ಪಾರಿಯುದಾತ್ತರಾಘವನೆಡೆಯಸೇರಿದನು ||
ಪರಿವ ರಕುತವ ಕಂಡು ಖಳನಿರ |
ದೊರಸಲದನೆಂದಾಗ ಸವರು |
ತ್ತರಿದು ಕಿವಿಮೂಗುಗಳು ಪೋದುದನಾರ್ದನಿಳೆ ಬಿರಿಯೆ ||೨೩||

ತಂಗಿಗಾದಾಮಾನಹಾನಿಯು |
ಸಂಗಡಿಸಿತಲೆ ತನಗುಮಿಂದಾಂ |
ಹೆಂಗಳಿದಿರೊಳಗೆಂತು ನಾಚದೆ ಮುಖವ ತೋರುವೆನು ||
ಸಂಗರದೆ ಹೊಯ್ದಾಡುತಸುವನು |
ಹಿಂಗಿಸುವುದೇ ಮತವು ತನಗಿಂ |
ತಂಗಭಂಗವೆ ಶಿವಶಿವೆನ್ನುತೆ ಮರಳಿದನು ರಣಕೆ ||೨೪||

ಆರಿ ಬೊಬ್ಬರಿದತುಳರೌದ್ರವ |
ಬೀರಿ ರಾಘವನಿರ್ಪ ಠಾವನು |
ಸೇರಿ ನೀಸತಿಶೂರನಾದೊಡೆ ಬಾರ ಕೆಣಕೆನುತೆ ||
ವಿಾರಿ ಮಾತುಗಳಾಡೆ ರಾಮನು |
ಭೂರಿರೋಷವನಾಂತು ಧನುವಿಂ |
ಗೇರಿಸುತೆ ದಿವ್ಯಾಸ್ತ್ರನಿಕರವನೆಚ್ಚನಾ ಖಳನ ||೨೫||

ಅರರೆ ರಾಘವ ಕಣೆಯನಿಸುವಾ |
ಪರಿಯ ಬಲ್ಲೈಯೆಲ್ಲಿ ಕಲಿತೈ |
ಗುರಿಯ ವಿಾರದೆ ಬಿದ್ದುವೈ ದಿಟ ಜಾಣ ಸೀನಹುವೈ ||
ಉರಿಯ ಕೋಟೆಯ ಸೂರೆಗೊಳಲೆಂ |
ದರಗು ಪುಗುವಂತಾಯ್ತು ನಿನ್ನೀ |
ಬರವದಿಲ್ಲಿಗೆ ಮರಳುವಾಶೆಯ ನೀಗಿ ನಿಲ್ಲೆನುತೆ ||೨೬||

ಕರದೆ ಭುಜವನು ಹೊಯ್ದು ರಕ್ಕಸ |
ಸುರುಬಿನಿಂ ಮೇಲ್ವಾಯ್ದು ಬಂದೊಡೆ |
ಕರಗಳೆರಡನು ಕೊಬ್ಬಿ ಶರಗಳಿನಿರದೆ ಮುಗುಳೆಚ್ಚು ||
ಭರದಿನಾತನ ಶಿರವನಿಳುಹ |
ಲ್ಕರರೆ ರಾಘವ ಭಲಭಲೆನ್ನುತೆ |
ಸುರರು ಸುಮಗಳ ಸುರಿದು ನುತಿಸಿದರಸುರಮರ್ದನನ ||೨೭||

ಪಾಯದಳದೊಳಗುಳಿದವರು ಖಳ |
ರಾಯನೋಲಗಸಾಲೆಗೈದಿಯೆ |
ಜೀಯ ಬಿನ್ನಹ ಕುಂಭಕರ್ಣಂಗಾದುದಂತವೆನೆ ||
ಮಾಯವೀನುಡಿ ಸಂಬಲಾಗದು |
ನಾಯಿಗಳ ಕಟವಾಯ ಕೊಯ್ಯನೆ |
ರಾಯರಾಣೆಗುಮನೃತವಲ್ಲೆಂದರುಹಿದರು ನಮಿಸಿ ||೨೮||

ಕಟಕಟಾ ತಮ್ಮನನು ಮಾಯಾ |
ನಟನೆಯಿಂ ಕೊಂದಿರಲುಬೇಕಿಂ |
ದಟವಿಕಾಚರವೇಷದಾಳಿಹ ಹುಲುನರಾಧಮರು ||
ಘಟಿಸಿದಪಜಯವಧುವಿಗಂಜದೆ |
ಕುಟಿಲಗಾರ್ತಿಯನವಳನೊದೆಯುತೆ |
ಹಟವ ಸಾಧಿಪೆಸೀಗಳಂದುರಿದೆದ್ದನಸುರೇಂದ್ರ ||೨೯||

ಐದನೆಯಸಂಧಿ ಸಂಪೂರ್ಣಂ

ಆ ರ ನೆ ಯ ಸಂ ಧಿ.

ಸೂಚನೆ || ಇಂದಿರನಗೆಲಿದವನ ವಿಧಿಶರ |
ದಿಂದಮೊರಗಿದನೃಪರು ಹನುಮನು |
ತಂದಮೃತಸಂಜೀವನೌಷಧದಿಂದೆ ಬದುಕಿದರು ||

ತಿಳಿದು ನಿಜಪತಿಯುಜ್ಜುಗವ ಕೊಳು |
ಗುಳಕೆ ನಮ್ಮನು ಕಳುಹಿಸೋಡುವು |
ದಳುಕಲೇಕೆಂದಾ ನರಾಂತಕನಂತೆಯಾ ತ್ರಿಶಿರ ||
ಚಲದ ದೇವಾಂತಕನ ಕೂಡುತೆ |
ಜಳಪಿಸುತ್ತಸಿಗಳನನುಜ್ಞೆಯ |
ತಳೆದು ಸಂಗರಕಿಳಿದು ಕೆಣಕಿದರಂದು ರಿಪುಭಟರ ||೧||

ಯಾತುಧಾನಾಗ್ರಣಿ ನರಾಂತಕ |
ನಾತುಕೊಂಡನು ಬವರವನು ಪುರು |
ಹೂತಸುತಸೂನುವಿನ ಪಡೆಯತ್ತಧಿಕರೋಷದಲಿ ||
ಆತನುರುಜೆಗೆ ಸಿಕ್ಕಿ ಮಡಿದಾ |
ಕೋತಿಗಳ ಹಿಂಡುಗಳನೀಕ್ಷಿಸಿ |
ವೀತಿಹೊತ್ರನ ತೆರದೊಳುಜ್ಜ್ವಲನಾದನಂಗದನ ||೨||

ಖೂಳ ನಿಲುನಿಲು ಮೆರೆಯದಿರು ಹೆ |
ಚ್ಚಾಳುತನವನು ತೋರಿಸೆಮ್ಮೊಳು |
ತೋಳ ಕಂಡೂತಿಯನು ಕಳೆವೆನು ನಿನ್ನುಮಂ ಬಡಿದು ||
ಕಾಳೆಗವ ಕೊಳ್ಳೆನುತೆ ವಿಲಯದ |
ಕಾಲನಂದದೊಳೆರಗಿ ಮುಷ್ಟಿಯಿ |
ನಾಲಿ ಹೊಯ್ದೊಡೆ ನಷ್ಟವಾದುದು ಜೀವ ದಾನವ ||೩||

ತ್ರಿಶಿರ ದೇವಾಂತಕನುಮೊಂದೆಡೆ |
ವಿಶಿಖಗಳ ಸುರಿಯುತ್ತೆ ಕಪಿಗಳ |
ಬಿಸಿರಕುತದೊಳಗವನು ತೊಳೆಯುತ್ತಸಮಪೌರುಷವ ||
ಪಸರಿಸುತ್ತಿರೆ ಕಂಡು ಹನುಮನು |
ವಿಷಮರೋಷದೊಳವರ ಬಡಿಯುತೆ |
ಕುಸುರಿದರಿದನು ಪೆಸರದಳಿದುದು ನೆಲದೊಳಾ ಖಳರ ||೪||

ದಿಟ್ಟರಿವರಿಂದಳಿದ ವಾರ್ತೆಯು |
ಮುಟ್ಟಲಾಸ್ಥಾನದಲಿ ಕೇಳ್ದನು |
ಥಟ್ಟನಟ್ಟಿದನಾಗಳತಿಕಾಯನನು ರಾವಣನು ||
ಹುಟ್ಟುಗುಟ್ಟುತ್ತರಿಗಳನು ನೀ |
ನಟ್ಟಹಾಸವ ತೋರಿ ಮರಳೆಂ |
ದಿಟ್ಟು ಸೇಸೆಯ ಮಗನ ಕಳುಪಲ್ಕಾತನೈತಂದು ||೫||

ಪಥವ ಬಿಡಿಬಿಡಿ ಮರಳಿ ದೂರಕೆ |
ಮಥನ ಕೊಳ್ಳದು ನಿಮಗೆ ನಮ್ಮೊಳ |
ಗತಿರಥರುವೆರಸೈದಲಿಂದಾ ದಶರಥಾತ್ಮಜರು ||
ಕ್ರತುಭುಜರು ದಿಕ್ಪಾಲರೆಮ್ಮೊಳು |
ಮಥಿಸುತೇಗತಿಯಾಂತರೆಂಬಾ |
ಕಥೆಯನರಿಯಿರೆ ಎನ್ನುತೆಚ್ಚನು ಕಪಿಬಲವನಸುರ ||೬||

ವಾನರೇಶ್ವರರಿದನು ಕಂಡುರೆ |
ಕೇಣಸರದಿಂ ಕಾದಿ ನೋಯ |
ಲ್ಕಾಣೆ ಲಕ್ಷ್ಮಣನಾಗ ಧನುವಿಂಗಂಬನೇರಿಸುತೆ ||
ದಾನವೇಶ್ವರಸೂನು ನೀನಸ |
ಮಾನಕಪಿಕುಲದೊಡನೆ ಹೋರಟೆ |
ಮಾನವೇ ನಿನಗೆನುತೆ ಸುರಿದನು ಸರಲ ವೃಷ್ಟಿಯನು ||೭||

ನಿಂದುದಸುರವರೂಥಸಾರಥಿ |
ಮುಂದುಗೆಟ್ಟನು ಕರದ ಕಾರ್ಮುಕ |
ವಂದು ಮುರಿದುದು ಬೆರಗನಾಂತನು ಖಳನಿದೇನೆಸುತೆ ||
ಸ್ಯಂದನವು ಮತ್ತೊಂದು ಥಟ್ಟನೆ |
ಬಂದೊಡದನೇರಿದನು ಚಳಕದೊ |
ಳಂದು ಪೊಸಮುಸೆವೆತ್ತ ಬಾಣದಿನೆಚ್ಚನಹಿತನನು ||೮||

ಎಲವೊ ರಕ್ಕಸ ನಿನ್ನ ಹರಣವ |
ಸಲಹುವವರಿನ್ನಾರು ಕೊಳ್ಳಿದ |
ಸುಳಿದೆಯಾದೊಡೆ ವೀರ ಸೀನಹುದೆಂದು ಲಕ್ಷ್ಮಣನು ||
ಸೆಳೆದು ಕರ್ಣಾಂತಕ್ಕೆ ನಾರಿಯ |
ನಲಗುಮುಸೆದಿಹ ಪೊಸಶರಂಗಳ |
ಹಲವನೆಸೆಯುತೆ ಸಿರದ ಬಿಸುಗೆಯ ಬಿಡಿಸಿದನು ಖಳನಾ ||೯||

ಕೇಳಿದನು ರಾವಣನು ತನ್ನಯ |
ಬಾಲಕನ ಮರಣವನು ವಂಶವ |
ಪಾಳುಗೈದೆನೆ ಪಾಪಿ ತನ್ನಿಂ ಪ್ರಳಯವಾದುದಲಾ ||
ಪೇಳಲೆಮ್ಮತಿಕಾಯಗಾರ್ಸಮ |
ಪಾಳಿ ಲೋಕದೊಳಾತನಳಿಪಿದು |
ಕಾಲಧರ್ಮವು ತಪ್ಪದಾಪತ್ತಸುರಕುಲಕೆಂದ ||೧೦||

ಆಡಿ ಮಾಡುವುದೇನು ಛಲ ಕೈ |
ಗೂಡುವಾಪರಿಯಂತ ಕಾದಿಯೆ |
ನೋಡುವೆನು ಬೆದರೇಕೆ ತನಗಿದಕೆಂದು ಬಗೆದಂದು ||
ಜೋಡಿಸಲಿ ಗಜಹಯರಥಾವಳಿ |
ಕೂಡೆ ತೆರಳಲೆನುತ್ತು ಮಾಜ್ಞೆಯ |
ನೀಡಲದ ಕೇಳ್ದಮರಪತಿರಿಪು ತಂದೆಗಿಂತೆಂದ ||೧೧||

ತಾತ ನೀನಾಹವಕೆ ತೆರಳ |
ಲ್ಜಾತನೆನಿಪಾನಿರ್ದು ಫಲವೇ |
ನೇತರರದ ಭಟರವರು ಕಪಿಗಳು ನರರು ಬಣಗುಗಳು ||
ಆತು ನಿಲುವರೆ ತನ್ನ ಬಾಣ |
ವ್ರಾತಜಂಝೂವಾತಘಾತ |
ಕ್ಕಾತಗಳು ತನಗಿರಲಿ ಸಮರದ ಚಿಂತೆ ನಿನಗೇಕೆ ||೧೨||

ಮಗನು ನಾನಿರಲಮಮ ನಿನಗೀ |
ಬಗೆಯು ಸಲುವುದೆ ನಿಮಿಷಮಾತ್ರದೊ |
ಳುಗುಳಿಸನೆ ಲಕ್ಷ್ಮಣನಬಾಯಿಂದಳಿದ ತಮ್ಮನನು ||
ವಿಗಡಬಲರಿನ್ನುಳಿದ ದೈತ್ಯರ |
ತೆಗೆಯೆನೇ ಜಠರದಲಿ ಕಪಿಗಳ |
ತೆಗೆಯಿದೇಸರದೆನ್ನುತೇರ್ದನು ಚಿಗಿದು ಮಣಿರಥವ ||೧೩||

ಇತ್ತ ನಿಲ್ಲಿರಿ ಖಳರೆ ನೀವಿ |
ನ್ನೆತ್ತ ಸರಿವಿರಿ ನಿಮ್ಮ ಭಾಗದ |
ಮಿತ್ತುವಿದೆ ಬಂದಿಹೆನು ತಡವನು ಗೈಯದಟ್ಟುವೆನು ||
ಹೆತ್ತ ತಾಯ್ಗಳ ಬಸಿರು ನಿಮ್ಮನು |
ಮತ್ತೆ ಕೊಳ್ವುವೆ ಸಾಲವವು ನೀ |
ವೆತ್ತಲುಂ ದೆಸೆಗೆಟ್ಟರೆಂದವನೆಚ್ಚನರಿಬಲವ ||೧೪||

ಇವನಲೇ ಶಕ್ರಾರಿ ರಾವಣ |
ಗುವರನೈಸಲೆ ರಾಮಲಕ್ಷ್ಮಣ |
ರಿವನ ಸರ್ಪಾಸ್ತ್ರದಲಿ ಮಲಗರೆ ಹಿಂದಿನಾಹವದೆ ||
ಇವನು ಮರಳೈತಂದನಿವನನು |
ಜವನ ಬಳಿಗಿಂದಟ್ಟಿ ವಾನರ |
ನಿವಹವನು ರಕ್ಷಿಸುವರಿಲ್ಲೆನುತಾಗ ಪಡೆ ಬೆದರೆ ||೧೫||

ನಾಕಜಾರಿಯ ಸಮರದುರುಬೆಯ |
ಭೀಕರತೆಯನು ಕಂಡು ರಾಘವ |
ನೋಕರಿಸಿ ಕಿಡಿಗಳನು ಕಣ್ಗಳಲುಗ್ರಕೋಪದಲಿ ||
ಸಾಕುಸಾಕೆಲೊ ಕುಮತಿ ರಥವನು |
ನೂಕು ನೀನಿತ್ತೆನ್ನು ಕವನನು |
ಜೋಕೆಯಿಂದಿಡಲಂಬು ನಾಂಟಿದುವಸುರನಂಗದಲಿ ||೧೬||

ಅಂಬುಗಳು ನಾಂಟಿರಲು ಲೆಕ್ಕಿಸ |
ದಂಬುಜೋದ್ಭವ ಪಿತನ ಮೈಯೊಳು |
ತುಂಬಿದನು ಪಡಿಸಪಳ ರಾವಣಿ ಮುಯ್ಗೆ ಮುಯ್ಯೆನುತೆ ||
ಜಂಭವೈರಿಯ ಸದೆದೆನೆಂಬಾ |
ದಂಭವೆಮ್ಮೊಳು ಹರಿವುದೆನ್ನುತೆ |
ನಂಬಿ ನೀಂ ಬಂದುದಕೆ ಕೊಳ್ಳೆಂದೆಚ್ಚನಾ ರಾಮ ||೧೭||

ಹಿಂದೆ ವಿಶ್ವಾಮಿತ್ರಯಾಗದೊ |
ಳಂದು ಬಂದಾ ಮಂತ್ರಶರಗಳ |
ಸಿಂದು ಬಿಚ್ಚದೆ ಬರಿಯಕೋಲ್ಗಳಿನೆಮ್ಮ ಬೆದರಿಸಲು ||
ಹಂದೆ ನಿನಗಾನಿಂದು ಸೋಲುವೆ |
ನೆಂದು ಬಗೆದೆಯ ತೆಗೆಯ ತೆಗೆ ನೀ |
ನೆಂದು ರಾವಣಿ ದಿವ್ಯಶರಗಳಿನೆಚ್ಚನಚ್ಯುತನ ||೧೮||

ಶಿವಶಿವಾ ಸಾಹಸಿಗನೈ ಮರ್ಝು |
ದಿವಿಜಪತಿಜಿತ್ತಲ್ತೆ ಇವನೆ |
ಜ್ಞವಿರಳಾಸ್ತ್ರವಿವೇನನೆಸಗವು ತಡೆವರಾರಿವನು ||
ಇವನ ಮುಂದೆಮ್ಮಧಟು ಸಲುವುದೆ |
ಶಿವನ ಗಿರಿಯೆತ್ತಿದನ ತನುಜನೊ |
ಳಿವಗೆ ದಂಡಿಯೆ ಎನುತೆ ರಾಘವನೆಚ್ಚನಹಿತನನು ||೧೯||

ಒಂದುಕಡೆಯೊಳಗೆಂಟುಕೋಟಿಯ |
ನಂದು ಮುರಿದನು ರಥವ ಹನುಮನು |
ಕೊಂದನೊಂದೆಡೆ ಮೂರುಕೋಟಿಯ ಗಜವನಂಗದನು ||
ಮುಂದುವರಿದಶ್ವಗಳು ನೀಲನಿ |
ನೊಂದುಕೋಟಿಯು ಮಡಿದುವಾಕಪಿ |
ವೃಂದದೊಡೆಯನಿನಳಿದುವಗಣಿತಕೋಟಿ ಕಾಲ್ಬಲವು ||೨೦||

ಉಸಿರಲೇನದನಸುರಬಲವಿಂ |
ತಸುವನೀಗುತ್ತಿರಲು ದಾನವ |
ವೃಷಭನದನರಿದಾಗಳುಜ್ಜ್ವಲಿಪಗ್ನಿಯಂದದಲಿ ||
ಒಸರಿಸುತೆ ಕಣ್ಗಿಡಿಯನರಿಗಳ |
ಪೆಸರನೊರಸುವೆನೆನುತೆ ಕಾರ್ಮುಕ |
ಕಸಮವಿಧ್ವಸ್ತ್ರವನು ತೊಟ್ಟನು ದೆಸೆಯು ಕಂಪಿಸಲು ||೨೧||

ಮುಸಕಮಂ ತಳೆದಿಂದ್ರಜಿತ್ತಾ |
ವಿಶಿಖವನುಮಂತ್ರಿಸುತೆ ಪೂಡೆ |
ಲ್ಬುಸಿರಡಗಿತು ಜಲಸೆಯುಡುಗಿತು ವಾನರರ ಪಡೆಯ ||
ಅಸುರರಿಪು ನಿಜಸೋದರಂಬೆರ |
ಸಸಮರಣರಂಗದಲಿ ತಾಂ ಪವ |
ಡಿಸಿದನುರುಮೂರ್ಛೆಯಲಿ ಕತ್ತಲೆ ಮುಸುಕಿದುದು ಜಗವ ||೨೨||

ಶರಣು ದೇವರ ದೇವ ಶಂಕರ |
ಹರ ಮಹೇಶ್ವರ ನಿನ್ನ ಭಕ್ತನ |
ಧುರದೆ ರಕ್ಷಿಸಿವಿಜಯಿಯೆನಿಸಿದೆ ಶರಣು ಭಯನಾಶ ||
ಪರಮರೂಪನೆ ಗಿರಿಜೆಯೋಪನೆ |
ಶರಣು ಶರಣೆಂದೆನುತೆ ಹರುಷದೆ |
ಪುರಕೆ ತಿರುಕಿದನಿಂದ್ರಜಿತ್ತುವು ತಂಹೆಗಿದನರುಹೆ ||೨೩||

ಇತ್ತ ಕಳದೊಳಗಖಿಳರುಂ ಪುರು |
ಷೋತ್ತಮನುಮೊದಲಾಗಿ ನೆಲದೊಳು |
ಹತ್ತಿಕೊಂಡಿರೆ ವರವಿಭೀಷಣನೊರ್ವಸಜಶರಕೆ ||
ತುತ್ತದಾಗದೆ ಬಲದೊಳಾರಾ |
ರೆತ್ತಲೊರಗಿಹರರಿವೆನೆಂದರ |
ಸುತ್ತೆ ನಡೆತಂದಜನ ತನಯನ ಕಂಡು ನುಡಿಸಿದನು ||೨೪||

ಕಂಡಿರೇ ಜಾಂಬವರೆ ಖಳನು |
ದ್ದಂಡತನವನು ನಮ್ಮ ಸೇನೆಯ |
ದಿಂಡುಗೆಡಹಿ ಪುರಕ್ಕೆ ಸಾರ್ದನು ವಿಜಯಘೋಷದಲಿ ||
ತಂಡತಂಡದೊಳಖಿಳಕಪಿಗಳ |
ಹಿಂಡು ಕೆಡೆದಿದೆ ಸಗರಕುಲವಾ |
ರ್ತಾಂಡರೇನಾಗಿಹರೊ ಕಾಣಿಸರವರು ನಿಶಿಯೊಳಗೆ ||೨೫||

ಎಂದು ನುಡಿಯುತ್ತವನ ಜತೆಯಲಿ |
ಮುಂದೆ ನಡೆಯುತೆ ವಾನರೇಶ್ವರ |
ನಂದವನು ಮೇಣ್ವಾಲಿಯಾತ್ಮಜನಿರವನೀಕ್ಷಿಸುತೆ ||
ಅಂದು ಮರುಗುತೆ ರಾಮಸೇವಾ |
ನಂದಿಮಾರುತನಂದನನ ಕಂ |
ಡೊಂದಿ ತೋಷವನವನ ಕೇಳ್ದನು ಭೂಪರೆಲ್ಲೆನುತೆ ||೨೬||

ಶಿವಶಿವೇನಿವರಿಂತು ಕೇಳುವ |
ರವನಿಜಾಪತಿ ಕಾಣಿಸನೆ ಮೂ |
ಭುವನದೊಳಗೆಲ್ಲಿರೆಯುಮರಸುತ್ತಿಂದು ತಹೆನೆಂದು ||
ಪವನಜನು ಸಡಗರಿಸಲಜಸಂ |
ಭವನು ವೀಕ್ಷಿಸಿ ತಡೆಯ ತಡೆಯೆಂ |
ದವನ ನಿಲ್ಲಿಸಿ ನುಡಿದನತಿಹಿತಮಪ್ಪ ನುಡಿಗಳನು ||೨೭||

ಕಂದ ಮುಖ್ಯಪ್ರಾಣ ನೀನಿರೆ |
ಕುಂದನೇನೊಂದುವನೆ ರಘುಪಂ |
ಶೇಂದು ನೀನಾ ಪರಮಪುರುಷನ ಭಕ್ತವರ್ಯನಲಾ |
ಇಂದು ನಿನ್ನನು ಕಂಡ ಬಳಿಕೆಮ |
ಗೊಂದಿನಿಸುಸಂದೆಯಮುಮಿಲ್ಲವು |
ಮುಂದೆ ಭೂಪರನರಸುವೆವು ನಾವೆಂದು ತೆರಳಿದರು ||೨೮||

ಸರಳಿನೇಟಿಗೆ ಸೊಕ್ಕಿ ಸಲೆ ಮೈ |
ಮರೆತು ನೆಲದಲಿ ಲಕ್ಷ್ಮಣಂಬೆರ |
ಸೊರಗಿ ನಿದ್ರಿಪನಂತೆ ತೋರ್ಪಾ ಪರಮಪುರುಷನನು ||
ಧುರದ ಭೂಮಿಯೊಳಾಗ ತಾಂ ಕಂ |
ಡೆರಗಿ ಭಕ್ತಿಯೊಳರರೆ ಲೋಕದ |
ಪರಮದೈವಕ್ಕೀಯವಸ್ಥೆಯೆ ಎನುತೆ ಮರುಗಿದರು ||೨೯||

ಅನುವದೇನಿದಕೆನುತೆ ಚಿಂತಿಸಿ |
ವನಜಭವಸುತನಾಗ ಕರೆದನು |
ಹನುಮನನು ನಿನಗಹುದು ಸಾಧ್ಯವಸಾಧ್ಯವಿತರರಿಗೆ ||
ಎಣಿಕೆಗೇಳೇಗಳಿಗೆಯಿರ್ಪುದು |
ದಿನಪನುದಯಕ್ಕೋಷಧಿಯನೀ |
ನನಿತರಲಿ ತರಲಿವರು ಜೀವಿಪರುಳಿದೊಡಳಿದಪರು ||೩೦||

ಸಾರಿ ಲಂಘಿಸಿಯಾ ಹಿಮಾದ್ರಿಯ |
ಮೀರಿ ಕೈಲಾಸಾದ್ರಿಯನು ಗಂ |
ಭೀರಮಾದುತ್ತರದ ಶರಧಿಯ ದಾಂಟಲಾಚೆಯಲಿ ||
ಭೂರಿತರುಪಶುಪಕ್ಷಿಮೃಗಕಾ |
ಧಾರಚಂದ್ರದ್ರೋಣಗಿರಿಯದ |
ನೇರು ನೆತ್ತಿಯೊಳಿಹುದು ಮೃತಸಂಜೀವನೌಷಧಿಯು ||೩೧||

ಸುರರ ಕಾಪುಂಟದಕೆ ನೀನೆ |
ಚ್ಚರದೆ ಸಾಧಿಪುದೆನಲು ಮಾರುತಿ |
ಯೆರಗಿದನು ರಘುರಾಯನಡಿದಾವರೆಗೆ ಭಕ್ತಿಯಲಿ ||
ಭರದಿನಂಬರಕಡರಿ ಜಾಂಬವ |
ರೊರೆದಪರಿಯೊಳ್ದಾಂಟಿಯೆಲ್ಲವ |
ಸರೆಗಳಿಗೆಯೊಳ್ಸೇರಿ ಗಿರಿಯನು ದಣಿದು ಬಾಯಾರಿ ||೩೨||

ಜಲವನರಸುತ್ತಲ್ಲಿ ಕಾಣದೆ |
ತಳೆದು ಶುಭರುದ್ರಾಕ್ಷಮಾಲೆಯ |
ಪೊಳೆವ ಭಸ್ಮವ ತೊಡೆದು ತನುವೊಳು ತಾಪಸೋತ್ತಮರ ||
ಪಳಿವತೇಜದೊಳೆಸೆವ ಯತಿಯನು |
ಬಳಿಯೊಳೊರ್ವನ ಕಂಡು ಜಲವಿಹ |
ನೆಲೆಯನರುಹಲ್ಬೇಕು ನೀವೆಂದೆರಗಿದನು ಪದಕೆ ||೧೧||

ಕಾಲನೇಮಿಯೆನಿಪ್ಪ ದನುಜನು |
ಖೂಳರಾವಣನೊರೆಯಲಿರುಳಿನ |
ವೇಳೆಯೊಳಗೀಘೋರಕಾನನದಲ್ಲಿ ವೇಷವನು ||
ತಾಳಿ ತನ್ನಯ ಕಜ್ಜಕೆಡರನು |
ಮೇಳವಿಸಲ್ಕೈತಂದ ಬಲುಕೇ |
ಡಾಳಿಯಿವನೆಂದರಿವನೆಂತಾ ಹನುಮನಕುಟಿಲನು ||೧೪||

ಖಳನು ಬಳಿಕೊಡನಲ್ಲಿ ನಿರ್ಮಿಸಿ |
ಕೊಳನನೊಂದನು ಜಳವನೀಂಟೆನ |
ಲಿಳಿದು ಹನುಮನು ತೃಷೆಯ ಕಳೆಯುತ್ತಿರ್ಪ ಸಮಯದಲಿ ||
ಘಳಿಲನಂಘ್ರಿಯ ಪಿಡಿದು ನೆಗಳೊಂ |
ದೆಳೆಯ ತೊಡಗಲ್ಕಾಗಳಂಘ್ರಿಯ |
ಬಲುಹಿನಿಂ ಜಾಡಿಸಲು ನಿಲ್ಲದೆ ಮತ್ತೆ ನುಂಗಿದುದು ||೧೫||

ಏನಿದಿಂತಹಶಕ್ತಿಯಿದಕೆಂ |
ದಾನವವ್ಯಾಕರಣಪಂಡಿತ |
ನಾನುತತಿವಿಸ್ಮಯವನರಿದನು ಕೃತ್ರಿಮವಿದೆನುತೆ ||
ತಾನು ತಳುವಲ್ಕಾಗದೆಂದೊಡ |
ನಾನೆಗಳ ಸೀಳಿದನು ಕಪಟದ |
ದಾನವನ ಮುಡಿವಿಡಿಯುತಪ್ಪಳಿಸಿಳೆಯೊಳೊರಗಿಸಿದ ||೧೬||

ಬಳಿಕ ದಿವ್ಯೌಷಧಿಯ ಪುಡುಕುತೆ |
ತಿಳಿಯದದ ನಿರ್ಧರಿಸಲಿಂತೆಂ |
ದಳಿಮನದೆ ಬೇಸತ್ತು ತನ್ನಯ ಬುದ್ಧಿಯನು ಪಳಿದು ||
ತಳುವಗೈಯಲ್ಸಮಯಮಲ್ಲೆಂ |
ದಲುಗದಂದದೆ ಶಿಖರವನೆ ಕಿ |
ತ್ತೊಲವಿನಿಂದದ ತಂದು ರಾಘವನೆಡೆಯೊಳಿಳುಹಿದನು ||೧೭||

ನೆರೆಯರಕ್ಕಸರೇನಿದೇನೆನ |
ಲರರೆ ಅಹುದಹುದೆಂದು ಜಾಂಬವ |
ನುರೆವಿಭೀಷಣನೊಡನೆ ನಲಿಯುಲ್ಸುರರು ಭಾಷೆನಲು ||
ವರಪಿತಾಮಹಸುತನೆ ಕೊಳ್ಳಿದ |
ನರಸನನು ಬೇಗೆಬ್ಬಿಸೆಂದಾ |
ತುರದೆ ಹನುಮನು ಮೊರೆಯನಿಟ್ಟೊಡೆ ಬಂದನಜಸುತನು ||೩೮||

ಅರಸಿ ಮೂಲಿಕೆಗಳನು ನಾಲ್ಕನು |
ಬೆರಸಿ ಮರ್ದಿಸಿ ರಘುವರಾನ್ವಯ |
ದರಸರಾ ನಾಸಿಕದ ಬಳಿಯೊಳ್ಪಿಡಿಯಲಾಕ್ಷಣದೆ ||
ಮರೆದು ನಿದ್ರಿಪರೆಚ್ಚರೊಂದುವ |
ಪರಿಯೊಳವರಾಗೆಳ್ದು ಕುಳ್ಳಿರ |
ಲರಲ ಸರಿಯನು ಸುರರು ಸುರಿದರು ಭರದಿನಂಬರದೆ ||೩೯||

ಬಳಿಕಮಾದಿವ್ಯೌಷಧದೆ ಕಪಿ |
ಬಲವನೆಬ್ಬಿಸಿ ಜಾಂಬವನು ರಘು |
ತಿಲಕನೆಡೆಗೈತಂದು ಹನುಮನು ಗೈದ ಸಾಹಸದೆ ||
ಉಳಿದೆವೆಲ್ಲರು ಲಾಲಿಸುವುದೆನ |
ಲೊಲಿದು ಭಕ್ತನ ಕರೆದು ಕರುಣಾ |
ಜಲಧಿ ತಕ್ಕೈಸಿದನು ಕೊಂಡಾಡಿದನು ಬಾಯ್ದಣಿಯೆ ||೪೦||

ಈಪರಿಯ ದುರ್ದಶೆಯೆ ವಾನರ |
ಭೂಪನಾಳ್ಗಳಿಗೆಂದು ಕಪಿತತಿ |
ಕೋಪದಿಂ ಪಂಜುಗಳ ಪತ್ತಿಸಿ ಲಂಕೆಯನು ಪೊಕ್ಕು ||
ಕಾಪಿನವರನು ಚಲ್ಲಬಡಿದಾ |
ಟೋಪದಿಂದಾನಗರಿಗಗ್ನಿ |
ಸ್ಥಾಪನೆಯ ಗೈದೆರಡನೆಯದೀದಹನವೆನಿಸಿದುದು ||೪೧||

ಆರನೆಯ ಸಂಧಿ ಸಂಪೂರ್ಣಂ

ಏಳನೆಯ ಸಂಧಿ.

ಸೂಚನೆ || ಸೀತೆಯಂದದ ಬೊಂಬೆಯೊಂದನು |
ಘಾತಿಸಂಚಿಸಿದಿಂದ್ರರಿಪುವನು |
ಖ್ಯಾತಿಯಿಂ ಲಕ್ಷ್ಮಣನು ಕೊಂದನು ಸುರರು ಕೊಂಡಾಡೆ ||

ಹೋಯಿತಿನ್ನೇನೆಮ್ಮ ನಗರಿಯು |
ಪಾಯವೇನಿದಕೆನ್ನುತಸುರರು |
ಬಾಯಬಿಟ್ಟರು ಭಯರಸಾಬ್ಧಿಯ ಮಧ್ಯದಲಿ ಸಿಲುಕಿ ||
ಹಾಯಿದರು ದೆಸೆದೆಸೆಗೆ ಮಕ್ಕಳು |
ತಾಯಿಗಿಲ್ಲೆಂದೆಂಬ ತೆರದಲಿ |
ಪಾಯದಳವೆಂತಾದುದೆಂಬುದ ಕೇಳ್ದನಸುರಪತಿ ||೧||

ಜೀವಿಸಿದರೇ ಮರಳಿ ವೈರಿಗ |
ಳಾವ ಸತ್ವವೊ ಕಾಣೆ ಶಿವಶಿವ |
ಸಾವನೊಂದದರೊಡನೆ ಕಾದಿದೊಡಾವ ಫಲ ತನಗೆ ||
ಈ ವಿಚಾರದಿನೇನು ಮೊದಲೊಳ |
ಗಾವಚಲವನು ಗೈದನೋ ಸಂ |
ಭಾವಿಸುವೆನದನೆಂದು ಮಕರಾಕ್ಷನನು ಕರೆದೆಂದ ||೨||

ಮಗನೆ ನೀನಪ್ರತಿಮುಖರನಿಂ |
ದೊಗೆದಸುತನೆಂಬುದನು ತೋರಿಸು |
ಹುಗು ರಣೋರ್ವಿಯನಯ್ಯನನು ತೆಗೆ ರಾಮನುದರದೊಳು ||
ಹಗೆಯು ಹರಿಯಿತ್ತೆನಿಸಿಯೆನ್ನಯ |
ಬಗೆಗೆ ಮುದವನು ಬೀರು ನೀನೆನೆ |
ಮಿಗುವ ಹರಿಸದೊಳಸುರನಡರಿದನಂದು ಮಣಿರಥವ ||೩||

ನೆರೆದ ಮೃಗಸಂಕುಲಕೆ ಪೆರ್ಬುಲಿ |
ಮೊರೆಯುತೆರಗುವೊಲಹಿತಕಟಕವ |
ಸುರುಬಿ ಹೊಕ್ಕನು ಪೆಣನ ಮೆದೆಗೆಡಹಿದನು ನಿಮಿಷದಲಿ ||
ಅರಸನೆಲ್ಲಿಹನವನ ತೋರಿಸಿ |
ದರಿಗೆ ಲಕ್ಷಾಂತರದ ಹಣವನು |
ತರಿಸಿ ಕೊಟ್ಟಪೆನೆನ್ನುತಾಣೆಯನಿಟ್ಟು ಸಾರಿದನು ||೪||

ನೋಡಿದನು ಕಟ್ವಾಳು ತನ್ನವ |
ರೋಡಿಬರ್ಪುದನಾ ನಿಶಾಚರ |
ನೀಡಿರಿಯುತೊಡನೈದುವುದುಮಂ ರಾಮಚಂದ್ರಮನು ||
ಕೇಡಿಗನು ನಮ್ಮಖಿಳಬಲವನು |
ಪಾಡುಪಡಿಸುವನಿವನ ನೆತ್ತರ |
ನೂಡಿಸುವೆನಾ ರಣಪಿಶಾಚಂಗಳಿಗೆ ನಾನೆನುತೆ ||೫||

ಆರು ನೀನೆಲೊ ಫಡ ದುರಾತ್ಮಕ |
ವೀರ ಕಪಿಸುಭಟಾಗ್ರಗಣ್ಯರ |
ಮೀರಿ ಪೌರುಷವೇರಿಯೈದುವುದೀಗಳಾವೆಡೆಗೆ ||
ಕಾರಿಸುವೆ ರಕುತವನು ನಿಲ್ಲೆನು |
ತೇರಿಸಿದಸಿಂಜಿನಿಗೆ ಸರಳನು |
ಸೇರಿಸೆಸೆಯಲು ಖಾತಿಗೊಂಡನು ಖಳನು ಕುದಿಕುದಿದು ||೬||

ಬರುವ ಶರವನು ಮಧ್ಯಮಾರ್ಗದೆ |
ತರಿದು ತನ್ನಯ ಪಿತನ ಕೊಂದಾ |
ಪರಮಪಾತಕಿಯಿವನ ಕೊಲ್ಲದೆ ಮಾಣೆನೀಗೆನುತೆ ||
ಸರಳ ಮಳೆಗರೆಯುತ್ತೆ ಲಕ್ಷ್ಮೀ |
ವರನ ತನುವನು ನೋಯಿಸಲ್ಕ |
ಚ್ಚರಿಯದೇನಸುರಾರಿ ಮಗುಳಿಡಲಸುರನಸುವುಳಿದ ||೭||

ಕೇಳಿಯಿದನಿಂದ್ರಾರಿ ತಾತನ |
ಬೀಳುಗೊಂಡನು ರಣಕೆ ಸೀತೆಯ |
ಹೋಲಿಕೆಯೊಳಾಕೃತಿಯನೊಂದನು ಗೈದು ಮಾಯೆಯೊಳು ||
ಸೀಳುವೆನು ನಿಮ್ಮರಸನರಸಿಯ |
ನಾಳುತನ ನಿಮಗಿರಲು ಬಿಡಿಸುವು |
ದೇಳಿ ನೀವೆಂದಾರ್ದನಭ್ರದೆ ಕಪಿಗಳೆದಿರಿನೊಳು ||೮||

ಇರಿಸಿ ರಥದೊಳಗದನು ಖಡ್ಗದಿ |
ನಿರಿಯಕೊಡಗಲ್ಕಾಗಳದು ಗೋ |
ಳ್ಗರೆಯುತಿರ್ದುದು ನೀಚನಿವನಿಂದೆನ್ನ ಕೊಲ್ಲುವನು ||
ಮರಣವೇಳೆಯೊಳೆನ್ನ ರಮಣನ |
ಚರಣದರ್ಶನವಿಲ್ಲದೀಪರಿ |
ನರಕಭಾಜನವಪ್ಪ ಸಾವಿದು ಸಮನಿಸಿತು ತನಗೆ ||೯||

ಒಡೆಯನಿನ್ನೇನೆನ್ನ ಬಿಡಿಸುವ |
ನೆಡೆಯಸೇರುವೆನೆಂಬ ಸಮಯದೆ |
ಕಡುಗದಿಂ ಖಳನೆನ್ನ ತರಿವಸು ನಿನಗೆ ಸಮ್ಮತವೆ ||
ಬಡವನೇ ಬಲದಲ್ಲಿ ಹನುಮನೆ |
ಬಿಡಿಸಲಾಗದೆ ನೀನು ನಿನಗಾ |
ಸೊಡತಿಯಲೆ ನಿರ್ಘೃಣತೆಯಿನಿತೇಕೆಂದುದಾವಮಾಯೆ ||೧೦||

ಸೊಲ್ಲು ಮೇಣಾಕೃತಿಯೊಳರಸನ |
ವಲ್ಲಭೆಯೆ ದಿಟಮಿವಳು ಶಿವಶಿವ |
ಖುಲ್ಲನನ್ಯಾಯವನು ಒಳಸುವನೆನುತೆ ಲಟಕಟಿಸಿ ||
ನಿಲ್ಲಿಸೆಲೆ ದುಷ್ಕಾರ್ಯವಿದು ನಿನ |
ಗಲ್ಲ ನಿಮ್ಮನ್ವಯವು ತಾಂ ಕಿರಿ |
ದಲ್ಲ ತಡೆಯೆಂದೆನುತೆ ಮಾರುತಿ ಹಾಯ್ದನಂಬರಕೆ ||೧೧||

ಬರುವ ಹನುಮನ ಮುಂದೆ ಮಾಯಾ |
ತರುಣಿಯನು ಕಡಿಖಂಡವೆಸಗು |
ತ್ತರುಣಜಲವನು ಸುರಿದು ರೌದ್ರೋದ್ರೇಕವನು ನಟಿಸಿ ||
ಅರರೆ ನೀನಿನ್ನಾರ ಬಿಡಿಸುವೆ |
ಮರುಳಮಾರುತಿ ಮರಳಮರಳೆಂ |
ದೊರೆಯುತೊಡನೆಯೆ ಮಾಯವಾದನು ಖಳನು ಮುಗಿಲೊಳಗೆ ||೧೨||

ಪಾಳದಾಯಿತ್ತಖಿಳಲೋಕವು |
ಕೋಳುಹೋದುದು ರಾಮಕಾರ್ಯವು |
ಹೂಳಿತಿಳೆಯೊಳಗನಿಲನಂದನನಾಳುತನದೆಸಕ ||
ಖೂಳರಾವಣಿಯಿಂದೆ ಸಕಲರ |
ಬಾಳು ತಾನಿಂತಾಯ್ತೆ ನಾನಿದ |
ನಾಳಿದಂಗೆಂತೊರೆವೆನೆಂದನು ಹನುಮನುರೆ ಮರುಗಿ ||೧೩||

ಎತ್ತಿಕೊಂಡಾತುಂಡುಗಳ ನೃಪ |
ನತ್ತವೇಗದೊಳೈದಿ ತೋರುತೆ |
ಬಿತ್ತರಿಸಿದನು ಕಂಡುದೆಲ್ಲವನೆರಗಿ ಪದಯುಗಕೆ ||
ಚಿತ್ತದೊಳಗಿದಕಳುಕಲಾಗದು |
ಮಿತ್ತುವೆಂಬವಳಾರು ಮತ್ತವ |
ಳೆತ್ತಲಿರ್ಪಳು ಬೆಳಸೆ ಸಾಕೆನಗೆಂದನಾ ಹನುಮ ||೧೪||

ಕಂಡನಿದಿರೊಳಖಂಡಲಕ್ಷ್ಮಿಯ |
ಪುಂಡರೀಕಾಂಬಕೆಯ ಸೀತೆಯ |
ಖಂಡಿಸಿದ ಮೈತುಂಡನುಮ್ಮಳಗೊಂಡು ಮೈಮರೆದು ||
ತಂಡತಂಡದೊಳುಗುವ ಕಂಬನಿ |
ಕೆಂಡದಂತುರೆ ಸುಡಲು ಚೇತನ |
ಗೊಂಡು ಹಲುಬಿದನರಸ ನೆನೆನೆನೆದಾತ್ಮವಲ್ಲಭೆಯ ||೧೫||

ಏಸಿದೆತ್ತಣಿನಾಯ್ತು ಚಿತ್ತ |
ಗ್ಲಾನಿಯೆಂದಾವರವಿಭೀಷಣ |
ನಾನುತತಿವಿಸ್ಮಯವನಾಲಿಸಿಯರಿದು ಸಂಗತಿಯ ||
ಹೀನಮಾಯೆಯ ಬಳಸಿ ರಾವಣಿ |
ಯಾನಿಕುಂಭಿಳೆಯಲ್ಲಿಯಾಗವ |
ದೂನವಾಗದೊಲೆಸಗಲೀಪರಿಕಪಟವೆಸಗಿಹನು ||೧೬||

ದೇವ ಬಿಡು ಚಿಂತೆಯನು ಸೀತಾ |
ದೇವಿಯರಿಗಿಲ್ಲಾವಭೀತಿಯು |
ಮೀವಿಚಾರವನರಿದು ಬರಲಿಂದಟ್ಟು ಪವನಜನ ||
ಸೇವಕನ ಬಿನ್ನಪವನಾಲಿಸು |
ಭಾವದಿಂದೀವ್ಯಥೆಯ ಕಳೆ ರಾ |
ಜೀವಮುಖಿ ಸುಖವಿಹಳು ಸತ್ಯವಿದೆಂದನಸುರೇಂದ್ರ ||೧೭||

ಅರಸನಾಣತಿಸಲ್ಕೆ ಹನುಮನು |
ಸರಸಿಜಾನನೆ ಸುಖದಿನಿರ್ಪುದ |
ನರಿದು ಬಂದರುಹಿದನು ಸಂತಸವುಕ್ಕಿತಖಿಲರಿಗೆ ||
ಶರಣರಗ್ರಣಿ ವರವಿಭೀಷಣ |
ನರಿಕೆಗೈಯುತ್ತಾಗ ಲಕ್ಷ್ಮಣ |
ವರಕಪೀಂದ್ರರ್ವೆರಸು ರಾವಣಿ ಗೈವಯಾಗವನು ||೧೮||

ಕಿಡಿಸಬೇಕೆಂದೆನುತೆ ಹಾವಳಿ |
ಯಿಡುತೆ ಮಾರಣಹೋಮಸಮಯಕೆ |
ದುಡುಕಿನಿಂದೊಳಪುಗಲು ಕಾವಲಿನಸುರರಾರ್ಭಟಿಸಿ ||
ಖಡುಗಕುಂತಮುಸುಂಡಿಗಳಿಸೆಡೆ |
ಗುಡದೆ ಬಡಿಯಲ್ಕಂಡು ಲಕ್ಷ್ಮಣ |
ನೊಡನೆ ಶರಗಳನಿಡುತೆ ಕೆಡಹಿದನಗಡ.ರಕ್ಕಸರ ||೧೯||

ಧರಿಸಿ ಮುಡಿಯನು ದನುಜವಿಪ್ರರ |
ನೆರವಿಯೊಳು ಕುಳಿತುಗ್ರಮುಖವನು |
ವಿರಚಿಸುತ್ತಿಹ ದಾನವೇಶ್ವರಪುತ್ರನನು ಕಂಡು ||
ವರವಿಭೀಷಣನಾಗ ತೋರ |
ಲ್ಕರಿಭಯಂಕರಲಕ್ಷ್ಮಣನು ನಿಜ |
ಚರಣದಿಂದೊದೆಯಲ್ಕೆ ಲೆಕ್ಕಿಸದವನು ಕರ್ಮದೊಳು ||೨೦

ನಿರತನಾಗಿರೆ ಕಂಡು ಪುನರಪಿ |
ಕೆರಳಿಯಾತನ ಶಿರವನೊದೆಯು |
ಲ್ತಿರುಗಿ ನಿಟ್ಟಿಸಿಕುಪಿತನಾಗುತ್ತೆಳ್ದ ರಾವಣಿಯು ||
ದುರುಳನೆಮ್ಮವನಿಂದು ನಿನ್ನನು |
ಕರೆದುತಂದನು ನಮ್ಮ ಕೊಲಿಸ |
ಲ್ಕರರೆ ನಿಮಗಂ ಕೇಡ ತಾರದೆಮಾಣನಿವನೆಂದ ||೨೧||

ಯಾಗಮುರಿಯಿತ್ತಿಂದ್ರಜಿತ್ತುವು |
ಬೇಗ ರಥವೇರಿದನು ಶರವನು |
ತೂಗುತೆಚ್ಚನು ಕಪಿಗಳಗ್ರಣಿಗಳನು ನೋಯಿಸಿದ ||
ಕೂಗು ನಿಂದುದು ತನ್ನವರದೆಂ |
ದಾಗ ಲಕ್ಷ್ಮಣ ಕೋಪಗೊಳ್ಳುತ |
ಮೋಘಮಾರ್ಗಣದಿಂದಮೆಚ್ಚನು ರಾವಣಾತ್ಮಜನ ||೨೨||

ನಿಂದುದಸುರನ ರಥವು ವಾಜಿಯು |
ನೊಂದು ಮುಗ್ಗರಿಸಿದುವು ಸಾರಥಿ |
ಮುಂದುಗೆಟ್ಟನು ಮುರಿದುಬಿದ್ದುದು ಕರದ ಕಾರ್ಮುಕವು ||
ನೊಂದಸೇನವನಡರಿದನು ಮ |
ತ್ತೊಂದುತೇರನು ಬಿಲ್ಲುಗೊಂಡನು |
ಹುದೆಕೊಳ್ಳಿದನೆನ್ನುತೆಚ್ಚನು ರಾಘವಾನುಜನ ||೨೩||

ಹಿಂದೆ ಸುರಪನ ಗೆಲ್ದೆನೆನ್ನುವ |
ದೊಂದು ಬಡಿವಾರವನು ಬಗೆಯೊ |
ಳ್ತಂದು ನಮ್ಮೊಡನಮುಮ ಕಾದಲ್ಕೆಂದು ನಿಂದಿಹೆಯ ||
ಕೊಂದು ನಿನ್ನನು ಭೂತಗಣಗಳಿ |
ಗಿಂದು ಬಡಿಸುತೆ ತೃಪ್ತಿವಡಿಸುವೆ |
ನೆಂದು ಲಕ್ಷ್ಮಣನವನ ಕಣೆಯನು ಕೊಚ್ಚಿ ಮೇಣೆರದೆ ||೨೪||

ವಿನುತವಹ ಹರ್ಯಸ್ತ್ರವನು ನಿಜ |
ಧನುವಿಗೇರಿಸಿ ಬಿಡಲರಾತಿಯು |
ಚಣದೊಳದನಾಶಿವನಶರದಿಂದರಿಯುತಜನಿತ್ತ ||
ಘನಮಹಾಶೂಲವನು ತೆಗೆದದ |
ನಿನಕುಲೋದ್ಭವನುರಕೆ ಗುರಿಯಿಡು |
ವನುವ ಕಂಡಾ ವರವಿಭೀಷಣ ಬೆದರಿದನು ಮನದೆ ||೨೫||

ದೇವ ತುಡುತುಡು ಸರಿಯ ಬಾಣವ |
ನಾ ವಿರಂಚಿಯ ಶೂಲವನು ಖಳ |
ರಾವಣಿಯು ತಾನೆಸೆವ ಮುನ್ನವೆ ಕಡಿಯ ನೀನದನು ||
ಭಾವಿಸಲ್ಕದನೆಸೆದ ಬಳಿಕಿ |
ನ್ನಾವುಪಾಯವುಮಿಲ್ಲ ನಿನ್ನಯ |
ಜೀವಮುಳಿಯದು ಸತ್ಯ ನಂಬುವುದೆಂದನಸುರೇಂದ್ರ ||೨೬||

ಕೇಳಿದೊಡನೆಯೆ ಲಕ್ಷ್ಮಣನು ಸಿರಿ |
ಲೋಲರಾಮನ ಚರಣಕಮಲವ |
ನೋಲಗಿಸಿ ಮನದಲ್ಲಿ ಮಂತ್ರಿಸುತಜಮುಹಾಸ್ತ್ರವನು ||
ಹೇಳಲೇನದನೆಸೆಯಲಾಕ್ಷಣ |
ಶೂಲವಿಕ್ಕಡಿಯಾದುದಿಂದ್ರನ |
ಸೋಲಿಸಿದ ಬಲುಗಲಿಯ ಮಸ್ತಕವೆಸದುದಭ್ರದೊಳು ||೨೭||

ಕಂಡರಿದನಾಗಸದೊಳಮರರು |
ಮಂಡೆಬಾಗಿದರಹುದೊ ಲಕ್ಷ್ಮಣ |
ಗಂಡರಿಗೆ ನೀಂ ಗಂಡನಹುದಿಂದೆಮ್ಮನುಳುಹಿದಲಾ ||
ಭಂಡನಿವನೆಮ್ಮಮರನಗರಿಯ |
ಹಿಂಡಿ ರಸವನು ಬಸಿದುಕೊಂಡನು |
ಖಂಡಿಸಿದೆ ನೀನಿವನ ಧಣುಧಣುವೆನುತೆ ಪೊಗಳಿದರು ||೨೮||

ತಿರುಗಿದನು ಸೌಮಿತ್ರಿ ರಾಘವ |
ರರಸನಲ್ಲಿಗೆ ಧುರದೆ ನಡೆವುಧ |
ನರಿಕೆಗೈದನು ವರವಿಭೀಷಣಮುಖ್ಯರಹುದೆನಲು ||
ಪರಮಕರುಣಾಸಿಂಧು ತಮ್ಮನ |
ಕರೆದು ತಕ್ಕೈಸಂಕವೇರಿಸಿ |
ಶಿರವನಾಘ್ರಾಣಿಸುತೆ ಸೊಕ್ಕಿದನಾಗಳತಿಮುದದೆ ||೨೯||

ಕಂದಲಕ್ಷ್ಮಣನಿನ್ನದೆಸೆಯಿಂ |
ದಿಂದಿರನ ಪಗೆಸಂದುಪೋದನ |
ಮಂದತೋಷಿತಹೃದಯರಾದರು ನಾಕನಿಲಯಿಗಳು ||
ಇಂದುತನಗುಪಕಾರವೆಸಗ |
ಲ್ಕೆಂದು ನೀಂ ಮಿಗೆ ನೊಂದೆಯೈ ಬೆ |
ನ್ನಿಂದೆ ಬಂದವರುಂಟು ಹಲಬರು ನಿನಗೆ ಸರಿಬಹರೆ ||೩೦||

ಎಂದು ರಾಮನು ಸೋದರನ ಗುಣ |
ವೃಂದವನು ಬಾಯ್ದಣಿಯೆ ವರ್ಣಿಸಿ |
ಯಂದು ಕರೆದುಸುಷೇಣನನು ಜವದಿಂದಮೌಷಧವ ||
ಇಂದುಲೇಪಿಸಿಯಿವನ ಗಾಯವ |
ನಂದದಿಂ ಮಾಯಿಸೆನೆ ವೈದ್ಯನು |
ಚಂದವೆಸಗಿದನದನು ಮಾರುತಿ ಮರ್ದ ತರಲೊಡನೆ ||೩೧||

ಏಳನೆಯಸಂಧಿ ಸಂಪೂರ್ಣಂ

ಎಂಟನೆಯ ಸಂಧಿ.

ಸೂಚನೆ || ಗಂಡುಗಲಿ ರಾವಣನು ಶೂಲವ |
ಕೊಂಡು ಲಕ್ಷ್ಮಣನೆದೆಯನಿರಿಯ |
ಲ್ಕಂಡು ರಾಘವನವನ ಘಾತಿಸಿಯಟ್ಟಿದನು ಪುರಕೆ ||

ಇತ್ತಲಿಂತಿರಲತ್ತ ರಾವಣ |
ನೊತ್ತುವತಿಚಿಂತೆಯೊಳು ಬಿಸುಸು |
ಯ್ಯುತ್ತೆ ಮಗನ ಗುಣಾವಳಿಯ ನೆನೆದೆತ್ತಿ ಬಣ್ಣಿಸುತೆ ||
ಮಿತ್ತುವಾದಳೆ ಮಗನೆ ನಿನಗಾ |
ತೊತ್ತು ಜನಕನ ಮಗಳು ಶಿವಶಿವ |
ಹುತ್ತದೊಳಗಣ ಹಾವ ಕೆಣಕುತೆ ಕೆಟ್ಟೆನಕಟೆಂದ ||೧||

ಆಡಲೇಕಿನ್ನದನು ಬರಿದೇ |
ಮೂಢನಾಗುತೆ ತಾನು ಕಾಲವ |
ನಾಡೆ ಕಳೆದೆನು ಪುತ್ರಮಿತ್ರರನಿಕ್ಕಿದೆನು ರಣಕೆ |
ನೋಡಲವನೀಸುತೆಯ ಕೊರಳಿಗೆ |
ಹೂಡಿ ಖಡ್ಗವ ಮೊದಲೆ ಸವರಿಕೆ |
ಪಾಡಿಗೊವ್ಪುವಫಲವದಿಲ್ಲೆಂದೆನುತೆ ರಾಘವನು ||೨||

ಜೋತು ಮನದೊಳಯೋಧ್ಯೆಯತ್ತನು ।
ಚಾತನೊಡನಿಂದೈದುತಿರ್ದನು ।
ನೀತಿಯಿದು ಮೊದಲೆನಗೆ ತೋರಿದುದಿಲ್ಲ ವಿಧಿವಶದೆ ॥
ಘಾತಿಗೊಳಿಸೀಕ್ಷಣದೊಳವಳನ ।
ಜಾತರಿಪುವಿವನೆನಿಸಿ ಲೋಕ ।
ಖ್ಯಾತನಪ್ಪೆನೆನುತ್ತೆ ನಡೆದನು ಖಡ್ಗಕರನಾಗಿ ॥೩॥

ತತ್ತ ಕಡುಕೋಪದೊಳು ತೆರಳುತೆ ।
ಮತ್ತಕಾಶಿನಿಯನ್ನು ಕಾಣುತೆ ।
ತೊತ್ತುಗುವರಿಯೆ ನಿನ್ನದೆಸೆಯಿಂ ಸತ್ತರೆನ್ನವರು ॥
ಮಿತ್ತುವೋ ನೀಂ ಕಾಲಭೈರವ ।
ನೊತ್ತೆಯೋ ಘಡ ಮಾರಿಮಸಣಿಯೊ ।
ಸತ್ತೆ ನೀನಿನ್ನೆನುತೆ ಖಡ್ಗವನೆತ್ತಿ ಝಳಿಪಿಸಿದ ॥೪॥

ತಡೆಯ ತಡೆಯೆಲೆಭೂಪ ನಿನ್ನಯ ।
ಕಡುಪರಾಕ್ರಮಕಬಲೆ ಸಾಟಿಯೆ ।
ದುಡುಕಿ ಕಿಡಿಸದಿರಿನಿತುದಿನ ನೀಂ ಪೊರೆದ ಧರ್ಮವನು ॥
ಕಡಿಯಲೀಕೆಯನೊಡಲ ದಹಿಸುವ ।
ಕಿಡಿಯು ತಣ್ಣಿತ್ತೆಂದು ಬಗೆದೆಯ ।
ಕುಡಿದೊಡಹುದಲೆ ಶಾಂತಿ ರಾಘವರೊಡಲ ರಕುತವನು ॥೫॥

ಈಸುದಿನ ಚಲದಂಕಸೆನಿಸುತೆ ।
ವಾಸಿಯದನೀನೀಗಲುಳಿಯು ।
ತ್ತೀಸುದಿನದಾಬಾಳಿಕೆಗೆ ತನುವಾಸೆಯನು ಬಿಡದೆ ॥
ಹೇಸಿಕೆಗೆ ಪಕ್ಕಾಗಿ ಬದುಕುವೆ ।
ದಾಶರಥಿಗಳ ಕೊಲುವೆನೆಂಬಾ ।
ಬಾಸೆ ಹಳಚಿತ್ತೆಂದರೊಡನಿರ್ದಾಪ್ತಮಂತ್ರಿಗಳು ॥೬॥

ತಟ್ಟನದು ಕಿವಿದಟ್ಟಿ ಸೀತೆಯ ।
ಬಿಟ್ಟು ಹಿಂದಕೆ ನಡೆದು ರಾವಣ ।
ಸಟ್ಟಹಾಸದೆ ತರಿಸಿ ಮಣಿಮಯರಥವನೇರುತ್ತೆ ॥
ದಿಟ್ಟರಾದವರೆನ್ನ ಜತೆಯೊಳು ।
ಬಿಟ್ಟು ಸಕಲವನೀಗಳೈದುವು ।
ದಟ್ಟ ಬೋನವ ಬಿಟ್ಟು ಕಡೆಮುದ ಹೊಟ್ಟೆಗರು ನಿಲಲಿ ॥೭॥

ಹೆಂಡಿರಾಸೆಯ ಮಕ್ಕಳಾಸೆಯ |
ಸುಂಡು ಸವಿಯದ ಭಾಗ್ಯದಾಸೆಯ |
ಗಂಡುಗುರುತಿನ ಷಂಡರಿರ್ಪುದು ಒಲಿದು ಬಾಗಿಲನು ||
ಗಂಡುಗಲಿಗಳು ವೈರಿಭಟರನು |
ದಿಂಡುದರಿಯುವೆವೆಂಬ ಸುಭಟರು |
ಗುಂಡಿಗೆಯ ರಣಧೀರರಾರವರ್ಯೈದಲೆನ್ನೊಡನೆ ||೮||

ಎಂದು ಡಂಗುರಹೊಯಿಸಿ ಸಾರಿಸಿ |
ಮುಂದಿಮೂರ್ಬಲವೆರಸಿಯಸುರನು |
ಮುಂದುವರಿದ್ಯೈತರ್ಪ ಠೀವಿಯ ಕಂಡು ರಾಘವನು ||
ಬಂದ ಶೂರನದಾವನೆನಲೈ |
ತಂದವನು ರಾವಣನು ಜೀಯೆನ |
ಲಂದು ಸಂಭ್ರಮದಿಂದೆ ಕೊಂಡನು ಧನುವ ಜೀವಡೆದು ||೯||

ಕಾಲರೂಪದ ಕಾಳರಕ್ಕಸ |
ನಾಲಿಗಳ ಮರಳಿಸುತೆ ಕಡುದು |
ವ್ಯಾಳಿಯಲಿ ಬೊಬ್ಬಿಡುತೆ ಬರುತಿರೆ ಕಂಡು ಕಪಿಸೇನೆ ||
ಕಾಲಿನೋಟವ ತೋರಿ ಕಾಣದೊ |
ಲೋಳಿಗೊಳೆಯುಂ ಬಿಡದೆ ಕೋಪದೆ |
ಮೌಳಿಗಳ ಕುಣಿಯಿಸುತೆ ಬಂದನು ರಾಮನೆಲ್ಲೆನುತೆ ||೧೦||

ಇಂದು ತನ್ನನುಜಾತನನು ಸುತ |
ಬಂಧುಮುಖ್ಯರಕೊಂದನೆಲ್ಲಿಹ |
ನಂದು ತಂಗಿಗೆ ಭಂಗವೆಸಗಿದ ನೀಚನೆಲ್ಲಿಹನು ||
ಸುಂದರಾಂಗಿಯನವನ ಸುದತಿಯ |
ನೊಂದಿ ನಾನುಯ್ದಂದೆ ತನ್ನನು |
ಕೊಂದುಕೊಳ್ಳದೆ ಜೀವವಿಡಿದಿಹ ಹಂದೆಯೆಲ್ಲಿಹನು ||೧೧||

ಹರಿಹರಬ್ರಹ್ಮರನು ಧುರದೊಳು |
ಸರಕುಮಾಡದ ವಿಗಡರಾವಣ |
ನುರುಪರಾಕ್ರಮದುರಿಯ ಮಧ್ಯಕೆ ಸಿಲುಕೆ ಸರಶಲಭ ||
ಕರಿಕುಗೊಳ್ಳದೆ ಸೀದು ತನ್ನಯ |
ಪರಿಯಸರಿಯದೆ ಕೆಣಕಿ ಕೆಟ್ಟನು |
ಕರಿಗೆ ಕುರಿ ಸರಿಸನುವದಘುಧಹುದೆಂದನಸುರೇಂದ್ರ ||೧೨||

ಅಂದು ದಾನವರಾಯನೀಪರಿ |
ಯಿಂದೆ ನಿಂದಿಸುತಾಡೆ ರಾಘವ |
ನೆಂದನೆಳನಗೆ ಮಿನುಗೆ ಘನತರಮಧುರವಚನದೊಳು ||
ಹಿಂದೆ ನಿನ್ನವರಕಟಿದೇಪರಿ |
ಮುಂದು ಗಾಣದೆ ನುಡಿದು ತನ್ನಿಂ |
ಹೊಂದಿದರು ಯಮಮಂದಿರವನೆಂಬಂದವನು ಮರೆದು ||೧೩||

ಅರಿದರಿದು ನಿನ್ನವರ ವಿಧಿಯನು |
ಬರಿದೆ ಗಳಹಲ್ಬಲವ ಕಾಣೆನು |
ಹರಣದಾಸೆಯದುಂಟೆ ಚರಣಕ್ಕೆರಗು ಕರುಣಿಪೆನು ||
ಅರಸನೆಂಬಭಿಮಾನಕಲೆಗೇ |
ರ್ದೆರಗಲೆಂತಹುದೆಂದು ಬಗೆವೆಯ |
ಕರೆಯಿಸಾ ಜಾನಕಿಯನಿತ್ತಿಹೆನಭಯವನು ನಿನಗೆ ||೧೪||

ಹೇಳು ಹೇಳಿನ್ನೊಮ್ಮೆ ಕೇಳುವೆ |
ನಾಳುತನದಾಪರಿಯ ನಿನ್ನಯ |
ಕಾಲಿಗೆರಗಿದೊಡೆವ್ಮುನುಳಿವೆಯ ಸತ್ಯವೇ ನುಡಿಯು ||
ಕೇಳಿರೈ ಪರಿಜನರೆ ದಿಟ ನಿ |
ಮ್ಮಾಳಿದನು ಪುಸಿದಪನೆ ನೋಡಿರಿ |
ಕಾಲಿಗೆರಗಿಹೆನೆನುತೆ ರಾವಣ ರಾಮನಡಿಗೆಚ್ಚ ||೧೫||

ನೊಂದುವೇಸಂಘ್ರಿಗಳು ದೇಹದ |
ಸಂಧಿಬಂಧವೆ ಬೇರೆಯುಳಿದವ |
ರಂದವೇ ರಾಘವರು ಗರುಡಿಯ ಹೊಂತಕಾರಿಗಳು ||
ಬಂಧಿಸಿದನಡುಗಟ್ಟಿಗಿನಿಸುಂ |
ಕುಂದತಾರದ ಬೊಮ್ಮಚರಿಯವ |
ನಂದು ಬಳಸಿದ ಮೇಲಿನಾಳ್ಗಳು ನಾಡಿನಣ್ಣಗಳೆ ||೧೬||

ನಿಲ್ಲೆಲವೊ ಫಡ ಖೂಳ ಕುಟಿಲದ |
ಖುಲ್ಲವಿಜ್ಜೆಯಿದಾರ ಬಳಿಯೊಳು |
ಬಲ್ಲತನ ನಿನಗುಂಟು ಬಿಲ್ಲಿನೊಳೆಂಬುದನು ತೋರ್ದೆ ||
ಎಲ್ಲಿ ನಿನ್ನಯ ಬಾಹುವಿಕ್ರಮ |
ದುಲ್ಲಸವನಿನ್ನೊಮ್ಮೆ ತೋರಿಸೆ |
ಮಲ್ಲನೀನಹುದೆನ್ನು ತೆಚ್ಚನು ರಾಮನಹಿತನನು ||೧೭||

ಬಿದ್ದನಿನ್ನೇನಸುರರೊಡೆಯನು |
ಗೆದ್ದನಲೆ ರಘುರಾಯನೆಂಬಾ |
ಸದ್ದು ಹಬ್ಬಿತು ಕೇಳ್ದುದಸುರನ ಮೂಲಬಲವದಸು ||
ಹೊದ್ದಿತಪಜಯವೊಡೆಯಗೆಂದು |
ಬ್ಬೆದ್ದಸಾಗರದಂತೆ ವೊರೆಯು |
ತ್ಕ್ರುದ್ಧತವೆಸಲ್ ಬಂದು ಮುತ್ತಿತು ಬಳಸಿ ರಾಘವನ ||೧೮||

ಮೇರೆದಪ್ಪಿದಜಲಧಿ ಕೊಳ್ವುದೆ |
ತೀರದೊಳಗಿಹಮಳಲುವಟ್ಟಲ |
ತೋರಕೆಂಡದ ಮಳೆಯು ಸುಡದೇನರಳೆಯಾ ಕೊಡೆಯ ||
ಧೀರರಾವಣಸೇನೆಯಿದಿರಿಸ |
ಲಾರಿಗಳವದು ನಿಲಲು ಕೊಳ್ಳೆಂ |
ಬಾರುಭಟಿಸುತ್ತಾಯುಧಂಗಳೆನದ್ದಿದುದುನೃಪನ ||೧೯||

ದನುಜಪತಿಯನು ಹಿಂದಕುಳಿಯಿಸಿ |
ಕೆಣಕಿ ತನ್ನನು ಬಳಸಿಕೊಂಡಿಹ |
ಗಣನೆಗಸದಳವಾದ ರಾಕ್ಷಸಗಣವನೀಕ್ಷಿಸುತೆ ||
ಇನಿತುಸಂಖ್ಯಾತೀತಭಟತತಿ |
ಯೆನಗೆ ದೊರೆತುದುಪೂರ್ವಜನ್ಮದ |
ಘನತರಾರ್ಜಿತಸುಕೃತವೆಂದನು ರಾಮನಾಪಡೆಗೆ ||೨೦||

ಚುಕ್ಕಿಗಳಿನಡಸಿರ್ಪ ನಭವನು |
ಹೊಕ್ಕಮಾತ್ರದೊಳೊರ್ವ ರವಿಯೇ |
ನಕ್ಕಜವೆ ಮಸುಳಿಸವೆ ಚುಕ್ಕಿಗಳವನ ಕಿರಣದೊಳು ||
ಎಕ್ಕತುಳನಾರಾಘವೇಶನು |
ದಕ್ಕಡಿಗನಲೆ ನಿಖಿಲಲೋಕವು |
ಬೆಕ್ಕಸಂಬಡೆ ತೆಗೆದನಾಗಾಂಧರ್ವವರಶರವ ||೨೧||

ತೆಗೆದಪರಿಯೊಳಗದನು ಮಂತ್ರಿಸಿ |
ವುಗಿಸಿ ಕಾರ್ಮುಕಕಾಗಳೆಸೆಯು |
ಲ್ಬಿಗಿಯುತಲ್ಲಿಂದಮಿತಕೋಟಿಯ ರಾಮರೂಪಿನೊಳು ||
ಬಗೆಯುದರಿಗಳ ಸದೆಯತೊಡಗುತೆ |
ಹಗೆಯು ಹರಿಯಿತ್ತೆನಿಸಿ ರಾಕ್ಷಸ |
ವಿಗಡವೀರರನೆಲ್ಲ ಕೊಂದತ್ತೊಂದುನಿಮಿಷದೊಳು ||೨೨||

ಇತ್ತ ರಾಘವನಸುರಬಲದೊಡ |
ನೊತ್ತಿ ಕಾದುತ್ತಿರಲು ಲಕ್ಷ್ಮಣ |
ಸತ್ತ ರಾವಣನನ್ನು ಕೆಣಕಿದನಿರದೆ ಕಾಳೆಗಕೆ ||
ಎತ್ತಲೈದುವೆ ನಿಲ್ಲು ಖುಲ್ಲನೆ |
ಮಿತ್ತುವದು ಸನ್ನಿಹಿತವಾದುದು |
ಚಿತ್ತದೊಳು ನಿನ್ನಿಷ್ಟದೈವವ ನೆನೆದು ಕೊಳ್ಳೆನುತೆ ||೨೩||

ಕೊಂಡು ಕೋದಂಡವನು ಶರಗಳ |
ತಂಡತಂಡವ ನೂಕಿ ರಿಪುವಿನ |
ಗುಂಡಿಗೆಯ ತೋಡಿದನು ಕಂಡುದು ಮೇಲೆ ಸುರಕಟಕ ||
ಖಂಡಿತವು ಸಾವಿಂದು ರಾಕ್ಷಸ |
ಮಂಡಲೇಶ್ವರಗಮಮ ರಘುಜೋ |
ದ್ದಂಡರಾಮನ ಚಲವು ದಕ್ಕಿತ್ತೆಂದುದತಿನುದದೆ ||೨೪||

ಪರರ ಶಸ್ತ್ರಾಸ್ತ್ರಂಗಳಿರಿತವ |
ನರರೆ ರಾವಣ ಲೆಕ್ಕಿಪನೆ ಶಿವ |
ಗಿರಿಯನೆತ್ತಿದಕಾಯಕುಂಟೇ ಗಾಯವಾಯುಧದ ||
ಕೆರಳಿದನು ಕೆಂಪೇರೆ ಕಣ್ಣುಗ |
ಳುರುಗನಂದದೆ ಬುಸ್ಸುಬುಸ್ಸೆನು |
ತುರುವ ಶಕ್ತ್ಯಾಯುಧಕೆ ಮೆಲ್ಲನೆ ನೀಡಿದನು ಕರವ ||೨೫||

ಫಡಫಡೆಲವೋ ಲಕ್ಷ್ಮಣನೆ ತ |
ನ್ನೊಡಲು ಬಂದಾಸುರಪಜಿತ್ತನು |
ಕಡಿದಪಾಪಿಯೆ ನಿನ್ನನುಳಿಯಿಪನೆಂತು ರಾವಣನು ||
ಕುಡುವನಿದಕಾಹುತಿಯುನಣ್ಣನು |
ಬಿಡಿಸಿಕೊಳ್ಳೊಡೆ ಕರೆಯು ಕರೆಯೆಂ |
ದೊಡನೆ ಕಡುಭೋರ್ಗರೆವ ಶೂಲವನಿಟ್ಟು ಬೊಬ್ಬಿರಿದ ||೨೬||

ಇಟ್ಟ ಶೂಲವನಸುರನನುಜನು |
ನಿಟ್ಟಿಸುತೆ ತನ್ನುರುವ ಗದೆಯಿಂ |
ತಟ್ಟನೆರಗಲ್ಕದನು ಕೊಳ್ಳದೆ ಭುಗಿಲು ಭುಗಿಲೆನುತೆ ||
ಅಟ್ಟುತೈತರಲಿದನು ಬೊಮ್ಮನು |
ಕೊಟ್ಟು ಕಿಡಿಸಿದನೆಂದು ಕಡು ಕಂ |
ಗೆಟ್ಟು ಬಾಯ್ಬಿಡೆ ಸುರರು ಲಕ್ಷ್ಮಣ ನೆಮ್ಮಿದನು ನೆಲನ ||೨೭||

ಸಂಗರದೆ ಲಕ್ಷ್ಮಣಸಿಗೀಪರಿ |
ಭಂಗಮೊದವಿದುದನ್ನು ರಘುಕುಲ |
ಪುಂಗವನು ಕೇಳುತ್ತೆ ರೋಷಂಗೊಂಡು ಕುದಿಕುದಿದು ||
ಅಂಗವಣೆಯಿದನಸುರನೆಮ್ಮೊಳು |
ಸಂಗಳಿಸಿದನೆ ದನುಜಜಲಧಿಯ |
ನಿಂಗಿಸುವೆನೀಗೆನುತೆ ತರುಬಿದನೊಡನೆ ರಾವಣನ ||೨೮

ನಿಲ್ಲುನಿಲ್ಲೆಲೊ ಖಳನೆ ಬಿಲ್ಲಿನ |
ಬಲ್ಲತನವನು ತೋರು ಲಂಕಾ |
ವಲ್ಲಭನೆ ನೀನಹುದು ನಮ್ಮೊಡನಿಂದು ಕಾದಿದೊಡೆ ||
ಎಲ್ಲಿ ನಿನಗಿರ್ಪಖಿಳಶಕ್ತಿಯ |
ನುಲ್ಲಸದೆ ತೋರೆನುತೆ ಕಣೆಗಳ |
ಚೆಲ್ಲಿದನು ರಘುರಾಮನಾತನ ಮೇಲೆ ಸುರರುಲಿಯೆ ||೨

ಅಂಗವಿಸಿ ಕರಿಕುಂಭಕೆರಗುವ |
ಸಿಂಗನಂದದೊಳಾರ್ಭಟಿಸಿ ನೇ |
ತ್ರಂಗಳೊಳ್ಕಿಡಿ ಸೂಸೆ ರಾವಣನಾಗ ರಾಘವನ ||
ಭಂಗಿಸುವೆನೆಂದೊಡನೆ ಕಣೆಯತ |
ರಂಗವನು ಪರ್ಬಿಸಲು ತನ್ನಯ |
ಹೊಂಗಣೆಯ ಬಿರುಗಾಳಿಯಿಂದದನರಸ ಚದರಿಸಿದ ||೩

ಹತ್ತುಶರದಿಂದರಿಯ ಚಾಪವ |
ಕತ್ತರಿಸಿದನು ಬಳಿಕಮೊಡನೈ |
ವತ್ತುಕಣೆಯಿಂದವನ ಸಾರಥಿಯನ್ನು ಕೆಡವಿದನು ||
ಮತ್ತೆ ವಿಶಿಖಗಳೇಳರಿಂ ಬಿಡ |
ದೊತ್ತಿ ರಥವನು ತರಿದು ತೂಡಿ |
ದುರ್ವೃತ್ತಮಾಶ್ವಂಗಳನು ಸೀಳಿದನಾಗ ರಾವಣನ ||೩

ಬೆತ್ತಲಾದನು ರಾವಣನು ಕ |
ಣ್ಗತ್ತಲಾಂತನು ತನ್ನ ಸನಿಹದೊ |
ಳೆತ್ತಲುಂ ರಥಹಯಗಜಂಗಳ ಸುಳಿವ ಕಾಣದೆಯೆ ||
ಚಿತ್ತದೊಳು ಬೆದರಿದನು ತನಗೀ |
ಹೊತ್ತನಿಕ್ಕುದೆ ವಿಧಿಯೆನುತೆ ಮರು |
ಗುತ್ತೆ ಕುರದತ್ತಿರದೆ ಸಾವುದ ಕಂಡನಾರಾಮ ||೩

ಹೋಗುಹೋಗೆಲೊ ಹಂದೆ ಕೈಯೊಳು |
ಬಾಗಿಸಿದ ಬಿಲ್ಲಿಲ್ಲದವನನು |
ತಾಗರಾ ರಘುವಂಶಸಂಭವರಿಲ್ಲ ಮೃತಿನಿನಗೆ ||
ಬೇಗನೆಲ್ಲವ ಸಜ್ಜುಗೊಳಿಸಿಯೆ |
ಭೋಗಕೆರೆದು ತಿಲಾಂಜಲಿಯ ನೀಂ |
ಸಾಗುವುದು ಮತ್ತಿತ್ತಲೆಂದನು ರಾಘವೇಶ್ವರನು ||೩೩||

ಎಂಟನೆಯ ಸಂಧಿ ಸಂಪೂರ್ಣ

ಒಬಂತ್ತನೆಯ ಸಂಧಿ.

ಸೂಚನೆ || ಘೋರಯುದ್ಧದೆಹೋರಿರಾವಣ |
ನಾರುಬಟೆಯನುನಿಲಿಸಿ ರಾಘವ |
ವೀರನಣೆ ಕಲ್ಲಾಡಿ ಶಿರಗಳನವನ ಕೆಡವಿದನು ||

ಬಸಿವ ನೆತ್ತರ ಗಾಯದೊಡಲಿನ |
ಕುಸಿದ ಮುಂಡೆಯ ರಾಕ್ಷಸೇಶ್ವರ |
ನುಸಿಕನೈತಂದೊಡನೆಯರಮನೆಯಂತವುರದೊಳಗೆ ||
ಎಸೆವ ಚಿಂತಾಗಾರದೊಳಗು |
ಬ್ಬಸವನಾಂತೊರಗಿರಲು ಕೇಳ್ದದ |
ನಸುರನಾ ಶಶಿವದನೆ ಬಂದಳು ಕಂಡಳವನಿರವ ||೧||

ಕಾಳಗದೊಳಂದಾ ಕುಬೇರನ |
ಸೋಲಿಸಿ ಮಹೇಶ್ವರನ ರಜತದ |
ಶೈಲವನು ಬಿಡದೆತ್ತಿ ಕೊಂದನರಣ್ಯಭೂಪತಿಯ ||
ಕಾಲನನು ಕಂಗೆಡಿಸಿ ಸಗ್ಗಕೆ |
ದಾಳಿಯಿಟ್ಟಿಂದ್ರನನು ಮುರಿದಾ |
ಶೂಲಿಗೆಣೆಯಹ ಪತಿಯೆ ನಿನಗೀಗತಿಯೆ ಸೋಜಿಗವು ||೨||

ಅಂದು ಬೇಡಕಟೆಂದ ಮಾವನ |
ಚಂದದುಕ್ತಿಗೆ ಮನವನೀಯದೆ |
ಹಂದೆವಾ ತೆಂದಾ ವಿಭೀಷಣನೀತಿಯನು ಪಳಿದು ||
ಸುಂದರಾಂಗಿಯ ಬಿಡೆನು ನಾನೆಂ |
ದೊಂದುಹಟವನು ಹಿಡಿಯುತದರಿಂ |
ಬಂಧುಬಳಗವನೆಲ್ಲ ಸವರಿಸುತಿಂದು ನೀಂ ನೊಂದು ||೩||

ಸೇರಿ ಮಂಚವನಿರಲು ನಾಂಕ |
ಣ್ಣಾರೆ ನೋಡುತೆ ಸಹಿಪ ಬಗೆಯೆಂ |
ತಾರಿಗೊರಲುವೆನಾರು ರಕ್ಷಕರಾರಿಗಧಟಿಹುದು ||
ನೀರ ನಿನ್ನಯ ಚರಣಕೆರಗುತೆ |
ಚೀರಿ ಬಲುಬಾಯಾರಿಯರ್ಥಿಪ |
ನೀರೆಯಾದೆನ್ನಲ್ಲಿ ದಯೆಯನು ತೋರು ಮುದಬೀರು ||೪||

ಆದುದಾಯಿತು ರಮಣ ನಿನ್ನಯ |
ಯೋಧರೆಲ್ಲರು ಮಡಿದರಿನ್ನಿದ |
ನೋದಿ ಫಲವೇನಳಿದ ಸುತಸೋದರರು ಮರಳುವರೆ |
ಹಾದಿ ಬೇರೊಂದಿಲ್ಲವುಳಿವಿಂ |
ಗಾದಯಾನಿಧಿ ರಾಮಚಂದ್ರನು |
ಮೇದಿನಿಯೊಳುದಿಸಿರ್ಪ ಹರಿಯೆಂದೆಲ್ಲರಾಡುವರು ||೫||

ಅರಸ ನೀನವನರಸಿಯೊಳು ಮನ |
ವಿರಿಸಿ ಬಾಳುವೆನೆಂದು ಬಗೆದೆಯು |
ಸರಸಿಜಾಲಯೆ ಸಕಲಲೋಕದ ಮಾತೆಯವಳರಿಯ ||
ಧರಿಸಿ ಸೀತಾಕೃತಿಯನಿಂದವ |
ತರಿಸಿಹಳು ನೀನಿನ್ನು ತಡೆಯದೆ |
ಕರೆಯಿಸವಳನು ರಘುಜಗೊಪ್ಪಿಪುದೆಂದಳಾ ಕಾಂತೆ ||೬||

ಕೇಳಿದನು ದಶಶಿರನು ಮಹಿಳಾ |
ಮೌಳಿಮಂಡೋದರಿಯ ವಚನವ |
ನಾಲಿಯೊಳು ನೀರ್ದುಂಬುತೆಂದನು ನುಡಿಯು ತಡಬಡಿಸೇ ||
ಶೀಲವತಿ ನಿನ್ನೀಹಿತೋಕ್ತಿಯ |
ನಾಲಿಸಿದೊಡೆನಗುಂಟು ಸೌಖ್ಯವು |
ಮೇಲು ತಾನಹುದಾದೊಡಂ ಕೇಳೆನ್ನ ಮನದನುವ ||೭||

ಹರಿಯು ರಾಘವನೆಂಬುದನು ದಿಟ |
ವರಿದಿಹೆನದಂತಿರಲಿ ಲೋಕದೆ |
ನರರೊಳುದಯಿಸಿ ತಾನುಮವರಂತಾಡಿದಾ ಬಳಿಕ ||
ಒರೆಯದೇ ಜನವಿವನಯೋಧ್ಯೆಯ |
ನರಪತಿಯಸುತನೆಂದು ದನುಜೇ |
ಶ್ವರನ ಸಹಜೆಯ ಮೂಗನರಿದಪ್ರತಿಮಭಟನೆಂದು ||೮||

ಜಸವೆ ಸದ್ಗತಿ ಜಸುಮವೆತ್ತಿದ |
ಗುಸಿರಲಳಿಜಸವದುವೆ ದುರ್ಗತಿ |
ಯುಸಿರು ಮಸುಳುವವರೆಗೆ ಮಾನವೆ ಫಲವು ಬಾಳಿಕೆಗೆ ||
ದಶರಥೇಂದ್ರನ ಸುತನ ಸುದತಿಯ |
ನಸುರಚಕ್ರೇಶ್ವರನು ಶೌರ್ಯೋ |
ಲ್ಲಸಿತನಪಹರಿಸಿದನು ಕೊರೆದನು ಮೂಗನಿನಕುಲದ ||೯||

ದಿಟ್ಟನಿವನೆಂದೆನ್ನನುರೆ ಮನ |
ಮುಟ್ಟಿ ಪೊಗಳಲಿ ಲೋಕವೆಂದೀ |
ಕೆಟ್ಟಕಜ್ಜವ ಬಳಸಿದೆನು ಬೇರಿಲ್ಲ ಮತವೆನಗೆ ||
ನಿಟ್ಟಿಸಲ್ಕಾಂ ಕಾಮಿಯಾಗು |
ತ್ತಟ್ಟಹಾಸದೆ ರಾಮನರಸಿಯ |
ಕಟ್ಟಿ ತಂದೆನು ಸೆರೆಯೊಳಿಟ್ಟೆನು ಸಿಟ್ಟುರವದೇನು ||೧೦||

ಅರಸಿ ನಿನಗೆನ್ನಂತರಂಗವ |
ನರಿಪಿದೆನು ನೀನಿದನು ಮಿಕ್ಕರಿ |
ಗೊರೆಯಲಾಗದು ತನ್ನ ಸದ್ಗತಿಗೊಂದೆ ದಾರಿಯಿದು ||
ಮರುಗದಿರು ಮನದಲ್ಲಿ ಲಕ್ಷ್ಮೀ |
ಧರನ ಕೈಯಿಂ ಸಾವು ಸಮನಿಸೆ |
ಕರಗತವು ತಾಂ ಮುಕ್ತಿಸಂಪದವೆಂದನಸುರೇಂದ್ರ ||೧೧||

ಎಂದು ಸುದತಿಯ ಮನದ ಕದಡನು |
ಸಂದುವಿಡದವೊಲೊರಸಿ ಮಿಹಿರ |
ಸ್ಯಂದನವು ಪೂರ್ವಾದ್ರಿಯೊಳ್ತಲೆದೋರುವನಿಶರೊಳು ||
ಬಂದು ತನ್ನೋಲಗದ ಚಾವಡಿ |
ಗಂದು ನೆರಪುತೆ ಸಕಲರನು ರಣ |
ವಂದಗೆಟ್ಟುದನರುಹಿ ಪೇಳ್ದನು ಮುಂದಣಾಹದನ ||೧೨||

ಅಂಕೆಯಿಲ್ಲದ ಕಪಿಗಳನು ನಿ |
ಶ್ಯಂಕೆಯಿಂ ರಾಘವರು ನೆರಹುತೆ |
ಲಂಕೆಯನು ಮದ್ರಾಜಧಾನಿಯುನೊಗ್ಗಿನಿಂ ನುಗ್ಗಿ ||
ಅಂಕದೊಳು ನಮ್ಮಖಿಳಬಲವನು |
ಬಿಂಕದಿಂ ತರಿದೊಟ್ಟಿ ತನ್ನನೆ |
ಶಂಕೆಯುದುರಿದಪಕ್ಕಿಯಂದದೊಳಕಟ ನಿಲಿಸಿದರು ||೧೩||

ಎಂದು ದೋರ್ಬಲದಿಂದೆ ಲಂಕೆಯ |
ನೊಂದಿದೆನೊ ನಾನಂದು ಮೊದಲಾ |
ಗಿಂದುಪರಿಯಂತೋವಿದೆನು ಬಿಡದಖಿಲರಾಕ್ಷಸರ ||
ಒಂದುಮಂತಿಳಿಯದಿಹ ಮೂಢರಿ |
ಗಂದವಹ ವಿದ್ಯೆಗಳನರುಹು |
ತ್ತೊಂದುಗೂಡಿಸಿ ಕಲಹವಿಲ್ಲದೆ ಬಾಳ್ವುದನು ಕಲಿಸಿ ||೧೪||

ಅಂದಿಗಂದಿಗೆ ಯುಕ್ತವೆನಿಪನಿ |
ಬಂಧನಂಗಳನೇರ್ಪಡಿಸಿ ನಾಂ |
ತಂದೆಯವೊಲೀರಾಜ್ಯದಾಡಳಿತನು ನಿರ್ವಹಿಸಿ ||
ದಂದುಗಂಗಳನೆಲ್ಲ ಬಾಹು |
ಸ್ಪಂದಮಾತ್ರದೊಳಡಗಿಸುತ್ತರಿ ||
ಗಂಧಗಜಕಂಠೀರವನು ತಾನೆನಿಸುತಾಳಿದೆನು ||೧೫||

ತಪ್ಪನೆಸಗಿದುದಿಲ್ಲ ತಾನೆಂ |
ದಪ್ಪುತನೃತವನಾಡೆ ನಾಂ ಮನ |
ವೊಪ್ಪದನ್ಯಾಯಗಳ ಗೈದೆನು ಬಿಡದೆ ಪಲಬಗೆಯ ||
ಕಪ್ಪು ಚಂದ್ರನೊಳಿಪ್ಪುದಾದೊಡ |
ನೊಪ್ಪಿಕೊಂಡಾಜನವು ಮನಮೊಸೆ |
ದಿಪ್ಪತೆರದಿಂದವನು ನಿಮ್ಮಯ ಬೊಪ್ಪರೊಪ್ಪಿದರು ||೧೬||

ಪೊದ್ದಿಹುದು ರಣವಿಂದು ತನಗ |
ತ್ಯುದ್ಧತರ ರಾಘವರ ಜತೆಯಲಿ |
ಗೆದ್ದು ಬಹೆನೆಂಬಾಸೆ ಜೀತುದದೇತಕೆಂದರಿಯೆ ||
ಬಿದ್ದೆನಾದೊಡೆ ತನ್ನ ವಂಶದ |
ಸದ್ದಡಗದಾತೆರದೆ ಕರೆಯಿಸಿ |
ಬುದ್ಧಿಶಾಲಿವಿಭೀಷಣನ ನೀಂ ಗದ್ದುಗೆಯೊಳಿರಿಸಿ ||೧೭||

ಕಟ್ಟಿಹನು ರಾಘವನು ಲಂಕೆಯ |
ಪಟ್ಟವನು ನಮ್ಮಯ ವಿಭೀಷಣ |
ಗಟ್ಟಹಾಸದೊಳೆರಗಿ ತನ್ನನು ಸೇರಿದಾದಿನವೆ ||
ಕೆಟ್ಟತನುಜನ ಬುದ್ಧಿಯೆನ್ನುತೆ |
ಬಿಟ್ಟುಕುಡದಿರಿ ಗುಟ್ಟನಿತರರಿ |
ಗೊಟ್ಟುಗೂಡುತೆ ಬಾಳ್ವುದೊಳ್ಳಿತ್ತೆಂದನಮರಾರಿ ||೧೮||

ಹೇಳಿಯಿಂತು ವಿವೇಕವನು ಬಿ |
ಲ್ಲಾಳು ನಿಜರಥವೇರಿ ರಾಕ್ಷಸ |
ಮೌಳಿ ಹೊಕ್ಕನು ಕಣವ ಮೃತ್ಯುವಿನಣಲ ಹುಗುವಂತೆ ||
ಕಾಳಮೇಘಚ್ಛವಿಯ ಕಾಯದ |
ಕಾಲಭೈರವನುಗ್ರರೂಪದ |
ಶೂಲಕೋದಂಡಾಸಿಧರನನು ರಾಮನೀಕ್ಷಿಸಿದ ||೧೯||

ಹಿಂದೆ ಲಕ್ಷ್ಮಣನಿವನ ಶೂಲದೆ |
ಸಂದು ಮೂರ್ಛೆಗೆ ಸಂದುದನು ತಾ |
ನಂದು ಕಷ್ಟದಿನದನು ತೊಲಗಿಸಿದುದನು ನೆನೆನೆನೆದು ||
ತಂದು ಕೋಪವನೀಗಳಿವನನು |
ಕೊಂದು ತೀರ್ಚದೆ ಬಿಡೆನು ತಾನೆಂ |
ದೊಂದಿಸುತೆ ಧನುವಿಂಗೆ ಬಾಣವನಾರ್ದು ತೆಗದೆಚ್ಚ ||೨೦||

ಬರುವ ಸರಳನು ಬಿಡದೆ ದನುಜನು |
ಶರದೊಳೊಂದರೊಳರಿದು ಮತ್ತಂ |
ಕೆರಳಿ ರಾಘವನುರವನೆಂಟಂಬಿನೊಳು ಘಾತಿಸಲು ||
ಶರಗಳೆದೆಯಾರವನು ತಾಂಕುತೆ |
ಮುರಿದು ಬಿದ್ದುವು ಭಾನುಕುಲಜನ |
ಕರಚಮತ್ಕೃತಿಯೆನಿತೊ ಕಡಿದನು ಖಳನ ಕಾರ್ಮುಕವ ||೨೧||

ಹೋಯಿತದು ಧನುವೆಂಬನಿತರೊಳ |
ಗಾಯತದ ಮತ್ತೊಂದನೊದವಿಸಿ |
ಸಾಯಕವ ಮುಗುಳೆಚ್ಚೊಡಾರಾಘವನು ಖತಿಗೊಂಡು ||
ಗಾಯಗಾಣಿಸುತಾಗ ರಿಪುವಿನ |
ಕಾಯದೊಳು ಕಟುವೆನಿಪ ಬಾಣದ |
ಬಾಯ ಸನಿದೋರಿದನು ರಾಕ್ಷಸಸಾರ್ವಭೌಮಂಗೆ ||೨೨||

ಅಸುರನಿರದೊಡನಾಗ ಮಾಯದೆ |
ಮುಸುಕಿದನು ಮುಗಿಲಾಗಿ ಸಿಡಿಲಾ |
ಗೆಸಗಿದನು ದಳ್ಳುರಿಯ ರೂಪನ ತಾಳ್ದು ದಹಿಸಿದನು ||
ಬಿಸದಮುಳಿಯನು ಸುರಿದನಿದ ಸುಮ |
ನಸರು ಕಂಡುರೆ ಬೆದರಿಯಿಂದ್ರಂ |
ಗುಸಿರಿದರು ಜೇಯಿಂದಿನಾಹವವರಿದು ರಘುಪತಿಗೆ ||೨೩||

ಅಸುರಪತಿ ನಲವಿಂದೆ ರಥದೊಳ |
ಗೆಸದಿಹನು ನೆಲದಲ್ಲಿ ನಿಂದಿಹ |
ದಶರಥಾತ್ಮಭವಂಗೆ ರಾಕ್ಷಸಜಯವು ಸಮನಿಪುದೆ ||
ಒಸೆದು ಮಾತಲಿಮುಖದೆ ನಿನ್ನಯ |
ಪೊಸರಥವನಿರದಟ್ಟು ರಾಮನು |
ನಿಸದಮದನೊಲ್ದೇರಿ ಸೆಣಸಲು ಸಿದ್ಧಿಪುದು ಫಲವು ||೨೪||

ಎಂದು ಸುರರರ್ಥಿಸಲು ಸುರಪತಿ |
ಯಂದು ಸಹಜವಿದೆಂದು ತಾಂ ಮನ |
ದಂದು ರಥವನು ಕೊಂಡು ಪೋಗೆಂದಾಣತಿಯನೀಯೆ ||
ಬಂದುದದು ಭೂಲೋಕಕೊಡನೆಯೆ |
ನಿಂದುದಾಗಳೆ ಭೂಪನೆಡೆಯೊಳು |
ವಂದಿಸಿಯೆ ಮಾತಲಿಯು ಕೈಮುಗಿದೆಂದನಾನೃಪಗೆ ||೨೫||

ದೇವ ನೀವೀರಥವನೇದಾರ್ |
ರಾವಣಾಸುರನೊಡನೆ ಸೆಣಸ |
ಲ್ಕಾವಿಯಚ್ಚರರಾಜನಟ್ಟಿದನೀಮಹಾರಥವ ||
ನೀವು ಕಾಲಾಳಾಗಿ ಕಾದುವು |
ದಾವಿಕಾರಿಯು ರಥದೆ ಮೆರೆವುದು |
ಭಾವಕೊಪ್ಪದು ತನಗಿದೆಂಬುದನರುಹಪೇಳಿದನು ||೨೬||

ಧಿಕ್ಕರಿಸದೀದಿವಿಜನಾಥನ |
ರಕ್ಕೆಗೂಡಿಹ ತೇರನಡರ |
ಲ್ಕಕ್ಕಜವೆ ಜಯವೀಗ ಬಿಜಯಂಗೈಯಬೇಕೆನಲು ||
ಶಕ್ಯದಿದು ಸುರಪಂಗೆ ನನಗಿಂ |
ದುಕ್ಕಿತಧಿಕೋತ್ಸವವು ರಿಪುವನು |
ತಿಕ್ಕಿಮುಕ್ಕುವೆನೆನುತೆ ರಥವೇರಿದನು ರಾಘವನು ||೨೭||

ಸುರರುಘೇಎಂದೆನಲು ಮನುಮುನಿ |
ವರರು ಪೊಗಳಲು ಕಪಿಕುಲೋತ್ತಮ |
ರೆರಡುಕೈಗಳನೆತ್ತಿ ಜಯಯೆನಲರಸನದನೇರಿ ||
ಸಿರಿಯ ಮುದದಿಂದುಬ್ಬಿ ಸತ್ಕುಲ |
ಜರನು ಬಾಧಿಪ ಪಾಪಬುದ್ಧಿಯ |
ನಿಥದೆತೊಲಗಿಪ ಶರವ ಕೊಳ್ಳೆಂದೆಚ್ಚನಹಿತನನು ||೨೮||

ಸಿರಿಯ ಮದದಿಂದುಬ್ಬಿರುವ ಹರಿ |
ದುರಿತದೊಳು ಸಂಚರಿಸಬಗೆವನೆ |
ಸಿರಿಯನುಳಿದಿಹ ನಿನ್ನ ನಂಬಿಗರಲ್ತೆ ಪಾಪಿಗಳು ||
ಸುರಪನಟ್ಟಿದನೆಂದು ರಥವನು |
ಬರಿದೆ ಬೆರತಿಹೆ ಪಿಂತೆ ಯುದ್ಧದೆ |
ಸುರಪನಿದರೊಳಗಾದುತೆನ್ನೊಡನೋಡಿದನು ಕಡೆಗೆ ||೨೯||

ತೇರಸಾರಥಿಯನ್ನು ನಂಬುತೆ |
ವೀರರಾವಣನೊಡನೆ ರಣದೊಳು |
ಹೋರಿ ಜಯಿಸುವೆನೆಂಬ ಬಗೆಯಿರೆ ಸಾರು ಪಿಂದೆಸೆಗೆ ||
ತೋರತೋಳ್ಬಲಮುಂಟ ತನಗಿ |
ನ್ನಾರಬಲದಿಂದೇನೊ ಎಂಜತಿ |
ಧೀರನಾದೊಡೆ ಮುಂದೆ ಬಾರೆಂದೆಚ್ಚನಸುರೇಂದ್ರ ||೩೦||

ಎಚ್ಚ ದಾನವರರಸನಂಬುಗ |
ಳಚ್ಯುತನ ದೇಹವನು ಬಿರಿಸಿಂ |
ಚುಚ್ಚೆ ಕಂಗಳು ಕಿಚ್ಚನುಚ್ಚಿದುವಚ್ಚರಿಯನರನ ||
ಪೊಚ್ಚಮಸೆವೆತ್ತಲಗುಗಳನೊಡ |
ನುಚ್ಚಳಿಸಿ ಕಾರ್ಮುಕದೆ ಮುಗುಳಿರ |
ದಚ್ಛಮಂತ್ರಾಸ್ತ್ರಗಳಿನೆಚ್ಚನು ದೇವರಿಪುದಾವ ||೩೧||

ಮುರಿದುದಸುರನ ತೇರ ಟೆಕ್ಕೆಯ |
ಬೆರಗುಗೊಂಡನು ರಾವಣನು ರಥ |
ತುರಗದೊಡಲೊಳು ಶರಗಳುಗಿಯಲು ಮುರಿದುವವು ಮುಖವ ||
ಅರಿದು ಸಾರಥಿಯದನು ಪಿಂದೆಸೆ |
ಗಿರದೆ ತಿರುಗಿಸೆ ರಥವನಸುರೇ |
ಶ್ವರನು ಕಂಡುರೆ ಕನಲಿ ಮೂದಲಿಸಿದನು ಸಾರಥಿಯ ||೩೨||

ಖೂಳಸಾರಥಿ ರಥವ ತಿರುಗಿಸಿ |
ಪಾಳುಗೈದೆಯ ಪೆಸರನಿಂದವ |
ಹೇಳನವ ಗೈದೆನ್ನ ಜಗವೇಂ ಸಗದೆ ನಾಚಿಸದೆ ||
ಕೋಳುಹೋದುದು ತನ್ನ ಬಾಳಿದಿ |
ರಾಳಿಗಂಜುತೆ ಸರಿದೆನೆಂದದ |
ಹೇಳಿ ಫಲವೇಸರಿಯು ಸಮ್ಮುಖಕೊಡನೆ ತಿರುಗಿಸೆನೆ ||೩೩||

ಇಂದು ಸಮ್ಮೊಡೆಯಂಗೆ ಕೊನೆಯಹು |
ದೆಂದು ಸಾರಥಿ ನೊಂದು ಮರುಗುತೆ |
ತಂದು ನಿಲಿಸಿದನಾಜ್ಞೆ ಜೀಯೆಂದೆನುತೆ ಮಾರಥವ ||
ಬಂದ ಬಿರಿಸಿನೊಳಿರದೆ ರಾವಣ |
ನೊಂದು ಶೂಲವ ಮಂತ್ರಿಸುತ್ತಿಡೆ |
ಬೆಂದುದಿನ್ನೇಂ ಲೋಕವೆಂಬವೊಲ್ಕೈದಿತದು ಭರದೆ ||೩೪||

ಸಾಕುಸಾಕಿನ್ನೆದೆಯೊಳಿದಸೆಂ |
ದಾಖಳಾಗ್ರಣಿ ಗರ್ಜಿಸುತ್ತಿರ |
ಲಾಕಕುತ್ಸ್ಥಾನ್ವಯನು ಕೋಪಂಗೊಂಡು ಕುದಿಕುದಿದು ||
ನೂಕಿದೊಡೆ ದಿವ್ಯಾಸ್ತ್ರಚಯವನ |
ನೇಕವನು ತಾನದನು ನುಂಗುತೆ |
ಭೀಕರದ ರಿಪುಶೂಲವೈದಿತು ನಾಕಿಗಳು ಬೆದರೆ ||೩೫||

ಭೀತಿಯಾಂತಿರಲಿಂತು ಸಕಲರು |
ಮಾತಲಿಯು ಕಂಡಾಗ ಸೀತಾ |
ನಾಥಗೆಂದನು ಸುರಪನಿತ್ತಿಹನೊಂದುಶಕ್ತಿಯನು ||
ಓತು ತತ್ಕ್ಷಣಮೆಸೆಯೆ ನೀನದ |
ನೇತರತಿಶಯಶೂಲವೆಂದೆನ |
ಲಾತು ಕರದೊಳಗದನು ರಘುಪತಿಯೆಸೆದು ಬೊಬ್ಬಿರಿದ ||೩೬||

ಶೂಲವೆತ್ತೈದಿತ್ತೊ ಕಾಣೆನ |
ದಾಲುತಿರ್ದುದು ಕಪಿವಡೆಯುಮೇ |
ಲಾಲಿಮೆಯ್ಯುವನಮರರೊಡನಂದುಬ್ಬಿದನು ನಲಿದು ||
ಕಾಲವಿದು ಸರಿಯೆಂದಗಸ್ತ್ಯನು |
ಭೂಲಲಾಮನ ಬಳಿಗೆ ಬಂದನು |
ಮೇಲೆನಿಸುವಾದಿತ್ಯಹೃದಯವ ನರುಹಿದನು ನೃಪಗೆ ||೩೭||

ಮುಂದೆ ನಿನಗಹುದಖಿಳಶುಭವಿ |
ನ್ನೆಂದು ಪರಸುತೆ ಸಾರ್ದನಾಗಸ |
ಕಂದಿಸಂದದೆ ರಾಮರಾವಣರೆರಗಿದರು ಬಳಿಕ ||
ಇಂದು ರಾಮನು ಗೆಲುವನೆನೆ ಕಪಿ |
ವೃಂದಮಕಟಂತೆಂದುಮಾಗದು |
ಸಂದೆಗವೆ ಜಯವೆಮ್ಮ ರಾಯಂಗೆಂದುದಸುರಬಲ ||೩೮||

ಮೀರಿ ಬೀಗದಿರೆಲವೊ ಶೂಲವು |
ಜಾರಿಪೋದುದೆನುತ್ತುಮಿಂದ್ರನ |
ಸಾರಥಿಯದೆಸೆಯಿಂದೆ ಬದುಕಿದ ಬಾಳದೇತರದು ||
ಹಾರಿಸುತೆ ನಿನ್ನಸುವನೀಗಳೆ |
ತೋರಿಸುವೆನದನಭ್ರದೊಳು ಕೈ |
ಮೀರಿತೆನ್ನೀಶರವು ಕೊಳ್ಳೆಸುತೆಚ್ಚ ಸಮರಾರಿ ||೩೯||

ನೋಡಿ ರಾಮನು ನಗುತೆ ಮಿಗೆ ಮಾ |
ತಾಡಿದನು ಕೇಳೆಲವೊ ರಕ್ಕಸ |
ಹೇಡಿ ನಿನ್ನಯ ಸರಳು ತನ್ನಯ ಸೆಳಲ ಸೋಂಕುವುದೆ ||
ಪಾಡುಪಟ್ಟೈ ಬರಿದೆ ನಿನ್ನಾ |
ಜೋಡಣೆಯ ತಲೆಗಳಸು ತರಿದೀ |
ಡಾಡುವೀಶರಗಳಸು ಕೊಳ್ಳೆಂದಾದರ್ದ ತೆಗೆದೆಚ್ಚ ||೪೦||

ಕತ್ತರಿಸಿದೊಡೆ ತಲೆಗಳೊಡನೆಯೆ |
ಹತ್ತಿಕೊಂಡುವು ಮೊದಲಿನಂದದೆ |
ಮತ್ತೆ ರಘುಪತಿಯುರುಳಿಸಿದನವನೊತ್ತಿ ಬಳಿಸರಳ ||
ಸತ್ತುವವದೆನಿತುಂಟೊ ದನುಜನ |
ಕತ್ತಿನೊಳು ತಲೆಮರಳಿ ತೋರ್ದುವು |
ಹತ್ತುಸೂಳಿಂತಾಯ್ತು ಸೋತನು ನೃಪನು ಮನದೊಳಗೆ ||೪೧||

ಸರಿದುದರಸನ ಚಿತ್ತಧೃತಿ ತಾಂ |
ಸಿರಿಯೆನುಳಿದುದು ಪೌರುಷವು ಚಲ |
ದುರುಮಹಾತರು ಮುರಿದು ಬಿದ್ದುದು ನಂದಿದುದು ಮುಳಿಸು ||
ತರಿದತಲೆಗಳು ಮರಳಿ ಪುಟ್ಟುವ |
ಪರಿಯು ಪೊಸತಿದು ಜಗದೊಳೀತಂ |
ಗರರೆ ಸಾವಿಲ್ಲೆನುತೆ ರಾಘವನಿಳುಹಿದನು ಧನುವ ||೪೨||

ಪಿಡಿದಚಾಪವನಿಡುವುದಂದವೆ |
ಒಡವನೇ ಬಾಣದೊಳು ನೃಪ ನೀಂ |
ತುಡು ಮಹಾಬ್ರಹ್ಮಾಸ್ತ್ರವದೆ ರಥದೊಳಗೆ ಕೊಂಡದನು ||
ತಡೆಯದೀಬಾಹಿರನನಿದರಿಂ |
ತೊಡಚಿ ಹೃದಯವನಿಸುವುದೆನುತವೆ |
ನುಡಿದ ಮಾತಲಿಗೊಪ್ಪಿಯರಸನು ಮರಳಿ ಬಿಲುಗೊಂಡ ||೪೩||

ಎಲವೊ ರಕ್ಕಸ ನಿಮ್ಮ ಗುರು ಸಲೆ |
ಕಲಿಸಿದಾ ಕಪಟಾಸ್ತ್ರವಿದ್ಯೆಯಿ |
ನುಳಿಸಿಕೊಳ್ವುದು ನಿನ್ನ ಹರಣವನೆಂದು ಘುಡುಘುಡಿಸಿ ||
ಹಲವು ಬಾರಿಯೊಳದನೆ ನುಡಿನುಡಿ |
ದಲಘುವೆನಿಪಜಶರವ ಚಾಪದೊ |
ಳಳವಡಿಸುತಾ ಗಕುಟಿಲಾತ್ಮಕನೆಂದಸೀಹದನ ||೪೪||

ಮೂರುಲೋಕದ ಗಂಡನೆಂಬೀ |
ಭಾರಿನಾಮದ ಬಿರುದನೊಂದಿಯೆ |
ವಾರಿಜೋದ್ಭವವಿಷ್ಣುಮೃತ್ಯುಂಜಯರನಳುಕಿಸಿಯೆ ||
ಆರಿಗಂ ಗೆಲಲಾಗದಮರರ |
ತಾರುತಟ್ಟನೆ ಜಡಿದು ನಾಂ ಮಿತಿ |
ವಿಾರಿದೊಡೆ ಸೋದರಿಯ ಮೂಗರಿದುದಕೆ ಕುದಿಕುದಿದು ||೪೫||

ನೀರೆಯನ್ನವಳನ್ನು ಕೊಂಡೊ |
ಯ್ದಾರುಭಟಿಸುತೆ ರಣದೆ ನಿಂದೀ |
ಧೀರಭೂಪರ ಚಾರುಧರ್ಮವಿಚಾರಕೊಪ್ಪಿದೆಸು ||
ನೂರುಚಿತ್ತಾರವನದೊಂದೇ |
ಬಾರಿ ನುಂಗುವುದೊಂದು ಮಸಿಯೆಂ |
ಬೂರಗಾದೆಯ ಸಫಲಮೆನಿಸಿದೆ ಮಿಕ್ಕ ನಡೆಗಳಲಿ ||೪೬||

ಹುಟ್ಟಿನಲಿ ಪೌಲಸ್ತ್ಯನಿಂದೊಡ |
ಹುಟ್ಟಿದಾತ ಕುಬೇರನಲ್ಲದೆ |
ಶಿಷ್ಟಜನಹಿತ ವೇದಮಾರ್ಗಾಚಾರಕೋವಿದನು ||
ನಿಷ್ಠೆಯಲಿ ನೀನಗ್ನಿಹೋತ್ರವಿ |
ಶಿಷ್ಟನೆನಿಸುತಕೀರ್ತಿಯಾಂತತಿ |
ಕಷ್ಟವೃತ್ತಿಯ ಬಳಸಿ ಕಟ್ಟೆ ದುಷ್ಟನೆಂದೆನಿಸಿ ||೪೭||

ಬಲುಹಿನಿಂದಣ್ಣನ ಕುಬೇರನ |
ಲಲಿತವಹ ಸಂಪದವನೆಲ್ಲವ |
ಸೆಳೆದೆ ಕೆಣಕಿದೆ ವೇದವತಿಯನು ದುಷ್ಟಭಾವದಲಿ ||
ಚಲದೆ ರಂಭೆಯನಟ್ಟಿ ಕೂಡಿದೆ |
ಪಲರ ಸುರಯುವತಿಯರ ಕಿಡಿಸಿದೆ |
ಲಲಿತೆಸೀತೆಯನಲ್ಪನುಡಿಗಳಿನಿರದೆ ನೋಯಿಸಿದೆ ||೪೮||

ತಿಳಿಯೆ ನೀನತಿಪಾಪಿ ಋಷಿಗಳ |
ಕೊಲೆಗನತಿದೂಷಕನು ದುರ್ಗುಣ |
ನಿಲಯ ನಿನ್ನನು ವಧಿಸಲಪ್ಪುದು ಮುದವು ಮೂಜಗಕೆ ||
ಕೊಲುವೆನದರಿಂದಳುಕದಿರು ನೀಂ |
ಗಳಿಸಿದನ್ಯಾಯಗಳ ಫಲವಿ |
ನ್ನಳಿದು ಪೋಪುದು ಚಣದೊಳೆಂದಾರ್ದೆಚ್ಚನುರುಶರವ ||೪೯||

ಬರುತಮಿರ್ಪಾಶರದೊಳಜಹರಿ |
ಹರರು ಸೇರ್ದರು ರಾವಣನ ಪರಿ |
ಹರಿಸಲಿಂದೇ ಸಮಯವೆಂದದನಸುರಪತಿಯುರಿದು ||
ಪರಿಸಮಾಪ್ತಿಯಕಾಲಮೊದನಿ |
ತ್ತರರೆ ತನಗಿಂದಾ ತ್ರಿಮೂರ್ತಿಗ |
ಳೆರಕಗೊಂಡೈತರ್ಪರಂಬಿನೊಳೆನ್ನ ಕೊಲೆಗೆನುತೆ ||೫೦||

ಧರೆಯೊಳಿಂದೆನಗಲ್ಲದಾರಿಗೆ |
ದೊರೆದುದೀಶುಭಮರಣವಾನರ |
ಹರಿಯವೈರಕ್ಕಿನಿತುಫಲಮೆನೆಭಕ್ತಿಗಿನ್ನೆನಿತೊ ||
ಅರಿಯಲದರಿಂದೆನ್ನ ಮೊದಲಿನ |
ಪರಿಯನೊಂದುವೆನೆಂದು ಬರ್ಪ |
ಶರವನೆಚ್ಚನು ದಿವ್ಯಮಾರ್ಗಣದಿಂದೆಬೊಬ್ಬಿಡುತೆ ||೫೧||

ಮತ್ತೆ ಪೊಸಪೊಸಸರಳನೆಸೆದದ |
ನೊತ್ತಿಮುರಿವೆನೆನುತ್ತೆ ಸಾಗದೆ |
ಹತ್ತಿರೈತರಲದನು ಕತ್ತಿಯೊಳಿರದೆಕುತ್ತಿದನು ||
ಮಿತ್ತುವಡಸಿದ ಜೀವತತಿಗಿ |
ನ್ನೆತ್ತಣೌಷಧಮಿಹುದು ಬಗೆಯ |
ಲ್ಗೊತ್ತಮುಟ್ಟಿತು ಬಾಣವೆದೆಯನು ಬಗಿದು ರಾವಣನ ||೫೨||

ರಾಮಬಾಣದಮಹಿಮೆಯಸದಳ |
ವಾಮಹೋಗ್ರನ ಹರಣವೆಳೆದಾ |
ಸೇಮವನು ಪೂರೈಸಿಮರಳಿತು ಮೂಡಿಗೆಗೆ ನೃಪನ ||
ವ್ಯೋಮದಿಂದಿರದಾಗ ಕರೆದರು |
ಪೂಮಳೆಯನಮರರ್ಕಳಸುರರ |
ಧೂಮಕೇತುವೆ ರಾಮ ಜಗದಘರಾಮ ಜಯವೆನುತೆ ||೫೩||

ಒಂಬತ್ತನೆಯ ಸಂಧಿ ಸಂಪೂರ್ಣಂ

ಹತ್ತನೆಯ ಸಂಧಿ.

ಸೂಚನೆ || ಪಟ್ಟಗಟ್ಟಿ ವಿಭೀಷಣಗೆನಿಜ |
ಪಟ್ಟದರಸಿಯ ಪುಗಿಸಿ ಶಿಬಿಯೊಳ |
ಗಟ್ಟಿ ಪಳಿವನು ಸುರರ ಮೆಚ್ಚಿಸಿ ರಾಮ ಕೈವಿಡಿದ ||

ಧೀರರಾಘವನೊಲ್ದು ತನ್ನಯ |
ವೀರಲಕ್ಷ್ಮಿಗೆ ಪಟ್ಟಗಟ್ಟಲು |
ಸೂರಿಯನು ನೈರ್ಮಲ್ಯದಿಂದಾಗಸದೆ ಬೆಳಗಿದನು ||
ಭೋರೆನುತೆ ಮೊಳಗಿದುವು ದುಂದುಭಿ |
ತೋರಿದುದು ತಂಗಾಳಿ ಹಿತವೆನೆ |
ಭೂರಿತೋಷವು ತುಂಬಿತುಳುಕಿತು ಮೂರುಲೋಕದೊಳು ||೧||

ಉಕ್ಕಿತುರೆ ಸಂತಸವು ಮೊದಲಲಿ |
ಸೊಕ್ಕಡಗಿ ಮಲಗಿರಲು ಸಹಜನು |
ದುಕ್ಕವೊಡನೆಯೆ ಮನದೊಳೊದವಿತ್ತಾ ವಿಭೀಷಣಗೆ ||
ಎಕ್ಕತುಳಬಲ ನಿನಗೆಸಾವೆನ |
ಲಕ್ಕಜದ ನುಡಿಯಲ್ತೆ ಕಾಲನ |
ಸೊಕ್ಕಲಿಕ್ಕಿದ ದಕ್ಕಡಿಗಗೆಂತಹುದು ಮೃತಿಯೆಂದ ||೨||

ಅಣ್ಣನಾಪೆಣದಿದಿರೊಳೀಪರಿ |
ಬಣ್ಣಿಸುತೆ ಮರುಗುವ ವಿಭೀಷಣ |
ನನ್ನು ರಘುಪತಿ ಸಂತವಿಟ್ಟನು ಮಧುರವಚನದಲಿ ||
ಇನ್ನು ನೀನಿರದೆಳ್ದು ಛಲಸಂ |
ಪನ್ನಗೀತಂಗಗ್ನಿಕಾರ್ಯವ |
ನುನ್ನತಿಯ ವಿಧಿಯಿಂದ ಮೆಸಗೆಂದಿತ್ತನಾಣತಿಯ ||೩||

ಬರಿಸಿ ಮಂಡೋದರಿಯೆ ಮೊದಲಾ |
ದರಸಿಯರನರುಹಿದನು ಘನಸಂ |
ಗರದ ಪರಿಯನು ಬಳಿಕಮೊರಸಿದನವರ ಮನದಳಲ ||
ಇರಿಸಿ ಪೆಣವನು ಚಿತಿಯೊಳುರೆ ಸಂ |
ಸ್ಕರಿಸಿ ವಿಧ್ಯುಕ್ತದಲಿ ರಾಘವ |
ರರಸನೆಡೆಗೈದಾವಿಭೀಷಣನೆರಗಿದನು ಪದಕೆ ||೪||

ಅರಸನಿಂದ್ರನ ಸಾರಥಿಯನುಪ |
ಚರಿಸಿ ಮನ್ನಣೆಯಿತ್ತು ಕಳುಹಿಸಿ |
ಕರೆದು ಸೌಮಿತ್ರಿಯನು ಗುಣಸಿಧಿಯಾವಿಭೀಷಣನು ||
ಪರಮಮಿತ್ರನು ನಮಗೆ ನಾವಿವ |
ಗೊರೆದಪರಿಯಿಂದೀಕ್ಷಣದೆ ನೀಂ |
ತೆರಳಿ ಲಂಕೆಯ ಸಿಂಹಪೀಠದೊಳಿವನ ನಿರಿಸೆನಲು ||೫||

ಜೀಯ ಬೆಸನೆಂದೊಡನೆ ತರಿಸಿಸು |
ತೋಯವನು ನಾಲ್ಗಡಲದೆಸೆಯಿಂ |
ದಾಯತದೆ ವಿಧ್ಯುಕ್ತರೀತಿಯ ಪಟ್ಟವನು ಕಟ್ಟಿ ||
ರಾಯನಿಮಗಿವನಿನ್ನು ರಾಘವ |
ರಾಯನಾಜ್ಞೆಯಿದೆಂದುಸಾರುತ |
ಜೀಯಲಕ್ಷ್ಮಣನಾಗ ಬಂದನು ರಾಮನಿದ್ದೆಡೆಗೆ ||೬||

ದನುಜಪತಿಯೈ ತಂದವೋಘದ |
ಕನಕಮಯ ವಸ್ತುಗಳನೊಪ್ಪಿಸಿ |
ಯಿನಕುಲೇಂದ್ರನ ಚರಣಕಮಲಕ್ಕೆರಗಿ ನುತಿಸುತಿರೆ ||
ತನುವ ಬೋಳೈಸುತ್ತುಮೆತ್ತು |
ತ್ತನುವಿನಿಂ ನೃಪನೆಂದನೆನ್ನಯ |
ಘನಶಪಥವದು ಪೂರ್ಣವಾಯಿತು ನಿನ್ನದೆಸೆಯಿಂದೆ ||೭||

ಕೂಡಿ ನಾನೀಕಪಿಕುಲೇಶನ |
ಪಾಡುಪಡಿಸಿದೆ ನರಿಕುಲಾರ್ಣವ |
ಬಾಡಬಾನಲ ಹನುಮನೆನಗಾಗಬುಧಿಯನು ದಾಂಟಿ ||
ಆಡಲಸದಳವೆನಿಪ ಕಷ್ಟ |
ಕ್ಕೀಡೆನಿಸಿದನು ಸಹಜನಿಂದೊಡ |
ಗೂಡಿ ಸುಖಿಸದೆ ನನಗೆ ಹಿತವನು ಬಗೆದು ನೀಂ ದಣಿದೆ ||೮||

ನಿಮ್ಮದೆಸೆಯಿಂದೆನ್ನ ಜನವುರೆ |
ಹೊಮ್ಮಿತಿಳೆಯೊಳಗಾಂ ಕೃತಜ್ಞನು |
ನೆಮ್ಮಲೈಸಿರಿ ನಿಮ್ಮನಿರ್ಪುದು ಸುಖದಿನೆಂದೊರೆದು ||
ದುಮ್ಮನವನೊಡನಾಂತು ಸೀತೆಯ |
ನೆಮ್ಮದಿಯ ನೀನರಿದು ಬಾರೆಂ |
ದೊಮ್ಮೆ ಸೂಚಿಸಿ ಹನುಮ ಹಾಯ್ದನು ಕಂಡನವನಿಜೆಯ ||೯||

ಚಿಂತೆಯಿಂ ಕಡುನೊಂದು ದುಃಖಾ |
ಕ್ರಾಂತೆಯಾಗಿಹ ರಾಘವನ ಸೀ |
ಮಂತಿನಿಯು ಪದಯುಗಳಕಂದೆರಗೆಳ್ದು ನಿಂದಿರಲು ||
ಅಂತರಂಗದೆ ತುಳುಕುತಿರ್ಪ |
ತ್ಯಂತಹರ್ಷವಸೂಚಿಪಾ ಹನು |
ಮಂತನಾಸ್ಯದಿನರಿದಳಂಗನೆ ಪತಿಯಜಯಸಿರಿಯ ||೧೦||

ಬಂದೆಯೇನೈ ಹನುಮರಘುವರ |
ನಿಂದೆ ತಂದೈ ವಿಜಯವಾರ್ತೆಯ |
ನಂದಗೆಟ್ಟುದೆ ರಾವಣನ ತನುವೆಂದು ಸತಿ ನುಡಿಯೆ ||
ಸಂದೆಗವೆ ಜಗದಂಬೆ ನೀಮು |
ಸ್ನೆಂದಬಳಿಕೇನಸುರನುಳಿವನೆ ||
ಕೊಂದನೌ ದಿಟವರಸನೀದಿನವಾ ದಶಾನನನ ||೧೧||

ಅವನ ತನುಜಾನುಜರನಾ ಹವ |
ದವನಿಯಲಿ ಬಲಿಗೊಟ್ಟು ರಾಕ್ಷಸ |
ನಿವಹವನು ನಿರ್ನಾಮವೆನಿಸುತೆ ರಾವಣನ ಕೊಂದು ||
ತವಕದಿಂ ಲಂಕೆಯನು ತತ್ಸಹ |
ಭವವಿಭೀಷಣಗಿತ್ತು ನಿಮ್ಮಯ |
ಹವಣನರಿಯೆಂದೆನ್ನನಟ್ಟಿದನೆಂದನಾ ಹನುಮ ||೧೨||

ಸಂದನೇ ರಾವಣನು ರಘುಪತಿ |
ಕೊಂದನೇ ನೀನೀನುವಾರ್ತೆಯ |
ನಂದುದಕ್ಕಡುಗೊರೆಯ ನಿನಗಿಂದೇನನಿತ್ತಪೆನು ||
ಕಂದನೇಸ್ಥಿರಜೀವಿಪಟ್ಟವ |
ನೊಂದಿ ರಾಮನ ಚರಣಭಜನಾ |
ನಂದರಸದೊಳಗಾಳು ನೀನೆಂದರಸಿ ಹರಸಿದಳು ||೧೩||

ಇಂತು ಪವನಾತ್ಮಜನ ಪರಸಿ ಹೃ |
ದಂತರದೊಳಾನಂದಿಸುತೆ ನಿಜ |
ಕಾಂತಸಂದರ್ಶನವು ಲಭಿಸುವುದೆಂಬ ಸಂಭ್ರಮದೆ ||
ಪಿಂತಣಗಣಿತ ಕಷ್ಟಕಿನಿಸುಂ |
ಚಿಂತೆಗೊಳ್ಳದೆಯದನು ಮರೆತಖಿ |
ಳಾಂತರಾತ್ಮಕನರಸಿಯೊಪ್ಪಿದಳಧಿಕತೇಜದಲಿ ||೧೪||

ತಾಯೆ ನಿಮ್ಮಯ ಕರುಣದಿಂ ನಿರ |
ಪಾಯನಾಂ ಕೃತಕೃತ್ಯನಾದೆನು |
ರಾಯ ರಾಘವಗೇನನಂಜೆನು ಬೆಸಸವೇಳ್ಕುಮೆನೆ ||
ಕಾಯಜೋಪಮಪತಿಯ ಮೂರ್ತಿ |
ಶ್ರೀಯದರ್ಶನಕಾಂಕ್ಷೆಯಿಂದಿ |
ರ್ಪಿೀಯಭಾಗ್ಯಯ ಬೆಸಸು ಪೆರತೇನೆಂದಳಿಂದುಮುಖಿ ||೧೫||

ತಪ್ಪದ್ ಶ್ರೀರಾಮದರ್ಶನ |
ಮಪ್ಪುದ್ ನಿಮಗಿಂದು ತನಗಿ |
ನ್ನಪ್ಪಣೆಯ ಕರುಣಿಪುದು ನೀವೆಂದವನಿಸುತೆಗೆರಗಿ ||
ಕುಪ್ಪಳಿಸುತಲ್ಲಿಂದೆ ರಾಘವ |
ನಿಪ್ಪತಾಣವ ಸೇರ್ದು ದೇವಿಯ |
ರೊಪ್ಪುತಿರ್ಪರು ದೇವಬನದೊಳಗೆಂದನಾಹನುಮ ||೧೬||

ಹಿಂದೆ ನಾನೈದವರನೀಕ್ಷಿಸಿ |
ದಂದು ತಾನಿರ್ದಂಗಲತೆಯುಂ |
ಕಂದು ಪೋಗಿಹುದಿಂದು ನೋಡಲ್ಕಿನಕುಲೇಶ್ವರಿಯ ||
ಇಂದು ನಿಮ್ಮಯ ವಿಜಯವಾರ್ತೆಯ |
ನೆಂದ ತನ್ನನು ಪೊಗಳಿ ದೇವರ |
ನೆಂದು ಕಂಡಪೆನೆಂಬ ಬಯಕೆಯನರುಪಹೇಳಿದರು ||೧೭||

ಚಿತ್ತವಿಪುದಿದನೆಂದ ಹನುಮಂ |
ಗುತ್ತರವನೀಯದೆಯೆ ಕಣ್ಗಳೊ |
ಳೊತ್ತುತೈತಹಜಲವನಡಿಗಡಿಗೊರಸಿ ಸೆರಗಿನಲಿ ||
ಚಿತ್ತದಲಿ ಕಡುನೊಂದು ಚಿಂತಿಸಿ |
ಹತ್ತಿರಿರ್ದ ವಿಭೀಷಣನಕರೆ |
ದಿತ್ತನಾಜ್ಞೆಯನರಸನವನೀಸುತೆಯ ಬರಿಸೆಂದು ||೧೮||

ಪೋಗಿ ನೀನರಮನೆಗೆ ಭೂಮಿಜೆ |
ಗೀಗಳಭ್ಯಂಜನವನೆಸಗಿಸಿ |
ರಾಗರಂಜಿತವಸ್ತ್ರಭೂಷಣದಿಂದಲಂಕರಿಸಿ ||
ವೇಗದಿಂ ಕರೆತರ್ಪುದೆನಲವ |
ನಾಗಳೈದಿಯಶೋಕವನದಾ |
ಬಾಗಿಲವರನು ಕರೆದು ನೀವಿದನರಿಕೆಗೈವುದೆನೆ ||೧೯||

ಬಿನ್ನವಿಸೆ ದನುಜೆಯರು ಗುಣಕಂ ।
ಪನ್ನೆ ಜಾನಕಿಯೊಪ್ಪುವಳೆ ತಾಂ ।
ತನ್ನ ಮೊದಲಿನ ವಸ್ತ್ರದೊಡನೆಯೆ ಪತಿಯ ಕಾಣ್ಬೆನೆನೆ ॥
ಎನ್ನಭೀಷ್ಟವಿದಲ್ಲ ರಾಮನ ।
ಸನ್ನಿಯಾಜ್ಞೆಯನಡೆಸಬೇಕಿದ ।
ನೆನ್ನುತವನೆಂದರುಹಲೊಪ್ಪಿದಳರಸನಾಜ್ಞೆಯನು ॥೨೦॥

ಉಡಿಸಿ ದಿವ್ಯಾಂಬರವನೊಡನೆಯೆ ।
ತುಡಿಸಿ ಸರ್ವಾಭರಣಗಳ ತ ।
ನ್ಮೊಡತಿಯೆಂದೇ ನಮಿಸುತೇರಿಸಿದೊಸ್ಸಿನಂದಣವ ॥
ಬಿಡದೆ ದನುಜೆಯರುಭಯಪಾರ್ಶ್ವದೆ ।
ಗಡಣಿಸೈತರೆ ಕಂಡು ರಕ್ಕಸ ।
ರೊಡೆಯ ನಡೆದನು ಮುಂದೆ ತನ್ನಯ ದನುಜಬಲದೊಡನೆ ॥೨೧॥

ಇರದೆ ಬೇಗನೆ ಮುಂದೆಪೋಗು ।
ತ್ತರಸಗಭಿವಂದಿಸುತೆ ದೇವಿಯ ।
ರರಿಕೆಯೊಡನೆಯೆ ಬರುತುಮಿರ್ಪರು ಚಿತ್ತವಿವುದೆನಲು ॥
ಅರಸಿಯನು ಕಾಣ್ಬಧಿಕತೋಷವು ।
ಸೆರೆಯಮಾನಚ್ಯುತಿಯದೋಷವು ।
ವಿರಹದುಃಖದಚಿಂತೆಯಾವರಿಸಿದುವು ನೃಪಮನವ ॥೨೨॥

ತರಹರಿಸುತಸುರಾರಿಯೊಳ್ಳಿತು ।
ಬರಿಸು ಸನಿಹಕ್ಕೆನೆ ವಿಭೀಷಣ ।
ನಿರದೆಯಾಣತಿಸಲ್ಕೆ ಕೆಲಸಾರೆಂಬ ಬಲುದನಿಯು ॥
ಹರಹಿತಲ್ಲಲ್ಲಸುರರುಂ ವಾ ।
ನರರುಮಂಜುತೆ ಸರಿಯೆ ಕಂಡದ ।
ನರಸು ಭಕ್ತನ ಕರೆದು ಕೋಪಂಗೊಳ್ಳುತಿಂತೆಂದ ॥೨೩॥

ಎಲೆವಿಭೀಷಣ ನನ್ನ ಬಳಿಯಿಹ ।
ಬಲವನೇತಕೆ ಚಲ್ಲಬಡಿಸುವೆ ।
ಸಲುಗೆಯಿತ್ತರದಾರ ನಿನಗಾಸಿದನು ಜಿಸಸಿದೆನೆ ॥
ನಿಲಿಸು ನಿನ್ನವರನ್ನು ಸಾಧ್ವಿಯ ।
ರೆಳಸರಲ್ತೆ ಕುಮಾರ್ಗಕಂತವ ।
ರೆಳಸಲರಮನೆಪಾಳಿ ಮೇಲ್ಮುಸುಕವರ ಕಾದವುವೆ ॥೨೪॥

ಮದುವೆಗಾಲದೆ ದುಗುಡಗಾಲದೆ |
ಕದರಿದಾಹವಕಾಲದೊಳು ನೃಪ |
ಸುದತಿಯರಸೀಕ್ಷಿಸಲುಬಹುದೆಂದೊರೆಯುತಿದೆ ನೀತಿ ||
ಇದು ರಣಾಂಗಣವಿಲ್ಲಿ ದರುಶನ |
ಮೊದವೆವಿಹಿತವು ದೋಷವಣವಿ |
ಲ್ಲಿದರೊಳವನೀತನುಜೆ ಬರಲೆಂದರಸನೇಮಿಸಿದ ||೨೫||

ಒಡೆಯನಾಜ್ಞೆಯನಾವಿಭೀಷಣ |
ನೊಡತಿಗಾಗಳೆ ಬಿನ್ನವಿಸೆ ದಡ |
ದಡಿಸಿತೆದೆ ರಘುರಾಮಚಂದ್ರನ ಸತಿಗೆ ಸುವ್ರತೆಗೆ ||
ತಡಯದೊಡನೆಯೆ ವಾಹನವ ನಿಳಿ |
ದಡಿಗಡಿಗೆ ನಿಂದಳುಕಿ ನಾಣ್ಚುತೆ |
ಮಡದಿಮಣಿ ತಾಂ ಬಂದಳೊಯ್ಯನೆ ಪತಿಯ ಸಮ್ಮುಖಕೆ ||೨೬||

ಕಂಡಳಾಮಾರ್ತಾಂಡವಿಭಭೂ |
ಮಂಡಲೇಶ್ವರಮಣಿಯನಖಿಲೋ |
ದ್ದಂಡರಿಪುವೇತಂಡಕಂಠೀರವನ ರಾಘವನ ||
ಮಂಡೆಬಾಗಿದಳವನಮೃದುಪದ |
ಪುಂಡರೀಕಕೆ ಬಳಿಕ ಮುಸುಕಿನ |
ಕಂಡಿಯಲಿ ನೋಡಿದಳು ಕಾಂತನ ಸುಂದರಾನನವ ||೨೭||

ಅಂಬುಜಾನನೆಗಾಗಳೆದೆಯಲಿ |
ತುಂಬಿಕೊಂಡಿರ್ದಳಲು ಪೊರಮ |
ಟ್ಟೆಂಬುವರಿದಕ್ಷಿಗಳಿನುದಿರಿತ್ತಂಬುರೂಪದಲಿ ||
ಕಂಬುಕಂಠಿಯ ಕಂಠದೇಶದೊ |
ಳಿಂಬುಗೊಂಡಿರ್ದಳಲು ರೋದನ |
ವೆಂಬರೂಪಿಂ ಪೊರಟು ಪರ್ಬಿತು ಕುಂಭಿನಿಯೊಳಿರದೆ ||೨೮||

ಇಂತು ತನ್ನಯ ಮುಖವ ನೋಡು |
ತ್ತಂತವಿಲ್ಲದ ದುಃಖಕೆಡೆಯಾಂ |
ತಂತರಂಗದ ಮಡದಿ ಬಿಕ್ಕುತೆ ರೋದಿಸುತ್ತಿರಲು ||
ಚಿಂತೆಯೆಂಬುದನಿನಿಸುಮಂ ಮೊದ |
ಲಂತೆ ತಾರದೆ ಮನಕೆ ದುರ್ಜನ |
ನಂತೆ ಕೋಪಿಸುತಡ್ಡಮೊಗವಿಟ್ಟೆಂದನಾರಾಮ ||೨೯||

ಸೀತೆ ನೀಂ ಪ್ರಖ್ಯಾತೆ ನಿಮಿಕುಲ |
ಜಾತೆ ರಾಘವದಯಿತೆ ನಿನ್ನನು |
ನೀತಿಯರಿಯದ ಕುನ್ನಿಯೊರ್ವನು ಕಳವುಗೈದನೆನೆ ||
ಮಾತು ಹೊರುವುದು ಸುಮ್ಮನಿರ್ದೊಡೆ |
ಭೂತಳೇಶರ ವಿಮಲಕುಲಕೆಂ |
ದಾತುಡುಗನನು ಕೊಂದು ನಿನ್ನಯ ಸೆರೆಯ ಬಿಡಿಸಿದೆನು ||೩೦||

ಮನುಜಯತ್ನಕೆ ಸಾಧ್ಯವಾಗಿ |
ರ್ಪನಿತುವಂ ಮಾಡಿದೆನು ನಿನಗಾ |
ದನುಜರುಪಟಳವನ್ನು ತಪ್ಪಿಸಿ ಗೈದೆನುಪಕೃತಿಯ ||
ವನದ ಕಪಿಗಳ ಕೂಡೆ ಮೈತ್ರಿಯು |
ವನಧಿಮಧ್ಯದೆ ಸೇತುರಚನೆಯು |
ಘನಪರಾಕ್ರಮರಾವಣನ ವಧೆ ಸುಲಭವೇನರಿಯೆ ||೩೧||

ಹೊದ್ದಿದಪವಾದವನು ತಿದ್ದುವ |
ಬುದ್ಧಿಯಿಂದಮುಮೆನ್ನ ಲೋಕಸು |
ಸಿದ್ಧವಾದಾಕ್ಷತ್ರಧರ್ಮಕೆ ಭಂಗವೊದವಿಸದೆ ||
ಉದ್ಧರಿಸಬೇಕೆಂಬ ಹೃದಯನಿ |
ಬದ್ಧವಾದಾಕಾಂಕ್ಷೆಯಿಂ ಶ್ರಮ |
ಬಿದ್ದೆನಲ್ಲದೆ ಬೇರೆಯಾಶಯವಿಲ್ಲ ಸಾಹಸಕೆ ||೩೨||

ಜಾರಚೋರನ ರಾವಣನ ತೊಡೆ |
ಯೇರುತಾತನಮನೆಯೊಳವನಿಕು |
ಮಾರಿಯಿರ್ದವಳೆಂದು ನಿನ್ನನು ಪಳಿಯದೇ ಜಗವು ||
ದೂರಿಗಾಕರವಾದ ನಿನ್ನನು |
ಸೇರಿಸುವೆನೆಂತಾನು ಮನೆಯನು |
ಸಾರು ನೀಂ ಬಗೆಬಂದಕಡೆಗಾನಿಂದು ಬಿಟ್ಟಿಹೆನು ||೩೩||

ಎಂದ ಕಾಂತನ ನಿಷ್ಠುರೋಕ್ತಿಯ |
ನಂದು ಕೇಳ್ದಾ ಪರಮಸಾಧ್ವಿಯು |
ನೊಂದು ಕುಂದುತ್ತಿಳೆಯೊಳೊರಗಿದಳೊಂದಿ ಮೂರ್ಛೆಯನು ||
ತಂದು ತಿಳಿವನು ಮತ್ತೆ ರಮಣನ |
ಕಂದಿದಾನನದಿರವ ಕಂಡಿವ |
ನಿಂದು ರಾಘವನಲ್ಲ ಮಾಯದ ದನುಜನಿವನಾರೊ ||೩೪||

ಅರಸನೆನ್ನ ವನೀತನಾದೊಡೆ |
ವಿರಸಮಾದೀಮುಖವು ಮೀನಿ |
ಷ್ಠುರದವಚನವುಮೆನ್ನೊಳೊಪ್ಪುವುವೆಂತು ಮಾಯವಿದು ||
ಪರಿಕಿಸುವೆನಿದನೆಂದು ಸೀರೆಯ |
ಸೆರಗಿನಿಂ ಕಂಬನಿಯನೊರಸಿವ |
ನೆರೆಯನೇ ದಿಟಮಿಂದು ಗತಿಯೇನೆಂದಳೀಕ್ಷಿಸುತೆ ||೩೫||

ಬಿಕ್ಕಬಿಕ್ಕತೆ ಭಯದೆ ನಡುಗುತೆ |
ಪಕ್ಕಕೈದುತೆ ಮೆಲ್ಲನೆಂದಳು |
ತಕ್ಕದೇ ನಿನಗರಸ ಕಾಂತೆಯೊಳೀಪರಿಯ ವಿರಸ ||
ಸಿಕ್ಕಿದಂದದೊಳೆನ್ನನಾಡುತೆ |
ಧಿಕ್ಕರಿಸಿದೊಡೆ ರಮಣ ನನಗಾ |
ರ್ದಿಕ್ಕು ನಾನಿನ್ನಾರಸೇರುವೆನೆಂತು ಜೀವಿಪೆನು ||೩೬||

ಶಿವಶಿವೇಕಿಂತಾದೆ ನಾಡಿನ |
ಯುವತಿಯಿವಳೆಂದೆನ್ನ ಬಗೆಯುತೆ |
ಕಿವಿಗೆ ಸಲ್ಲದ ನಿಷ್ಠುರೋಕ್ತಿಯಿನೇಕೆ ಕೊಲ್ಲುತಿಹೆ ||
ಭುವಿಯ ಮನುಜರ ಬಸಿರಿನ್ಸೈತಂ |
ದವರು ಪರಿಶುದ್ಧಾತ್ಮಕರು ದಿಟ |
ವವನಿದೇವಿಯಿನೊಗೆದಯೋನಿಜೆಯಲ್ಲಿ ಸಂಶಯವು ||೩೭||

ಪುರುಷನನು ಬಿಟ್ಟಿರ್ದಮಾತ್ರದೆ |
ಪರಪುರುಷರಲಿ ಮನವು ನಾಂಟುವು |
ದರಿಯಲಿದು ಸಾಮಾನ್ಯರೀತಿಯು ಪೆಣ್ಗಳೊಳಗೆಂದು ||
ಪರಮಪುರುಷನೆ ನಿನ್ನ ಪಟ್ಟದ |
ತರುಣಿಯಾದೆನ್ನಲ್ಲಿ ಸಂಶಯ |
ವಿರಿಸುತೀಪರಿಯೊರೆವುದುಚಿತವೆ ನಿನಗೆ ಸಮ್ಮತವೆ ||೩೮||

ದುರುಳನೆನ್ನನು ಸೋಂಕಿ ಪಿಡಿದತಿ |
ಭರದೆ ಕೊಂಡೊಯ್ವಂದು ನಾನಕ |
ಟರಿಯಲಬಲೆಯು ಮಾಳ್ಪೆನೇನನು ಸಾಧ್ಯವೇನೆನಗೆ ||
ಅರಸ ನನ್ನೊಳಗಿಲ್ಲ ದೋಷವು |
ಬರಿದೆ ದೂರುವೆಯೇಕೆ ನನ್ನನು |
ನರಕವಾಗಲಿ ನನಗೆ ನೆನೆದಿರೆ ಮನದೊಳಾತನನು ||೩೯||

ಅಂದು ಮುದ್ರಿಕೆಯೊಡನೆ ಮಾರುತ |
ನಂದನನ ನೀಂಕಳುಪಿದಾಗಳೆ |
ಮಂದಭಾಗ್ಯೆಗೆಯೀವಿಚಾರವನೊರೆಯಹೇಳಿರಲು ||
ಕೊಂದುಕೊಂಡೆನ್ನ ಸುವನಸುರನ |
ಬಂಧನದ ಕಡುಕಷ್ಟವೆಲ್ಲವ |
ನಂದೆ ನೀಗುತ್ತಿರ್ದೆನದನೇಕಕಟ ನೀಂ ಮಾಣ್ದೆ ||೪೦||

ಸಲುವ ಕುಲಶೀಲಗಳಿಗೊಪ್ಪ |
ತ್ತೊಲಿದು ನನ್ನನು ವರಿಸಲಿಲ್ಲವೆ |
ತಿಳಿವದಿಲ್ಲದ ಬಾಲ್ಯದಲಿ ನೀನೆನ್ನ ವರಿಸಿದೆಯ ||
ಹಲವುನುಡಿಯಿಂದೇನು ಪೂರ್ವದೆ |
ಗಳಿಸಿದುದನೀಗುಣ್ಬೆನಲ್ಲದೆ |
ತಿಳಿಯೆ ತಪ್ಪೆಳ್ಳನಿತುಮಿಲ್ಲವು ನಲ್ಲ ನಿನ್ನಲ್ಲಿ ||೪೧||

ಹೋಗಲಿನ್ನೇನಕಟ ನನ್ನನು |
ನೀಗಿದನು ನಿಮ್ಮಣ್ಣದೇವನು |
ಬಾ ಗುಣಾಢ್ಯನೆ ಮೈದುನನೆಯೀಕಷ್ಟವನು ಬಿಡಿಸು ||
ಬೇಗನಿಂಧನವೊಟ್ಟಿಸಗ್ನಿಯ |
ನೀಗ ಪೊತ್ತಿಸು ಬೀಳ್ವೆನದರಲಿ |
ರಾಘವೇಶಂಗಿಷ್ಟಮಪ್ಪುದು ತೋಷವೆನಗಹುದು ||೪೨||

ಎಂದು ಜಾನಕಿ ನುಡಿಯೆ ಲಕ್ಷ್ಮಣ |
ನಂದು ಮರುಗುತ್ತಣ್ಣದೇವಂ |
ಗೆಂದನಿಂದೆನಗೇನನುಜ್ಞೆಯು ದೇವಿಯರ ನುಡಿಗೆ ||
ಅಂದವಾವುದೊ ಚಿತ್ತಕದರಂ |
ತಿಂದು ನಡೆಯಿಪೆನೆನಲು ಸುದತಿಗೆ |
ಚಂದವಾವುದೊ ನಡೆಸು ನೀನದನೆಂದನಾರಾಮ ||೪೩||

ತರಿಸಿ ಕಾಷ್ಠಂಗಳನು ಜೋಡಿಸಿ |
ಯುರಿಯ ಪರ್ಬಿಸೆ ಕಂಡು ಜಾನಕಿ |
ಯರಸನನು ಬಲವಂದು ಪೊಡಮಟ್ಟೆಳ್ದು ಕೈಮುಗಿದು ||
ಮೆರೆವ ನಿನ್ನೀಚರಣಕಮಲದೊ |
ಳಿರಕಗೊಳ್ಳದೆ ಮನವು ಬೇರೆಡೆ |
ಚರಿಸಿರಲು ಪಾಪಿನಿಯನೆನ್ನನು ನುಂಗಲೀಶಿಖಿಯು ||೪೪||

ಅಲ್ಲದೊಡೆ ನಿನ್ನೀಪದಾಂಬುಜ |
ದಲ್ಲಿ ನನ್ನಸು ಮರಳಿ ಕೆಡಹಲಿ |
ವಲ್ಲಭನೆ ನೀನೀವುದಾಜ್ಞೆಯ ನಿನ್ನ ವಲ್ಲಭೆಗೆ ||
ನಲ್ಲನಾನಿದೊ ನಮಿಸಿದೆನು ನ |
ನ್ನಲ್ಲಿ ಕೃಪೆಯಿರಲೆಂದು ಮೊರೆಯಿ |
ಟ್ಟಲ್ಲಿ ಭುಗ್ಗೆಂದುರಿಯುವಗ್ನಿಯೊಳಮಲೆ ಸೇರಿದಳು ||೪೫||

ಹಾಯೆನುತೆ ಬಾಯ್ಬಿಟ್ಟರಖಿಳರು |
ರಾಯರಾಘವನತ್ತ ತಿರುಗದೆ |
ಸೋಯದಿರ್ದನು ಮನದೆ ಪಾರ್ಥಿವರೇಂದ್ರಧೃಢವ್ರತರೊ ||
ಬಾಯಬಿಟ್ಟುದು ಸುರಕದಂಬಕ |
ವಾಯತಾಕ್ಷಿಗೆ ಘನಪತಿವ್ರತೆ |
ಗಾಯಿತನ್ನೆಯವಕಟವೆಂದುದು ಬಂದುದೊಗ್ಗುಡಿಸಿ ||೪೬||

ಧರಣಿಗಿಳಿದರು ವಾಸವಾದಿಗ |
ಳಿರದೆ ಕಮಲಜಹರರ ಜತೆಯಲಿ |
ನರರ ಪರಿಯಾಹರಿಯ ಕಂಡರು ನುತಿಸಿ ನುಡಿಸಿದರು ||
ಪರಮಪುರುಷನು ಹರಿಕಣಾ ನೀ |
ನರಸಿ ನಿನ್ನವಳಾದಿಮಾತೆಯು |
ಬರಿಯಭೂಧವರಲ್ಲ ನೀವೆಂದರುಹಿದರು ನೃಪಗೆ ||೪೭||

ಏನಿದಕಟನಿತೆನಗೆ ಸಲುವುದೆ |
ಭಾನುವಂಶದ ಮಾನವಾಧಿಪ |
ಸೂನು ತಾನಹೆನಿದುವೆ ಸತ್ಯವು ಲೋಕವರಿಯಲ್ಕೆ ||
ಮಾನಧನನಾದೆನ್ನ ಸತಿಯನು |
ಹೀನರಕ್ಕಸನಪಹರಿಸಲಪ |
ಮಾನವಳಿಯಲ್ಕವನ ಕೊಂದೆನು ಬಿಡಿಸಿದೆನು ಸತಿಯ ||೪೮||

ಪೆರನ ಮನೆಯೊಳಗಿರ್ದಳನು ನಾ |
ನರಿದರಿದು ಕೂಡುವೆನೆ ಕುಲಕಿದು |
ಕೊರತೆಯಲ್ಲವೆ ನಿಮ್ಮ ಚಿತ್ತದೊಳರಿಯಿರೇನಿದನು ||
ಪರಮಪೂಜ್ಯರೆ ಲೋಕಧರ್ಮಾ |
ಚರಣೆಗಾರಿದಕಾದಿಕರ್ತೃಗ |
ಳರಿಯೆ ನೀವಲೆ ನಿಮ್ಮ ನೇಮುವನುಳಿಯಲೆನ್ನಳವೆ ||೪೯||

ಎಂದ ರಾಮನ ಸಾರವಹ ನುಡಿ |
ಗಂದು ತಲೆದೂಗಲ್ಕೆ ಸಕಲರು |
ಕುಂದದವನೀಸುತೆಯ ತಲೆವೂ ಕಂದದಂದದಲಿ ||
ತಂದು ಮುಂದೆಡೆ ಯಜ್ಞಪುರುಷನು |
ಸುಂದರೆಂದೀವರದಳಾಕ್ಷಿಯ |
ನಿಂದಿರೆಯ ನೀನಿಂದು ಕೊಳ್ಳೆಂದಿತ್ತನರಸಂಗೆ ||೫೦||

ಹರಿಯು ನೀನಹೆ ಸಿರಿಯು ಸೀತೆಯು |
ಸರಿಯೆ ನಿನಗಿವಳಲ್ಲಿ ಸಂಶಯ |
ವರಿವುದಿದನೀಂ ನಿಮ್ಮ ಬೊಪ್ಪನೊಳೆನಲು ಹುತವಹನು ||
ಅರಸ ದಶರಥನಾಗ ಬಂದನು |
ತರಳರನು ತಕ್ಕೈಸುತೆಂದನು |
ಪರಮಸಾಧ್ವೀಮಣಿಯು ಸೀತೆಯು ಸತ್ಯವೀನುಡಿಯು ||೫೧||

ಇವಳ ಪಾತಿವ್ರತ್ಯಮಹಿಮೆಯಿ |
ನಿವಳ ಸೌಶೀಲ್ಯಾದಿಗುಣಗಳಿ |
ನವಿರಳಾನಂದಾನುಭವವೆನಗಾಯ್ತು ಸಗ್ಗದಲಿ ||
ಇವಳು ಸಾಕ್ಷಾಲ್ಲಕ್ಷ್ಮಿ ನೀನೀ |
ಭುವಿಯೊಳವತರಿಸಿರ್ಪ ಹರಿರಾ |
ಘವನೆಸುಖಮಿಹುದೀಕೆಯೊಡನೆಂದುಸಿರಿ ತೆರಳಿದನು ||೫೨||

ಬಳಿಕೆ ರಾಘವನೆರಗಿ ದೇವ |
ರ್ಕಳಿಗೆ ಭಕ್ತಿಯೊಳಾಗಳೆಂದನು |
ಲಲನೆಯಿವಳಹುದನಘೆ ರಾವಣನೀಕೆಯನು ಪಿಡಿದು ||
ಚಲಕೆ ಸೆರೆಯೊಳಗಿಟ್ಟನಲ್ಲದೆ |
ಚಲಿಸಲಿಲ್ಲಕ್ರಮಕೆ ಮನದೊಳು |
ತಿಳಿದೆನಾದೊಡಮಿದನು ಲೋಕದ ಪಳಿವಿಗಂಜಿದೆನು ||೫೩||

ಇಂದು ನಿಮ್ಮನದೊಂದನರ್ಥಿಪೆ |
ನೆಂದಿನಂದದೆ ಬದುಕಲೀಗಳಿ |
ವೊಂದಿ ಬಿದ್ದಿರ್ಪೆಮ್ಮ ಕಪಿಕುಲವಿದನು ಸಲಿಪುದೆನೆ ||
ಇಂದಿರೇಶನೆ ನಿನ್ನ ಘನಕೃಪೆ |
ಯಿಂದಮುಜ್ಜೀವಿಪುದು ಪೊಸತೇ |
ನೆಂದುಪರಸಲ್ಕೊಡನೆಯೆಳ್ದುದು ಮಡಿದ ಕಪಿಕುಲವು ||೫೪||

ವರದನಾದೆನು ನಾನು ನಿಮ್ಮಯ |
ಚರಣಸಂದರ್ಶನದೊಳೆನುತಡಿ |
ಗೆರಗಿದಾ ರಘುವರನನಾ ಶೀರ್ವದಿಸಿ ಬೀಳ್ಕೊಂಡು ||
ತೆರಳಿದರು ಸುರಮುಖ್ಯರಾಗಳ್ |
ಹರುಷಲತೆ ಪರ್ಬಿತ್ತು ಪಾಳ್ಯದೊ |
ಳರಸನರಸಿಯ ಕರವ ಪಿಡಿದನು ಜಗವುಘೇಯೆನಲು ||೫೫||

ಹತ್ತನೆಯ ಸಂಧಿ ಸಂಪೂರ್ಣಂ

ಹನ್ನೊಂದನೆಯ ಸಂಧಿ.

ಸೂಚನೆ || ದೇವಪುಷ್ಪಕವೇರ್ದಯೋಧ್ಯೆಗೆ |
ದೇವರಾಘವನೈದಿಭರತನ |
ಭಾವಕುರೆಮೆಚ್ಚಾಂತುಕೊಂಡನುರಾಜ್ಯಭಾರವನು ||

ಪಡಗರದೆ ಕರೆದಾಶ್ರಿತನನೆ |
ನ್ನೊಡನೆ ಜನಿಸಿದ ಭರತಗಿತ್ತಾ |
ಗಡುಬವದು ಸನ್ನಿಹಿತಮಾದುದು ಪುರಕೆ ಮರಳುವೆನು ||
ಅಡಸಿದಾಪತ್ತಿನಲಿ ನನ್ನನು |
ಕಡೆಯಹಾಯ್ಸಿದ ಸಖನೆ ನೀನೀ |
ಪೊಡವಿಯಾಳುತೆ ಸುಖದಿಮಿಲ್ಲಿಹುದೆಂದನಾ ರಘುಜ ||೧||

ದೇವ ನಿಮ್ಮಯ ಪಯಣಕಿರ್ಪುದು |
ದೇವಪುಷ್ಪಕವೆನ್ನೊಳದರೊಳ |
ದಾವಬಳಿಗೆನಿತೆಸಿತು ವೇಗದೊಳೈದಬೇಕೆಂದು ||
ಭಾವದೊಳು ಭಾವಿಸುವಿರಂತಾ |
ಭಾವನೆಗೆ ತಕ್ಕಂತೆ ಪೋದಪು |
ದೀವಿಮಾನವನೊಪ್ಪಿಕೊಳ್ಳೆಂದಸುರಪತಿ ನುಡಿದ ||೨||

ಮೆಚ್ಚಿದೆನು ನಿನಗಾನು ಮನಕೆಂ |
ತಿಚ್ಚೆಯಪ್ಪುದೊ ಮಾಳ್ಪುದಂತೆನ |
ಲಚ್ಚರಿಯ ಪುಷ್ಪಕವ ತರಿಸಿದನಾ ವಿಭೀಷಣನು ||
ಬಿಚ್ಚಿದನು ಬಳಿಕಂತರಂಗವ |
ನಚ್ಯುತನೆ ಸಿನ್ನಮಲನಗರಿಯ |
ಹೆಚ್ಚಳಿಕೆಯನು ನೋಡಬೇಕೆಂಬಾಶೆ ತನಗೆಂದು ||೩||

ತನಗುಮೀಯಭಿಲಾಷೆಯುಂಟೆಂ |
ದಿನಜನರ್ಥಿಸಿಕೊಳಲು ನಿಮ್ಮಯ |
ಘನಚತುರ್ಬಲದೊಡನೆ ಬಹುದೆಂದವರ ಸಂತವಿಸಿ ||
ವಿನುತಪುಷ್ಪಕವೇರಲಾಂ ತಾ |
ನೆನುತುಮಖಿಳರುಮಡರಿದರು ಮೇ |
ಲನಿಮಿಷಾಧ್ವದೊಳೆಸೆದುದಾಗಳೆ ಧನದಸಾಯಾನ ||೪||

ತ್ರಿದಶಪತಿಮುಖಸುರರು ಕಂಡಿದ |
ನೆದೆಯೊಳಂಜಿದರಹಹ ಮತ್ತಿಂ |
ಬೊದವಿತೇ ಖಳಬಾಧೆತಮಗಿನ್ನೇನುಗತಿಯೆನುತೆ ||
ಚದರಿದರಿವನು ಮರಳೆ ಸೇರಿಸಿ |
ಬೆದರನುಳಿದರು ರಾವಣನವಧೆ |
ವಿದಿತವೆನೆ ನಮ್ಮಿದಿರೊಳಾಗಿರಲೇಕೆ ಭಯವೆಂದು ||೫||

ಅತ್ತ ನಡೆದುದು ವರವಿಮಾನವು |
ಚಿತ್ತಜಾತನ ಪಿತನು ಮಡದಿಗೆ |
ಬಿತ್ತರಿಸಿದನು ಮಾರ್ಗದಲ್ಲಿರ್ಪುತ್ತಮಾಂಶಗಳ ||
ಚಿತ್ತವಲ್ಲಭೆ ನೋಡು ಸೇತುವ
ನೆತ್ತಿ ಕರವನು ಸಾರುವಂತಿಹು |
ದಿತ್ತ ಕುಳ್ಳಿರ್ದೀಕಪೀಂದ್ರರ ಸತ್ವದಳತೆಯನು ||೬||

ಇದರ ಮೂಲದೊಳುಭಯಸಾಗರ |
ವಿದೆಕೊ ಸೇರಿಹುವಿಲ್ಲಿ ಮಿಂದವ |
ರೊದೆದು ಕಳೆವರು ಪಾಪವನು ತಾನಿದು ಧನುಷ್ಕೋಟಿ ||
ಅದೆಕೊ ಕಿಷ್ಕಿಂಧೆಯನು ನೋಡಿಂ |
ದದುವೆ ಮಿತ್ರನ ರಾಜಧಾನಿಯು |
ವಧಿಸಿ ವಾಲಿಯ ನಿವನಸಲಹಿದತಾಣವಿತ್ತಿದೆಕೊ ||೭||

ಎಂಬ ಕಾಂತನ ಮಧುರವಚನವ |
ನಿಂದುಮುಖಿಯಾಲಿಸುತೆ ತನಗಿಹು |
ದೊಂದುಬಯಕೆಯು ವಾನರೇಶ್ವರಮುಖ್ಯಕಪಿವರರ ||
ಸುಂದರಾಂಗಿಯರೊಡನಯೋಧ್ಯೆಯ |
ನೊಂದಬೇಕೆಂದಿದನು ಕರುಣಿಪು |
ದೆಂದು ಯಾಚಿಸಲೊಡನೆ ಪುಷ್ಪಕವಿಳಿದುದಾ ಪುರದೆ ||೮||

ದೇವನಾಣತಿಸಲ್ಕೆ ವರಸು |
ಗ್ರೀವನಿಪ್ಪದೆ ವುರದವನಿತೆಯ |
ರಾವಿಮಾನವನೇರಲದು ಮತ್ತೈದಿತಭ್ರದಲಿ ||
ದೇವಿ ನಿನಗಾಗಾ ಜಟಾಯುವು |
ಸಾವನೊಂದಿದ ತಾಣವಿದು ನೀಂ |
ರಾವಣನ ಕೈಸೆರೆಗೆ ಸಿಕ್ಕಿದ ಪರ್ಣಗೃಹವಿದೆಕೊ ||೯||

ಖರನೆ ಮೊದಲಾದಸುರರೆನ್ನಿಂ |
ಹರಣವುಳಿದಾ ತಾಣವಿತ್ತಿದೊ|
ಪರಮಪಾವನೆ ಗಂಗೆಯೆಸೆದಪಳತ್ತ ನೀಂ ನೋಡು ||
ಹಿರಿಯರೆಮ್ಮನ್ವಯದ ಭೂಮಿಪ |
ವರರು ಸತ್ಯದಿನಾಳ್ದ ಸರಯೂ |
ಪರಿವೃತಾಯೋಧ್ಯೆಯನು ನೋಡೆರಗೆಂದನಾರಾಮ ||೧೦||

ಇಂತು ಜಾನಕಿಗಿರದೆ ತೋರುತ |
ನಂತರ ಭರದ್ವಾಜಮುನಿಗಳ |
ಶಾಂತಿನಿಲಯವಿದೆನಿಸುವಾಶ್ರಮದೆಡೆಯ ಕಂಡಿಳಿದು ||
ಪಿಂತಣಂದದೊಳವರಿಗೆರಗಿ ಸ |
ಮಂತು ಶೋಭಿಪುದೇನಯೋಧ್ಯೆಯು |
ಸಂತಸದಿಮಿರ್ದಪರೆ ಸಕಲರು ಬೆಸಸವೇಳ್ಪುದೆನೆ ||೧೧||

ಅರಸ ನಿನ್ನಸುಜಾತ ಭರತನು |
ಧರಿಸಿ ಜಟೆಯನು ನಿನ್ನ ಪಾದುಕ |
ವಿರಿಸಿ ಸಿಂಹಾಸನದೆ ರಾಜ್ಯವನಾಳುತಿರ್ದಪನು ||
ಪುರಕೆ ಬಾರದೆ ನೀನು ತಳುವಿರೆ |
ಕೊರಗಿ ನಾರುಡೆಯುಟ್ಟು ನಿಯಮಾ |
ಚರಣೆಯಿಂದಿಹನಿದುವೆ ನಿನ್ನಯ ದೇಶವೃತ್ತಾಂತ ||೧೨||

ಇಂದು ನೀನೆಮ್ಮತಿಥಿಯಾಗುತೆ |
ನಿಂದು ನಮ್ಮೀ ಪರ್ಣಶಾಲೆಯೊ |
ಳೊಂದಿ ಸತ್ಕಾರಂಗಳಂ ರಾತ್ರಿಯನು ನೀಂ ಕಳೆದು ||
ಮುಂದೆ ಬಿಜಯಂಗೈಯಬೇಕೆನು |
ತೆಂದ ಮುನಿವರರಿಷ್ಟವನು ಸಲಿ |
ಸಂದು ಹನುಮನ ಕರೆದು ಬೆಸಸಿದನಾ ರಘೂದ್ವಹನು ||೧೩||

ವೀರ ಬಾರೈ ಹನುಮ ಮುಂಗಡೆ |
ತೋರುತಿರ್ಪುದಯೋಧ್ಯೆಯಲ್ಲಿಗೆ |
ಸಾರಿ ನೀನಾ ಭರತಭೂಪನ ಕಂಡು ಸಂತೈಸಿ ||
ನೀರೆಯೊಡನಾವಹೆವು ಕುಶಲಿಗ |
ಳೂರನೀದಿನ ಸೇರುವೆವು ಪರಿ |
ವಾರವೊಡನುಂಟೆಂಬುದನು ನೀನೊರೆವುದಿವನೊಡನೆ ||೧೪||

ಬಲಯುತನು ರಾವಣನು ಸೀತಾ |
ಲಲನೆಯನು ಕದ್ದೊಯ್ಯಲೀಕಪಿ |
ಕುಲಲಲಾಮನ ಮೈತ್ರಿಯಿಂ ವಾರಿಧಿಗೆ ಸೇತುವನು ||
ಬಲಿದು ಲಂಕೆಯ ಪೊಕ್ಕು ದನುಜನ |
ನಳವಿಯಲಿ ಸಂಹರಿಸಲಾಶಿವ |
ಜಲಜಭವರೆಮ್ಮಯ್ಯನೊಡನೈತಂದುದನು ತಿಳಿಪು ||೧೫||

ಕಲುಷವಿಲ್ಲದದೇವಿಯನು ಮನ |
ವೊಲಿದು ಕೂಡೆಂಬವರನುಜ್ಞೆಯ |
ನೊಲವಿನಿಂದಾನಾಂತ ಪರಿಯನು ಮರೆಯದಿಂದುಸಿರು ||
ಕುಲಪರಂಪರೆಯಿಂದೆ ಬಂದಿಹ |
ನೆಲವನಾವನು ಬಿಡುವನೈ ನೀಂ |
ಪಲವುಬಗೆಯಿಂ ತಮ್ಮನಿಂಗಿತವರಿದು ಬಂದರುಹು ||೧೬||

ಎಂದವನ ನುಡಿ ಹಿಂಚಿತೆಂದೆನ |
ಲಂದು ನಿಂದನು ಹನುಮ ಭರತನ |
ಮುಂದೆ ನಂದಿಗ್ರಾಮದೆಡೆಯೊಳಗೆಂದನೆಲ್ಲವನು ||
ಬಂದನಗ್ರಜನೆಂಬಸುದ್ದಿಯ |
ತಂದ ಹನುಮನನಪ್ಪಿ ಭರತನು |
ಚಂದದಾನಂದಾಮೃತಾಬ್ಧಿಯೊಳಳ್ದು ತೇಲಿದನು ||೧೭||

ನಲಿದನುಲಿದನು ಮನವು ದಣಿವವೊ |
ಲಲಘುಮತಿಯಾಗಣ್ಣದೇವನ |
ಹಲವುಸದ್ಗುಣಗಳನು ಬರಿಸಿದನಖಿಳಮಂತ್ರಿಗಳ ||
ಜಲಜಸಖಕುಲದಾಣ್ಮನನು ನಿ |
ಸ್ಖಲಿತಭಾವದಿನಿದಿರುನೋಡು |
ತ್ತಲುಗದೆಸೆದನು ನಿಖಿಲಸದ್ಗುಣಭರಿತನಾಭರತ ||೧೮||

ಎಸೆಯುತಂಬರಪಥದೊಳೈತಹ |
ದಶಶಿರೋರ್ಣವಬಾಡಬಾನಲ |
ನಸಮಯಾನವನಾ ವಿಮಾನವ ಕಂಡು ಬಕುತಿಯಲಿ ||
ನೊಸಲಿಗೇರಿಸಿ ಮುಗಿದ ಕರಗಳ |
ನುಸಿರುಮೊಗಚದ ತೆರದೆ ರಾಮನ |
ಜಸವ ಪಸರಿಪ ವಿಮಲಮಂತ್ರವ ಪಠಿಸಿದನು ಭರತ ||೧೯||

ಬಂದುದಾ ಪುಷ್ಪಕವು ಧರೆಗಿಳಿ |
ತಂದು ನಿಂದುದು ಪುರದ ಬಾಗಿಲೊ |
ಳಂದು ಮೈಯಿಕ್ಕಿದುದು ಭರತಾದ್ಯಖಿಳಪುರಜನವು ||
ಇಂದುಮುಖಿಯೊಡನಂದು ರಘುಕುಲ |
ದಿಂದುಶೇಖರನಿಳಿದುಯಾನದಿ |
ನೊಂದಿದಾನಂದದಲಿ ತಮ್ಮನನಪ್ಪಿ ಮುದ್ದಿಸಿದ ||೨೦||

ಮಾತೆಯರಿಗೆರಗಿದನು ಸತಿಸಹ |
ಜಾತನುಂಬೆರಸಾವಸಿಷ್ಠರ |
ಪೂತಚರಣಕೆ ನಮಿಸಿ ಯವರಾಶಿಷವ ಕೈಕೊಂಡು ||
ಆತುರಿಸಿ ಮಾನಸದೆ ದರ್ಶನ |
ಕೌತುಕದೆ ನಿರುಕಿಸುವ ಪೌರ |
ವ್ರಾತಕಿತ್ತನು ಸಮಯವನು ಕೈಕೊಂಡು ಕಾಣಿಕೆಯ ||೨೧||

ಅಣ್ಣ ನಿನ್ನಯ ಬರವನಿರುಕಿಸು |
ತಿನ್ನೆಗಂ ನಾಂ ಸಿರದೊಳಾಂತೀ |
ಯುನ್ನತಾವನಿಭಾರವನು ಕೃಪೆಯಿಂದೆ ನೀಂ ವಹಿಸು ||
ಚಿಣ್ಣನಾದೆನ್ನಿಂದೆ ಸಾಧ್ಯವೆ |
ಮನ್ನಿಸುವುದಿದನೆಂದ ಭರತನ |
ಬಿನ್ನಹಕೆ ತಲೆದೂಗಿ ಮೆಚ್ಚಿದನವನಿಜಾಪತಿಯು ||೨೨||

ಬಳಿಕಮರಮನೆಗೈದಿ ಯೊಡನ |
ಲ್ಲಿಳುಹಿದರು ಧರಿಸಿರ್ದ ಜಟೆಗಳ |
ನಳಿಸಿದರು ಬನದಲಸಿಕೆಯನಾ ರಾಮಲಕ್ಷ್ಮಣರು
ಕಳುವದೊಡನೈದಿರ್ಪ ಸಕಲರ |
ನೊಲವಿನಿಂದುಪಚರಿಸಿ ರಾಮನು |
ಕಳುಹಿದನು ಪುಷ್ಪಕವ ಧನದನ ಬಳಿಯೊಳಿರಲೆಂದು ||೨೩||

ನೀತಿಯಪ್ಪುದು ದೇವ ನೀಂ ಸಾ |
ಕೇತಪುರಕ್ಕೈತಂದು ರಘುಕುಲ |
ಜಾತರೆಡವಿಡದೇರ್ದ ಸಿಂಹಾಸನದೆ ಮಂಡಿಸುತೆ ||
ಪೂತವಹ ಪಟ್ಟಾಭಿಷೇಕವ |
ನೋಳು ತಳೆದಿಳೆಯಾಳುವುದು ಸಂ |
ಪ್ರೀತಿ ನಮಗೆಂದಖಿಳಮಂತ್ರಿಗಳೊರೆದರರಸಂಗೆ ||೨೪||

ಆಗಲಂತೆಂಬರಸನಾಣತಿ |
ಗಾಗಳೇ ರಥ ಬಂದು ನಿಂದುದು |
ವೇಗವುಳ್ಳತ್ಯುತ್ತಮಾಶ್ವಗಳಿಂದೆ ಸಜ್ಜೆನಿಸಿ ||
ರಾಗರಸದೊಳ್ಮುಳುಗಲುರ್ವಿಯು |
ರಾಘವೇಶ್ವರನಡರಿದನು ನಲಿ |
ದಾಗಮೋಕ್ತದೆ ಪರಸೆ ಬುಧತತಿ ದಿವ್ಯಮಣಿರಥವ ||೨೫||

ಆಸಮಯದೊಳಗಂತರಿಕ್ಷದೆ |
ವಾಸವನು ಮೊದಲಾದಸುರರು |
ದ್ಘೋಷಿಸಿದರಸುರಾರಿ ರಾಘವ ಜಯಜಯೆಂದೆನುತೆ ||
ಕೀಶರಾಜವಿಭೀಷಣರ್ಪರಿ |
ತೋಷದಿಂದಿಭಮೇರಿಯೈತರೆ |
ದಾಶರಥಿಯಾ ರಥವು ನಡೆದುದಯೋಧ್ಯೆಯಾಕಡೆಗೆ ||೨೬||

ಭರತನೆಸೆದಿರೆ ಸಾರಥಿತ್ವದೊ |
ಳೆರಡುಪಕ್ಕದೊಳುಳಿದಸೋದರ |
ರಿರುತಿರಲ್ ಸತ್ತಿಗೆಯ ಚಾಮರದಾಳುಗೆಲಸದಲಿ ||
ಪುರವ ಪೊಕ್ಕುದು ತೇರು ಜನಗಳ |
ನೆರವಿಯಲಿ ತಡವಾಯ್ತು ಗಮನವು |
ಮೆರೆವ ಮೇಲ್ಮಚ್ಚುಗಳಿನೆಸೆದರು ವನಿತೆಯರು ಸುಮವ ||೨೭||

ಒರೆಯಲೇಕಿದನದನು ತೇರಿರ |
ದರಮನೆಯ ಬಾಗಿಲಲಿ ನಿಂದುದು |
ಸಿರಿಯರಸನಿಳಿದದನು ಪೊಕ್ಕನು ರಾಜಮಂದಿರವ ||
ಒರೆದು ಸುಗ್ರೀವಂಗೆ ಭರತನು |
ತರಿಸಿ ಸಾಗರಜಳವನಾಗಳೆ |
ಗುರುವಶಿಷ್ಠರಿಗರುಹೆ ಕೂಡಿತ್ತಖಿಳವಸ್ತುಗಳು ||೨೮||

ಸೃಷ್ಟಿಗೊಡೆಯನ ಬರಿಸಿ ಭುವನ |
ಶ್ರೇಷ್ಠಮಾದಾ ಸಿಂಹಪೀಠದೊ |
ಳಷ್ಟಶೋಭೆಯಿನಖಿಳಋತ್ವಿಗ್ವರರು ಮುನಿವರರು ||
ಅಟ್ಟಹಾಸದೆ ಪಟ್ಟಗಟ್ಟಿದ |
ರಿಷ್ಟವಾಂತುದು ಜಗವು ಬಳಿಕ ವ |
ಸಿಷ್ಠರಿಟ್ಟರು ಮಣಿಕಿರೀಟವ ರಾಘವನ ಮುಡಿಗೆ ||೨೯||

ದೇವಿಯೊಪ್ಪಿರೆ ವಾಮದಲಿ ಸು |
ಗ್ರೀವದನುಜೇಶ್ವರರು ಚಾಮರ |
ಸೇವೆಗೊಂಡಿರಲುಭಯಪಾರ್ಶ್ವದೊಳರಸುಸತ್ತಿಗೆಯ ||
ಕೋವಿದನು ಶತ್ರುಘ್ನನಾಂತಿರ |
ಲಾವನೇಜಾಂಬಕನು ಲಕ್ಷ್ಮೀ |
ದೇವಿಯರಸನು ರಾಮಚಂದ್ರನು ಮೆರೆದನೋಲಗದೆ ||೩೦||

ನೆರೆದ ಸಭೆಯೊಳಗರಸನರಸಿಯ |
ಕೊರಳಿಗನುಗೊಳಿಸಿದೊಡನರ್ಘದ |
ಸರವನೊಂದನು ದೇವಿ ಸಡಿಲಿಸಿ ಕಂಠದಿಂದದನು ||
ಕರದೆ ಪಿಡಿದಂದಿನಯನಾನನ |
ಸರಸಿರುಹವನು ನೋಡಲದನರಿ |
ದರಸನೆಂದನು ಬುದ್ಧಿಪೌರುಷಶಾಲಿಗೀಯೆಂದು ||೩೧||

ಭರದಿನದನವನಿಜೆಯು ಹನುಮಂ |
ಗಿರದೆಯಿತ್ತೊಡೆ ಮೇಲೆ ಸುರಗಣ |
ವರರೆಧಣುಧಣು ಹನುಮ ಭಕ್ತಲಲಾಮ ಘನಮಹಿಮ ||
ಸರಿಯೆ ನಿನಗಿಲ್ಲೆಂದು ಪೊಗಳ |
ಸರಿಯ ಕರೆಯುತ್ತಿರಲು ಕಂಠದೆ |
ಧರಿಸಿ ಸರವನು ರಾಮನಂಘ್ರಿಗೆ ನಮಿಸಿದನು ಹನುಮ ||೩೨||

ಬಳಿಕ ರಾಘವನಾ ವಿಭೀಷಣ |
ಗೊಲಿದು ಸನ್ಮಾನವನು ಗೈದಾ |
ಜಲಜಮಿತ್ರನ ಸುತನನುಡುಗೊರೆಯಿಂದೆ ಮನ್ನಣೆಸಿ ||
ಉಳಿದಕಪಿಗಳನುಡುಗೆತುಡುಗೆಯಿ |
ನೊಲಿಸಿ ಸಂತಸದಿಂದೆ ನಿಜಪುರ |
ಗಳಿಗೆಮರಳಲನುಜ್ಞೆಯಿತ್ತನು ಪರಸಿ ಪಲಬಗೆಯ ||೩೩||

ಇಂತು ರಘುಕುಲಸಾರ್ವಭೌಮನು |
ಸಂತಸದೆ ಜಯಲಕ್ಷ್ಮಿಯನು ಪಡೆ |
ದಾಂತು ಮೂಜಗದರಸುತನವನು ಲಕ್ಷ್ಮಣನ ಕರೆದು ||
ಪಿಂತಣಿಂದೆಮ್ಮನ್ವಯದ ಭೂ |
ಕಾಂತರಾಳ್ದೀಧರಣಿಯಲಿ ಸಿ |
ಶ್ಚಿಂತೆಯಿಂ ಯುವರಾಜಪಟ್ಟದೊಳಿಹುದು ನೀನೆನಲು ||೩೪||

ನಿನ್ನ ಸೇವೆಯೊಳಿನ್ನ ತನುವನು |
ಮುನ್ನ ತೇಯುವೆನೆಂಬ ಸುವ್ರತ |
ವೆನ್ನ ಬಲಿದಿದೆ ಸಾಗದೆನ್ನಿಂ ಯೌವರಾಜ್ಯವೆನೆ ||
ಮನ್ನಿಸುತೆ ಲಕ್ಷ್ಮಣನ ಭರತಂ |
ಗುನ್ನತಿಯಪದವದನು ಕರುಣಿಸಿ |
ಸನ್ನುತಾಂಗನು ರಾಮಚಂದ್ರನು ಜಗವ ಪಾಲಿಸಿದ ||೩೫||

ಹತ್ತುಸಾಸಿರವರುಷ ಸುಖದಿಂ |
ದುತ್ತಮೋತ್ತಮಸಿಳೆಯಭಾರವ |
ವೊತ್ತು ಸಲಹುತ್ತಿರ್ದನಂದಿನ ಜನದ ಭಾಗ್ಯದಲಿ ||
ಹೊತ್ತುಹೊತ್ತಿಗೆ ಮಳೆಗಳಾದುವು |
ಬತ್ತವಾಕೆರೆಕಟ್ಟೆ ಸಂತತ |
ವಿತ್ತುವಿಂಪನು ಮನಕೆ ಮೆರೆವಾಪೈರುಪಚ್ಚೆಗಳು ||೩೬||

ಎತ್ತಲುಂ ಪೂಗಾಯಿಪಣ್ಣಳು |
ಮೆತ್ತಿಮೆರೆದುವು ವೃಕ್ಷತತಿಗಳೊ |
ಳೊತ್ತಿ ತುಂಬಿದ ಧಾನ್ಯಮೋಲಗಿಸಿತ್ತು ಕೃಷಿಕರನು ||
ಚಿತ್ತಜಾತನ ಮೋಹನಾಸ್ತ್ರಕೆ |
ತೆತ್ತು ಮನವನು ಧರ್ಮವನು ತುಳಿ |
ದೊತ್ತಿ ಚರಿಪವಿವೇಕಮಡಗಿತು ರಾಮರಾಜ್ಯದಲಿ ||೩೭||

ಪತಿವಿಯೋಗಾಕುಲತೆಯರಿಯರು |
ಸತಿಯರೆಲ್ಲರು ಪುತ್ರವತಿಯರು |
ಪಿತರಿಗೀಯದೆ ಗತಿಯನಳಿಯರು ಪುತ್ರರಾದವರು ||
ಸತತ ಜಪ ತಪವಗ್ನಿಹೋತ್ರವೆ |
ಗತಿಯು ತಮಗಿನ್ನಿತರವಿಲ್ಲೆಂ |
ಬತಿಪವಿತ್ರರು ಭೂಸುರೋತ್ತಮರೆಸೆದರಾ ನೆಲದೆ ||೩೮||

ಇಳೆಯು ರಕ್ಷಣೆಯಲ್ಲಿ ದಕ್ಷರು |
ಸಲೆಧನುರ್ವೇದದಲಿ ಕೋವಿದ |
ರಲಘುನಿಗಮಾದ್ಯಖಿಲವಿದ್ಯಾನ್ವಿತರು ಪಾರ್ಥಿವರು ||
ಬೆಳಗುತಿರ್ದರು ಪೊಳಲನಖಿಲರಿ |
ಗೆಳಸಿದುದನಿತ್ತಲ್ಪಲಾಭ |
ಕ್ಕೊಲಿವ ವೈಶ್ಯರುಮಾತ್ಮಧರ್ಮದ ಶೂದ್ರರುಂ ಮುದದೆ ||೩೯||

ವೇದ ಬೇರೊಂದಲ್ಲ ಲೋಕದ |
ನಾದಿವಸ್ತುವಿನಾತ್ಮತತ್ವವು |
ಬೋಧಿಸುವುದಿಂತದನೆರಾಮಾಯಣಸುಕಾವ್ಯವದು ||
ಮೇದಿನಿಯೊಳಾರಿದನು ಮೋದದಿ |
ನೋದುವರೊ ಕೇಳುವರೊ ಮಿಗೆ ವಿ |
ಚ್ಛೇದಮೊಂದುವುದವರ ಪಾತಕಮವರುವರ್ಧಿಪರು ||೪೦||

ಮಂಗಳಂ ದಶರಥನ ಬಾಲಗೆ |
ಮಂಗಳಂ ಸೀತಾವಿಲೋಲಗೆ |
ಮಂಗಳಂ ಸುರವಿನುತಶೀಲಗೆ ಪರಮವೈಭವಗೆ ||
ಮಂಗಳಂ ಮುನಿಚಿತ್ತಖೇಲಗೆ |
ಮಂಗಳಂ ಸುಜನಾಳಿಪಾಲಗೆ |
ಮಂಗಳಂ ಕರುಣಾಲವಾಲಗೆ ವೀರರಾಘವಗೆ ||೪೧||

ಕೊಟ್ಟು ಯುವನೃಪಪದವ ತನ್ನೊಡ |
ಹುಟ್ಟಿದಾನರಸಿಂಹಭೂಪಂ |
ಗಿಟ್ಟುಮಂತ್ರಿತ್ವದಲಿ ಮಾತುಳಕಾಂತರಾಜನನು ||
ಶಿಷ್ಟರಿಷ್ಟವ ಸಲಿಸಿ ಬಹುಸಂ |
ತುಷ್ಟಿಗೊಳಿಸಿಳೆಯಾಳ್ವ ಸಕಲಜ |
ನೇಷ್ಟವರಕೃಷ್ಣೇಂದ್ರಭೂಪಂಗಕ್ಕೆ ಮಂಗಳವು ||೪೨||

ವಿದಿತಘನಕರ್ಣಾಟರಾಜ್ಯದ |
ಪದಕೊಡೆಯಸಹ ಕೃಷ್ಣಭೂಪನ |
ಪದದ ಸೇವಕನೆನಿಪ ಚಿಕಲಿಂಗಾಖ್ಯಪಾರ್ಥಿವನು ||
ಪಡೆದು ನುಡಿದನು ಯುದ್ಧಕಾಂಡವ |
ನಿದನು ಸುಲಲಿತಭಾಮಿನೀಷ |
ಟ್ಪದಿಯೊಳಿದು ರಾಜಿಸುಗೆ ಸುಜನರ್ಗೊಲವನೊದರಿಸುತೆ ||೪೩||

ಭೂಮಿಪಾಲಕಕೃಷ್ಣಭೂಪನ |
ನೇಮದಿಂ ತಿಳಿಗನ್ನಡದೊಳೀ |
ರಾಮಕಥೆಯನು ಲಿಂಗರಾಜನು ಮುದದೆ ರಚಿಸಿದನು ||
ಸೋಮಭಾನುಗಳಿರ್ಪವರೆಗಂ |
ಭೂಮಿಯೊಳಗಿದು ಮೆರೆಗೆ ಪಂಡಿತ |
ಪಾಮರರ ಮೆಚ್ಚಿಸುತೆ ಪೆರ್ಚಿಸಿ ರಾಮಭಕ್ತಿಯನು ||೪೪||

ಯುದ್ಧಕಾಂಡಂ ಸಂಪೂರ್ಣಂ

ಕರ್ಣಾಟಕ ರಾಮಾಯಣಸಂಗ್ರಹಂ ಸಮಾಪ್ತಂ.

ಶೋಧನಪತ್ರ.

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.	ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
೨	೧೯	ಧ್ಸ್ರುವ	ಧ್ರುವ	೧೧೬	೩೦	ಮಣ	ಮಣಿ
೩	೨೮	ಶಾಸ್ತ್ರಜ್ಞ	ಶಾಸ್ತ್ರಜ್ಞ	೧೩೦	೨೭	ವೆರರು	ಪೆರರು
೫	೪	ಮನುವಿಂದೆ	ಯನುವಿಂದೆ	೧೩೨	೧೪	ಪುಂಡದ	ಪುಂಡ್ರದ
೮	೩	ಸತ್ಕರಿಸುತೆ	ಸತ್ಕರಿಸುತ್ತೆ	೧೪೪	೧೬	ಸೀತೆಯುನ	ಸೀತೆಯುನು
೧೨	೩೦	ಕುಲಾಗ್ರಣ	ಕುಲಾಗ್ರಣಿ	೧೪೯	೧೫	ವದು	ವ್ರುದು
೧೪	೩	ಬುದ್ದಿ	ಬುದ್ಧಿ	೧೫೩	೩೦	ಹುಡುಕುವೆ	ಹುಡುಕುವ
೨೦	೧೮	ಧರಣ	ಧರಣಿ	೧೬೧	೧೪	ನಡೆಯು	ನಡೆವ
,,	೨೫	ಪೆಣ	ಪೆಣ್ಣ	೧೬೯	೧೨	ತನು	ಸಹ
೨೯	೨೩	ಸೆತ್ಯ	ಸತ್ಯ	೧೭೧	೨	ಪುಟ್ಟುತೆ	ಪುಟ್ಟಿತೆ
೩೩	೨೭	ನುದುರಿ	ನುದಿರಿ	೧೭೫	೧೭	ರಿರ್ವರುಂ	ನಾಗಿತಾಂ
೩೫	೨೩	ಬೆಳಸಲು	ಬೆಳಿಸಲು	೧೮೧	೧೨	ನೀಂ	ನೆರೆ
ಮುಂದೆಯೂ „ಬೆಳಸು" ಎಂಬಕ್ರಿಯೆಗ				೧೮೯	೧೭	ಹೊಳೆಯುನೆ	ಹೊಳೆಯೆನೆ
ಳಲ್ಲಿ „ಬೆಳಿಸು 'ಎಂದು ತಿದ್ದಿಕೊಳ್ಳುವುದು.				೧೯೩	೪	ಲ್ಲಿರರುವ	ಲ್ಲಿರುವ
೩೭	೨೦	ಕರೆಯ್ಯಲ್ಕೆನು	ಕರೆದುಯ್ಯಲ್ಕೆ	೧೯೫	೬	ನೀಗುವನು	ನೀಗಿದನು
೩೯	೨೨	ರಾಮಂನಿ	ರಾಮಂ	೧೯೭	೨೮	ಕಾಲವಿದುಸಾಹಸಕೆಪೌರುಷ	ಪೌರುಷಕೆಕಾಲವಿದುಸಾಹಸ
೪೮	೮	ಧತಣಿ	ಧರಣಿ				
೫೫	೧೭	ವಡೆವಳೇಳ್ಕೆ	ವಡೆವಳೇ	೧೯೮	೧೭	ಜೆಳದನು	ಬಳೆದನು
,,	,,	ರೌದ್ರಾವೇಷ	ರೌದ್ರಾವೇಶ	೨೦೮	೧೦	ದುಷ್ಪನ	ದುಷ್ಟನ
೫೮	೨೬	ನಿಧಿನೀನೀ	ನಿಧಿಪೇಳೀ	೨೧೨	೧೮	ಪಟ	ಪಟು
೫೯	೯	ನಿಜಸತಿ	ನಿಜ ಸತಿ	,,	೨೭	ಪರಕಿಸಲು	ಪರಿಕಿಸಲು
೬೦	೧೪	ಳೆಂಬರೆ	ಳೆಂಬುದೆ	೨೧೬	೨೨	ಜಿಲ್ಲ	ಚಿಲ್ಲ
,,	೩೦	ತೋರ್ಪರೆ	ತೋರ್ಪುದೆ	೨೨೬	೨	ತರಿದಕ್ಷಯುಕು	ತರಿದಕ್ಷುಸುಕು
೭೬	೨೧	ಮದಪರ	ಮಪರ	೨೨೬	೨೫	ಅಗ	ಆಗ
೯೨	೨೭	ವಿಮುಲ	ವಿಮಲ	೨೨೭	೧೬	ಪ್ರಮುದಿಂ	ಪ್ರೇಮುದಿಂ
೯೫	೨೯	ತ್ರಿರಸಿ	ತ್ರಿರಿಸಿ	೨೩೦	೧೦	ತೆಗದಿದ	ತೆಗೆದಿದ
೧೦೯	೪	ನಿಮ್ಮಯ	ನಮ್ಮಯ	೨೩೩	೩೦	ನೀವೆ	ನೀವೇ
೧೧೫	೨೧	ರುಳದಾ	ರುಳಿದಾ	೨೩೪	೧೨	ಲ್ಲರಡೆ	ಲ್ಲಿರಡೆ

೨೩೪	೧೮	ಹೊರೆ	ಹೊರ	,,	,,	ಮೂಳಿಯು	ಮೂಳೆಯ
,,	೨೬	ಪಕ್ಷಯುಕು	ಪಕ್ಷಸುಕು	೩೦೦	೨೩	ತೆರದು	ತೆರೆದು
೨೩೬	೬	ಪದೀಗ	ವುದೀಗ	೩೦೨	೯	ವೀಭೀ	ವಿಭೀ
೨೩೯	೩	ನೇವು	ನೇವ	೩೦೨		೪೯, ೫೦, ೫೧ ನೆಯ ಪದ್ಯಗಳ	
,,	೨೭	ಶತಣೆಂದ	ಶರಣೆಂದ	೩೦೩		ನ್ನು ಓದಿದನಂತರ ೪೬, ೪೭,	
೨೪೦	೨೯	ಳ್ಸಿಡಿಲು	ಲ್ಸಿಡಿಲು			೪೮ ನೆಯ ಪದ್ಯಗಳನ್ನು ಓದಿ	
೨೪೫	೩	ತದಯಿ	ತಡೆಯಿ			ಕೊಳ್ಳಬೇಕು.	
,,	೨೯	ಸಂಗತಿಯು	ನೆಲೆಬಗೆಯ	೩೧೦	೧೧	ನರೇಂನ್ರ	ನರೇಂದ್ರ
೨೪೭	೨೬	ನುತ್ತುಮಾಂಗ	ನುತ್ತಮಾಂಗ	೩೧೩	೧೨	ಳಂದು	ಳೆಂದು
೨೪೯	೧೮	ನೆನ್ನುತ್ತುಡಿ	ನೆನ್ನುತಡಿ	,,	೨೯	ಳಂಗದನ	ಳಂಗದನು
೨೫೨	೭	ದಕ್ಷಯುಕು	ದಕ್ಷಸುಕು	೩೧೪	೬	ದಾನವ	ದಾನವನ
೨೫೯	೬	ವ್ಯಂದವನ	ವ್ಯಂದನನು	೩೧೫	೪	ಸ್ಯಂವನವು	ಸ್ಯಂದನವು
,,	೧೬	ನಕ್ಷಯುಕು	ನಕ್ಷಸುಕು	೩೧೫	೧೭	ನಳಿಪಿದು	ನಳಿವಿದು
೨೭೩	೧೯	ಪರಿ	ಹರಿ	೩೧೮	೬	ತಿರುಕಿದ	ತಿರುಗಿದ
೨೭೫	೫	ಮಾದು	ಮದ	೩೨೨	೧೪	ಗೈದನೋ	ಗೈದೆನೋ
೨೭೬	೧೯	ಬಿಂದವನು	ಪಂದವನು	೩೨೭	೧೮	ವೆಸದುದ	ವೆಸೆದುದ
೨೭೭	೧೨	ಟೆಂದು	ಟಂದು	೩೩೬	೨೧	ತಡಬಡಿಸೇ	ತಡಬಡಿಸೆ
,,	೨೭	,,	,,	೩೩೮	೫	ನರುರಹು	ನರುಹು
೨೭೭	೬	ದನುಜ್ಜ	ದನುಜ್ಜೆ	೩೩೯	೧೨	ತೆಗವೆಚ್ಚ	ತೆಗೆದೆಚ್ಚ
೨೭೯	೫	ಗರುಡಿ	[illegible]	೩೪೦	೩	ಗೆಸದಿಹನು	ಗೆಸೆದಿಹನು
೨೭೯	೯	ದಾಸಿ	ದಾಸೆ	೩೪೫	೧೦	ಮೊವನಿ	ಮೊದವಿ
೨೮೬	೨೮	ಎಚ್ಚ	ಉಚ್ಚ	೩೪೯	೧೯	ಹನುಮರಿ	ಹನುಮಂ
೨೮೮	೨೦	ನಸುವ	ಇಸುವ	೩೫೧	೧೦	ತದಯು	ತಡೆಯು
೨೮೯	೩೦	ನೆಲಿ	ನೆಲೆ	೩೫೩	೨೫	ನಿಸ್ತುರೊಕ್ತಿ	ನಿಸ್ತುರೋಕ್ತಿ
೨೯೦	[illegible]	ಕೃಥಿತಿ	ಕೃತಿಥಿ	೩೫೬	೫	ಸುಂದರೆಂದೀ	ಸುಂದರೇಂದೀ
೨೯೩	೪	ನದಿರಿ	ಪದರಿ	೩೫೭	೨೬	ಪ್ರುಷ್ಟಕವ	ಪುಷ್ಪಕವ
೨೯೪	೨೪	ಭೇಧಿಪ	ಭೇದಿಸು	೩೬೧	೨	ದಶಶಿರೊರ್ಣವ	ದಶಶಿರೋರ್ಣವ
೨೯೭	೨೪	ದೊರೆಯು	ದೊರೆಸು	೩೬೨	೩	ರೆದವಿಡ	ರೆದೆವಿಡ
೨೯೮	೮	ವಪಟಿಗ	ವಪಟಿಗ				